ಮಾನವಿಕ ಕರ್ಣಾಟಕ

ಸಂಪುಟ ೨೧, ಸಂಚಿಕೆ ೧

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೯೧

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೨೧ ; ಸಂಚಿಕೆ ೧

೮೧

ಜನವರಿ ೧೯೯೧ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೯೧

MANAVIKA KARNATAKA, Kannada Quarterly of the University of Mysore, Volume 21, Number 1, January 1991, Edited by M. N. Nanjundaraje Urs and Dr. K. Kempe Gowda.

ಪ್ರಧಾನ ಸಂಪಾದಕರು

ಡಾ. ಸಿ. ಪಿ. ಕೃಷ್ಣಕುಮಾರ್

ಸಂಪಾದಕರು

ಎಂ. ಎನ್. ನಂಜುಂಡರಾಜೇ ಅರಸ್

ಡಾ. ಕೆ. ಕೆಂಪೇಗೌಡ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೫೭೦ ೦೦೬

ಮುದ್ರಕರು

ಬಿ. ಎಸ್. ಸಿದ್ದೇಗೌಡ

ಕಾರ್ಯಭಾರಿ ನಿರ್ದೇಶಕರು

ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು ೫೭೦ ೦೦೬

ವಿಷಯಸೂಚಿ

ಲೇಖಕರ ಸೂಚಿ

ಟಿ. ಶೇಷಾದ್ರಿ	ಉಪ-ಪ್ರಾಧ್ಯಾಪಕರು ವಾಣಿಜ್ಯ ವಿಭಾಗ ಡಿ. ಬನುಮಯ್ಯ ಕಾಲೇಜು, ಮೈಸೂರು
ಡಾ. ಕೆ. ಕೆಂಪೇಗೌಡ	ಪ್ರಾಧ್ಯಾಪಕರು ಭಾಷಾ ವಿಜ್ಞಾನ ವಿಭಾಗ ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು
ಡಾ. ಅಂಬಳಿಕೆ ಹಿರಿಯಣ್ಣ	ಉಪ-ಪ್ರಾಧ್ಯಾಪಕರು ಜಾನಪದ ವಿಭಾಗ ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು
ವೆಂಕಟೇಶ್ ಯಂ. ಗಿರಿ	ಯು.ಜಿ.ಸಿ. ಹಿರಿಯ ಸಂಶೋಧಕ ಸಂಸ್ಕೃತ ವಿಭಾಗ ಮಾನಸಗಂಗೋತ್ರಿ, ಮೈಸೂರು
ಡಾ. ಸಿ. ಎಸ್. ರಾಮಚಂದ್ರ	ಅಧ್ಯಾಪಕ ಭಾಷಾ ವಿಜ್ಞಾನ ವಿಭಾಗ ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು
ಡಾ. ಎನ್. ಸರಸ್ವತಿ	ಯು.ಜಿ.ಸಿ. ಸಂಶೋಧಕಿ ಇತಿಹಾಸ ವಿಭಾಗ ಮಾನಸಗಂಗೋತ್ರಿ, ಮೈಸೂರು

ಟಿ. ಶೇಷಾದ್ರಿ*

ವಲಯ ಅಸಮಾನತೆ–ಕರ್ನಾಟಕ–ಒಂದು ವಿಶ್ಲೇಷಣೆ

" ದೇಶದೊಳಗೊಂದು ದೇಶವನ್ನು ರಚಿಸುವೆವು " (" We in Mysore form, as it were, 'a nation within a nation'. While co-operating with both the Indian Government and the rest of the Indian Public in measures which lead to the prosperity of the country as a whole, we in our local sphere should promote education and economic growth to the fullest extent permitted by our resources.[1]) ಈ ವಾಕ್ಯವನ್ನು ಅಂದಿನ ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್‌ರವರು ಸುಮಾರು ಎರಡನೇ ಮಹಾಯುದ್ಧಕ್ಕೂ ಮೊದಲು ನುಡಿದಿದ್ದರು. ಅಂದಿನ ಮೈಸೂರು ರಾಜ್ಯ ಅಷ್ಟರ ಮಟ್ಟಿಗೆ ಇಡೀ ಭಾರತ ದೇಶಕ್ಕೇ ಮಾದರಿಯಾಗಿ ಕೈಗಾರಿಕಾ ವಲಯದಲ್ಲಿ ಬೆಳೆಯುತ್ತಿತ್ತು. ದೇಶದ ಹಲವಾರು ಇತರ ರಾಜ್ಯಗಳು ಮೈಸೂರು ರಾಜ್ಯ ಅನುಸರಿಸುತ್ತಿದ್ದ ಕೈಗಾರಿಕಾ ನೀತಿಯನ್ನು ಕುತೂಹಲದಿಂದ ನೋಡುತ್ತಿದ್ದುವು. ಈ ರಾಜ್ಯದಲ್ಲಿ ಪ್ರಾರಂಭಿಸಿ ಏಳ್ಗೆಗೊಳ್ಳುತ್ತಿದ್ದ ಹಲವಾರು ಕೈಗಾರಿಕಾ ಚಟುವಟಿಕೆಗಳ ವಿವರಗಳನ್ನು ಅಂದಿನ ಡಿಪಾರ್ಟ್‌ಮೆಂಟ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ (1913) ನಿಂದ ಇತರ ರಾಜ್ಯಗಳ ಭಾವಿ ಕೈಗಾರಿಕೋದ್ಯಮಿಗಳು ಮತ್ತು ಸಂಘ ಸಂಸ್ಥೆಗಳು ಪಡೆಯುತ್ತಿದ್ದವು. ಪ್ರತಿ ತಿಂಗಳು ಅಂತಹ ಎಷ್ಟು ವಿವರಗಳು ಕೇಳಲ್ಪಟ್ಟವು ಎಂಬುದನ್ನು " ಮೈಸೂರು ಇನ್ಫರ್‌ಮೇಷನ್ ಬುಲೆಟಿನ್ " ಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದುದನ್ನು ನೋಡಬಹುದಾಗಿದೆ. 1939ರ ನವೆಂಬರ್ ತಿಂಗಳಿನಲ್ಲಿ ಅಂತಹ 27 ಕೋರಿಕೆಗಳಿಗೆ[1] ವಿವರಗಳನ್ನು ಕಳುಹಿಸಲಾಗಿತ್ತು. ಅಂದಿನ ಸರ್ಕಾರದ ಘೋಷಣೆ ಹೇಗಿತ್ತೆಂದರೆ, " ದಿನವನ್ನು ಮೈಸೂರು ಕಾಫಿ,

---

*ಟಿ.ಶೇಷಾದ್ರಿ, ರೀಡರ್, ಯು.ಜಿ.ಸಿ. ಟೀಚರ್ ಫೆಲೋ,ವಾಣಿಜ್ಯ ಸ್ನಾತಕೋತ್ತರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

1. Mysore Information Bulletin, Mysore and Planned Industrialization, January 1939, P. 9.

1. ಅದೇ ಪುಟ 23.

ಮೈಸೂರು ಸಕ್ಕರೆಯಿಂದ ಪ್ರಾರಂಭಿಸಿ, ಮೈಸೂರು ಸೋಪಿನಿಂದ ಸ್ವಚ್ಛಗೊಳಿಸಿ ಮೈಸೂರು ಸಿಲ್ಕ್ ಅಥವಾ ಬಟ್ಟೆಗಳನ್ನು ಧರಿಸಿ, ಮೈಸೂರು ಸ್ಟೀಲಿನಿಂದ ಮನೆಕಟ್ಟಿ, ಮೈಸೂರು ವಿದ್ಯುಚ್ಛಕ್ತಿಯನ್ನು ಬಳಸಿ, ಮೈಸೂರು ಪೇಪರ್‌ನಿಂದ ಬರೆಯಿರಿ" ಎನ್ನುವುದಾಗಿತ್ತು. ಈ ಘೋಷಣೆ ಸುಮಾರು ಎರಡನೇ ಮಹಾಯುದ್ಧದ ಸಮಯದಲ್ಲಿ ಮೈಸೂರು ಸಂಸ್ಥಾನದ ವಿವಿಧ ಕೈಗಾರಿಕಾ ಚಟುವಟಿಕೆಗಳ ಅಗ್ರಸ್ಥಾನದ ಪ್ರತೀಕವಾಗಿತ್ತು. ಸ್ಥಾಪನೆಯಾದ ಹಲವಾರು ಘಟಕಗಳು ಇಂದೂ ಕಾರ್ಯನಿರ್ವಹಿಸುತ್ತಿವೆ. ಉದಾಹರಣೆ ಭದ್ರಾವತಿ ಕಬ್ಬಿಣ ಮತ್ತು ಸಿಮೆಂಟ್ ಕಾರ್ಖಾನೆ, ಮೈಸೂರಿನ ಬಣ್ಣದ ಕಾರ್ಖಾನೆ, ಮೈಸೂರು ಸಕ್ಕರೆ ಕಾರ್ಖಾನೆ, ಮೈಸೂರು ಪೇಪರ್ ಮಿಲ್ಸ್, ಮೈಸೂರು ಲ್ಯಾಂಪ್ಸ್, ರೇಷ್ಮೆ ಕಾರ್ಖಾನೆ, ಇತ್ಯಾದಿ. ಇದಕ್ಕೆ ಪ್ರೇರಣೆ (Motivation) ಮತ್ತು ಉತ್ತೇಜನ (encouragement) ಅಂದಿನ ದೂರದೃಷ್ಟಿಯುಳ್ಳ ಮಹಾರಾಜರು ಮತ್ತು ತೀಕ್ಷ್ಣ ಬುದ್ಧಿಯುಳ್ಳ ದಿವಾನರುಗಳು, ಸರ್ ಎಂ. ವಿಶ್ವೇಶ್ವರಯ್ಯನವರು ಇವರಲ್ಲಿ ಅಗ್ರಗಣ್ಯರು. ವಿಶ್ವೇಶ್ವರಯ್ಯನವರು ತಮ್ಮ ಪುಸ್ತಕವಾದ Planned Economy for India ದಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾಪನೆಯ ಅವಶ್ಯಕತೆಯ ಬಗ್ಗೆ ಪ್ರಸ್ತಾಪಿಸಿ ಆ ಯೋಜನೆಗಳನ್ನು ಕಾರ್ಯಗತಗೊಳಿಸಿದರು. ಇದು ಭಾರತ ಸರ್ಕಾರ ಇಡೀ ದೇಶದಲ್ಲಿ ತನ್ನ ಕೈಗಾರಿಕಾ ವಿಕೇಂದ್ರೀಕರಣ (Industrial Dispersal) ಕಾರ್ಯಕ್ರಮಕ್ಕೆ ಸಣ್ಣ ಕೈಗಾರಿಕೆಗಳ (Small Scale Industries) ಸ್ಥಾಪನೆಯೇ ಬಹಳ ಮುಖ್ಯ ಎನ್ನುವುದು ಸರ್. ಎಂ. ವಿಶ್ವೇಶ್ವರಯ್ಯನವರು ರೂಪಿಸಿದ ಯೋಜನೆಯೇ ಆಗಿದೆ ಎಂದು ಯಾರೂ ಮರೆಯಲಾಗದು. ಗ್ರಾಮೀಣ ಅಭಿವೃದ್ಧಿಯಾಗಬೇಕಾದರೆ ಸಣ್ಣ ಕೈಗಾರಿಕೆಗಳ ಮೂಲಕವೇ ಎಂದು ಅವರು ಕಂಡುಕೊಂಡಿದ್ದರು. ಅವರ ಯೋಜನೆಗಳು ಮತ್ತು ಚಿಂತನೆಗಳು ಹೇಗಿದ್ದುವೆಂದರೆ, ಕೈಗಾರಿಕಾ ಚಟುವಟಿಕೆಗಳಿಂದಲೇ ದೇಶದ ಆರ್ಥಿಕ, ಸಾಮಾಜಿಕ ಬೆಳವಣಿಗೆಗಳಾಗಬೇಕು ಎಂಬುದಾಗಿತ್ತು. ಅವರ ಚಿಂತನೆಯನ್ನು ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರು ತಮ್ಮ ಹೇಳಿಕೆಯಲ್ಲಿ ಹೀಗೆ ಸಮರ್ಥಿಸಿದ್ದಾರೆ "ಸರ್. ಎಂ. ವಿ. ಯವರು ಬೇಸಾಯದ ಮೇಲಿನ ಅವಲಂಬನೆಯನ್ನು ಕೈಗಾರಿಕೆಗೆ ವರ್ಗಾಯಿಸಬೇಕೆಂದು ಬಯಸಿದ್ದಾರೆ. ಒಂದು ದೇಶದ ಆರ್ಥಿಕ ಅಭಿವೃದ್ಧಿಯನ್ನು ತೀರ್ಮಾನಿಸುವುದು ಆ ದೇಶ ಎಷ್ಟರಮಟ್ಟಿಗೆ ಬೇಸಾಯ ಇಲ್ಲವೇ ಕೈಗಾರಿಕೆಯಲ್ಲಿ ಅವಲಂಬಿತವಾಗಿದೆ ಎನ್ನುವುದರಿಂದ. ಯಾವ ದೇಶ ಬೇಸಾಯದ ಮೇಲೆಯೇ ಹೆಚ್ಚು ಅವಲಂಬಿತವಾಗಿರುತ್ತದೆಯೋ, ಆ ದೇಶ ಆರ್ಥಿಕವಾಗಿ ಕಡಿಮೆ ಅಭಿವೃದ್ಧಿ ಹೊಂದಿರುತ್ತದೆ.. ....(" Sir M. V. wanted the undue dependence on agriculture to be reduced by shifting the pressure from agriculture to industry. The economic development of a country is judged by the extent of dependence

of the people of that country on agriculture, and industry, the higher the percentage depending on agriculture, the less advanced economically the country is......")[1] ಈ ಕೈಗಾರಿಕಾ ನೀತಿ ಇಂದಿಗೂ ಎಷ್ಟು ನವೀನ ಎನ್ನುವುದಕ್ಕೆ ಇಡೀ ದೇಶವೇ ಈ ನೀತಿಯನ್ನು ಅಳವಡಿಸಿಕೊಂಡಿರುವುದೇ ಸಾಕ್ಷಿ.

ಬೆಂಗಳೂರಿನಲ್ಲಿ ಸ್ಥಾಪನೆಯಾಗಿದ್ದ ಹೆಚ್.ಎ.ಎಲ್. ಸಂಸ್ಥೆಗೆ ಅಮೆರಿಕಾ, ಬ್ರಿಟನ್ ಮತ್ತಿತರ ದೇಶಗಳು ತಮ್ಮ ದೇಶದ ವಾಯುಪಡೆಗೆ ಸೇರಿದ ಹೆಲಿಕಾಪ್ಟರು ಮತ್ತು ವಿಮಾನಗಳನ್ನು ಯುದ್ಧ ಕಾಲದಲ್ಲಿ ರಿಪೇರಿಗಾಗಿ ಕಳುಹಿಸುತ್ತಿದ್ದವು. ಇದು ಅಂದಿನ ಮೈಸೂರು ರಾಜ್ಯದ ಅಂತರರಾಷ್ಟ್ರೀಯ ಮಟ್ಟದ ಹೆಮ್ಮೆಯ ವಿಷಯ ವಾಗಿತ್ತು. ಆ ಕಾಲದ ವೈಭವ ಕೇವಲ ರಾಜ್ಯದ ಕಲೆ, ಸಾಹಿತ್ಯ, ಸಂಸ್ಕೃತಿ ಇವುಗಳು ಮಾತ್ರವಾಗಿರದೆ, ಕೈಗಾರಿಕಾ ವಲಯದಲ್ಲೂ ತನ್ನ ಅಭಿವೃದ್ಧಿಯನ್ನು ಸಾಧಿಸಿತ್ತು. ಇದಕ್ಕೆ ಕಾರಣ ಅಂದಿನ ಸರ್ಕಾರಕ್ಕೆ ಜನರ ಅತ್ಯಾವಶ್ಯಕಗಳಾದ ದಿನಬಳಕೆ ವಸ್ತುಗಳ (consumer goods) ಪೂರೈಕೆ ಬಗ್ಗೆ ಇದ್ದ ಕಾಳಜಿ. ಇದರಿಂದ ಬಂಡವಾಳ ಸರಕುಗಳ (capital goods) ಉತ್ಪಾದನೆಗೆ ಗಮನವಿರಲಿಲ್ಲವೆಂದಲ್ಲ. ಭದ್ರಾವತಿ ಕಬ್ಬಿಣದ ಕಾರ್ಖಾನೆ, ಹಿಂದುಸ್ತಾನ್ ಮೆಷಿನ್ ಟೂಲ್ಸ್, ಸಿಮೆಂಟ್ ಕಾರ್ಖಾನೆ, ರೈಲುಗಾಡಿ ವರ್ಕ್‌ಷಾಪ್, ಎಲೆಕ್ಟ್ರಿಕಲ್ ಕಂಪನಿ ಇವೂ ಇದ್ದವು. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಇಂದು ಬಿಡಿಸಬೇಕಾಗಿರುವ ಮುಖ್ಯ ಸಮಸ್ಯೆ ಎಂದರೆ ರಾಷ್ಟ್ರಮಟ್ಟದಲ್ಲಿರುವ ವಲಯ ಅಸಮಾನತೆಯಲ್ಲಿ (Regional imbalance) ದಕ್ಷಿಣ ರಾಜ್ಯಗಳಾದ ಮಹಾರಾಷ್ಟ್ರ, ತಮಿಳುನಾಡು, ಮತ್ತು ಆಂಧ್ರಪ್ರದೇಶ ಈ ರಾಜ್ಯಗಳ ಕೈಗಾರಿಕೆ ಚಟುವಟಿಕೆಗಳಿಗಿಂತ ಹಿಂದೆ ಬಿದ್ದಿರುವುದು. ದಕ್ಷಿಣ ರಾಜ್ಯಗಳ ವಲಯ ಅಸಮಾನತೆಯನ್ನು ಕೇಂದ್ರ ಸರ್ಕಾರದ ವಲಯ ಅಸಮಾನತೆ ಪರಿಹಾರದ ಕ್ರಮದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಕೈಗಾರಿಕಾ ಅಭಿವೃದ್ಧಿಯನ್ನು ಅಂಕಿ ಅಂಶಗಳ ಆಧಾರದಲ್ಲಿ ವಿಶ್ಲೇಷಿಸಲಾಗಿದೆ. ಇದಕ್ಕಾಗಿ ಕೈಗಾರಿಕಾ ಲೈಸೆನ್ಸ್, ಬಂಡವಾಳ ಸಬ್ಸಿಡಿ ಮತ್ತು ರಿಯಾಯಿತಿ ದರದ ಸಾಲಸೌಲಭ್ಯ ಕೈಗಾರಿಕಾ ಲಕ್ಷಣಗಳನ್ನು ತೆಗೆದುಕೊಂಡು ವಿಶ್ಲೇಷಿಸಲಾಗಿದೆ.

ವಲಯ ಅಸಮಾನತೆ ಪರಿಹಾರಕ್ಕೆ ಕೇಂದ್ರದ ಕ್ರಮ

ವಲಯ ಅಸಮಾನತೆಯ (Regional imbalance) ಸಮಸ್ಯೆ ಉದ್ಭವ ವಾಗಿರುವುದಕ್ಕೆ ಕಾರಣ ಕೆಲವೇ ಕಡೆ ಕೈಗಾರಿಕಾ ಬೆಳವಣಿಗೆಯಾಗಿರುವುದು. ಇದರಿಂದ ಕೈಗಾರಿಕೆಗಳಿರುವ ಪ್ರದೇಶಗಳು ಮುಂದುವರಿದು ಇತರ ಪ್ರದೇಶಗಳು

1. Dr. K. Puttaswamiah, Economic Development of Karnataka, Oxford and IBH Publishing Company, New Delhi, 1980, P. 567

ಹಿಂದುಳಿದ ಪ್ರದೇಶಗಳಾಗಿ ಉಳಿದುವು. ಇದರ ಪರಿಣಾಮವಾಗಿ 1960 ರ ಏಪ್ರಿಲ್‌ನಲ್ಲಿ ಸಣ್ಣ ಪ್ರಮಾಣದ ಕೈಗಾರಿಕಾ ಮಂಡಳಿಯು (Small Scale Industries Board) ಇಂಡಸ್ಟ್ರಿಯಲ್ ಡಿಸ್‌ಪರ್ಸಲ್ ಸಮಿತಿಯನ್ನು ರಚಿಸಿ ಕೈಗಾರಿಕಾ ಹಿಂದುಳಿದ ಪ್ರದೇಶಗಳನ್ನು ಗುರುತಿಸುವ ಪ್ರಯತ್ನವನ್ನು ಪ್ರಪ್ರಥಮವಾಗಿ ನಡೆಸಿತು. ಈ ಸಮಿತಿಯು ಕೈಗಾರಿಕಾ ಹಿಂದುಳಿದ ಪ್ರದೇಶಗಳನ್ನು ಗುರುತಿಸಲು ಹಲವಾರು ಮಾನದಂಡಗಳನ್ನು (criteria) ಸಲಹೆ ಮಾಡಿತು. ಅವುಗಳಲ್ಲಿ ತಲಾ ಆದಾಯ, ಜನಸಾಂದ್ರತೆ (Density of population), ನಿರುದ್ಯೋಗ, ಬಡತನ, ತಲಾ ವಿದ್ಯುಚ್ಛಕ್ತಿ ಉಪಯೋಗ ಇತ್ಯಾದಿಗಳಿದ್ದುವು ಇದರ ಜೊತೆಗೆ ಕೈಗಾರಿಕಾ ಹಿಂದುಳಿದ ಪ್ರದೇಶಕ್ಕೆ "ಜಿಲ್ಲೆ"ಯನ್ನು ಮಾನಕ (unit) ವಾಗಿ ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿತು ಕೇಂದ್ರ ಸರ್ಕಾರ 1968ರವರೆಗೆ ಕೈಗಾರಿಕಾ ಹಿಂದುಳಿದ ಪ್ರದೇಶವನ್ನು ಗುರುತಿಸುವ ದಿಕ್ಕಿನಲ್ಲಿ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಲಿಲ್ಲ. ಆದರೆ ಇಡೀ ದೇಶದಲ್ಲಿ ವಲಯ ಅಸಮಾನತೆ ದಿನೇದಿನೇ ಹೆಚ್ಚುತ್ತಿದ್ದುದರಿಂದ ಸರ್ಕಾರ ಒಂದು ನಿರ್ಧಾರಕ್ಕೆ ಬರಬೇಕಿತ್ತು ಮತ್ತು ಈ ಸಮಸ್ಯೆಯ ಬಗ್ಗೆ ಕ್ರಮ ಜರುಗಿಸಬೇಕೆಂಬ ಅರಿವಿದ್ದಿತು. ಕಾರಣ, ವಲಯ ಅಸಮಾನತೆಯ ಪ್ರಮುಖ ಸಮಸ್ಯೆಗಳಾವುದಿತ್ತೆಂದರೆ, ಗ್ರಾಮಾಂತರ ಪ್ರದೇಶಗಳಿಂದ ಕೈಗಾರಿಕಾ ಕೇಂದ್ರಗಳಾದ ಪಟ್ಟಣಗಳಿಗೆ ವಲಸೆ ಬರಲಾರಂಭಿಸಿದ ನಿರುದ್ಯೋಗಿಗಳು, ಈ ಸ್ಥಳಗಳಲ್ಲಿ ಉದ್ಭವಿಸಿದ ನೀರಿನ ಸಮಸ್ಯೆ, ವಿದ್ಯುಚ್ಛಕ್ತಿ, ವಸತಿ, ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳು ತೀವ್ರವಾಗುತ್ತಿದ್ದುವು.

ಈ ಸಮಸ್ಯೆ ವಿಶ್ವದ ಎಲ್ಲ ದೇಶಗಳಲ್ಲೂ ಇರುವಂಥದ್ದಾಗಿದ್ದರೂ ಹಲವಾರು ಮುಂದುವರಿದ ರಾಷ್ಟ್ರಗಳು ವಲಯ ಅಸಮಾನತೆಯ ಸಮಸ್ಯೆಯನ್ನು ಎದುರಿಸಿ ಮುಂದೆಹೋಗಿವೆ. ವಿಶ್ವಮಟ್ಟದಲ್ಲಿ ವಲಯ ಅಸಮಾನತೆಯನ್ನು "ಉತ್ತರ-ದಕ್ಷಿಣ" (North-South) ಅಥವಾ "ದ್ವಿರೂಪತೆ" (Dualism) ಸಮಸ್ಯೆ ಎಂದರೂ ಆಯಾ ವಲಯಗಳಲ್ಲಿ ಅಂದರೆ ದೇಶಗಳಲ್ಲಿ ಅಸಮಾನತೆಯಿದೆ. ಭಾರತ ಈ ಸಮಸ್ಯೆಗೇನೂ ಹೊರತಾಗಿಲ್ಲ. ಹಾಗೆಯೇ ಈ ವಲಯ ಅಸಮಾನತೆ ಹೋಗಲಾಡಿಕೆಗೆ ಸಮತೋಲನ ಕೈಗಾರಿಕಾ ಬೆಳವಣಿಗೆಯೇ ಪರಿಹಾರ ಎಂದೂ ಸರ್ಕಾರ ತಿಳಿದಿತ್ತು. ಅಂತೆಯೇ ಈ ದಿಕ್ಕಿನಲ್ಲಿ ಯೋಜನಾ ಬದ್ಧವಾಗಿ ನಡೆಯಲು 1968 ರಲ್ಲಿ ಕೇಂದ್ರ ಸರ್ಕಾರ ಎರಡು ಸಮಿತಿಗಳನ್ನು ರಚಿಸಿತು. ಒಂದು ಪಾಂಡೆ ಸಮಿತಿ. ಎರಡು ವಾಂಚೂ ಸಮಿತಿ. ಪಾಂಡೆ ಸಮಿತಿಯನ್ನು ದೇಶದಲ್ಲಿ ಕೈಗಾರಿಕಾ ಹಿಂದುಳಿದ ಪ್ರದೇಶಗಳನ್ನು ಗುರುತಿಸಲು ಬೇಕಾಗುವ ಮಾನದಂಡ ನಿರ್ಧಾರಕಗಳನ್ನು (Criteria) ನಿರ್ಧರಿಸಲು ರಚಿಸಲಾಯಿತು. ಹಾಗೆ ನಿರ್ಧರಿಸಿದ ಮಾನದಂಡಗಳಾಧಾರದಲ್ಲಿ ಗುರುತಿಸಿದ ಕೈಗಾರಿಕಾ ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಸೌಲಭ್ಯಗಳನ್ನು ಶಿಫಾರ್ಸುಮಾಡಲು ವಾಂಚೂ ಸಮಿತಿಯನ್ನೂ ರಚಿಸಲಾಯಿತು.

ಪಾಂಡೆ ಸಮಿತಿಯು "ಕೈಗಾರಿಕಾ ಹಿಂದುಳಿದ ರಾಜ್ಯ" ಮತ್ತು "ಕೈಗಾರಿಕಾ ಹಿಂದುಳಿದ ಜಿಲ್ಲೆ" ಇವುಗಳೆರಡಕ್ಕೂ ಪ್ರತ್ಯೇಕವಾದ ಮಾನದಂಡಗಳನ್ನು ಶಿಫಾರ್ಸು ಮಾಡಿತು. ಕೈಗಾರಿಕಾ ಹಿಂದುಳಿದ "ರಾಜ್ಯ"ಗಳಿಗೆ ಅನ್ವಯಿಸಲಾಗುವ ಶಿಫಾರ್ಸು ಮಾಡಿದ ಮಾನದಂಡವನ್ನು ಕೇಂದ್ರ ಸರ್ಕಾರ ಒಪ್ಪಿ ಮಹಾರಾಷ್ಟ್ರ, ಕರ್ನಾಟಕ, ಪಶ್ಚಿಮ ಬಂಗಾಳ, ಗುಜರಾತ್, ತಮಿಳುನಾಡು ಮತ್ತು ಪಂಜಾಬ್ ರಾಜ್ಯಗಳನ್ನು ಕೈಗಾರಿಕಾ ಮುಂದುವರಿದ ರಾಜ್ಯಗಳೆಂದು ಪರಿಗಣಿಸಿ ಮಿಕ್ಕೆಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು (ದೆಹಲಿ, ಪಾಂಡಿಚೇರಿ ಮತ್ತು ಚಂಡೀಗಡ ಹೊರತು ಪಡಿಸಿ) ಕೈಗಾರಿಕಾ ಹಿಂದುಳಿದ ರಾಜ್ಯಗಳೆಂದು ಪರಿಗಣಿಸಿತು.

ಕೈಗಾರಿಕಾ ಹಿಂದುಳಿದ "ಜಿಲ್ಲೆ"ಗಳಿಗೆ ಶಿಫಾರಸ್ಸಾದ ಮಾನದಂಡಗಳನ್ನು ಹಣಕಾಸು ಸಂಸ್ಥೆಗಳೊಡನೆ (IDBI, IFCI, ICICI, RBI) ಕೇಂದ್ರ ಸರ್ಕಾರವು ಸಮಾಲೋಚಿಸಿ ಸೂಕ್ತ ಬದಲಾವಣೆ ಮಾಡಿ, ಇಡೀ ದೇಶದಲ್ಲಿ 217 ಜಿಲ್ಲೆಗಳನ್ನು ಕೈಗಾರಿಕಾ ಹಿಂದುಳಿದ ಜಿಲ್ಲೆಗಳೆಂದು ಘೋಷಿಸಿತು. ಅನಂತರ ಮತ್ತಷ್ಟು ಜಿಲ್ಲೆಗಳು ಸೇರಿಸಲ್ಪಟ್ಟವು. ಈಗ ಇಡೀ ದೇಶದ ಒಟ್ಟು 436 ಜಿಲ್ಲೆಗಳಲ್ಲಿ 301 ಜಿಲ್ಲೆಗಳನ್ನು ಕೈಗಾರಿಕಾ ಹಿಂದುಳಿದ ಜಿಲ್ಲೆಗಳೆಂದು ಪರಿಗಣಿತವಾಗಿದೆ. ಇದು ದೇಶದ ಶೇಕಡ 72 ರಷ್ಟು ನೆಲ ಜನಸಂಖ್ಯೆಯ ಶೇ. 60 ರಷ್ಟಿತ್ತು (1971).

ಇದರ ಜೊತೆಯಲ್ಲೇ ವಾಂಚೂ ಸಮಿತಿ ಶಿಫಾರ್ಸಿನ ಪ್ರಕಾರ ಕೈಗಾರಿಕಾ ಹಿಂದುಳಿದ ಪ್ರದೇಶಗಳಲ್ಲಿ ಸ್ಥಾಪಿತವಾಗುವ ಕೈಗಾರಿಕಾ ಘಟಕಗಳಿಗೆ ಬಂಡವಾಳ ಹೂಡಿಕೆಯ ಶೇ. 10 ರಷ್ಟನ್ನು ಸಬ್ಸಿಡಿ ಕೊಡುವುದೆಂದು ತೀರ್ಮಾನಿಸಿ ಜಾರಿಗೊಳಿಸಿತು. ಈ ಸಬ್ಸಿಡಿಯನ್ನು 1973 ರಲ್ಲಿ ಶೇ. 15 ರಷ್ಟಕ್ಕೇರಿಸಿತು. ಈ ಸಬ್ಸಿಡಿಯೊಡನೆ ಇತರ ಸೌಲಭ್ಯಗಳು, ಅಂದರೆ ರಿಯಾಯಿತಿ ಬಡ್ಡಿದರದ ಸಾಲ, ಸ್ಥಾಪಿತವಾಗುವ ಹೊಸ ಕೈಗಾರಿಕಾ ಘಟಕಗಳಿಗೆ ಆದಾಯತೆರಿಗೆ ರಿಯಾಯಿತಿ ಮತ್ತು ಸೀಮಿತ ಪ್ರದೇಶಗಳಿಗೆ ಸಾರಿಗೆವೆಚ್ಚ ಸಬ್ಸಿಡಿಯನ್ನು ಘೋಷಿಸಿ ಜಾರಿಗೆತಂದಿತು. ಇದರ ಮೂಲ ಉದ್ದೇಶ ಭಾವೀ ಕೈಗಾರಿಕಾ ಉದ್ಯಮಿಗಳು ತಮ್ಮ ಘಟಕಗಳನ್ನು ಕೈಗಾರಿಕಾ ಹಿಂದುಳಿದ ಪ್ರದೇಶಗಳಲ್ಲಿ ಸ್ಥಾಪಿಸಲು ಉತ್ತೇಜಿಸುವುದಾಗಿತ್ತು. ಇವುಗಳ ಜೊತೆಗೆ ಆಯಾಯಾ ರಾಜ್ಯಗಳೂ ಕೂಡ ತಮ್ಮದೇ ಆದ ಕೈಗಾರಿಕಾ ನೀತಿಯಲ್ಲಿ ಆಕರ್ಷಿತ ಸೌಲಭ್ಯಗಳನ್ನು ಒದಗಿಸಲಾರಂಭಿಸಿದುವು. ಇದರಿಂದಾಗಿ ಕೈಗಾರಿಕಾ ವಿಕೇಂದ್ರೀಕರಣದ ಬಗ್ಗೆ ಗಮನಹರಿಸುವಂತಾಯಿತು. ಮತ್ತೆ 1983 ರ ಏಪ್ರಿಲ್ 28 ರಂದು ಕೇಂದ್ರ ಸರ್ಕಾರ ತನ್ನ ಕೈಗಾರಿಕಾ ನೀತಿಯಲ್ಲಿ ಬದಲಾವಣೆ ಮಾಡಿ ಕೈಗಾರಿಕಾ ಹಿಂದುಳಿದ ಒಟ್ಟು 301 ಜಿಲ್ಲೆಗಳನ್ನು ಅವುಗಳ ಹಿಂದುಳಿದಿರುವಿಕೆಯ ಆಧಾರದ ಮೇಲೆ ಎ.ಬಿ. ಮತ್ತು ಸಿ. ವರ್ಗಗಳೆಂದು ಮೂರು ವರ್ಗಗಳನ್ನಾಗಿ ಮಾಡಿತು. 'ಎ' ವರ್ಗದಲ್ಲಿ 134 ಜಿಲ್ಲೆಗಳು, 'ಬಿ' ವರ್ಗದಲ್ಲಿ 54 ಜಿಲ್ಲೆಗಳು ಮತ್ತು 'ಸಿ' ವರ್ಗದಲ್ಲಿ 113 ಜಿಲ್ಲೆಗಳೆಂದು ವಿಂಗಡಿಸಿತು. ಈ ಮೂರೂ ವರ್ಗದ

ಕೈಗಾರಿಕಾ ಹಿಂದುಳಿದ ಜಿಲ್ಲೆಗಳಲ್ಲಿ ಸ್ಥಾಪಿತವಾಗುವ ಕೈಗಾರಿಕಾ ಘಟಕಗಳಿಗೆ ಗ್ರೇಡೆಡ್ ದರದಲ್ಲಿ ಬಂಡವಾಳಹೂಡಿಕೆ ಸಬ್ಸಿಡಿಯನ್ನು ನೀಡವುದೆಂದು ತೀರ್ಮಾನಿಸಿತು. ಅಂದರೆ ಎ, ಬಿ ಮತ್ತು ಸಿ ವರ್ಗದ ಹಿಂದುಳಿದ ಜಿಲ್ಲೆಗಳಿಗೆ ಕ್ರಮವಾಗಿ ಬಂಡವಾಳ ಹೂಡಿಕೆಯು ಶೇ. 25, ಶೇ. 15 ಮತ್ತು ಶೇ. 10 ಅಥವಾ ಗರಿಷ್ಠ ಹಣ ಕ್ರಮವಾಗಿ ರೂ. 25 ಲಕ್ಷ, ರೂ. 15 ಲಕ್ಷ ಮತ್ತು ರೂ. 10 ಲಕ್ಷವೆಂದು ತೀರ್ಮಾನಿಸಿತು. ಜೊತೆಗೆ ಈ ಎಲ್ಲ ಜಿಲ್ಲೆಗಳಲ್ಲಿ ಸ್ಥಾಪಿತವಾಗುವ ಕೈಗಾರಿಕಾ ಘಟಕಗಳಿಗೆ ರಿಯಾಯಿತಿ ದರದ (concessional rate) ಸಾಲಸೌಲಭ್ಯಗಳು ಲಭ್ಯವಾಗುವುದೆಂದು ಸಾರಿತು.

ಈ ಹಿನ್ನೆಲೆಯಲ್ಲಿ, ಅಂದರೆ ಕೈಗಾರಿಕಾ ಹಿಂದುಳಿದ ಜಿಲ್ಲೆಗಳಡಿಯಲ್ಲಿ ಕರ್ನಾಟಕ ರಾಜ್ಯದ 20 ಜಿಲ್ಲೆಗಳಲ್ಲಿ 11 ಜಿಲ್ಲೆಗಳಾದ ಬೆಳಗಾಂ, ಬೀದರ್, ಬಿಜಾಪುರ, ಧಾರವಾಡ, ಗುಲ್ಬರ್ಗ, ಹಾಸನ, ಮೈಸೂರು, ಉತ್ತರ ಕನ್ನಡ, ರಾಯಚೂರು, ದಕ್ಷಿಣ ಕನ್ನಡ ಮತ್ತು ತುಮಕೂರು ಜಿಲ್ಲೆಗಳನ್ನು ಕೈಗಾರಿಕಾ ಹಿಂದುಳಿದ ಜಿಲ್ಲೆಗಳೆಂದು ಕೇಂದ್ರ ಸರ್ಕಾರ ಪರಿಗಣಿಸಿತು. ಅಂದರೆ ರಾಜ್ಯದ ಒಟ್ಟು ವಿಸ್ತೀರ್ಣದ ಶೇ. 65.7 ಭಾಗ ನೆಲ ಮತ್ತು ರಾಜ್ಯದ ಒಟ್ಟು ಜನಸಂಖ್ಯೆಯ ಶೇ 62.5 (1981) ಭಾಗದಷ್ಟು ಹಿಂದುಳಿದ ಭಾಗದಲ್ಲಿದ್ದರು. ಹೀಗಿದ್ದರೂ ಪಾಂಡೇ ಸಮಿತಿ ಶಿಫಾರ್ಸಿನ ಪ್ರಕಾರ ಕರ್ನಾಟಕ ರಾಜ್ಯ ಮುಂದುವರಿದ ರಾಜ್ಯವೆಂದು ಪರಿಗಣಿತವಾಗಿರುವುದು ಆಶ್ಚರ್ಯ. ಈ 11 ಜಿಲ್ಲೆಗಳಲ್ಲಿ ಮೈಸೂರು, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳನ್ನು ಅತ್ಯಂತ ಕೈಗಾರಿಕಾ ಹಿಂದುಳಿದ ಜಿಲ್ಲೆಗಳೆಂದು (Industrially Most Backward) ಪರಿಗಣಿಸಿದ್ದು, ಬೀದರ್ ಜಿಲ್ಲೆಯನ್ನು "ಕೈಗಾರಿಕೆಯೇ ಇಲ್ಲದ ಜಿಲ್ಲೆ" (No Industry District) (ಅಂದರೆ, ಯಾವ ಜಿಲ್ಲೆಯಲ್ಲಿ ದೊಡ್ಡ ಅಥವಾ ಮಧ್ಯಮವರ್ಗದ ಕೈಗಾರಿಕಾ ಘಟಕವು ಇಲ್ಲವೋ ಅಂತಹ ಜಿಲ್ಲೆಗಳನ್ನು ಕೈಗಾರಿಕೆಯೇ ಇಲ್ಲದ ಜಿಲ್ಲೆ ಎಂದು ಪರಿಗಣಿತವಾಯಿತು) ಎಂದು ಪರಿಗಣಿಸಿತು ಅನಂತರದ ವರ್ಗೀಕರಣದಲ್ಲಿ, ಹಿಂದುಳಿದಿರುವಿಕೆಯ ಆಧಾರದಲ್ಲಿ ಬೀದರ್ ಜಿಲ್ಲೆಯನ್ನು 'ಎ' ವರ್ಗದಲ್ಲೂ ಮೈಸೂರು, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳನ್ನು 'ಬಿ' ವರ್ಗದಲ್ಲೂ, ಬೆಳಗಾಂ, ಬಿಜಾಪುರ, ದಕ್ಷಿಣ ಕನ್ನಡ, ಗುಲ್ಬರ್ಗ, ಹಾಸನ, ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು 'ಸಿ' ವರ್ಗದಲ್ಲೂ ಪರಿಗಣಿಸಲಾಗಿದೆ.

ಕೈಗಾರಿಕಾ ಲೈಸೆನ್ಸ್

ಕರ್ನಾಟಕ ಕಮಿಟಿ ಆಫ್ ಕನ್‌ಫಿಡರೇಷನ್ ಆಫ್ ಇಂಜಿನಿಯರಿಂಗ್ ಇಂಡಸ್ಟ್ರೀಸ್ ನಡೆಸಿದ ಸಮೀಕ್ಷೆಯಂತೆ, ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಚಟುವಟಿಕೆಗಳಲ್ಲಿ ಹಿಂದೆ ಬಿದ್ದಿರುವುದು ತೀವ್ರ ಕಳವಳಕ್ಕೆ ಕಾರಣವಾಗಿರುವುದು. ಇದರ ಸಮೀಕ್ಷೆಯಂತೆ 1987ರಲ್ಲಿ ಇಡೀ ದೇಶದಲ್ಲಿ 989 ಲೆಟರ್ ಆಫ್

ಇಂಟೆಂಟ್ ಕೊಟ್ಟಿರುವುದರಲ್ಲಿ ಮಹಾರಾಷ್ಟ್ರಕ್ಕೆ 131, ತಮಿಳುನಾಡಿಗೆ 121, ಆಂಧ್ರಪ್ರದೇಶಕ್ಕೆ 113 ಮತ್ತು ಕರ್ನಾಟಕಕ್ಕೆ ಕೇವಲ 84. ಇದೇ ವರ್ಷದಲ್ಲಿ ಕೊಟ್ಟ 472 ಕೈಗಾರಿಕಾ ಲೈಸೆನ್ಸ್‌ಗಳಲ್ಲಿ ಮಹಾರಾಷ್ಟ್ರಕ್ಕೆ 88, ಗುಜರಾತ್‌ಗೆ 48, ಮತ್ತು ಕರ್ನಾಟಕಕ್ಕೆ 48 ಸಂದಿದ್ದುವು. ಕೊಟ್ಟಿರುವ ಲೆಟರ್ ಆಫ್ ಇಂಟೆಂಟ್ ಮತ್ತು ಕೈಗಾರಿಕಾ ಲೈಸೆನ್ಸ್‌ಗಳನ್ನು ನೋಡಿದಾಗ ರಾಜ್ಯದ ಕೈಗಾರಿಕಾ ಚಟುವಟಿಕೆ ಹಿಂದುಳಿದಿದೆ ಎಂದು ಕಳವಳ ವ್ಯಕ್ತವಾಗುತ್ತದೆ ಮತ್ತು ತಕ್ಷಣ ಕ್ರಮ ಕೈಗೊಳ್ಳದಿದ್ದಲ್ಲಿ ಸನ್ನಿವೇಶ ದುಃಸ್ಥಿತಿಗಿಳಿಯಬಹುದೆಂದು ಶಂಕಿಸಲಾಗಿದ್ದಿತು. ಇದೇ ಕೈಗಾರಿಕಾ ಲೈಸೆನ್ಸ್‌ಗಳ ಹಿಂದಿನ ವರ್ಷಗಳ ಅಂಕಿ ಅಂಶಗಳನ್ನು ಗಮನಿಸಿದಾಗ ದುಃಸ್ಥಿತಿಯ ಶಂಕೆ ನಿಜವೆನಿಸುತ್ತದೆ.

ಪಟ್ಟಿ–1

ದಕ್ಷಿಣ ರಾಜ್ಯಗಳಲ್ಲಿ ಲೈಸೆನ್ಸ್ ನೀಡಿಕೆ

ವರ್ಷ	ಕರ್ನಾಟಕ	ಮಹಾರಾಷ್ಟ್ರ	ತಮಿಳುನಾಡು	ಆಂಧ್ರಪ್ರದೇಶ	ದೇಶದ ಒಟ್ಟು ಲೈಸೆನ್ಸ್‌ಗಳು
1	2	3	4	5	6
1975	64	255	141	61	1027
1980	40	107	37	42	475
1981	25	114	30	39	476
1982	34	95	41	26	432
1983	65	171	76	63	1075
1984	49	140	85	45	905
1985	69	134	177	70	985
1986	42	96	61	40	618

ಮೂಲ: Compiled from the details of Hand Book of Industrial Statistics. 1987. Department of Industrial Development, Government of India.

1975ರಲ್ಲಿ ದೇಶದಲ್ಲಿ ನೀಡಿದ ಒಟ್ಟು 1027 ಲೈಸೆನ್ಸ್‌ಗಳಲ್ಲಿ ಕರ್ನಾಟಕಕ್ಕೆ ದಕ್ಕಿದ್ದು 64. ಅದೇ ಮಹಾರಾಷ್ಟ್ರಕ್ಕೆ 255, ತಮಿಳನಾಡಿಗೆ 141 ಮತ್ತು ಆಂಧ್ರಕ್ಕೆ 61 (ಪಟ್ಟಿ–1). 1980ರಲ್ಲಿ ತಮಿಳುನಾಡಿಗಿಂತ ಉತ್ತಮವೆನಿಸಿದರೂ ಮಹಾರಾಷ್ಟ್ರ 107, ಆಂಧ್ರ 42 ಮತ್ತು ಕರ್ನಾಟಕ 40 ಲೈಸೆನ್ಸ್‌ಗಳನ್ನು (ಇಡೀ ದೇಶಕ್ಕೆ ನೀಡಿದ 475 ಲೈಸೆನ್ಸ್‌ಗಳಲ್ಲಿ) ಪಡೆದಿವೆ. 1981 ಈ ಮೂರೂ ರಾಜ್ಯ

ಗಳಿಗಿಂತ ಕರ್ನಾಟಕ ರಾಜ್ಯ ಕಡಿಮೆ ಲೈಸೆನ್ಸ್ ಪಡೆದ ವರ್ಷವಾಗಿದೆ. ಅಂದರೆ ಒಟ್ಟು 476 ಲೈಸೆನ್ಸಗಳಲ್ಲಿ ಕರ್ನಾಟಕಕ್ಕೆ ಕೇವಲ 25, ಆದರೆ ಮಹಾರಾಷ್ಟ್ರಕ್ಕೆ 114, ತಮಿಳುನಾಡಿಗೆ 30 ಮತ್ತು ಆಂಧ್ರಕ್ಕೆ 39. 1982 ರಿಂದ 1986ರ ವರೆವಿಗೆ ಆಂಧ್ರಪ್ರದೇಶ ಒಂದನ್ನು ಬಿಟ್ಟರೆ ಮಿಕ್ಕ ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಕ್ಕಿಂತ ಅತಿ ಕಡಿಮೆ ಕೈಗಾರಿಕಾ ಲೈಸೆನ್ಸು ಪಡೆದ ಕರ್ನಾಟಕ ರಾಜ್ಯ ಈ ವಲಯದಲ್ಲಿ, ಅಂದರೆ ಕೈಗಾರಿಕಾ ಚಟುವಟಿಕೆಯಲ್ಲಿ ಕುಗ್ಗಿದ ಸಾಧನೆಯುಳ್ಳದ್ದು ಎನ್ನುವುದು ಸಾಬೀತಾಗಿದೆ. ಅಂದರೆ 1982 ರಿಂದ 1986ರ ವರೆವಿಗೆ ನೀಡಿದ ಒಟ್ಟು 4015 ಲೈಸೆನ್ಸ್‌ಗಳಲ್ಲಿ ಕರ್ನಾಟಕ ಪಡೆದಿರುವುದು ಕೇವಲ 259. ಆದರೆ ಮಹಾರಾಷ್ಟ್ರ 636 ಮತ್ತು ತಮಿಳುನಾಡು 440 ಲೈಸೆನ್ಸಗಳನ್ನು ಪಡೆದಿವೆ (ಪಟ್ಟಿ-1). 1985ರಲ್ಲಿ ಮಿಕ್ಕೆಲ್ಲ ರಾಜ್ಯಗಳು ಸರಿಸುಮಾರು ಗರಿಷ್ಠ ಪ್ರಮಾಣದ ಲೈಸೆನ್ಸು ಪಡೆದಿದ್ದರೆ ಕರ್ನಾಟಕ ರಾಜ್ಯ ಅತಿ ಕಡಿಮೆ ಪಡೆದಿದೆ. ಅಂದರೆ ಮಹಾರಾಷ್ಟ್ರ 134, ತಮಿಳುನಾಡು 177, ಆಂಧ್ರ 70 ಮತ್ತು ಕರ್ನಾಟಕ 69.

ಕೈಗಾರಿಕಾ ಲಕ್ಷಣಗಳು

ಕರ್ನಾಟಕ ಸರ್ಕಾರದ ಡೈರೆಕ್ಟರೇಟ್ ಆಫ್ ಎಕನಾಮಿಕ್ಸ್ ಅಂಡ್ ಸ್ಟಾಟಿಸ್ಟಿಕ್ಸ್ ಇಲಾಖೆಯು ವತಿಯಿಂದ ನಡೆಸಿದ ಕೈಗಾರಿಕಾ ಸಮೀಕ್ಷೆಯ ಪ್ರಕಾರ 1982-83ರಲ್ಲಿ (ಅಲ್ಲಿಂದೀಚೆಗೆ ಕೈಗಾರಿಕಾ ಸಮೀಕ್ಷೆ ನಡೆದಿಲ್ಲ) ಆಂಧ್ರ ಪ್ರದೇಶ 10904, ತಮಿಳುನಾಡು 11303 ಮತ್ತು ಕರ್ನಾಟಕ 5085 ಕಾರ್ಖಾನೆಗಳನ್ನು ಹೊಂದಿದ್ದವು. ಅಖಿಲಭಾರತ ಮಟ್ಟದಲ್ಲಿದ್ದ ಶೇಕಡವಾರು ಕಾರ್ಖಾನೆಗಳು ಎಷ್ಟಿತ್ತೆಂದರೆ ಕ್ರಮವಾಗಿ 11.70, 12.13 ಮತ್ತು 5.46. ಇದೇ ಅವಧಿಯಲ್ಲಿದ್ದ (1982-83) ಕಾರ್ಖಾನೆ ಕೆಲಸಗಾರರು, ಆಂಧ್ರ 648984, ತಮಿಳುನಾಡು 659993 ಮತ್ತು ಕರ್ನಾಟಕ 310742 ಮಾತ್ರ. ಅಖಿಲಭಾರತ ಮಟ್ಟದ ಶೇಕಡವಾರು ಕ್ರಮವಾಗಿ 10.28, 10.46 ಮತ್ತು 4.93 (ಪಟ್ಟಿ-2).

ಪಟ್ಟಿ-2

1982-83ರಲ್ಲಿದ್ದ ದಕ್ಷಿಣ ರಾಜ್ಯವಾರು ಕೈಗಾರಿಕಾ ಲಕ್ಷಣಗಳು

(ರೂ. ಲಕ್ಷಗಳಲ್ಲಿ)

ರಾಜ್ಯ	ಕಾರ್ಖಾನೆಗಳು	ಬಂಡವಾಳ	ಕೆಲಸಗಾರರು	ಉತ್ಪಾದನೆ
1	2	3	4	5
ಆಂಧ್ರ ಪ್ರದೇಶ	10904 (11.70)	357256 (5.67)	648904 (10.28)	474738 (5 5)

1	2	3	4	5
ತಮಿಳು ನಾಡು	11303 (12.13)	5 4158 (8.00)	659993 (10 46)	900853 (10 45)
ಮಹಾರಾಷ್ಟ್ರ	14983 (16 08)	1079686 (17.14)	941646 (14.91)	1899953 (22.03)
ಕರ್ನಾಟಕ	5085 (5.46)	292785 (4.65)	310742 (4.93)	355201 (4.12)
ಅಖಿಲ ಭಾರತ	93166	6299200	6313000	8623800

ಸೂಚನೆ : ಆವರಣದಲ್ಲಿರುವುದು ಶೇಕಡವಾರು.

ಮೂಲ : ಡೈರೆಕ್ಟರೇಟ್ ಆಫ್ ಎಕನಾಮಿಕ್ಸ್ ಅಂಡ್ ಸ್ಟ್ಯಾಟಿಸ್ಟಿಕ್ಸ್, ಕರ್ನಾಟಕ ಸರ್ಕಾರ. ವಾರ್ಷಿಕ ಸಮೀಕ್ಷಣೆ—1980-83.

ಈ ವಿವರಗಳನ್ನು ನೋಡಿದಾಗ ರಾಜ್ಯದ ಕೈಗಾರಿಕಾ ಚಟುವಟಿಕೆ ಹೇಗಿತ್ತು ಎನ್ನುವುದರ ಅರಿವಾಗುತ್ತದೆ. ಸ್ಥಾಪಿತವಾದಂತಹ ಒಟ್ಟು ಕಾರ್ಖಾನೆಗಳು, ಹೂಡಿದ ಬಂಡವಾಳ ಮತ್ತು ಕೆಲಸಗಾರರು ಇವುಗಳ ಪ್ರಭಾವ ಉತ್ಪಾದನೆ ಮತ್ತು ಒಟ್ಟು ಆದಾಯದ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮ ಬೀರುತ್ತದೆ ಎನ್ನುವುದು ತಿಳಿದ ವಿಷಯ. ಇದೇ ಅವಧಿಯ, ಅಂದರೆ 1982-83ರಲ್ಲಿ ಹೂಡಿದ್ದ ಒಟ್ಟು ಬಂಡವಾಳ ಮತ್ತು ಉತ್ಪಾದನೆ ಎಷ್ಟಿತ್ತೆಂದರೆ, ಆಂಧ್ರ ಪ್ರದೇಶ 357256 ಲಕ್ಷ ರೂಪಾಯಿಗಳು ಮತ್ತು 474738 ಲಕ್ಷ ರೂಪಾಯಿಗಳು. ತಮಿಳನಾಡು 504158 ಲಕ್ಷ ರೂಪಾಯಿಗಳು ಮತ್ತು 900853 ಲಕ್ಷ ರೂಪಾಯಿಗಳು. ಆದೇ ಕರ್ನಾಟಕದಲ್ಲಿ 292785 ಲಕ್ಷ ರೂಪಾಯಿಗಳು ಮತ್ತು 355201 ಲಕ್ಷ ರೂ. ಅಖಿಲ ಭಾರತ ಮಟ್ಟದ ಶೇಖಡಾವಾರು ಕ್ರಮವಾಗಿ ಆಂಧ್ರ 5.67 ಮತ್ತು 5 51 ; ತಮಿಳುನಾಡು 8.00 ಮತ್ತು 10.45 ; ಕರ್ನಾಟಕ 4.65 ಮತ್ತು 4.12 (ಪಟ್ಟಿ–2). ಈ ಎಲ್ಲ ಕೈಗಾರಿಕಾ ಲಕ್ಷಣಗಳಲ್ಲೂ ಕರ್ನಾಟಕ ರಾಜ್ಯ ಹಿಂದುಳಿದಿದೆ ಎಂದು ಬೇರೆ ಹೇಳಬೇಕಾಗಿಲ್ಲ.

ಬಂಡವಾಳ ಹೂಡಿಕೆ (Capital Investment Subsidy)

ಕೈಗಾರಿಕಾ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ವಾಂಚೂ (1971) ಶಿಫಾರ್ಸು ಮಾಡಿದ ಸೌಲಭ್ಯಗಳಲ್ಲಿ ಬಂಡವಾಳ ಹೂಡಿಕೆ ಸಬ್ಸಿಡಿ ಒಂದು. ಈ ಪ್ರದೇಶಗಳಲ್ಲಿ ಸ್ಥಾಪಿತವಾಗುವ ಕೈಗಾರಿಕಾ ಘಟಕಗಳಿಗೆ ಬಂಡವಾಳ ಹೂಡಿಕೆಯ ಶೇಕಡ ಭಾಗವನ್ನು (ಈಗಾಗಲೇ ತಿಳಿಸಿರುವಂತೆ) ಸಬ್ಸಿಡಿಯಾಗಿ ನೀಡುವುದೆಂದು

ಕೇಂದ್ರ ಸರ್ಕಾರ ನಿರ್ಧರಿಸಿದ ಯೋಜನೆ. ಆದುದರಿಂದ 1972-73ರಿಂದ 1979-80ರ ವರೆಗಿನ ಒಟ್ಟು ವಿತರಣೆಯಾಗಿರುವ ಬಂಡವಾಳ ಸಬ್ಸಿಡಿ ರೂ. 69.04 ಕೋಟಿ. 1980ರಿಂದ 1990ರ ವರೆವಿಗೆ ವಿತರಣೆಯಾಗಿರುವುದು 839.72 ಕೋಟಿ. ಅಂದರೆ ಒಟ್ಟು ಇಡೀ ದೇಶದಲ್ಲಿ 1972ರಿಂದ 1990ರ ವರವಿಗೆ ರೂ. 908.76 ಕೋಟಿ. ಇದರಲ್ಲಿ 1972–73ರಿಂದ 1979–80ರ ವರೆವಿಗೆ ತಮಿಳುನಾಡು ರೂ. 10.09 ಕೋಟಿ, ಆಂಧ್ರ ರೂ. 8.18 ಮತ್ತು ಮಹಾರಾಷ್ಟ್ರ ರೂ. 7.59 ಕೋಟಿ ಸಬ್ಸಿಡಿಯನ್ನು ಪಡೆದಿವೆ. ಇವುಗಳೊಡನೆ ಕರ್ನಾಟಕವನ್ನು ಹೋಲಿಸಿದಾಗ ಕೇವಲ ರೂ. 4.80 ಕೋಟಿ ಸಬ್ಸಿಡಿ ಪಡೆದಿದೆ. ಇದರ ಶೇಕಡಾವಾರು ಎಷ್ಟೆಂದರೆ ತಮಿಳುನಾಡು 14.61, ಆಂಧ್ರ 11.84, ಮಹಾರಾಷ್ಟ್ರ 10.99. ಆದರೆ ಕರ್ನಾಟಕದ್ದು ಕೇವಲ 6.95. ಕರ್ನಾಟಕ ಒಂದನ್ನು ಬಿಟ್ಟು ಮಿಕ್ಕ ಮೂರೂ ರಾಜ್ಯಗಳು ದೇಶದಲ್ಲಿ ವಿತರಣೆಯಾದ ಒಟ್ಟು ಸಬ್ಸಿಡಿಯಾದ (1972–73ರಿಂದ 1979–80) ರೂ. 69.04 ಕೋಟಿಯಲ್ಲಿ ಶೇ. 37.45 ಭಾಗದಷ್ಟು ಪಡೆದಿವೆ. ಅದರಲ್ಲೂ ತಮಿಳುನಾಡು ರಾಜ್ಯದ್ದು ಸಿಂಹಪಾಲು (ಪಟ್ಟಿ–3). ಅಂದರೆ ಈ ರಾಜ್ಯಗಳ ಕೈಗಾರಿಕಾ ಚಟುವಟಿಕೆ ಬಂಡವಾಳ ಸಬ್ಸಿಡಿ ಪಡೆದಿರುವ ಪಾಲಿನಿಂದ ತಿಳಿಯುತ್ತದೆ. ಇದೇ ಸಂದರ್ಭವನ್ನು ಕರ್ನಾಟಕ ರಾಜ್ಯ ಯಾವ ಕಾರಣಗಳಿಂದ ಪಡೆದುಕೊಳ್ಳಲಿಲ್ಲ ಎಂಬುದು ಮುಖ್ಯ ಅಂಶ

ಪಟ್ಟಿ–3

ದಕ್ಷಿಣ ರಾಜ್ಯಗಳಲ್ಲಿ ಬಂಡವಾಳ ಸಬ್ಸಿಡಿ ವಿತರಣೆ

(ರೂ. ಕೋಟಿಗಳಲ್ಲಿ)

ವರ್ಷ	ದೇಶದ ಒಟ್ಟು ಸಬ್ಸಿಡಿ	ಕರ್ನಾಟಕ	ಮಹಾರಾಷ್ಟ್ರ	ತಮಿಳುನಾಡು	ಆಂಧ್ರ	ಕೇರಳ
1972–73ರಿಂದ 1979–80	69.04	4.80 (6.95)	7.59 (10.99)	10.09 (14.61)	8.18 (11.84)	3.48 (5.04)
1980–1990	839.72	36.65 (4.35)	30.22 (3.60)	65.00 (7.74)	65.60 (7.81)	19.56 (2.33)
1972–1990 (ಒಟ್ಟು)	908.76	41.45	37.81	75.09	73.78	23.04

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು.

ಮೂಲ : ಎಕನಾಮಿಕ್ ಟ್ರೆಂಡ್ಸ್—ಸಪ್ಲಿಮೆಂಟ್, ಜನವರಿ 1991.

ಹಾಗೆಯೇ 1980-90ರ ಅವಧಿಯಲ್ಲಿ ವಿತರಣೆಯಾದ ಒಟ್ಟು ರೂ. 839.72 ಕೋಟಿ ಸಬ್ಸಿಡಿಯಲ್ಲಿ ತಮಿಳುನಾಡು ರೂ. 65.00 ಕೋಟಿ (7.74), ಆಂಧ್ರ ರೂ. 65.60 ಕೋಟಿ (7.81), ಮಹಾರಾಷ್ಟ್ರ ರೂ. 30.12 ಕೋಟಿ (3.61), ಕರ್ನಾಟಕ ರೂ. 36.65 (4.36). ಈ ಅವಧಿಯಲ್ಲೂ ತಮಿಳುನಾಡು ಮತ್ತು ಆಂಧ್ರ ತಮ್ಮ ಪಾಲನ್ನು ಪಡೆದುಕೊಂಡಿವೆ. ಈ ಅಂಶಗಳಿಂದ 1980ರಿಂದೀಚೆಗೆ ಕರ್ನಾಟಕ ರಾಜ್ಯದಲ್ಲಿ ಆಗಿರುವ ಕೈಗಾರಿಕಾ ಬೆಳವಣಿಗೆ 1972-73ರಿಂದ 1979-80ರ ಅವಧಿಗಿಂತ ಹೆಚ್ಚೇನೂ ಇಲ್ಲವೆಂದು ತಿಳಿಯುತ್ತದೆ. 1972-73ರಿಂದ 1989-90ರ ವರೆವಿಗೆ ವಿತರಣೆಯಾದ ಒಟ್ಟು ರೂ. 908.76 ಕೋಟಿ ಸಬ್ಸಿಡಿಯಲ್ಲಿ ಕರ್ನಾಟಕ ಕೇವಲ ರೂ. 41.45 ಕೋಟಿಗಳಿಂದ ತೃಪ್ತಿಹೊಂದಿದೆ. ಅದೇ ತಮಿಳುನಾಡು ರೂ. 75.09 ಕೋಟಿ ಆಂಧ್ರ ರೂ. 73.78 ಕೋಟಿ, ಮಹಾರಾಷ್ಟ್ರಕ್ಕೆ ಸ್ವಲ್ಪ ಕಡಿಮೆ, ಅಂದರೆ ರೂ. 37.81 ಕೋಟಿ ಪಡೆದರೂ, 1972-80ರ ಅವಧಿಯಲ್ಲಿ ಹೆಚ್ಚು ಪಡೆದಿದೆ. ಈ ಮಧ್ಯೆ ಕೇರಳ ರಾಜ್ಯ ಒಟ್ಟು ರೂ. 23.04 ಕೋಟಿಯಷ್ಟು ಪಡೆದಿದೆ. ಆ ರಾಜ್ಯದ ವಿಸ್ತೀರ್ಣವೇ ಇತರ ದಕ್ಷಿಣ ರಾಜ್ಯಗಳ ಅರ್ಧಕ್ಕೂ ಕಡಿಮೆಯಿದ್ದು, ಸಬ್ಸಿಡಿಯನ್ನು ಅಗತ್ಯ ಪ್ರಮಾಣಕ್ಕಿಂತಲೂ ಹೆಚ್ಚು ಪಡೆದಿದೆ ಎನ್ನಬಹುದು. ಈ ಸಬ್ಸಿಡಿಯಿಂದ ಕೈಗಾರಿಕಾ ಚಟುವಟಿಕೆಯನ್ನು ಪೂರ್ಣವಾಗಿ ಅಳೆಯಲಾಗದು ಎನ್ನುವ ಅಂಶವಿದ್ದರೂ ಕೇಂದ್ರದ ಸಂಪನ್ಮೂಲ ಸಬ್ಸಿಡಿ ಯೋಜನೆಗಳಿಂದ ಕೋಟ್ಯಂತರ ರೂಗಳಲ್ಲಿ ಒಂದು ರಾಜ್ಯಕ್ಕೆ ಹರಿಯುವುದರಿಂದ ಸಂಬಂಧಿಸಿದ ವಲಯದಲ್ಲಿ, ಅಂದರೆ ಕೈಗಾರಿಕಾ ವಲಯದಲ್ಲಿ ಸಾಕಷ್ಟು ಪರಿಣಾಮವುಂಟಾಗುತ್ತದೆ ಬಂಡವಾಳ ಸಬ್ಸಿಡಿಯು ಸ್ಥಾಪನೆಯಾಗುವ ಕೈಗಾರಿಕಾ ಘಟಕಗಳ ಸಂಖ್ಯೆಯ ಮೇಲೂ ಅವಲಂಬಿತವಾಗಿರುವುದರಿಂದ ರಾಜ್ಯಗಳು ಪಡೆದಿರುವ ಒಟ್ಟು ಸಬ್ಸಿಡಿಯ ಮೇಲೂ ಕೈಗಾರಿಕಾ ಚಟುವಟಿಕೆಯನ್ನು ಅಳೆಯಬಹುದಾಗಿದೆ. ಹೊಸ ಕೈಗಾರಿಕಾ ಘಟಕಗಳ ಮೇಲೆ ಈ ಸಬ್ಸಿಡಿ ಲಭ್ಯವಾಗುವುದರಿಂದ ಕರ್ನಾಟಕದಲ್ಲಿ ಇತ್ತೀಚೆಗೆ ಕೈಗಾರಿಕಾ ಚಟುವಟಿಕೆ ಕಡಿಮೆಯಾಗಿದೆ ಎನ್ನುವುದಕ್ಕೆ ಈಗಾಗಲೇ ಕೈಗಾರಿಕಾ ಲೈಸೆನ್ಸ್ ವಿವರಗಳಿಂದಲೂ ವೇದ್ಯವಾಗಿದೆ.

ರಿಯಾಯಿತಿ ಹಣಕಾಸು ಸಹಾಯ

ಬಂಡವಾಳ ಹೂಡಿಕೆ ಸಬ್ಸಿಡಿ ಜೊತೆಯಲ್ಲೇ ರಿಯಾಯಿತಿ ಹಣಕಾಸು (concessional finance) ಸಾಲ ಸೌಲಭ್ಯವನ್ನು ಕೈಗಾರಿಕಾ ಹಿಂದುಳಿದ ಪ್ರದೇಶಗಳಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳಿಗೆ 1971ರಿಂದ ಕೇಂದ್ರ ಸರ್ಕಾರ ನೀಡಲು ತೀರ್ಮಾನಿಸಿತು. ಇದಕ್ಕಾಗಿ ತೊಡಗಿಸುವ ರಾಷ್ಟ್ರೀಯ ಹಣಕಾಸು ಸಂಸ್ಥೆಗಳೆಂದರೆ IDBI, IFCI, ICICI, CITI, LIC ಮತ್ತು GIC.

ರಿಯಾಯಿತಿ ಹಣಕಾಸು ಸೌಲಭ್ಯವೆಂದರೆ, ಕಡಿಮೆ ಬಡ್ಡಿದರದ ಸಾಲ ಮರುಪಾವತಿ ಅವಧಿಯ ಹೆಚ್ಚಳ, ಸಂಸ್ಥೆಯ ಮೂಲ ಬಂಡವಾಳದಲ್ಲಿ (Risk Capital) ಪಾಲ್ಗೊಳ್ಳುವುದು ಇತ್ಯಾದಿ. ಈ ಸೌಲಭ್ಯ ಎಲ್ಲ ಕೈಗಾರಿಕಾ ಹಿಂದುಳಿದ ಜಿಲ್ಲೆಗಳಿಗೆ ಲಭ್ಯ ಪಟ್ಟಿ 4ರಲ್ಲಿರುವ ಅಂಕಿ ಅಂಶಗಳನ್ನು ನೋಡುವುದಾದರೆ ಕರ್ನಾಟಕ ರಾಜ್ಯಕ್ಕೆ 1985-86ರಲ್ಲಿ ರೂ. 127.26 ಕೋಟಿ ಮಂಜೂರಾತಿ ಮತ್ತು ರೂ. 90 33 ಕೋಟಿ ವಿತರಣೆಯಾಗಿದ್ದು, ಕೇರಳ ರಾಜ್ಯವೊಂದನ್ನು ಬಿಟ್ಟು ಎಲ್ಲಾ ದಕ್ಷಿಣ ರಾಜ್ಯಗಳಿಗಿಂತ ಕಡಿಮೆ ಮೊತ್ತದ ಮಂಜೂರಾತಿ ಮತ್ತು ವಿತರಣೆಯಾಗಿರುವುದನ್ನು ಗಮನಿಸಬಹುದು, ಆದೇ ಅವಧಿಗೆ ಮಹಾರಾಷ್ಟ್ರ ರೂ. 262.63 ಕೋಟಿ ಮಂಜೂರಾತಿ ಮತ್ತು ರೂ 154.53 ಕೋಟಿ ವಿತರಣೆ, ಆಂಧ್ರ ರೂ. 159 46 ಮತ್ತು ರೂ. 189.58 ಕೋಟಿ ಮತ್ತು ತಮಿಳುನಾಡು ರೂ. 157.54 ಮತ್ತು ರೂ. 110.72 ಕೋಟಿ. ಆ ವರ್ಷ ದಕ್ಷಿಣ ರಾಜ್ಯಗಳ ನಾಲ್ಕನೇ ಸ್ಥಾನವನ್ನು ಪಡೆದುಕೊಂಡಿತ್ತು. ಹಾಗೆಯೇ 1986-87 ರಲ್ಲಿ ತಮಿಳುನಾಡು ಮತ್ತು ಕೇರಳ ಬಿಟ್ಟು ಐಕ್ಯ ರಾಜ್ಯಗಳಿಗಿಂತ ಕಡಿಮೆ ಮಂಜೂರಾತಿ ಮತ್ತು ವಿತರಣೆ ಹೊಂದಿತ್ತು. 1987-88 ಮತ್ತು 1988-89 ರಲ್ಲೂ ಇದೇ ಪ್ರವೃತ್ತಿ ಮುಂದುವರಿದಿತ್ತು. ಕೋಟ್ಯಾಂತರ ರೂಪಾಯಿಗಳ ಹಣ ಹರಿಯುವಿಕೆ ಒಂದು ರಾಜ್ಯದ ದೀರ್ಘಾವಧಿಗೆ ತಪ್ಪಿದಾಗ ತೀವ್ರ ಪರಿಣಾಮವಿರುತ್ತದೆ.

ಪಟ್ಟಿ—4

ಅಖಿಲ ಭಾರತ ಹಣಕಾಸು ಸಂಸ್ಥೆಗಳಿಂದ ಕೈಗಾರಿಕಾ ಹಿಂದುಳಿದ ಪ್ರದೇಶಗಳಿಗೆ ರಿಯಾಯಿತಿ ದರದ ಸಾಲ ಮಂಜೂರಾತಿ ಮತ್ತು ವಿತರಣೆ

(ರೂ. ಕೋಟಿಗಳಲ್ಲಿ)

ರಾಜ್ಯ		1985–86	1986–87	1987–88	1988–89	1989–90	ಒಟ್ಟು 1990 ಮಾರ್ಚ್‌ವರೆಗೆ
ಮಹಾರಾಷ್ಟ್ರ	ಮ	262 63	181·19	248 13	520:36	937.71	2970.65
	ವಿ	154.53	148 80	196.05	288·74	323 77	1820.95
ಆಂಧ್ರ	ಮ	159·46	196·98	414.25	409.16	362.48	2527.80
	ವಿ	189·88	168·26	226·86	263·12	261.08	1810.73
ತಮಿಳುನಾಡು	ಮ	157.54	99 32	170 41	316 84	225.03	1809.44
	ವಿ	110·72	106·49	107.93	161·34	216 26	1476·56
ಕೇರಳ	ಮ	45.37	74·85	94.40	84.28	95·80	587.01
	ವಿ	36·88	47.93	63·59	71·15	68.27	452.33
ಕರ್ನಾಟಕ	ಮ	127.26	137·96	244·38	234.62	189.41	1722·24
	ವಿ	90·33	118.64	124.15	192.41	176 81	1368.93

ಮ : ಮಂಜುರಾತಿ ವಿ : ವಿತರಣೆ

ಮೂಲ : IDBI Report on Development Bank in India ; 1989–90 (compiled).

1990ರ ಮಾರ್ಚ್ ವರೆವಿಗೆ ಒಟ್ಟಾರೆ ಸಾಲ ಮಂಜೂರಾತಿ ಮತ್ತು ವಿತರಣೆಯನ್ನು ಗಮನಿಸಿದಾಗ (ಪಟ್ಟಿ–4) ದಕ್ಷಿಣದ ಎಲ್ಲ ರಾಜ್ಯಗಳಿಂದ (ಕೇರಳ ಹೊರತುಪಡಿಸಿ) ಕೈಗಾರಿಕಾ ಚಟುವಟಿಕೆ ಮೂಲಕ ಮಂಜೂರಾಗಿರುವ ಹಣ ಕರ್ನಾಟಕಕ್ಕೆ ತೀರ ಕಡಿಮೆಯಾಗಿರುವುದಲ್ಲದೇ ವಿತರಣೆಯೂ ತೀರ ಕಡಿಮೆಯಾಗಿದೆ. ಅದು ರೂ. 1722.24 ಕೋಟಿ ಮಂಜೂರಾತಿಯಲ್ಲಿ ರೂ. 1368.93 ಕೋಟಿ ವಿತರಣೆ, ಅದೇ ಮಹಾರಾಷ್ಟ್ರಕ್ಕೆ ರೂ. 2970.65 ಕೋಟಿಯಲ್ಲಿ ರೂ. 1820.95 ಕೋಟಿ, ತಮಿಳುನಾಡು ರೂ. 1809.44 ಕೋಟಿಯಲ್ಲಿ ರೂ. 1476.56 ಕೋಟಿ ಮತ್ತು ಆಂಧ್ರ ರೂ. 2527.80 ಕೋಟಿಯಲ್ಲಿ ರೂ. 1810.73 ಕೋಟಿ. ಇದರಿಂದ ರಾಜ್ಯದಲ್ಲಾಗಿರುವ ಕೈಗಾರಿಕಾ ಚಟುವಟಿಕೆಯ ಮೊತ್ತದ ಅಂದಾಜನ್ನು ಊಹಿಸಿಕೊಳ್ಳಬಹುದು. ಇದು ದೀರ್ಘಾವಧಿಯಲ್ಲಿ ಹೆಚ್ಚು ಪರಿಣಾಮ ಬೀರುತ್ತದೆ. ಈ ಮಧ್ಯೆ ಕೇರಳ ತನ್ನ ವಿಸ್ತೀರ್ಣದ ಪ್ರಮಾಣಕ್ಕೆ ತಕ್ಕಂತೆ ಸಾಲ ಸೌಲಭ್ಯವನ್ನು ಪಡೆದುಕೊಂಡಿದೆ ಮತ್ತು ತನ್ನ ಹಿತವನ್ನು ಕಾಯ್ದುಕೊಂಡಿದೆ.

ಕೈಗಾರಿಕಾ ಅಭಿವೃದ್ಧಿ ಮುಖಾಂತರ ಆರ್ಥಿಕ ಅಭಿವೃದ್ಧಿ ಸಾಧಿಸಬೇಕಾಗಿರುವ ಇಂದಿನ ಪರಿಸ್ಥಿತಿಯಲ್ಲಿ, ಉತ್ಪಾದನಾ ಹೆಚ್ಚುವರಿಗೆ ಹೆಚ್ಚು ಹಣ ಹರಿಯುವಿಕೆ ಬಹಳ ಮುಖ್ಯ. ಇದಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರದ ಕೈಗಾರಿಕಾ ನೀತಿ ಪೂರಕವಾಗಿರಬೇಕು. ಉತ್ಪಾದನಾ ಹೆಚ್ಚುವರಿಯಿಂದ ರಾಜ್ಯದ ತಲಾ ಆದಾಯವು ನಿರ್ಧಾರವಾಗುತ್ತದೆ. ಇದರಿಂದ ರಾಜ್ಯದಲ್ಲಿ ಅಭಿವೃದ್ಧಿಯಾಗಿಲ್ಲವೆಂದೇನು ಅರ್ಥವಲ್ಲ. ಒದಗಿಬರಬಹುದಾದ ಆರ್ಥಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳಲು ಸಾಕಷ್ಟು ಕೈಗಾರಿಕಾ ವಾತಾವರಣವನ್ನು ಸರ್ಕಾರ ಕಲ್ಪಿಸಬೇಕು. ರಾಜ್ಯದ ಕೈಗಾರಿಕಾ ಚಟುವಟಿಕೆ ವಿದ್ಯುಚ್ಛಕ್ತಿ ಅಭಾವದಿಂದ ಕುಂಠಿತವಾಗಿದೆ ಎನ್ನುವುದು ಒಪ್ಪಲಾಗದ ಮಾತು: ಇಂದಿನ ವಿದ್ಯುಚ್ಛಕ್ತಿ ಅಭಾವಕ್ಕೆ ಕರ್ನಾಟಕ ರಾಜ್ಯ ಸರ್ಕಾರದ ಮುಂದಾಲೋಚನೆಯ ಅಭಾವವೇ ಕಾರಣ. ಎಲ್ಲ ರಾಜ್ಯಗಳು ತಮ್ಮ ಹಿತವನ್ನು ಕಾಯ್ದುಕೊಂಡುಬಂದಾಗ, ನಮ್ಮ ರಾಜ್ಯದವರೇಕೆ ಕಾಯ್ದುಕೊಳ್ಳಲಿಲ್ಲ ? ನಮ್ಮ ರಾಜ್ಯದ ವಿದ್ಯುಚ್ಛಕ್ತಿ ಉತ್ಪಾದನಾ ಸಾಮರ್ಥ್ಯವನ್ನು ಇತರ ದಕ್ಷಿಣ ರಾಜ್ಯಗಳೊಡನೆ ಗಮನಿಸಿದಾಗ ಈ ರಂಗದಲ್ಲೂ ರಾಜ್ಯ ಹತಾಶ ಸ್ಥಿತಿಯಲ್ಲಿದೆ.

ಪಟ್ಟಿ—5

1988ರಲ್ಲಿದ್ದ 31ನೇ ಡಿಸೆಂಬರ್ ಸಲ್ಲಿಸಿದ್ದ ದಕ್ಷಿಣ ರಾಜ್ಯಗಳ ವಿದ್ಯುತ್ ಉತ್ಪಾದನಾ ಸ್ಥಾಪಿತ ಸಾಮರ್ಥ್ಯ

(ಮಿ. ವಾ. ಗಳಲ್ಲಿ)

ರಾಜ್ಯಗಳು	ಥರ್ಮಲ್	ನ್ಯೂಕ್ಲಿಯರ್	ಹೈಡ್ರೋ	ಒಟ್ಟು	ಹಾನಿಯ ಪ್ರಮಾಣ 84-87ರ ಸರಾಸರಿ (ಶೇ)
ಮಹಾರಾಷ್ಟ್ರ	5765.0	320.0	1637.0	7722.0	14.5
ತಮಿಳುನಾಡು	2730.0	470.0	1799.0	4999.0	18.9
ಆಂಧ್ರಪ್ರದೇಶ	23[illegible]5.0	—	2468.7	4794.2	19.5
ಕರ್ನಾಟಕ	420.0	—	2095.4	2515.4	22.8

ಮೂಲ : ಎಕನಾಮಿಕ್ ಟ್ರೆಂಡ್ಸ್ ಸಪ್ಲಿಮೆಂಟ್—ಮಾರ್ಚ್ 1989 ಮತ್ತು ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ.

ಮಹಾರಾಷ್ಟ್ರ, ಆಂಧ್ರ ಮತ್ತು ತಮಿಳುನಾಡು ರಾಜ್ಯಗಳ ಕೈಗಾರಿಕಾ ಚಟುವಟಿಕೆ ಮುಂದುವರಿಯಲು ಕಾರಣ ಆ ರಾಜ್ಯಗಳಲ್ಲಿರುವ ವಿದ್ಯುಚ್ಛಕ್ತಿ ಸ್ವಾವಲಂಬನೆ. ಬಗ್ಗೆ ಏಷ್ಯಾ ಖಂಡದಲ್ಲೇ ಪ್ರಪ್ರಥಮ ಹೈಡ್ರೋ ವಿದ್ಯುತ್ ಉತ್ಪಾದನಾ ಘಟಕವನ್ನು (1902) ಹೊಂದಿದ್ದ ಕರ್ನಾಟಕ ರಾಜ್ಯ 1956ರ ವರೆವಿಗೂ ಸ್ವಾವಲಂಬನೆ ಹೊಂದಿತ್ತು. ಭೌಗೋಳಿಕವಾಗಿ ಬಾದಾಮಿ ಆಕಾರದ ಕರ್ನಾಟಕ ರಾಜ್ಯ ಆದದ್ದು ಮೂರು ಹಂತಗಳಲ್ಲಿ- ಒಂದು 1953ರ ಹಿಂದೆ ಇದ್ದ ಒಂಬತ್ತು ಜಿಲ್ಲೆಗಳು, ಅಂದರೆ ಮೈಸೂರು, ಬೆಂಗಳೂರು, ಕೋಲಾರ, ಮಂಡ್ಯ, ತುಮಕೂರು ಚಿತ್ರದುರ್ಗ, ಶಿವಮೊಗ್ಗ, ಹಾಸನ ಮತ್ತು ಚಿಕ್ಕಮಗಳೂರು. ಎರಡು 1953ರ ಅಕ್ಟೋಬರ್‌ನಲ್ಲಿ ಆಂಧ್ರ ಆಕ್ಟ್ ಪ್ರಕಾರ ಅಂದಿನ ಮದ್ರಾಸ್ ರಾಜ್ಯದಿಂದ ಬಳ್ಳಾರಿ ಜಿಲ್ಲೆ ಸೇರಿತು. ಮತ್ತು ಮೂರು, 1956 ರಲ್ಲಿ ರಾಜ್ಯ ಪುನರ್ವಿಂಗಡಣೆಯಾದಾಗ ಅಂದಿನ ಬೊಂಬಾಯಿ ರಾಜ್ಯದ ನಾಲ್ಕು ಜಿಲ್ಲೆಗಳಾದ ಬೆಳಗಾಂ, ಬಿಜಾಪುರ, ಧಾರವಾಡ, ಮತ್ತು ಉತ್ತರ ಕನ್ನಡ; ಅಂದಿನ ಹೈದ್ರಾಬಾದ್ ರಾಜ್ಯದ ಮೂರು ಜಿಲ್ಲೆಗಳಾದ ಗುಲ್ಬರ್ಗ, ರಾಯಚೂರು ಮತ್ತು ಬೀದರ್; ಅಂದಿನ ಮದ್ರಾಸ್ ರಾಜ್ಯದ ಒಂದು ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆ ರಾಜ್ಯಕ್ಕೆ ಸೇರಿದವು ಮತ್ತು ಕೊಡಗು ಜಿಲ್ಲೆಯೂ ಸೇರಿತು. ಸುಮಾರು 400 ಕಿ ಮೀ. ಉದ್ದದ ಸಮುದ್ರತೀರ, ಚಿನ್ನದ ಗಣಿಗಳು, ತುಂಗಭದ್ರಾ ಕಣಿವೆಗಳು, ಬೇಸಾಯಕ್ಕೆ ಪ್ರಫುಲ್ಲ ಅವಕಾಶ ಹೊಂದಿಪ್ಪ ಕೃಷ್ಣಾ ನದಿ ಮತ್ತು ಆರ್ಥಿಕ ಬೆಳವಣಿಗೆಗೆ ಅವಕಾಶ ಹೊಂದಿದ್ದ ಪ್ರದೇಶಗಳು ಸೇರ್ಪಡೆಯಾದರೂ

ಹಿಂದುಳಿದ ಪ್ರದೇಶಗಳಾಗಿದ್ದುವು. ಇದಕ್ಕೆ ಆಯಾ ರಾಜ್ಯಗಳ ಅಸಡ್ಡೆಯೇ ಕಾರಣವಾಗಿದ್ದಿತೆಂದು ಬೇರೆ ಹೇಳಬೇಕಾಗಿಲ್ಲ. ಇದರಿಂದಾಗಿ ಕರ್ನಾಟಕ ರಾಜ್ಯದ ಸರ್ಕಾರದ ಮೇಲೆ ಹೆಚ್ಚಿನ ಆರ್ಥಿಕ ಹಾಗೂ ಆಡಳಿತ ಹೊರೆ ಬಿದ್ದಂತಾಗಿ ಈ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಲೇ ಇದೆ ಎನ್ನುವುದು ಸರಿ. ಮತ್ತು ಮುಖ್ಯವಾಗಿ ವಿದ್ಯುಚ್ಛಕ್ತಿ ಸ್ವಾವಲಂಬನೆ ಹೊಂದಿದ್ದ ರಾಜ್ಯಕ್ಕೆ ಎಲ್ಲಾ ಹಿಂದುಳಿದ 11 ಜಿಲ್ಲೆಗಳ ಸೇರ್ಪಡೆಯಾದ ನಂತರ ಬೇಡಿಕೆಗೆ ಸರಿಸಮನಾದ ಉತ್ಪಾದನಾ ಸಾಮರ್ಥ್ಯ ಹೆಚ್ಚಲಿಲ್ಲವಾಗಿ ವಿದ್ಯುಚ್ಛಕ್ತಿ ಅಭಾವ ಪ್ರತಿವರ್ಷದ ಸಮಸ್ಯೆಯಾಗಿದೆ.

ಇದಕ್ಕೆ ಕಾರಣ ರಾಜ್ಯ ಸರ್ಕಾರದ ಮುಂದಾಲೋಚನೆಯು ಅಭಾವದ ಜೊತೆಗೆ ಸರ್ಕಾರವೂ ರಾಜ್ಯದಲ್ಲಿ ತನ್ನ ಬಂಡವಾಳವನ್ನು ವಿದ್ಯುಚ್ಛಕ್ತಿ ವಲಯದಲ್ಲಿ ಇತ್ತೀಚಿನ ವರೆವಿಗೆ ಹೂಡಿಯೇ ಇಲ್ಲ ಆದರೆ ಇತರ ಎಲ್ಲ ದಕ್ಷಿಣ ರಾಜ್ಯಗಳಲ್ಲಿ ಕೇಂದ್ರದ ಹಣ ಈ ವಲಯಕ್ಕೆ ಹರಿದಿದೆ. 1998 ಡಿಸೆಂಬರ್‌ನಲ್ಲಿದ್ದ ಕರ್ನಾಟಕದ ವಿದ್ಯುಚ್ಛಕ್ತಿ ಉತ್ಪಾದನಾ ಸಾಮರ್ಥ್ಯ ಕೇವಲ 2515 4 ಮಿ.ವಾ. ಆದರೆ ಇತರ ಮೂರು ರಾಜ್ಯಗಳ (ಪಟ್ಟಿ–5) ಉತ್ಪಾದನಾ ಸಾಮರ್ಥ್ಯ 2–3 ಪಟ್ಟು ಜಾಸ್ತಿಯಿತ್ತು. ಅಂದರೆ ಮಹಾರಾಷ್ಟ್ರ 7722.0 ಮಿ.ವಾ. ತಮಿಳುನಾಡು 4999.0 ಮಿ.ವಾ. ಮತ್ತು ಆಂಧ್ರಪ್ರದೇಶ 4794.2 ಮಿ.ವಾ. ಈ ಎಲ್ಲ ರಾಜ್ಯಗಳೂ ಥರ್ಮಲ್ ಯೋಜನೆಗಳನ್ನು ಬಳಸಿಕೊಂಡಿವೆ. ಆದರೆ ಕರ್ನಾಟಕ ವಲಯದಲ್ಲಿನ ಸಾಮರ್ಥ್ಯ ಅತಿ ಕಡಿಮೆಯಾದ 420 ಮಿ.ವಾ. ಮಾತ್ರ. ಅದೇ ಮಹಾರಾಷ್ಟ್ರ 5765 ಮಿ.ವಾ. ತಮಿಳುನಾಡು 2780.0 ಮಿ.ವಾ. ಮತ್ತು ಆಂಧ್ರ 2325 ಮಿ.ವಾ. ವಿದ್ಯುತ್ ಹಾನಿಯ ಪ್ರಮಾಣದಲ್ಲೂ ಕರ್ನಾಟಕ ರಾಜ್ಯ ಹಿಂದೆಬಿದ್ದಿಲ್ಲ. ರಾಷ್ಟ್ರೀಯ ಸರಾಸರಿ ಹಾನಿ ಶೇಕಡ 14 ರಷ್ಟು ಇರುವಾಗ ವಿದ್ಯುತ್ ಉತ್ಪಾದನೆಯ ರಂಗದಲ್ಲಿ ಮುಂದಾಳು ಎನಿಸಿದ್ದ ಕರ್ನಾಟಕದಲ್ಲಿ ಹಾನಿಯ ಪ್ರಮಾಣ ಶೇಕಡ 22.8 ರಷ್ಟಿರುವುದು ಕಳವಳಕ್ಕೆ ಎಡೆಗೊಡುತ್ತಿದೆ. ಅದೇ ಮಹಾರಾಷ್ಟ್ರದಲ್ಲಿ ಶೇಕಡ 14.5, ತಮಿಳುನಾಡು 18.9 ಮತ್ತು ಆಂಧ್ರಪ್ರದೇಶ 19.5.

ಇದೇ ರಾಜ್ಯದ ಕೈಗಾರಿಕಾ ಅಭಿವೃದ್ಧಿಗೆ ರಾಜ್ಯಸರ್ಕಾರ ತೋರಿರುವ ಅಲಕ್ಷ್ಯದ (Apathy) ಕಾರಣ ರಾಜ್ಯದ ಹಿನ್ನಡೆಯಾಗಿದೆ. ಇದರ ಪರಿಣಾಮ ರಾಜ್ಯವಾರು ಅಸಮಾನತೆ. ಕೇಂದ್ರ ಸರ್ಕಾರದ ವಲಯ ಅಸಮಾನತೆಯ ಪರಿಹಾರ ಕ್ರಮದಡಿಯಲ್ಲಿ ರಾಜ್ಯ ಹೆಚ್ಚೇನೂ ಸಾಧಿಸಲಾಗಿಲ್ಲ ಎನ್ನುವುದು ಅಂಕಿಅಂಶಗಳಿಂದ ಸಾಬೀತಾಗಿದೆ. ಅಂದರೆ, ಕರ್ನಾಟಕ ರಾಜ್ಯದಲ್ಲಿ ಕೈಗಾರಿಕಾ ಘಟಕಗಳ ಸ್ಥಾಪನೆ ಇತ್ತೀಚಿನ ವರ್ಷಗಳಲ್ಲಿ ಇತರ ದಕ್ಷಿಣ ರಾಜ್ಯಗಳಿಗಿಂತ ಕಡಿಮೆ ಎನ್ನುವುದು ಸಾಬೀತಾಗಿದೆ. ಇತ್ತೀಚೆಗೆ ವಿಜಯನಗರ ಉಕ್ಕು ಕಾರ್ಖಾನೆ ಘಟಕವನ್ನು ಜಂಟೀ ವಲಯದಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಲು ಕೈಕೊಂಡ ಕ್ರಮ ಸ್ವಾಗತಾರ್ಹ. ಆದರೂ ಇಂತಹ ಕೆಲಸವನ್ನು ದಶಕಗಳ ಹಿಂದೆಯೇ ಜರುಗಿಸಿದ್ದಲ್ಲಿ ಈ ವಲಯದಲ್ಲಿ

ಎಷ್ಟೊಂದು ಸಾಧಿಸಬಹುದಾಗಿತ್ತು ಎನ್ನುವುದು ಮುಖ್ಯ ಅಂಶ. ಹಾಗೆಯೇ ಮಂಗಳೂರಿನ ಸೂಪರ್ ಥರ್ಮಲ್ ಪವರ್ ಯೋಜನೆಗೆ ಕೇಂದ್ರ ಸರ್ಕಾರದಿಂದ ದೊರಕಿಸಿಕೊಂಡ ಅನುಮತಿಯಿಂದ ಕೈಕಟ್ಟಿಕೂರದೇ ಇತರ ವಿದ್ಯುತ್ ಯೋಜನೆಗಳಿಗೆ ಸರ್ಕಾರ ತೀವ್ರ ಕ್ರಮ ಕೈಗೊಳ್ಳಬೇಕು. ಜೊತೆಗೆ ಈಗಾಗಲೇ ತೀರ್ಮಾನಿಸಿರುವಂತೆ ಖಾಸಗೀ ವಲಯದ ಸಂಪನ್ಮೂಲಗಳನ್ನು ವಿದ್ಯುಚ್ಛಕ್ತಿ ಉತ್ಪಾದನೆಗೆ ಕಾಲವ್ಯರ್ಥವಿಲ್ಲದೆ ಬಳಸಿಕೊಳ್ಳಬೇಕು. ಇದರಿಂದ ವಿದ್ಯುಚ್ಛಕ್ತಿ ಅಭಾವ ನಿಭಾಯಿಸಿ ಕೈಗಾರಿಕಾ ವಲಯಕ್ಕೆ ಉತ್ತೇಜನ ನೀಡಿದಂತಾಗುತ್ತದೆ.

ತಮಿಳುನಾಡು ಸರ್ಕಾರ 1989 ರಲ್ಲಿ ಬಿಡುಗಡೆಮಾಡಿದ ಆರ್ಥಿಕ ಸಮೀಕ್ಷೆಯ ಪ್ರಕಾರ, ಕೇಂದ್ರ ಸರ್ಕಾರ 1983–84 ರಿಂದ 1987–88 ರ ವರೆಗಿನ ಐದು ವರ್ಷದ ಅವಧಿಯಲ್ಲಿ ದೇಶದ ಕೈಗಾರಿಕಾ ಹೂಡಿಕೆ ರೂ. 38,844 ಕೋಟಿಯಿಂದ ರೂ. 82,180 ಕೋಟಿಗೆ ಹೆಚ್ಚಳವಾಗಿದೆಯೆಂದು ಹೇಳಿದೆ. ಈ ಅವಧಿಯಲ್ಲಿ ಪ್ರತಿ ವರ್ಷ ಶೇ. 20.8 ರಷ್ಟು ಹೆಚ್ಚಳವಾಗಿದೆ ಮತ್ತು ತಮಿಳುನಾಡು ಸರ್ಕಾರ ಶೇ. 21.7 ರಷ್ಟು ತನ್ನ ರಾಜ್ಯದಲ್ಲಿ ಹಣಹೂಡಿದೆಯೆಂದೂ ತಿಳಿಸಿದೆ. ಇದೇ ಅವಧಿಯಲ್ಲಿ ಈ ಮತಿಯಿಂದ ಕೇಂದ್ರ ಸರ್ಕಾರದಿಂದ ದಕ್ಷಿಣ ರಾಜ್ಯಗಳಲ್ಲಿ ಆಂಧ್ರ ಪ್ರದೇಶವು ರೂ. 1225 ಕೋಟಿಯಷ್ಟು ಹಣಹೂಡಿಕೆ ಪಡೆದುಕೊಂಡಿದೆಯೆಂದು ತಿಳಿಸಿದೆ. ಅದೇ ತಮಿಳುನಾಡಿಗೆ ರೂ. 497 ಕೋಟಿ, ಆದರೆ ಕರ್ನಾಟಕಕ್ಕೆ ಕೇವಲ ರೂ. 172 ಕೋಟಿ[1]. ಇದರಿಂದ ಕರ್ನಾಟಕ ರಾಜ್ಯ ತನ್ನ ಪಾಲಿನ ಕೈಗಾರಿಕಾ ಚಟುವಟಿಕೆಯಿಂದ ವಂಚಿತವಾಗಿದೆ. ಇದಕ್ಕೆ ರಾಜ್ಯದ ನಾಯಕತ್ವದ ಪ್ರಭಾವವೂ ಒಂದಂಶ ಎನ್ನುವುದನ್ನು ಮನಗಾಣಬೇಕು.

1975 ರಿಂದ 1986 ರ ವರೆಗಿನ ಅವಧಿಯಲ್ಲಿ ನೀಡಿರುವ ಒಟ್ಟು ಕೈಗಾರಿಕಾ ಲೈಸೆನ್ಸುಗಳಲ್ಲಿ ದಕ್ಷಿಣ ರಾಜ್ಯಗಳ ಸರಣಿಯಲ್ಲಿ ಕರ್ನಾಟಕ ರಾಜ್ಯ ಮೂರನೇ ಸ್ಥಾನವನ್ನು ಹೊಂದಿದೆ. ರಾಜ್ಯದಲ್ಲಿ ಸ್ಥಾಪನೆಯಾಗಿರುವ ಕಾರ್ಖಾನೆಗಳು, ಉದ್ಯೋಗ ನಿರ್ಮಾಣ, ಬಂಡವಾಳ ಹೂಡಿಕೆ ಮತ್ತು ಉತ್ಪಾದನೆ ಈ ಎಲ್ಲಾ ರಂಗದಲ್ಲೂ ಕರ್ನಾಟಕ ರಾಜ್ಯ ಇತರ ದಕ್ಷಿಣ ರಾಜ್ಯಗಳಿಗಿಂತ ಹಿಂದೆ ಬಿದ್ದಿರುವುದು ನಿಜಕ್ಕೂ ಶೋಚನೀಯ. ಕೈಗಾರಿಕಾ ಹಿಂದುಳಿದ ಪ್ರದೇಶದ ಕೈಗಾರೀಕರಣಕ್ಕಾಗಿ ಕೇಂದ್ರ ಸರ್ಕಾರ ರೂಪಿಸಿದ ಯೋಜನೆಯಿಂದಾದ ಬಂಡವಾಳ ಸಬ್ಸಿಡಿ ಮತ್ತು ರಿಯಾಯಿತಿ ಹಣಕಾಸು ಸಹಾಯವನ್ನು ಕರ್ನಾಟಕ ರಾಜ್ಯ ತನ್ನ ಆಕರ್ಷಿತ ಕೈಗಾರಿಕಾ ನೀತಿಯ ಮೂಲಕ ಹೆಚ್ಚು ಕೈಗಾರಿಕೋದ್ಯಮಿಗಳನ್ನು ಆಕರ್ಷಿಸುವಲ್ಲಿ ವಿಫಲಗೊಂಡಿದೆ ಎನ್ನದೇ ಗತ್ಯಂತರವಿಲ್ಲ. ಇದರಿಂದಾಗಿ ಕೋಟ್ಯಂತರ ರೂಪಾಯಿಗಳ ಹಣ ಹೂಡಿಕೆ ರಾಜ್ಯಕ್ಕೆ ತಪ್ಪಿದೆ. ಇದೇ ತಮಿಳುನಾಡು, ಮಹಾರಾಷ್ಟ್ರ

1 ಎಕನಾಮಿಕ್ಸ್ ಟೈಂಸ್. ಜೂನ್ 1, (1991). ಪುಟ–9.

ಮತ್ತು ಆಂಧ್ರ ಪ್ರದೇಶ ರಾಜ್ಯಗಳು ಪರಿಣಾಮಕಾರಿಯಾಗಿ ಪಡೆದುಕೊಂಡಿರುವುದನ್ನು ಅಂಕಿ ಅಂಶಗಳಲ್ಲಿ ವಿಶ್ಲೇಷಿಸಲಾಗಿದೆ. ಆದ್ದರಿಂದ ಇನ್ನು ಮುಂದಾದರೂ ರಾಜ್ಯದ ಕೈಗಾರಿಕಾ ಮುಂದಾಳತ್ವವನ್ನು ಮತ್ತೆ ಮರುಕಳಿಸುವ ವಾತಾವರಣವನ್ನು ರಾಜ್ಯದ ನಾಯಕತ್ವ ಕಲ್ಪಿಸಬೇಕು.

ಡಾ. ಕೆ. ಕೆಂಪೇಗೌಡ

ಭಾರತೀಯ ಭಾಷೆ ಮತ್ತು ಸಾಹಿತ್ಯದಲ್ಲಿ ತೆಲುಗು ಭಾಷೆ ಮತ್ತು ಸಾಹಿತ್ಯ

ದ್ರಾವಿಡ ಭಾಷೆಗಳಲ್ಲಿ ತಮಿಳು ಮತ್ತು ಕನ್ನಡ ಭಾಷೆಗಳನ್ನು ಬಿಟ್ಟರೆ ತೆಲುಗು ಹೆಚ್ಚು ಪ್ರಾಚೀನ ಇತಿಹಾಸವನ್ನು ಮತ್ತು ಹೆಚ್ಚು ಭವ್ಯವಾದ ಸಾಹಿತ್ಯವನ್ನು ಪಡೆದುಕೊಂಡಿರುವ ಭಾಷೆಯಾಗಿದೆ. ಆಂಧ್ರ ಪ್ರದೇಶದಾದ್ಯಂತ ನಾಲ್ಕು ಕೋಟಿಗೂ ಹೆಚ್ಚು ಜನರು ತೆಲುಗು ಭಾಷೆ ಆಡುವವರಿದ್ದಾರೆ. ಇದರ ಜೊತೆಗೆ ಭಾರತದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸಾವಿರಾರು ಜನರು ತೆಲುಗು ಭಾಷೆ ಆಡುವವರಿದ್ದಾರೆ. ಆಂಧ್ರ ಪ್ರದೇಶದ ಈಶಾನ್ಯಕ್ಕೆ ಒರಿಯ ಪ್ರದೇಶವೂ, ಉತ್ತರ ಭಾಗಕ್ಕೆ ಮಧ್ಯ ಪ್ರದೇಶವೂ, ವಾಯುವ್ಯಕ್ಕೆ ಮಹಾರಾಷ್ಟ್ರವೂ, ಪಶ್ಚಿಮಕ್ಕೆ ಕರ್ನಾಟಕವೂ, ದಕ್ಷಿಣಕ್ಕೆ ತಮಿಳುನಾಡುಗಳು ವ್ಯಾಪಿಸಿಕೊಂಡಿವೆ. ತೆಲುಗು ಭಾಷೆಯನ್ನು ಆಂಧ್ರಭಾಷೆ ಎಂತಲೂ ಕರೆಯುವರು. ಆಂಧ್ರ ಎಂಬ ಶಬ್ದ ಸಂಸ್ಕೃತದಿಂದ ಬಂದದ್ದು, ತೆಲುಗು ಎಂಬ ಶಬ್ದಕ್ಕಿಂತಲೂ ಆಂಧ್ರ ಎಂಬ ಶಬ್ದವೇ ಹೆಚ್ಚು ಪ್ರಾಚೀನ. ಋಗ್ವೇದಕ್ಕೆ ಸಂಬಂಧಿಸಿದ ಐತ್ತರೇಯ ಬ್ರಾಹ್ಮಣ ಗ್ರಂಥದಲ್ಲಿ ಆಂಧ್ರ ಎಂಬ ಶಬ್ದವು ದೊರೆಯುತ್ತದೆ. ಕೆಲವು ಪ್ರಾಚೀನ ಪುರಾಣ ಗ್ರಂಥಗಳಲ್ಲಿ ಆಂಧ್ರ ವಂಶದ ಕೆಲವು ಪ್ರಸ್ತಾಪಗಳಿವೆ. ಚೀನಾದ ಯಾತ್ರಿಕ ಹುಯೆನ್‌ತ್ಸಾಂಗ್ ಆಂಧ್ರ ಭಾಷೆ ಮಧ್ಯ ಭಾರತದ ಭಾಷೆಗಿಂತ ಭಿನ್ನವಾಗಿದೆ ಎಂದು ಉಲ್ಲೇಖಿಸಿದ್ದಾನೆ. ಕುಮಾರಿಲ ಭಟ್ಟನು ಆಂಧ್ರ ಭಾಷೆ ಒಂದು ದ್ರಾವಿಡ ಭಾಷೆ ಎಂದು ಹೇಳಿದ್ದಾನೆ. ಇದೇ ರೀತಿ ಹಳೆಯ ತಮಿಳು ಗ್ರಂಥಗಳಲ್ಲಿ ಆಂಧ್ರ ಪ್ರದೇಶವನ್ನು ವಡಗುದೇಶವೆಂದು ಕರೆಯಲಾಗಿದೆ. ಕನ್ನಡ ಶಬ್ದದ ನಿಷ್ಪತ್ತಿಯ ಬಗ್ಗೆ ಯಾವ ಯಾವ ತೊಡಕುಗಳು ಮತ್ತು ಸಮಸ್ಯೆಗಳು ಕಂಡು ಬರುತ್ತವೆಯೋ ತೆಲುಗು ಶಬ್ದದ ನಿಷ್ಪತ್ತಿಯ ಬಗ್ಗೆಯೂ ಅಷ್ಟೇ ತೊಡಕುಗಳು ಮತ್ತು ಸಮಸ್ಯೆಗಳು ಕಂಡುಬರುತ್ತವೆ. ತೆಲುಗು ಭಾಷೆ ಎಂಬುದಕ್ಕೆ ಮೊದಲು ಆಂಧ್ರ ಭಾಷೆ ಎಂಬ ಹೆಸರು ಬಳಕೆಯಲ್ಲಿದ್ದು ಕಾಲಾನಂತರ ಅದರ ಸ್ಥಾನದಲ್ಲಿ ತೆಲುಗು ಭಾಷೆ ಎಂಬ ಹೆಸರು ಬಳಕೆಗೆ ಬಂದಿರಬಹುದೆಂದು ಕೆಲವರ ಅಭಿಪ್ರಾಯ.

ತೆಲುಗಿನ ಕಳಿಂಗನ ದಕ್ಷಿಣ ಭಾಗ ಮತ್ತು ಮಧ್ಯ ಭಾಗಗಳು ಹಿಂದೆ ಆಂಧ್ರ

ಚಕ್ರಾಧಿಪತ್ಯಕ್ಕೆ ಸೇರಿರಲಿಲ್ಲ. ತೆಲಂಗಾಣ ಅಥವಾ ಕಳಿಂಗ ಆಂಧ್ರ ಪ್ರದೇಶಕ್ಕೆ ಸೇರಿಕೊಂಡ ಮೇಲೆ ಅಲ್ಲಿನ ಭಾಷೆಯ ಹೆಸರು ಪ್ರಚಾರಕ್ಕೆ ಬರತೊಡಗಿತು. ತೆಲುಗು ತೆಲಂಗಾಣ ಅಥವಾ ಕಳಿಂಗದ ಭಾಷೆ. ಇದು ತ್ರಿಕಳಿಂಗ ಇಲ್ಲವೇ ತ್ರಿಕಲಿಂಗ ಎಂಬುದರಿಂದ ವಿಕಾಸಗೊಂಡಿದ್ದು. ಈ ದಿಸೆಯಲ್ಲಿ ವಿದ್ವಾಂಸರಲ್ಲಿ ಸಾಕಷ್ಟು ಅಭಿಪ್ರಾಯ ಭೇದಗಳಿವೆ. ಆಗಿನ ಕಾಲದಲ್ಲಿ ತೆಲುಗು ಆಂಧ್ರ ದೇಶದ ಭಾಷೆಯಾದ ಕಾರಣ ಅದಕ್ಕೆ ಆಂಧ್ರ ಭಾಷೆ ಎಂಬ ಹೆಸರು ಬಂದಿದ್ದಿತೆಂದು ಕಾಣುತ್ತದೆ. ತೆಲಂಗಾಣ ಆಂಧ್ರ ಪ್ರದೇಶಕ್ಕೆ ಸೇರಿಕೊಂಡ ಮೇಲೆಯೇ ತೆಲುಗು ಭಾಷೆ ಎಂಬ ಹೆಸರು ಬಂದಿದ್ದು ಎಂದು ಅನೇಕರ ಅಭಿಪ್ರಾಯ. ಈ ವಿಚಾರದ ಬಗ್ಗೆ ಯಾವ ಖಚಿತವಾದ ಆಧಾರಗಳು ದೊರೆಯುವುದಿಲ್ಲ.

ರಾಜಮಂಡ್ರಿಯ ಚಾಲುಕ್ಯ ವಂಶದ ರಾಜರಾಜೇಂದ್ರನ ಆಸ್ಥಾನದಲ್ಲಿದ್ದ ನನ್ನಯ್ಯನ ಕಾಲಕ್ಕೆ ತೆಲುಗು ಭಾಷೆ ಸಾಕಷ್ಟು ಬೆಳೆದಿದ್ದಿತು. ಬೆಜವಾಡದ ಒಂದು ಕಂಬದಲ್ಲಿ ಕೊರೆದಿರುವ ಶಾಸನ ಒಂದರಲ್ಲಿ ಬಳಸಿರುವ ಭಾಷೆ ನನ್ನಯ್ಯ ಬಳಸಿರುವ ಭಾಷೆಯಂತೆಯೇ ಇದೆ. ಈ ಶಾಸನ ನನ್ನಯ್ಯನಿಗಿಂತಲೂ ಹಿಂದಿನದು. ತೆಲುಗು ಭಾಷೆ ಯಾವ ಕಾಲದಲ್ಲಿ ಮೂಲ ದ್ರಾವಿಡ ಭಾಷೆಯಿಂದ ಬೇರೆಯಾಗಿ ಬೆಳೆದು ಬಂದಿತು ಎಂಬುದರ ಬಗ್ಗೆ ಯಾವ ಖಚಿತವಾದ ಆಧಾರಗಳು ದೊರೆಯುವುದಿಲ್ಲ. ಕ್ರಿ.ಶ. 600ರ ಹೊತ್ತಿಗೆ ತೆಲುಗು ಒಂದು ಸ್ವತಂತ್ರ ದ್ರಾವಿಡ ಭಾಷೆಯಾಗಿ ಬಳಕೆಯಲ್ಲಿದ್ದಿತು ಎಂಬ ವಿಚಾರವು ಆ ಕಾಲದ ಚೋಳ ಮಹಾರಾಜನ ತೆಲುಗು ಶಾಸನವೊಂದರಲ್ಲಿ ತಿಳಿದುಬರುತ್ತದೆ. ನನ್ನಯ್ಯನ ಅನಂತರ ತೆಲುಗು ಭಾಷೆ ಹೇಗೆ ಬೆಳೆದು ಬಂದಿತು ಎಂಬುದರ ಬಗ್ಗೆ ಸಾಕಷ್ಟು ಆಧಾರಗಳು ಕಾಣಸಿಗುತ್ತವೆ.

ದ್ರಾವಿಡ ಭಾಷೆಗಳಲೆಲ್ಲಾ ತಮಿಳು ಭಾಷೆಯೇ ಹೆಚ್ಚು ಪ್ರಾಚೀನ ಇದರಲ್ಲಿ ಮೂಲ ದ್ರಾವಿಡಾಂಶಗಳು ಹೇರಳವಾಗಿ ದೊರೆಯುತ್ತವೆ. ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ಪ್ರಭಾವಕ್ಕೆ ತಮಿಳು ಭಾಷೆ ಅಷ್ಟಾಗಿ ಒಳಗಾಗದಿದ್ದರೂ ತೆಲುಗು ಭಾಷೆ ಇವುಗಳ ಪ್ರಭಾವಕ್ಕೆ ಹೆಚ್ಚು ಒಳಗಾಗಿ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಿಂದ ಸಾಕಷ್ಟು ಶಬ್ದಗಳನ್ನು ಪಡೆದುಕೊಂಡಿದೆ. ಇತರ ದ್ರಾವಿಡ ಭಾಷೆಗಳಲ್ಲಿಯೂ ತೆಲುಗು ಭಾಷೆಯಂತೆ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ಪ್ರಭಾವ ಹೆಚ್ಚು. ಮಲೆಯಾಳಂ ಭಾಷೆಯಲ್ಲಿ ಇದು ಸ್ಪಷ್ಟವಾಗಿ ಕಂಡುಬರುತ್ತದೆ. ತೆಲುಗು ಭಾಷೆ ತಮಿಳು ಭಾಷೆಗಿಂತಲೂ ಕನ್ನಡಕ್ಕೆ ಹತ್ತಿರವಾದದ್ದು. ಇದರಲ್ಲಿಯೂ ಸಂಸ್ಕೃತ ಮತ್ತು ಪ್ರಾಕೃತ ಶಬ್ದಗಳು ಹೇರಳವಾಗಿ ದೊರೆಯುತ್ತವೆ. ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ಎಷ್ಟೋ ಸಮಾನ ಅಂಶಗಳು ದೊರೆಯುತ್ತವೆಯಾದರೂ ತೆಲುಗು ಭಾಷೆಗಿಂತ ಕನ್ನಡದಲ್ಲಿ ಮೂಲ ದ್ರಾವಿಡಾಂಶಗಳು ಹೆಚ್ಚಾಗಿವೆ. ತೆಲುಗು ಭಾಷಾ ಪ್ರದೇಶ ದಖ್ಖನ್ನಿನ ಮಧ್ಯಭಾಗದಲ್ಲಿದೆ. ಇದರ ಸುತ್ತಲೂ ಒರಿಯ, ಹಿಂದಿ ಮರಾಠಿ, ಕನ್ನಡ ಮತ್ತು ತಮಿಳು ಭಾಷೆಗಳು ವ್ಯಾಪಿಸಿಕೊಂಡಿವೆ. ತೆಲುಗು ಭಾಷೆ

ಯಲ್ಲಿ ಅನೇಕ ಆರ್ಯ ಭಾಷಿತಾಂಶಗಳು ಇರುವುದು ಕಂಡುಬರುತ್ತವೆ. ಈ ಆರ್ಯ ಭಾಷೆಗಳ ಪ್ರಭಾವದಿಂದ ತೆಲುಗು ಅನೇಕ ಮಾರ್ಪಾಡುಗಳನ್ನು ಮಾಡಿಕೊಂಡಿದೆ. ಆರ್ಯ ಸಂಸ್ಕೃತಿ ಮೊದಲು ತೆಲುಗು ದೇಶವನ್ನು ಅನಿವಾರ್ಯವಾಗಿ ಹಾಯ್ದು ಅದು ದಕ್ಷಿಣದ ಕಡೆಗೆ ಹರಿದಿದೆ. ಈ ಕಾರಣದಿಂದ ತೆಲುಗು ಪ್ರದೇಶ ಆರ್ಯ ಭಾಷೆ ಮತ್ತು ಆರ್ಯ ಸಂಸ್ಕೃತಿಗಳಿಂದ ದಕ್ಷಿಣ ಭಾರತದ ಇತರ ಪ್ರದೇಶಗಳಿಗಿಂತ ಹೆಚ್ಚು ಪ್ರಭಾವಿತವಾಗಿರುವಂತೆ ತೋರಿಬರುತ್ತದೆ

ದ್ರಾವಿಡ ಭಾಷೆಗಳಲ್ಲಿ ತಮಿಳು ಮತ್ತು ಕನ್ನಡ ಭಾಷೆಗಳು ಹೆಚ್ಚು ಪ್ರಾಚೀನ ಭಾಷೆಗಳಾಗಿವೆಯಾದರೂ ತೆಲುಗು ದ್ರಾವಿಡ ಭಾಷೆಗಳಲ್ಲಿ ಮೂರನೇ ಪ್ರಾಚೀನ ಭಾಷೆಯಾಗಿ ಗಣಿಸಿಕೊಳ್ಳುತ್ತದೆ. ತೆಲುಗು ಪ್ರಾಚೀನತೆಯ ದೃಷ್ಟಿಯಿಂದ ಮೂರನೇ ಸ್ಥಾನವನ್ನು ಪಡೆದುಕೊಂಡಿದ್ದರೆ. ತೆಲುಗು ಭಾಷೆ ಆಡುವವರ ಸಂಖ್ಯೆಯ ದೃಷ್ಟಿಯಿಂದ ದ್ರಾವಿಡ ಭಾಷೆಗಳಲ್ಲಿ ಇದು ಮೊದಲನೆಯ ಸ್ಥಾನ ಪಡೆಯುತ್ತದೆ. ತೆಲುಗು ತುಂಬ ಮಧುರವಾದ ಭಾಷೆ. ಮೃದು ಮಧುರ ಧ್ವನಿಗಳಿಗೆ ಇದು ಹೆಸರಾಗಿದೆ. ಪಾಶ್ಚಾತ್ಯರು ಇದನ್ನು ಪೂರ್ವದ ಇಟಾಲಿಯನ್ ಎಂದು ಕರೆಯುವರು.

ತೆಲುಗು ಭಾಷೆಯಲ್ಲಿ ದೊರೆಯುವ ಪ್ರಾಚೀನ ಶಿಲಾಶಾಸನಗಳಲ್ಲಿ ಕ್ರಿ.ಶ. 575ರ ಕಳವಳ್ಳ ಧನಂಜಯನ ಶಿಲಾಶಾಸನವೇ ಹೆಚ್ಚು ಪ್ರಾಚೀನವೆಂದು ಕೆಲವರು ಭಾವಿಸಿದರೆ, ಮತ್ತೆ ಕೆಲವರು ಕ್ರಿ.ಶ. 630ರ ರೇಣುಹಟ್ಟಿ ಮುತ್ತುರಾಜುಲು ಶಿಲಾಶಾಸನವೇ ತೆಲುಗು ಭಾಷೆಯಲ್ಲಿ ಹೆಚ್ಚು ಪ್ರಾಚೀನವೆಂದು ಭಾವಿಸುವರು. ಈ ಪ್ರಾಚೀನ ಶಿಲಾಶಾಸನಗಳ ಬಗ್ಗೆ ವಿದ್ವಾಂಸರಲ್ಲಿ ಅಭಿಪ್ರಾಯ ಭೇದಗಳಿವೆ. ಇವುಗಳಿಗೆ ಹಿಂದೆ ಇದ್ದ ಯಾವ ಪ್ರಾಚೀನ ಶಿಲಾಶಾಸನಗಳು ತೆಲುಗು ಭಾಷೆಯಲ್ಲಿ ದೊರೆಯುವುದಿಲ್ಲ ಇವು ತೆಲುಗಿನ ಹೆಚ್ಚು ಪ್ರಾಚೀನತಮ ಶಿಲಾಶಾಸನಗಳು. ತಮಿಳಿನಲ್ಲಿ ಕ್ರಿ.ಶ. ಒಂದನೆಯ ಶತಮಾನದ ಮಧುರೆಯ ತಿನ್ನವೆಲ್ಲಿ ಶಿಲಾಶಾಸನವು ದೊರೆಯುತ್ತದೆ. ತಮಿಳಿನಲ್ಲಿ ಇದೇ ಹೆಚ್ಚು ಪ್ರಾಚೀನತಮ ಶಿಲಾಶಾಸನ. ಇದೇ ರೀತಿ ಕನ್ನಡದಲ್ಲಿ ಕ್ರಿ ಶ. 450ರ ಹಾಸನದ ಹಲ್ಮಿಡಿ ಶಿಲಾಶಾಸನವು ದೊರೆಯುತ್ತದೆ. ಕನ್ನಡದಲ್ಲಿ ಇದು ಹೆಚ್ಚು ಪ್ರಾಚೀನತಮ ಶಿಲಾಶಾಸನ. ಈ ಮೂರು ದ್ರಾವಿಡ ಭಾಷೆಗಳಲ್ಲಿ ದೊರೆಯುವ ಈ ಮೊತ್ತಮೊದಲ ಶಿಲಾಶಾಸನಗಳನ್ನು ಆಳವಾಗಿ ಪರಿಶೀಲಿಸಿದರೆ ದ್ರಾವಿಡ ಭಾಷೆಗಳಲ್ಲಿ ತಮಿಳು ಮೊದಲನೆಯ ಸ್ಥಾನವನ್ನು, ಕನ್ನಡ ಎರಡನೆಯ ಸ್ಥಾನವನ್ನು, ತೆಲುಗು ಮೂರನೆಯ ಸ್ಥಾನವನ್ನ ಪ್ರಾಚೀನತೆಯ ದೃಷ್ಟಿಯಿಂದ ಪಡೆಯುತ್ತವೆ. ತಮಿಳು, ಕನ್ನಡ ಮತ್ತು ತೆಲುಗು ಭಾಷೆಗಳು ಮೂಲ ದ್ರಾವಿಡ ಭಾಷೆಯಿಂದ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆಯಾಗಿಯೇ ಹುಟ್ಟಿ ಬೇರೆ ಬೇರೆಯಾಗಿಯೇ ಬೆಳೆದುಬಂದಿವೆ ಎಂಬುದು ಈ ಶಿಲಾಶಾಸನಗಳಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ.

ತೆಲುಗು ಭಾಷೆಯಲ್ಲಿ ದೊರೆಯುವ ಪ್ರಾಚೀನಸಾಹಿತ್ಯ ಗ್ರಂಥಗಳಲ್ಲಿ

ಕ್ರಿ.ಶ 1030ರ ನನ್ನಯ್ಯನ ಮಹಾಭಾರತವೇ ಹೆಚ್ಚು ಪ್ರಾಚೀನಗ್ರಂಥವೆಂದು ಕೆಲವರು ಭಾವಿಸಿದರೆ ಮತ್ತೆ ಕೆಲವರು ಆಂಧ್ರ ಶಬ್ದಚಿಂತಾಮಣಿ ಎಂಬ ಗ್ರಂಥವೇ ಹೆಚ್ಚು ಪ್ರಾಚೀನವೆಂದು ಭಾವಿಸುವರು. ಈ ದಿಸೆಯಲ್ಲಿ ವಿದ್ವಾಂಸರಲ್ಲಿ ಯಾವ ಒಮ್ಮತವೂ ಕಂಡುಬರುವುದಿಲ್ಲ. ಕ್ರಿ.ಶ. 450ರ ತೊಲ್‌ಕಾಪ್ಪಿಯಂ ಎಂಬ ಗ್ರಂಥವೇ ತಮಿಳು ಸಾಹಿತ್ಯದಲ್ಲಿ ಮೊತ್ತ ಮೊದಲನೆಯದು. ಇದೇ ರೀತಿ ಕ್ರಿ.ಶ. 850ರ ಕವಿರಾಜಮಾರ್ಗ ಎಂಬ ಗ್ರಂಥವೇ ಕನ್ನಡ ಸಾಹಿತ್ಯದಲ್ಲಿ ಮೊತ್ತ ಮೊದಲನೆಯದು. ಇವುಗಳಲ್ಲಿ ಈ ಗ್ರಂಥಗಳೇ ಹೆಚ್ಚು ಪ್ರಾಚೀನ. ಇವುಗಳಿಗೆ ಹಿಂದೆ ಇದ್ದ ಯಾವ ಸಾಹಿತ್ಯ ಗ್ರಂಥಗಳು ಈ ಮೂರು ದ್ರಾವಿಡ ಭಾಷೆಗಳಲ್ಲಿಯೂ ದೊರೆಯುವುದಿಲ್ಲ. ಈ ಮೂರು ಭಾಷೆಗಳ ಪ್ರಾಚೀನತಮ ಸಾಹಿತ್ಯ ಗ್ರಂಥಗಳನ್ನು ಗಮನಿಸಿದಾಗ ದ್ರಾವಿಡ ಭಾಷೆಗಳಲ್ಲಿ ತಮಿಳು ಮೊದಲನೆಯ ಸ್ಥಾನವನ್ನು, ಕನ್ನಡ ಎರಡನೆಯ ಸ್ಥಾನವನ್ನು ತೆಲುಗು ಮೂರನೆಯ ಸ್ಥಾನವನ್ನು ಪಡೆಯುತ್ತವೆ. ಒಟ್ಟಿನಲ್ಲಿ ದ್ರಾವಿಡ ಭಾಷೆಗಳಲ್ಲಿ ತಮಿಳು, ಕನ್ನಡ ಭಾಷೆಗಳಂತೆಯೇ ತೆಲುಗು ಭಾಷೆಯೂ ಕೂಡ ಹೆಚ್ಚು ಪ್ರಾಚೀನತಮ ಸಾಹಿತ್ಯವನ್ನು ಸಂಪಾದಿಸಿಕೊಂಡಿದೆ ಎಂಬುದರಲ್ಲಿ ಅನುಮಾನವೇನಿಲ್ಲ ಈ ಭಾಷಿಕ ಮತ್ತು ಸಾಹಿತ್ಯಕ ಆಧಾರಗಳು ಆ ದ್ರಾವಿಡ ಭಾಷೆಗಳು ಎಷ್ಟೇಷ್ಟು ಪ್ರಾಚೀನ ಭಾಷೆಗಳಾಗಿವೆ ಎಂಬುದನ್ನು ನಿರ್ಧರಿಸಿಕೊಳ್ಳಲು ಸಹಾಯ ಮಾಡುತ್ತವೆ.

ತೆಲುಗು ಎಂಬ ಶಬ್ದಕ್ಕೆ ತೆನುಂಗು, ತೆಲುಂಗು, ತೆನುಗು, ತೆಲುಗು, ತೆಲಗು, ತ್ರಿಕಳಿಂಗ, ತ್ರಿಕಲಿಂಗ, ತ್ರಿಲಿಂಗ, ತ್ರೈಲಿಂಗ, ತೈಲಿಂಗ, ತೆಲಿಂಗ, ತೆಲಗ, ತೆಲುಗ ಎಂಬ ಬೇರೆಬೇರೆ ರೂಪಗಳು ದೊರೆಯುತ್ತವೆ. ಈ ಬೇರೆಬೇರೆ ರೂಪಗಳಲ್ಲಿ ಯಾವ ಯಾವ ರೂಪಗಳು ಹೆಚ್ಚು ಪ್ರಾಚೀನ ಎಂಬುದರ ಬಗ್ಗೆ ಆಲೋಚಿಸಲು ಹೊರಟ ಕೆಲವು ವಿದ್ವಾಂಸರಲ್ಲಿ ಕೆಲವರು ತ್ರಿಕಳಿಂಗ ರೂಪವೇ ಹೆಚ್ಚು ಪ್ರಾಚೀನವೆಂದು ಭಾವಿಸಿದರೆ ಮತ್ತೆ ಕೆಲವರು, ತೆನುಗು ಎಂಬ ರೂಪವೇ ಹೆಚ್ಚು ಪ್ರಾಚೀನವೆಂದು ಭಾವಿಸುವರು. ಈ ರೂಪಗಳ ಬಗ್ಗೆ ಯಾವ ಖಚಿತವಾದ ಆಧಾರಗಳು ದೊರೆಯುವುದಿಲ್ಲ. ಆದ್ದರಿಂದ ಈ ರೂಪಗಳ ಪ್ರಾಚೀನತೆಯ ಬಗ್ಗೆ ಯಾವುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ. ಈ ದಿಸೆಯಲ್ಲಿ ಒಬ್ಬೊಬ್ಬರೂ ಒಂದೊಂದು ರೂಪವನ್ನು ಪ್ರಾಚೀನವೆಂದು ವಾದಿಸುವರು. ಕನ್ನಡದ ಆದಿಕವಿ ಪಂಪನ ವಿಕ್ರಮಾರ್ಜುನ ವಿಜಯ ಎಂಬ ಗ್ರಂಥದಲ್ಲಿ ತ್ರಿಕಳಿಂಗ ಎಂಬ ರೂಪ ದೊರೆಯುತ್ತದೆ. ಕ್ರಿ.ಶ. 1030ರ ಶಿಲಾಶಾಸನವೊಂದರಲ್ಲಿ ತ್ರಿಕಲಿಂಗ ಎಂಬ ರೂಪ ದೊರೆಯುತ್ತದೆ. ಸಂಸ್ಕೃತ ಸಾಹಿತ್ಯ ಗ್ರಂಥಗಳಲ್ಲಿ ತ್ರೈಲಿಂಗ, ತೈಲಿಂಗ, ತ್ರಿಲಿಂಗ ಎಂಬ ರೂಪಗಳು ದೊರೆಯುತ್ತವೆ. ತ್ರಿಕಳಿಂಗ ಎಂಬುದಕ್ಕೆ ಆ ಮೂರು ಕಳಿಂಗಗಳು ಯಾವುವು? ತ್ರಿಲಿಂಗಕ್ಕೆ ಆ ಮೂರು ಲಿಂಗಗಳು ಯಾವುವು ಎಂಬ ಪ್ರಶ್ನೆಗಳಿಗೆ ಯಾರೂ ಖಚಿತವಾಗಿ ಉತ್ತರಿಸಲಾರರು. ಟಾಲೆಮಿ ಎಂಬುವವನು ಗಂಗಾನದಿಯ ಪೂರ್ವದಿಕ್ಕಿ

ನಲ್ಲಿರುವ ಪ್ರದೇಶವನ್ನು ನಿರ್ದೇಶಿಸುತ್ತಾ ತ್ರಿಲಿಂಗೊನ್ ಎಂದು ಉಲ್ಲೇಖಿಸಿದ್ದಾನೆ. ಟಿಬೆಟ್ಟಿನ ತಾರಾನಾಥ್ ಬೌದ್ಧ ಗ್ರಂಥಗಳಿಂದ ವಿಷಯ ಸಂಗ್ರಹ ಮಾಡುತ್ತಿರುವಾಗ ಒಂದು ಸಂದರ್ಭದಲ್ಲಿ ತ್ರಿಕಲಿಂಗಕ್ಕೆ ಕಳಿಂಗ ಸೇರುತ್ತದೆ ಎಂದು ಉಲ್ಲೇಖಿಸಿದ್ದಾನೆ. ತ್ರಿಕಳಿಂಗ ಎಂಬ ಹೆಸರು ರಾಜಮಂಡ್ರಿಯ ದಕ್ಷಿಣ ಭಾಗಕ್ಕೆ ಇದ್ದಿರಬಹುದು. ತ್ರಿಕಲಿಂಗ ಎಂಬ ಹೆಸರು ಅದರ ಉತ್ತರ ಭಾಗಕ್ಕೆ ಬಳಕೆಯಲ್ಲಿದ್ದಿರಬಹುದು ಎಂದು ಕೆಲವರ ಊಹೆ. ತ್ರಿಕಳಿಂಗ > ತ್ರಿಕಲಿಂಗ > ತ್ರಿಲಿಂಗ > ತಿರಿಲಿಂಗ > ತೈಲಿಂಗ, ತೈರಿಲಿಂಗ > ತ್ರೈಲಿಂಗ > ತಿಲಿಂಗ > ತೆಲಿಂಗ > ತೆಲಂಗ > ತೆಲುಗ ಎಂದು ತೆಲುಗು ಶಬ್ದ ಬೆಳೆದು ಬಂದಿರಬಹುದೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದರೆ, ಮತ್ತೆ ಕೆಲವರು ಇದು ತೆಲುಂಗು > ತೆನುಂಗು > ತೆನುಗು > ತೆಲುಗು ಎಂದು ಬೆಳೆದು ಬಂದಿರಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ತೆನ್, ತೆಂಕಣ ಎಂಬ ರೂಪಗಳು ಕೂಡ ಕೆಲವು ಶಿಲಾಶಾಸನಗಳಲ್ಲಿ ದೊರೆಯುತ್ತವೆ. ಆಂಧ್ರ ಜನರು ಮೊದಮೊದಲು ಪ್ರಾಕೃತ ಭಾಷೆ ಆಡುವ ಉತ್ತರದ ಜನಾಂಗದವರಾಗಿದ್ದು, ಅವರು ತರುವಾಯ ತೆಂಕಣಕ್ಕೆ ವಲಸೆ ಬಂದಿರಬಹುದೆಂದು ಕೆಲವರ ಅಭಿಪ್ರಾಯವಿದೆ. ಹೀಗೆ ತೆಂಕಣದ ಕಡೆ ಬಂದ ಜನ ಮೊದಲು ಅಲ್ಲಿ ನೆಲಸಿದ್ದು ಅಲ್ಲಿಯ ಜನರೊಡನೆ ಬೆರೆತು ಗೋದಾವರಿ ಮತ್ತು ಕೃಷ್ಣ ನದಿಗಳ ನಡುವಿನ ಪ್ರದೇಶದಲ್ಲಿ ನೆಲೆಯಾಗಿ ನಿಂತು ಅಲ್ಲಿ ಬಳಕೆಯಲ್ಲಿದ್ದ ಭಾಷೆಯನ್ನು ಕಲಿತರು ಅದೇ ಅವರ ಭಾಷೆಯ ಹೆಸರಾಗಿರಬಹುದಾದ ಸಾಧ್ಯತೆಗಳಿವೆ ಎಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಇಲ್ಲಿನ ಮೂಲ ನಿವಾಸಿಗಳು ತೆಲಿಂಗರು, ಇವರು ಮೂಲ ದ್ರಾವಿಡ ಇಲ್ಲವೇ ಅನಂತರದ ದ್ರಾವಿಡ ಜನಾಂಗಕ್ಕೆ ಸೇರಿದವರೇ ಇರಬೇಕೆಂದು ತೋರುತ್ತದೆ ಅದೇ ಮಾಂದೆ ತೆಲುಗು ಎಂಬ ಹೆಸರನ್ನು ಪಡೆದುಕೊಂಡಿದ್ದರೂ ಇರಬಹುದೆಂದು ಕಾಣುತ್ತದೆ. ಇದನ್ನು ಒಪ್ಪದ ಕೆಲವರು ತೆಲುಗು ಎಂಬ ಶಬ್ದ ತೇನ್ (ಜೇನು) ಎಂಬ ಮೂಲ ರೂಪದಿಂದ ವಿಕಾಸಗೊಂಡಿದ್ದರೂ ಇರಬಹುದೆಂದೂ ಭಾವಿಸುವರು. ತೇನ್ ಎಂಬುದು ದ್ರಾವಿಡ ಶಬ್ದ. ಇದಕ್ಕೆ ಜೇನು ಎಂಬರ್ಥವಿದೆ. ತೇನ್ > ತೆನ್ > ತೆನುಗು > ತೆಲುಗು ಅಥವಾ ತೆನ್ > ತೇನ್ > ತೆನುಗು > ತೆಲುಗು ಎಂದಾಗಿ ಬೆಳೆದು ಬಂದಿದ್ದರೂ ಬಂದಿರಬಹುದೆಂದು ಹೇಳುವವರಿಗೇನೂ ಕಡಿಮೆಇಲ್ಲ. ತೆಲುಗರು ಜೇನು ಪ್ರಿಯರೆಂದು ತೋರುತ್ತದೆ. ತೆನ್ ಎಂಬ ಶಬ್ದ ತೇನ್ ಎಂಬುದಕ್ಕಿಂತಲೂ ತೆಂಕಣ ಎಂಬ ಶಬ್ದಕ್ಕೆ ಹತ್ತಿರವಾದದ್ದು. ಆಗಿನ ಕಾಲದಲ್ಲಿ ದಕ್ಷಿಣ ದಿಕ್ಕನ್ನು ತೆಂಕಣ ಎಂದು ಕರೆಯುತ್ತಿದ್ದರು ತೆಲಿಂಗಾಣ ಎಂಬುದೇ ತೆಂಕಣ ದಿಕ್ಕಿನ ತೆಲುಗು ಪ್ರದೇಶವೆಂದು ಕಾಣುತ್ತದೆ ತೆಲಿಂಗಾಣ ಅಚ್ಚ ತೆಲುಗು ಪ್ರದೇಶ ಎಂಬುದರಲ್ಲಿ ಅನುಮಾನವೇನಿಲ್ಲ. ಇದು ತೆಲುಗು ಪ್ರದೇಶಕ್ಕೆ ಮುಸಲ್ಮಾನರು ಕೊಟ್ಟ ಹೆಸರು. ಸಂಸ್ಕೃತದ ದಕ್ಷಿಣ ಎಂಬ ಶಬ್ದ ತೆಚ್ಚಣಂ > ತೆಕ್ಕಣಂ > ತೆಂಕಣ > ತೆಲಿಂಗಾಣ ಎಂದಾಗಿ ಬೆಳೆದು ಬಂದಿರಬಹುದಾದ ಸಾಧ್ಯತೆಗಳೂ ಇವೆ. ಸಂಸ್ಕೃತದ

ದಕ್ಷಿಣಾಪಥೇಶ್ವರ ಎಂಬುದು ತೆಂಕಣ ದಿಕ್ಕಿನ ತೆಲಿಂಗಾಣವೇ ಇದ್ದಿರಬೇಕೆಂದು ತೋರುತ್ತದೆ. ತೆಂಕಣ > ತೆಲಿಂಗಣ > ತೆಲಿಂಗಾಣ > ತೆಲುಗ ಇಲ್ಲವೇ ತೆನ್ > (ದಕ್ಷಿಣ) ತೆಂಕಣ > ತೆಲಿಂಗ > ತೆನುಗು > ತೆಲುಗು ಎಂಬುದಾಗಿ ಬೆಳೆದು ಬಂದಿರಬಹುದೆಂದು, ಮತ್ತೆ ಕೆಲವರ ಅಭಿಪ್ರಾಯವಿದೆ, ಇದೇ ರೀತಿ ತ್ರಿಕಳಿಂಗ> ತ್ರಿಲಿಂಗ> ತೆಲುಗ ಎಂದು ಬೆಳೆದು ಬಂದಿದ್ದರೂ ಬಂದಿರಬಹುದು. ಲಿಂಗ ಎಂಬ ಶಬ್ದ ಮುಂಡಾ ಭಾಷೆ ಅಥವಾ ಸಂಸ್ಕೃತ ಭಾಷೆಯಿಂದ ಬಂದಿರಬಹುದು. ದ್ರಾವಿಡ ಭಾಷೆಗಳಲ್ಲಿ ಈ ಶಬ್ದ ಆಗಿನ ಕಾಲದಲ್ಲಿ ಬಳಕೆಯಲ್ಲಿರಲಿಲ್ಲ. ಹೀಗೆ ತೆಲುಗು ಎಂಬ ಶಬ್ದದ ವಿಕಾಸದ ಬಗ್ಗೆ ಬೇರೆ ಬೇರೆ ವಿದ್ವಾಂಸರಲ್ಲಿ ಬೇರೆ ಬೇರೆ ಅಭಿಪ್ರಾಯ ಭೇದಗಳಿವೆ. ಇವುಗಳ ಬಗ್ಗೆ ಯಾವ ಖಚಿತವಾದ ಆಧಾರಗಳು ದೊರೆಯುವುದಿಲ್ಲ. ಈ ಕಾರಣದಿಂದ ಈ ಶಬ್ದದ ವಿಕಾಸದ ಬಗ್ಗೆ ಯಾವುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ.

ತೆಲುಗು ಭಾಷೆ ಕನ್ನಡದ ಭಾಷೆಯಂತೆ ತನ್ನದೇ ಆದ ಸಾಹಿತ್ಯವನ್ನು ಸಂಪಾದಿಸಿಕೊಂಡಿದೆ. ತೆಲುಗು ಭಾಷೆ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ಪ್ರಭಾವಕ್ಕೆ ಒಳಗಾಗಿದ್ದರೂ ಇತರ ದ್ರಾವಿಡ ಭಾಷೆಗಳಂತೆ ಇದು ತನ್ನ ಮೂಲ ದ್ರಾವಿಡಾಂಶಗಳನ್ನು ಕಳೆದುಕೊಂಡಿಲ್ಲ. ಅತ್ಯಂತ ಹಳೆಯ ತೆಲುಗು ರೂಪ ಚೋಳ ಮಹಾರಾಜನಾದ ಪುಣ್ಯಕುಮಾರನ ಕಾಲದಲ್ಲಿ ಕ್ರಿ.ಶ. ಆರನೆಯ ಅಥವಾ ಏಳನೆಯ ಶತಮಾನದ ಕಡಪ ಜಿಲ್ಲೆಯ ತಿಪ್ಪಲೂರಿನ ಶಿಲಾಶಾಸನದಲ್ಲಿ ದೊರೆಯುತ್ತದೆ. ಹಳಗನ್ನಡಕ್ಕೂ ಹೊಸಗನ್ನಡಕ್ಕೂ ಇರುವ ವ್ಯತ್ಯಾಸದಷ್ಟೇ ವ್ಯತ್ಯಾಸ ತಿಪ್ಪಲೂರಿನ ಶಿಲಾಶಾಸನದಲ್ಲಿನ ಹಳೆಯ ತೆಲುಗಿಗೂ ಇಂದಿನ ತೆಲುಗಿಗೂ ವ್ಯತ್ಯಾಸ ಕಂಡುಬರುತ್ತದೆ. ಈ ಶಿಲಾಶಾಸನದ ಲಿಪಿ ಪಲ್ಲವರ ಕಾಲದ ಗ್ರಂಥ ಲಿಪಿಗೆ ಸಮಾನವಾಗಿದೆ. ಕ್ರಿ.ಶ. ಏಳನೆಯ ಶತಮಾನದ ಅನಂತರ ತೆಲುಗು ಭಾಷೆಯ ಅನೇಕ ಶಿಲಾಶಾಸನಗಳು ದೊರೆಯುತ್ತವೆ. ಇವುಗಳಲ್ಲಿ ಭೈರವಕೊಂಡ ಗವಿಯ ಶಿಲಾಶಾಸನಗಳು ಬಹಳ ಮುಖ್ಯವಾಗಿವೆ. ತೆಲುಗು ಭಾಷೆಯಲ್ಲಿ ಱ ಮತ್ತು ೞ ಕಾರಗಳು ಬಳಕೆಯಲ್ಲಿದ್ದವು ಎಂಬುದಕ್ಕೆ ಈ ಶಿಲಾಶಾಸನಗಳು ಸಾಕ್ಷಿಯಾಗಿವೆ. ಱಕಾರ ಕೆಲವು ಕಾಲ ಬಳಕೆಯಲ್ಲಿದ್ದು ಅದು ಅನಂತರ ರ್ ಕಾರದಲ್ಲಿ ಐಕ್ಯವಾಗಿ ಹೋಯಿತು. ಇದಕ್ಕಿಂತ ಹಿಂದೆಯೇ ೞಕಾರ ಹೊರಟು ಹೋಗಿದ್ದಿತು. ಕನ್ನಡಕ್ಕೂ ಮೊದಲೆ ತೆಲುಗು ೞಕಾರವನ್ನು ಕಳೆದುಕೊಂಡಿರಬಹುದೆಂದು ಕಾಣುತ್ತದೆ. ಈ ಶಿಲಾಶಾಸನಗಳನ್ನು ಬಿಟ್ಟರೆ ತೆಲುಗಿನಲ್ಲಿ ಹನ್ನೊಂದನೇ ಶತಮಾನದಲ್ಲಿ ರಚಿತವಾದ ನನ್ನಯ್ಯ ಕವಿಯ ಭಾರತವೇ ಮೊತ್ತ ಮೊದಲ ಸಾಹಿತ್ಯ ಗ್ರಂಥ. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಭಾಷಾಭೇದವಿದೆಯೇ ವಿನಾ ಲಿಪಿ ಭೇದವಿಲ್ಲ. ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ಲಿಪಿ ಭೇದ ಹೆಚ್ಚು. ಭಾಷಾಭೇದ ಕಡಿಮೆ.

ದ್ರಾವಿಡ ಭಾಷೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಎಲ್ಲಾ ಅಕ್ಷರಗಳು ಹೆಚ್ಚು ಕಡಿಮೆ ತೆಲುಗು ವರ್ಣಮಾಲೆಯಲ್ಲಿಯೂ ಕಂಡುಬರುತ್ತವೆ. ಕೆಲವು ಅಕ್ಷರ

ಗಳಲ್ಲಿ ಮಾತ್ರ ವ್ಯತ್ಯಾಸವಿದೆ. ತೆಲುಗು ವರ್ಣಮಾಲೆಯಲ್ಲಿ ಒಟ್ಟು 36 ಅಕ್ಷರಗಳಿವೆ. ಅರ್ಧಾನುಸ್ವಾರ ತೆಲುಗು ಭಾಷೆಗೆ ಮಾತ್ರ ವಿಶಿಷ್ಟವಾದದ್ದು ಉಳಿದ ಯಾವ ದ್ರಾವಿಡ ಭಾಷೆಗಳಲ್ಲಿಯೂ ಈ ಅರ್ಧಾನುಸ್ವಾರ ಬಳಕೆಯಲ್ಲಿಲ್ಲ. ಇದು ಇತ್ತೀಚಿನ ಹೊಸ ತೆಲುಗು ಭಾಷೆಯಲ್ಲಿ ಕಡಿಮೆಯಾಗುತ್ತಿದೆ. ಕ್ರಿ.ಶ. 1022ರ ಆಂಧ್ರ ಶಬ್ದ ಚಿಂತಾಮಣಿ ಮತ್ತು ತ್ರಿಲಿಂಗ ಶಬ್ದಾನುಶಾಸನ ಅಥವಾ ಅಥರ್ವಣ ವ್ಯಾಕರಣ ಇವು ತೆಲುಗಿನಲ್ಲಿ ಹೆಚ್ಚು ಪ್ರಾಚೀನ ಹಾಗೂ ಹೆಚ್ಚು ಪ್ರಸಿದ್ಧ ವ್ಯಾಕರಣ ಗ್ರಂಥಗಳಾಗಿವೆ. ಈ ವ್ಯಾಕರಣ ಗ್ರಂಥಗಳಲ್ಲಿ ಅರ್ಧಾನುಸ್ವಾರದ ಸರಿಯಾದ ಪರಿಕಲ್ಪನೆ ದೊರೆಯುತ್ತದೆ. ತೆಲುಗಿನ ಅನುಸ್ವಾರವನ್ನು ನಾಲ್ಕು ಬಗೆಯಲ್ಲಿ ವರ್ಗೀಕರಿಸಿಕೊಂಡಿದ್ದಾರೆ. ಈ ಗ್ರಂಥಗಳಲ್ಲಿ ತೆಲುಗು ಎಂಬ ಶಬ್ದವನ್ನು ತೆಲುಂಗು ಎಂದೇ ಉಲ್ಲೇಖಿಸಿಕೊಂಡಿದ್ದಾರೆ. ಮೂನ್ಟು, ಮೂಂಡ್ರು ಮತ್ತು ವಾಂಡು ಎಂಬ ಶಬ್ದಗಳ ಉಚ್ಚಾರದಲ್ಲಿ ಅರ್ಧಾನುಸ್ವಾರವಿದೆ. ಇದನ್ನು ಕೆಲವರು ಬಿಂದುವಾಗಿ ಪರಿಗಣಿಸಿಕೊಂಡಿದ್ದಾರೆ. ಅನುನಾಸಿಕದ ಸಂಕೇತವಾದ ಅನುಸ್ವಾರವನ್ನು ಕನ್ನಡದಲ್ಲಿ ಸೊನ್ನೆ ಅಥವಾ ಬಿಂದುವಿನ ಚಿಹ್ನೆಯಿಂದ ತೋರಿಸುವಂತೆ ಅರ್ಧಾನುಸ್ವಾರವನ್ನು ತೆಲುಗಿನಲ್ಲಿ ಅರ್ಧಬಿಂದು ಅಥವಾ ಅರ್ಧ ಚಂದ್ರಾಕೃತಿಯಲ್ಲಿ ಸಂಕೇತಿಸಿಕೊಳ್ಳುವರು. ತೆಲುಗು ಭಾಷೆಯಲ್ಲಿ ಬಹಳ ಹಿಂದಿನ ಕಾಲದಿಂದಲೂ ಉಚ್ಚಾರದಲ್ಲಿ ಅರ್ಧಾನುಸ್ವಾರ ಇದ್ದಿತೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

17ನೆಯ ಶತಮಾನದಲ್ಲಿ ಪೋರ್ಚುಗೀಸರು ಅನಂತರ ಬಂದ ಯೂರೋಪಿಯನರು ತೆಲುಗರನ್ನು ಗೆಂಟೋ (ಜೆಂತು) (Gentoo) ಎಂದು ಕರೆದರು. ಪೋರ್ಚುಗೀಸ್ ಭಾಷೆಯಲ್ಲಿ ಗೆಂಟೊ ಎಂದರೆ ಹಿಂದೂಗಳು, ಅನಾಗರಿಕರು, ಅಧರ್ಮಿಗಳು ಎಂದರ್ಥ. ಮತ್ತೆ ಕೆಲವರು ಭಾರತೀಯರನ್ನು ಹೀದನ್ಸ್ (Heathens) ಎಂದು ಕರೆದಂತೆ. ಈ ಅಮೆರಿಕನ್ ಇಂಗ್ಲಿಷಿನ ಹೀದನ್ಸ್ ಎಂಬ ಶಬ್ದಕ್ಕೆ ಅದೇ ಅರ್ಥವಿದೆ. ತೆಲುಗು ಭಾಷೆ ಮತ್ತು ವ್ಯಾಕರಣವನ್ನು ಕುರಿತು ಚಾರ್ಲ್ಸ್ ಫಿಲಿಪ್, ಬ್ರೌನ್ ಮುಂತಾದವರು ತೆಲುಗು ಭಾಷೆಯನ್ನು ಕುರಿತು ಕೆ ರಾಮಕೃಷ್ಣಯ್ಯ, ಸೋಮಯಾಜಿ, ಭ. ಕೃಷ್ಣಮೂರ್ತಿ ಮುಂತಾದವರು ಗಮನಾರ್ಹವಾದ ಸೇವೆಸಲ್ಲಿಸಿದ್ದಾರೆ. ತೆಲುಗು ಭಾಷೆ, ಛಂದಸ್ಸು, ವ್ಯಾಕರಣ, ನಿಘಂಟುಗಳು ಮುಂತಾದುವುಗಳನ್ನು ತೌಲನಿಕವಾಗಿ ವಿವೇಚಿಸಿ ತೆಲುಗುಭಾಷೆಗೆ ಮಾತ್ರವಲ್ಲದೆ ದ್ರಾವಿಡ ಭಾಷಾವಿಜ್ಞಾನ ಕ್ಷೇತ್ರಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡಿ ಉಪಕಾರಮಾಡಿದ್ದಾರೆ.

ತೆಲುಗು ಭಾಷೆಯನ್ನು ಕನ್ನಡ ಮತ್ತು ತಮಿಳುಭಾಷೆಗಳೊಡನೆ ಹೋಲಿಸಿದರೆ ತೆಲುಗಿನಲ್ಲಿ ಧ್ವನಿಗಳು ತಮ್ಮದೇ ಆದ ರೀತಿಯಲ್ಲಿ ಬದಲಾವಣೆಮಾಡಿಕೊಂಡಿರುವುದು ಕಂಡುಬರುತ್ತದೆ. ಇವುಗಳಲ್ಲಿ ಅಕ್ಷರಪಲ್ಲಟ ಅಥವಾ ವರ್ಣವ್ಯತ್ಯಯ ಬಹಳ ಮುಖ್ಯವಾದದ್ದು. ಇದು ತೆಲುಗು, ಕುಯಿ, ಕುವಿ ಭಾಷೆಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಸ್ವರ ಅಥವಾ ವ್ಯಂಜನಗಳು ಶಬ್ದಗಳಲ್ಲಿ ಸ್ಥಾನಪಲ್ಲಟವಾಗುವುದು

ತೆಲುಗು ಭಾಷೆಯಲ್ಲಿ ಸರ್ವೇಸಾಮಾನ್ಯ. ಸ್ವರಾನುರೂಪತೆಯೂ ಕೂಡ ತೆಲುಗು ಭಾಷೆಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ತಮಿಳು ಮತ್ತು ಕನ್ನಡ ಶಬ್ದಗಳಲ್ಲಿ, ಮೊದಲನೆಯ ಸ್ವರ ತೆಲುಗಿಗೆ ಬರುವಾಗ ಎರಡನೇ ಸ್ವರವನ್ನು ಆಕ್ರಮಿಸಿಕೊಂಡು ಬಿಡುತ್ತದೆ. ಕೆಲವುವೇಳೆ ಎರಡು ಸ್ವರಗಳ ಮಧ್ಯೆ ಒಂದೇ ಒಂದು ವ್ಯಂಜನವಿದ್ದಾಗ ಮೊದಲನೆಯ ಸ್ವರ ಎರಡನೇ ಸ್ವರದ ಸ್ಥಾನಕ್ಕೆ ಬಂದು ದೀರ್ಘವಾಗಿ ಬದಲಾಗುತ್ತದೆ. ಇವುಗಳಿಗೆ ಅದಿ>ದಾನಿ (ಅವರ್) ಇದಿ>ದೀನಿ (ಇವರ್) ಅತರಿ>ಅದರಿ> ದಾರಿ>ದಾವ (ದಾರಿ) ಅವರ್>ವಾರು>ವಾಳ್ಳು (ಅವರು) ಇಜಂಡು> ಎಜಂಡು>ರೆಂಡು (ಎರಡು) ಅವನ್>ವಾನ್ಡು>ವಾಂಡು>ವಾಡು, ಆಗದು> ರಾದು (ಆಗದು) ಎಲದು>ಇಲದು>ಲೇದು (ಇಲ್ಲ) ಉಗುರ್>ಉಗಿರ್> ಗೋರು, ಎಜಗು> ಎರಗು> ರೇಗು, ಕ್ರೊವಿ> ಗ್ರೋವಿ, ಪೊಟ್ಟು>ಪೊಟ್ಟು> ಪೊದ್ದು, ಪೊಟಿಲ್ > ಪೊಟಿಲು > ಪ್ರೋಲು ಕುರುಡು> ಗ್ರುಡ್ಡು > ಗುಡ್ಡಿ, ವ್ರಾಯಿ> ರಾಯಿ ಮುಂತಾದ ಬದಲಾವಣೆಗಳನ್ನು ಉದಾಹರಿಸಿಕೊಳ್ಳಬಹುದು. ಕನ್ನಡದ ಶಬ್ದದ ಆದಿಯಲ್ಲಿ ಅಘೋಷ ವ್ಯಂಜನ ಇದ್ದಾಗ ತೆಲುಗಿನಲ್ಲಿ ಘೋಷ ವ್ಯಂಜನ ಬರುತ್ತದೆ. ಇದಕ್ಕೆ ಕಟ್ಟಿ> ಕರ್ತೆ> ಗಾಡದಿ. ಕುಳಿ> ಗುಳಿ, ಕುರುಡಿ> ಗುಡ್ಡಿ, ಕುದುರೆ> ಗುರ್ರಮು ಮುಂತಾದುವುಗಳನ್ನು ಉದಾಹರಿಸಿಕೊಳ್ಳಬಹುದು.

ಪ್ರಾಚೀನಕಾಲದಲ್ಲಿ ತೆಲುಗುಭಾಷೆ ಹೇಗೆ ಬೆಳೆದುಬಂದಿದ್ದಿತು ಎಂಬುದನ್ನು ತಿಳಿಯಲು ನನ್ನಯ್ಯನಿಗಿಂತಲೂ ಹಿಂದಿನ ಒಂದು ವಿಶಿಷ್ಟ ಲಕ್ಷಣವನ್ನು ಗಮನಿಸ ಬಹುದು. ಇತರ ದ್ರಾವಿಡಭಾಷೆಗಳಲ್ಲಿ ಇನ್ನೂ ಉಳಿದುಕೊಂಡುಬಂದಿರುವ -ಗಳ್ (ಕಳ್) ಎಂಬ ಬಹುವಚನ ಪ್ರತ್ಯಯದ ಸ್ಥಾನವನ್ನು ನನ್ನಯ್ಯನಿಗಿಂತಲೂ ಹಿಂದೆಯೇ -ಲು ಎಂಬ ಪ್ರತ್ಯಯ ಆಕ್ರಮಿಸಿಕೊಂಡಿದ್ದಿತು. ಈ -ಲು ಪ್ರತ್ಯಯ ಬಹಳಕಾಲದಿಂದಲೂ ತೆಲುಗಿನಲ್ಲಿ ಬಳಕೆಯಲ್ಲಿದೆ. ಇದನ್ನು ಮ್ರಾನುಲು, (ಮರಗಳು) ಈಗಲು (ನೊಣಗಳು) ಏನುಗಲು (ಆನೆಗಳು) ಕೊಲಕುಲು (ಕೊಳಗಳು) ಮುಂತಾದುವುಗಳನ್ನು ಗಮನಿಸಬಹುದು.

ತಮಿಳು ಮುಂತಾದ ದ್ರಾವಿಡ ಭಾಷೆಗಳಲ್ಲಿ ಉಳಿದುಕೊಂಡುಬಂದಿರುವ ಪುಂಸ್ತ್ರೀಲಿಂಗ ಪ್ರತ್ಯಯ ರು ಎಂಬುದನ್ನು ತೆಲುಗು ಈಗಲೂ ಉಳಿಸಿಕೊಂಡಿದೆ. ಇದಕ್ಕೆ ವಾರು (ಅವರು) ವೀರು (ಇವರು) ಎವರು (ಯಾರು) ಮೀರು (ನೀವು) ಮುಂತಾದುವುಗಳನ್ನು ಉದಾಹರಿಸಿಕೊಳ್ಳಬಹುದು. ತೆಲುಗಿನ ಈ ಬಹುವಚನ ಪ್ರತ್ಯಯ ಎಲ್ಲಾ ಕಡೆಗಳಲ್ಲಿಯೂ ಹರಡಿ ಗುವಿನ ಜೊತೆಯಲ್ಲಿಯೂ ಬಂದಿದೆ. ಇದನ್ನು ವಾರಲು, ವೀರಲು ಮುಂತಾದುಗಳಲ್ಲಿ ಗಮನಿಸಬಹುದು. ಕೆಲವುವೇಳೆ ಪುಂಸ್ತ್ರೀಲಿಂಗದ ಬಹುವಚನ ಸ್ಥಾನವನ್ನು ಲು ಆಕ್ರಮಿಸುತ್ತದೆ. ಇದಕ್ಕೆ ವಾಡ್ಲು> ವಾಳ್ಳು (ಅವರು) ಕೂತುಂಡ್ಲು> ಕೂತುಳ್ಳು (ಹೆಣ್ಣುಮಕ್ಕಳು) ಮುಂತಾದುವು ಗಳನ್ನು ಉದಾಹರಿಸಿಕೊಳ್ಳಬಹುದು.

ತೆಲುಗಿನಲ್ಲಿ ಅನೇಕ ಸಂಸ್ಕೃತ ಮತ್ತು ಪ್ರಾಕೃತ ಶಬ್ದಗಳು ತುಂಬಿ ಹೋಗಿವೆ. ಈ ಬೇರೆ ಬೇರೆ ಸ್ವೀಕೃತ ಶಬ್ದಗಳು ತಮ್ಮ ತಮ್ಮ ಮೂಲ ಅರ್ಥವನ್ನು ಕಳೆದುಕೊಂಡು ಹೊಸ ಹೊಸ ಅರ್ಥವನ್ನು ಪಡೆದುಕೊಂಡಿವೆ. ಅಭ್ಯಂತರಂ ಎಂಬ ಶಬ್ದಕ್ಕೆ ಸಂಸ್ಕೃತದಲ್ಲಿ ಒಳಕೋಣೆ ಎಂದರ್ಥ. ತೆಲುಗಿನಲ್ಲಿ ಇದಕ್ಕೆ ಆಕ್ಷೇಪಣೆ ಎಂಬರ್ಥವಿದೆ. ಪ್ರಾಚೀನ ಕವಿಗಳು ಬಳಸಿರುವ ಕೆಲವು ಹಳೆಯ ಶಬ್ದಗಳನ್ನು ಇಂದಿನ ಕವಿಗಳು ಈಗಲೂ ಬಳಸುವರು. ಅವುಗಳಲ್ಲಿ ಎಷ್ಟೋ ಹಳೆಯ ತೆಲುಗು ಶಬ್ದಗಳು ಅವುಗಳ ಅರ್ಥವನ್ನು ಕಳೆದುಕೊಂಡು ಅವು ಈಗ ಹೊಸ ಅರ್ಥದಲ್ಲಿ ಬಳಕೆಯಲ್ಲಿವೆ. ಚೀರಲು ಎಂಬ ಶಬ್ದವನ್ನು ಹದಿಮೂರನೆಯ ಶತಮಾನದ ಕವಿ ತಿಕ್ಕನ ರೂಮಾಲಿನ ಬಟ್ಟೆ ಎಂಬರ್ಥದಲ್ಲಿ ಬಳಸಿದ. ಈಗ ಇದನ್ನು ಹೆಂಗಸರಸೀರೆ ಎಂಬರ್ಥದಲ್ಲಿ ಬಳಸಲಾಗುತ್ತಿದೆ. ರೇಪು ಎಂಬುದಕ್ಕೆ ಮೊದಲು ಪ್ರಾತಃಕಾಲ ಎಂಬರ್ಥವಿದ್ದಿತು. ಈಗ ಅದು ನಾಳೆ ಎಂಬರ್ಥವನ್ನು ಪಡೆದುಕೊಂಡಿದೆ. ಇತರ ದ್ರಾವಿಡ ಭಾಷೆಗಳಂತೆಯೇ ತೆಲುಗು ತನ್ನ ಶಬ್ದಕೋಶವನ್ನು ಬೇರೆ ಬೇರೆ ಭಾಷೆಗಳಿಂದ ಸ್ವೀಕರಿಸಿ ಬೆಳೆಸಿಕೊಂಡಿದೆ. ಕೆಲವು ಸ್ವೀಕೃತ ಶಬ್ದಗಳಿಗೆ ಹಳೆಯ ಅರ್ಥಹೋಗಿ ಹೊಸ ಅರ್ಥ ಬಂದಿದೆ. ಉರ್ದು, ಹಿಂದಿ, ಮರಾಠಿ ಭಾಷೆಗಳ ಅನೇಕ ಶಬ್ದಗಳು ತೆಲುಗು ಭಾಷೆಯಲ್ಲಿ ದೊರೆಯುತ್ತವೆ. ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಿಂದ ಶಬ್ದಗಳನ್ನು ಸ್ವೀಕರಿಸಿದಂತೆಯೇ ಇಂಗ್ಲಿಷ್ ಮುಂತಾದ ಭಾಷೆಗಳಿಂದಲೂ ತೆಲುಗು ಶಬ್ದಗಳನ್ನು ಸ್ವೀಕಾರಮಾಡಿಕೊಂಡಿದೆ. ಸಾಮಾನ್ಯವಾಗಿ ಪ್ರತ್ಯಯರಹಿತ ಶಬ್ದಗಳನ್ನು ಸ್ವೀಕರಿಸಿ ತನ್ನದೇ ಆದ ಪ್ರತ್ಯಯಗಳನ್ನು ಸೇರಿಸಿ ಬಳಸಲಾಗುತ್ತಿದೆ.

ತೆಲುಗು ಭಾಷೆಯಲ್ಲಿ ಗಾದೆಗಳು ಮತ್ತು ಒಗಟುಗಳು ಹೆಚ್ಚು. ಇವುಗಳನ್ನು ತಮ್ಮದೇ ಆದ ಭಾವೋಲಯಗಳಲ್ಲಿ ಬಳಸಲಾಗುತ್ತಿದೆ. ಪ್ರಾಚೀನ ಕಾಲದ ವ್ಯಾಕರಣಗಳು ಸಾಹಿತ್ಯ ಗ್ರಂಥಗಳು ಆಗಿನ ಕಾಲದಲ್ಲಿ ಜನಸಾಮಾನ್ಯರ ಭಾಷೆಯಲ್ಲಿರಲಿಲ್ಲ. ಹಿಂದಿನ ಕಾಲದಲ್ಲಿ ಕವಿಗಳು ಬಳಸುತ್ತಿದ್ದ ಭಾಷೆಯಲ್ಲಿಯೇ ಕಾವ್ಯ ರಚನೆ ನಡೆಯುತ್ತಿದ್ದಿತು. ಮುಂದೆ ಬಂದ ಕವಿಗಳು ಹಿಂದಿನ ಕವಿಗಳ ಭಾಷೆಗೆ ಹೆಚ್ಚು ಮಾನ್ಯತೆ ಕೊಡುತ್ತಿದ್ದರು. ವೈಯಾಕರಣರು ಪ್ರಾಚೀನ ಕವಿಗಳ ಪ್ರಯೋಗಗಳನ್ನೇ ಬಳಸುತ್ತಿದ್ದರು. ಇವುಗಳನ್ನು ಅನುಸರಿಸಿಯೇ ವ್ಯಾಕರಣ ಸೂತ್ರಗಳು ರಚಿತವಾಗಿದ್ದವು. ಕೆಲವು ಕವಿಗಳು ಹಳೆಯ ಸಂಪ್ರದಾಯಕ್ಕೆ ವಿರುದ್ಧವಾಗಿ ಜೀವಂತವಾಗಿರುವ ಆಡು ಭಾಷೆಯನ್ನೇ ಕಾವ್ಯರಚನೆಗೆ ಬಳಸಲು ಹಿಂಜರಿಯಲಿಲ್ಲ. ಅವರು ಎಚ್ಚರದಿಂದಲೂ ಅಂಜಿಕೆಯಿಂದಲೂ ಆಡ ಮಾತನ್ನು ಬಳಸುತ್ತಿದ್ದರು. 1700ರಿಂದ 1850ರ ವರೆಗೆ ಗದ್ಯ, ಕಥೆ, ಪ್ರಬಂಧ ಮುಂತಾದ ಪ್ರಕಾರಗಳು ತೆಲುಗು ಭಾಷೆಯಲ್ಲಿ ಬೆಳೆದುಬಂದುವು. ಗದ್ಯ ಕಾವ್ಯಗಳನ್ನು ಪ್ರಚಲಿತ ಭಾಷೆಯಲ್ಲಿ ಹೆಚ್ಚು ಜನರು ಬರೆಯುತ್ತಿದ್ದರು. ತೆಲುಗು ಭಾಷೆಯ ಇತಿಹಾಸವನ್ನು ತಿಳಿಯಲು ಈ ಬೇರೆ ಬೇರೆ ಪದ್ಯ ಕಾವ್ಯಗಳು ಮತ್ತು ಗದ್ಯ ಕಾವ್ಯಗಳು ಸಹಾಯ ಮಾಡುತ್ತವೆ.

ತೆಲುಗು ಸಾಹಿತ್ಯ ಚರಿತ್ರೆಯನ್ನು ಅಧ್ಯಯನದ ದೃಷ್ಟಿಯಿಂದ ನನ್ನಯ್ಯನ ಪೂರ್ವಕಾಲ, ನನ್ನಯ್ಯನ ಕಾಲ, ಪುರಾಣ ಮತ್ತು ಭಾಷಾಂತರಗಳ ಕಾಲ, ಪ್ರಬಂಧಗಳಕಾಲ, ಕೃಷ್ಣದೇವರಾಯನ ಕಾಲ, ದಕ್ಷಿಣಪಂಥದ ಕಾಲ, ಆಧುನಿಕ ಕಾಲ ಎಂದು ಬೇರೆ ಬೇರೆ ಕಾಲಗಳಲ್ಲಿ ವರ್ಗೀಕರಿಸಿಕೊಳ್ಳಬಹುದು. ಕ್ರಿ. ಶ. 600 ರಿಂದ 1000ದ ವರೆಗೆ ತೆಲುಗು ಸಾಹಿತ್ಯದಲ್ಲಿ ಕೆಲವು ಶಾಸನಗಳು ಮಾತ್ರ ದೊರೆಯುತ್ತವೆ. ಆದರೆ ಯಾವ ಸಾಹಿತ್ಯ ಗ್ರಂಥಗಳು ದೊರೆಯುವುದಿಲ್ಲ. ನನ್ನಯ್ಯನಿಗಿಂತ ಹಿಂದೆ ಕೆಲವು ಜೈನ ಕವಿಗಳಿಂದ ರಚಿತವಾದ ಕೆಲವು ಪದ್ಯಗಳು ಮಾತ್ರ ಅಲ್ಲಲ್ಲಿ ದೊರೆಯುತ್ತವೆ ಎಂದು ಕೆಲವರ ಅಭಿಪ್ರಾಯ. ಇದು ಏನೇ ಆಗಿದ್ದರೂ ನನ್ನಯ್ಯನಿಗಿಂತ ಹಿಂದೆ ಅಲ್ಪ ಸ್ವಲ್ಪ ಸಾಹಿತ್ಯ ಇದ್ದಿರಲೇಬೇಕು. ಇಲ್ಲದಿದ್ದರೆ ನನ್ನಯ್ಯ ತನ್ನ ಮಹಾಭಾರತವನ್ನು ಇಷ್ಟೊಂದು ಸುಂದರವಾದ ಶೈಲಿಯಲ್ಲಿ ರಚಿಸಲು ಸಾಧ್ಯವಾಗುತ್ತಿರಲಿಲ್ಲವೆಂದು ತೋರುತ್ತದೆ.

ತೆಲುಗು ಭಾಷೆಯ ಮೊದಲಕವಿ ನನ್ನಯ್ಯ ಭಟ್ಟನು ರಾಜ ಮಹೇಂದ್ರಿಯ ಪೂರ್ವ ಚಾಲುಕ್ಯವಂಶದ ಅರಸನಾದ ರಾಜರಾಜೇಂದ್ರನ ಆಸ್ಥಾನದಲ್ಲಿದ್ದನು. 1022 ರಿಂದ 1063ರ ವರೆಗೆ ರಾಜನ ಇಚ್ಛೆಯಂತೆ ಮಹಾಭಾರತದ ಆದಿ ಪರ್ವ, ಸಭಾ ಪರ್ವ, ಅರಣ್ಯ ಪರ್ವಗಳನ್ನು ರಚಿಸಿದನು. ಈತನ ಕೃತಿ ಸಂಸ್ಕೃತ ಮೂಲದ ಸರಳಾನುವಾದವಾಗಿದೆ. ಅರಣ್ಯ ಪರ್ವವನ್ನು ಇವನು ಪೂರ್ಣಗೊಳಿಸಿಲ್ಲ, ಈತನು ಪಂಪನ ಕನ್ನಡ ಕೃತಿಯನ್ನು ಗಮನಿಸಿರಬಹುದು. ಇದರಲ್ಲಿ ನಾರಾಯಣ ಭಟ್ಟನ ಉಪಕಾರ ಸ್ಮರಣೆಯನ್ನು ಮಾಡಿದ್ದಾನೆ. ಈತನ ಕೃತಿ ಅರ್ಧಕ್ಕೆ ನಿಲ್ಲಲು ಆ ಕವಿಯ ಅಕಾಲಿಕ ಮರಣ ಇದಕ್ಕೆ ಕಾರಣವಿರಬಹುದು. ಈ ಕೃತಿಯನ್ನು ನೆಲ್ಲೂರಿನ ತಿಕ್ಕನ ಇನ್ನೂರು ವರ್ಷಗಳ ಅನಂತರ ಮುಂದುವರಿಸಿದ. ಆದರೆ ತಿಕ್ಕನ ಅರಣ್ಯ ಪರ್ವವನ್ನು ಮುಗಿಸದೆ ವಿರಾಟ ಪರ್ವದಿಂದ ಹಿಡಿದು ಮಿಕ್ಕ 15 ಪರ್ವಗಳನ್ನು ಬರೆದು ಮುಗಿಸಿದನು. ಈ ಅರಣ್ಯ ಪರ್ವವನ್ನು ತಿಕ್ಕನನ ಅನಂತರ ಎರ್ರನ ಬರೆದು ಮುಗಿಸಿದನು. ನನ್ನಯ್ಯ, ತಿಕ್ಕನ ಮತ್ತು ಎರ್ರನ ಎಂಬ ಕವಿತ್ರಯರು 1000 ದಿಂದ 1150ರ ವರೆಗೆ ಪ್ರಾಚೀನ ತೆಲುಗು ಸಾಹಿತ್ಯ ಕ್ಷೇತ್ರದಲ್ಲಿ ಪ್ರಖ್ಯಾತರಾಗಿದ್ದಾರೆ. ಇವರು ಬಳಸಿರುವ ತೆಲುಗು ಭಾಷೆ ಶ್ರೇಷ್ಠವಾದದ್ದು. ತಿಕ್ಕನ ನಿರ್ವಚನೋತ್ತರ ರಾಮಾಯಣಂ ಮತ್ತು ವಿಜಯ ಸೇನಂ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಮೊದಲನೆಯದು ಮಾತ್ರ ಉಳಿದುಕೊಂಡಿದೆ. ಎರಡನೆಯದು ದೊರೆಯುವುದಿಲ್ಲ. ಎರ್ರನ ಹರಿವಂಶ, ನೃಸಿಂಹ ಪುರಾಣ ಮತ್ತು ರಾಮಾಯಣಂ ಎಂಬ ಕೃತಿಗಳನ್ನು ರಚಿಸಿದ್ದಾನೆ, ಇವುಗಳಲ್ಲಿ ಎರಡು ಗ್ರಂಥಗಳು ಮಾತ್ರ ದೊರೆಯುತ್ತವೆ. ಈ ಮೂರು ಕವಿಗಳ ಪೈಕಿ ನನ್ನಯ್ಯ ಸಂಸ್ಕೃತ ಶಬ್ದಗಳನ್ನು ಹೇರಳವಾಗಿ ಬಳಸಿದ್ದಾನೆ. ತಿಕ್ಕನ ತೆಲುಗು ಶಬ್ದಗಳಿಗೆ ಮಾತ್ರ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದಾನೆ. ಆದರೆ ಎರ್ರನ ತೆಲುಗು ಮತ್ತು ಸಂಸ್ಕೃತ ಶಬ್ದಗಳು ಎರಡಕ್ಕೂ ಪ್ರಾಧಾನ್ಯತೆ ಕೊಟ್ಟಿದ್ದಾನೆ.

ನನ್ನಯ್ಯ ತೆಲುಗಿನ ಮೊತ್ತಮೊದಲ ಕವಿ. ಆದ್ದರಿಂದಲೇ ಕೆಲವು ವಿದ್ವಾಂಸರು ಆಂಧ್ರ ಶಬ್ದ ಚಿಂತಾಮಣಿ ಎಂಬ ವ್ಯಾಕರಣ ಗ್ರಂಥವನ್ನು ಇವನೇ ಸಂಸ್ಕೃತದಲ್ಲಿ ಬರೆದಿರಬಹುದೆಂದು ಭಾವಿಸಿದರೆ ಮತ್ತೆ ಕೆಲವರು ಈ ವ್ಯಾಕರಣದಲ್ಲಿನ ಸೂತ್ರಗಳಿಗೂ ನನ್ನಯ್ಯನ ಪ್ರಯೋಗಗಳಿಗೂ ಅನೇಕ ಕಡೆಗಳಲ್ಲಿ ಸಾಮರಸ್ಯವಿಲ್ಲದ ಕಾರಣ ಆತನ ತರುವಾಯ ಬೇರೆ ಯಾರೋ ಇದನ್ನು ರಚಿಸಿರಬಹುದೆಂದು ಭಾವಿಸುವರು. ತಿಕ್ಕನನನ್ನು ಕವಿ ಬ್ರಹ್ಮ ಉಭಯಕವಿ ಮಿತ್ರನೆಂದು ಕರೆದರೆ, ನನ್ನಯ್ಯನನ್ನು ವಾಗನುಶಾಸನನೆಂದು ಕರೆಯುವರು. ಇದೇ ರೀತಿ ಎರ್ರನನ್ನು ಶಿವಭಕ್ತನಾದ ಕಾರಣ ಶಂಭುದಾಸನೆಂದೂ, ಕವಿ ಪರಮೇಶ್ವರನೆಂದು ಕರೆಯುವರು.

ರಾಜರಾಜೇಂದ್ರನು ತೀರಿಕೊಂಡಮೇಲೆ ತೆಲಗು ಸಾಹಿತ್ಯದ ಬೆಳವಣಿಗೆಗೆ ರಾಜಕೀಯ, ಸಾಮಾಜಿಕ ಮತ್ತು ಮತೀಯ ವಿಪ್ಲವಗಳು ಅಡ್ಡಿ ಉಂಟುಮಾಡಿದವು. ಶೈವರು, ವೈಷ್ಣವರು ಮುಂತಾದ ವೈದಿಕ ಧರ್ಮಾನುಯಾಯಿಗಳು ಜೈನರನ್ನು ಜೈನ ಮತವನ್ನು ಎದುರಿಸಲು ಒಗ್ಗಟ್ಟಾದರು. ಅನಂತರ ಇವರು ತಮ್ಮತಮ್ಮಲ್ಲೇ ಹೋರಾಡಲು ಆರಂಭಿಸಿದರು. ಶೈವರು ಶಿವ ಮತವನ್ನು ನಾಡಿನಲ್ಲೆಲ್ಲ ಹರಡಲು ಪ್ರಾರಂಭಿಸಿದರು. ಶೈವರು ಸಂಸ್ಕೃತದಲ್ಲಿಯೂ ತೆಲುಗಿನಲ್ಲಿಯೂ ಪಂಡಿತರಾಗಿದ್ದರು. ಕೆಲವರು ಕನ್ನಡದಲ್ಲಿಯೂ ಹೆಚ್ಚು ಪರಿಶ್ರಮ ಹೊಂದಿದವರಾಗಿದ್ದರು. ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ಪೂರ್ವ ಗೋದಾವರಿ ಜಿಲ್ಲೆಯ ದಕ್ಷಾರಾಮದಲ್ಲಿ ಜನಿಸಿದ ಮಲ್ಲಿಕಾರ್ಜುನ ಪಂಡಿತ ಮೊತ್ತಮೊದಲ ಶೈವಕವಿ. ಈತನು ಸಂಸ್ಕೃತದಲ್ಲಿಯೂ ತೆಲುಗಿನಲ್ಲಿಯೂ ದೊಡ್ಡ ವಿದ್ವಾಂಸ. ಶೈವ ಮತಕ್ಕೆ ತೆಲುಗು ಪ್ರದೇಶದಲ್ಲಿ ಒಂದು ಸ್ಥಿರವಾದ ಆಸರೆಯನ್ನು ಈತನು ಕಲ್ಪಿಸಿಕೊಟ್ಟನು. ಇವನು ಅನೇಕ ಕೃತಿಗಳನ್ನು ರಚಿಸಿದ್ದಾನೆ. ಅವನ ಸಾಹಿತ್ಯ ಗ್ರಂಥಗಳೆಲ್ಲವೂ ಶೈವ ಮತಕ್ಕೆ ಮೀಸಲಾಗಿದ್ದವು. ಈತನ ಅನೇಕ ಕೃತಿಗಳಲ್ಲಿ ದೇಶೀ ಛಂದಸ್ಸಿನಲ್ಲಿ ರಚಿತವಾಗಿರುವ ಶಿವತತ್ವಸಾರಮು ಎಂಬ ಗ್ರಂಥವೊಂದು ಮಾತ್ರ ದೊರೆತಿದೆ. ಈ ಗ್ರಂಥ ಪೂರ್ಣವಾಗಿ ದೊರೆತಿಲ್ಲ ಅದರಲ್ಲಿನ ಕೆಲವು ಪದ್ಯಗಳು ಮಾತ್ರ ದೊರೆತಿವೆ.

ನನ್ನೆಚೋಡ ಎಂಬ ತೆಲುಗು ಕವಿ ಕುಮಾರಸಂಭವ ಎಂಬ ಗ್ರಂಥವನ್ನು ರಚಿಸಿ ಅದನ್ನು ಆಗಿನ ಕಾಲದ ಘನ ವಿದ್ವಾಂಸನಾದ ಜಂಗಮ ಮಲ್ಲಿಕಾರ್ಜುನ ಶಿವಯೋಗಿಗೆ ಅರ್ಪಿಸಿದನು. ಇದನ್ನು ಬರೆದ ಕವಿಯಾಗಲಿ, ಅವನು ರಚಿಸಿದ ಗ್ರಂಥವಾಗಲಿ ಗೋಚರವಾಗಿರಲಿಲ್ಲ. ಈ ಗ್ರಂಥವನ್ನು ದಿವಂಗತ ಮಾನವಲ್ಲಿ ರಾಮಕೃಷ್ಣ ಕವಿ 1914ರಲ್ಲಿ ಗುರುತಿಸಿದನು. ನನ್ನೆಚೋಡನ ಕಾಲ ಖಚಿತವಾಗಿಲ್ಲ. ಕೆಲವರು ಇವನು ನನ್ನಯ್ಯನಿಗಿಂತಲೂ ಹಿಂದಿನವನಿರಬೇಕೆಂದು ಭಾವಿಸಿದರೆ, ಮತ್ತೆ ಕೆಲವರು ಇವನು ತಿಕ್ಕನನ ಅನಂತರದ ಕವಿ ಇರಬಹುದೆಂದು ಭಾವಿಸುವರು. ಆದರೆ ಅನೇಕ ವಿದ್ವಾಂಸರು ಈತನು 12ನೇ ಶತಮಾನದ ಮಧ್ಯಭಾಗದಲ್ಲಿದ್ದ ಕವಿ ಎಂದು ಭಾವಿಸಿದ್ದಾರೆ. ನನ್ನೆಚೋಡ ಕವಿ ಚೋಡ ರಾಜವಂಶಕ್ಕೆ ಸೇರಿದವನೆಂದೂ, ಈತನು

ತೆಲುಗು ದೇಶದ ಒಂದು ಸಣ್ಣ ಪ್ರಾಂತ್ಯದ ಪ್ರಭುವಾಗಿದ್ದನೆಂದೂ, ಈತನು ಕುಮಾರ ಸಂಭವದಲ್ಲಿ ತನ್ನ ಕಾವ್ಯ ಪ್ರೌಢಿಮೆಯನ್ನು ಮೆರೆದಿದ್ದಾನೆಂದೂ ಇವನನ್ನು ಕವಿರಾಜ ಶಿಖಾಮಣಿ ಎಂದೂ ಕರೆದಿದ್ದಾರೆ. ಈತನು ಸ್ವತಃ ಶೈವನಾಗಿದ್ದರೂ ಶೈವ ಮತವನ್ನು ಹರಡುವುದರಲ್ಲಿ ಹೆಚ್ಚು ಆಸಕ್ತನಾಗಿರಲಿಲ್ಲ. ಕುಮಾರಸಂಭವ ಒಂದು ಶ್ರೇಷ್ಠ ಪ್ರಬಂಧ. ಕಾವ್ಯಲಾಕ್ಷಣಿಕರು ಪ್ರಬಂಧ ವಿವರಿಸುವ ಸರ್ವಲಕ್ಷಣಗಳನ್ನು ಕುಮಾರಸಂಭವ ಪ್ರದರ್ಶಿಸುತ್ತದೆ ಎಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕುಮಾರ ಸಂಭವದ ಎಲ್ಲಾ ಪ್ರಸಂಗಗಳನ್ನು ಕವಿ ಕಾಳಿದಾಸ ಮತ್ತು ಉದ್ಭಟರ ಕುಮಾರ ಸಂಭವಗಳಿಂದ ಆರಿಸಿಕೊಂಡು ಅವನು ತನ್ನ ಗ್ರಂಥವನ್ನು ರಚಿಸಿದ್ದಾನೆ.

ಶೈವ ಕವಿಗಳಲ್ಲಿ ಹೆಚ್ಚು ಪ್ರಸಿದ್ಧನಾದ ಯಥಾವಾಕ್ಕುಲ ಅನ್ನಮಯ್ಯನ ಎಂಬಾತನು ಶೈವ ಮತವನ್ನು ನಾಡಿನಲ್ಲಿ ಹರಡಲು ಸರ್ವೇಶ್ವರ ಸ್ತೋತ್ರ ಮತ್ತು ಲೀಲಾನಂದ ಸರ್ವೇಶ್ವರ ಶತಕಗಳೆಂಬ ಗ್ರಂಥಗಳನ್ನು ರಚಿಸಿದನು. ಇವನ ಈ ಕವಿತೆಗಳಲ್ಲಿ ಶ್ರೇಷ್ಠ ಮಟ್ಟದ ಕವಿತಾಲಕ್ಷಣಗಳು ಕಂಡುಬರುತ್ತವೆ. ಇವನ ಅನಂತರ ಮತ್ತೊಬ್ಬ ಶೈವ ಕವಿ ಓರಂಗಲ್ಲಿನ ಪಾಲ್ಕುರಿಕೆಸೋಮನ ಅನೇಕ ಗ್ರಂಥಗಳನ್ನು ಬರೆದನು. ಈತನು ತನ್ನ ಗ್ರಂಥಗಳ ಮೂಲಕ ಶೈವ ಮತವನ್ನು ಹರಡಲು ಪ್ರಯತ್ನಿಸಿದನು. ಈತನು ತೆಲುಗು ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಶ್ರೇಷ್ಠ ವಿದ್ವಾಂಸನಾಗಿದ್ದನು. ಈತನು ಬಸವ ಪುರಾಣಂ ಪಂಡಿತಾರಾಧ್ಯ ಚರಿತ್ರೆ, ಅನುಭವ ಸಾರ, ಚತುರ್ವೇದಸಾರ, ಚನ್ನಮಲ್ಲುಸೀಸಮುಲು ಮುಂತಾದ ಗ್ರಂಥಗಳನ್ನು ತೆಲುಗಿನಲ್ಲಿಯೂ, ರುದ್ರಭಾಷ್ಯಂ, ಬಸವೋದಾಹರಣ ಮುಂತಾದ ಗ್ರಂಥಗಳನ್ನು ಸಂಸ್ಕೃತದಲ್ಲಿಯೂ, ಬಸವ ರಗಡ, ಗಂಗೋತ್ಪತ್ತಿ ರಗಡ, ಸದ್ಗುರು ರಗಡ ಮುಂತಾದ ಗ್ರಂಥಗಳನ್ನು ಕನ್ನಡದಲ್ಲಿಯೂ ರಚಿಸಿದ್ದಾನೆ. ಇವುಗಳಲ್ಲಿ ದ್ವಿಪದಿಯಲ್ಲಿ ರಚಿತವಾಗಿರುವ ಬಸವಪುರಾಣಂ ಮತ್ತು ಪಂಡಿತಾರಾಧ್ಯ ಚರಿತ್ರೆ ಹೆಚ್ಚು ಜನಪ್ರಿಯವಾಗಿವೆ. ಈತನು ತೆಲುಗಿನ ವಿಶಿಷ್ಟ ಶಬ್ದಗಳನ್ನು ನುಡಿಗಟ್ಟುಗಳನ್ನು ತನ್ನ ಗ್ರಂಥದಲ್ಲಿ ಹೇರಳವಾಗಿ ಬಳಸಿದ್ದಾನೆ.

ಹದಿನೈದನೆಯ ಶತಮಾನದಲ್ಲಿ ಪಿಡುಪರ್ತಿ ಸೋಮನ ಮುಂತಾದ ಕವಿಗಳು ಅನೇಕ ಗ್ರಂಥಗಳನ್ನು ತೆಲುಗಿನಲ್ಲಿ ರಚಿಸಿದ್ದಾರೆ. ಪಿಡುಪರ್ತಿ ಸೋಮನ ಪಾಲ್ಕುರಿಕೆ ಸೋಮನು ರಚಿಸಿದ ಬಸವ ಪುರಾಣವನ್ನು ಪದ್ಯ ಛಂದಸ್ಸಿಗೆ ಪರಿವರ್ತಿಸಿದ್ದಾನೆ. ಪಿಡುಪರ್ತಿ ಸೋಮನ ಅಲ್ಲಮ ಪ್ರಭುವಿನ ಲೀಲೆಗಳನ್ನು ವರ್ಣಿಸುವ ಪ್ರಭುಲಿಂಗ ಲೀಲೆ ಎಂಬ ಗ್ರಂಥವನ್ನು ದ್ವಿಪದಿಯಲ್ಲಿ ರಚಿಸಿದನು. ಇದನ್ನು ಇವನ ಸೋದರನ ಮಗ ಬಸಪ್ಪನು ಪದ್ಯ ಛಂದಸ್ಸಿಗೆ ಪರಿವರ್ತಿಸಿದನು.

ಆಗಿನಕಾಲದಲ್ಲಿ ಅನೇಕ ಜನಪ್ರಿಯ ರಾಮಾಯಣ ಗ್ರಂಥಗಳು ರಚಿತವಾದವು. ತಿಕ್ಕನನ ನಿರ್ವಚನೋತ್ತರ ರಾಮಾಯಣಕ್ಕೆ ಮೊದಲು ರಂಗನಾಥ ರಾಮಾಯಣ ರಚಿತವಾಗಿದ್ದಿತೆಂದು ಕೆಲವರ ಅಭಿಪ್ರಾಯ. ಈ ರಾಮಾಯಣ ಗ್ರಂಥವನ್ನು

ಬರೆದವರು ಯಾರು ಎಂಬುದರ ಬಗ್ಗೆ ಯಾವ ಆಧಾರಗಳು ದೊರೆಯುವುದಿಲ್ಲ. ಹೆಸರೇ ಹೇಳುವಂತೆ ರಂಗನಾಥ ಎಂಬುವವನೇ ಈ ರಾಮಾಯಣವನ್ನು ರಚಿಸಿರಬಹುದೆಂದು ಕೆಲವರ ಊಹೆ. ಇದನ್ನು ಗೋನಬುದ್ಧರೆಡ್ಡಿ ಎಂಬುವವನು ರಚಿಸಿದನೆಂದು ಕೆಲವರ ಭಾವನೆ. ಆಗಿನ ಕಾಲದಲ್ಲಿ ಜನಪ್ರಿಯವಾದ ಭಾಷೆಯಲ್ಲಿ ಸರಳವಾದ ಶೈಲಿಯಲ್ಲಿ ಕಾವ್ಯಗಳನ್ನು ರಚಿಸುತ್ತಿದ್ದರು. ಜನರ ಮೆಚ್ಚುಗೆಯನ್ನು ಗಳಿಸಿ ತಮ್ಮ ತಮ್ಮ ಮತಗಳನ್ನು ಪ್ರಚಾರ ಮಾಡುವುದು ಅವರ ಉದ್ದೇಶವಾಗಿದ್ದಿತು. ಈ ಕಾರಣದಿಂದಲೇ ಶೈವ ಮತ್ತು ವೈಷ್ಣವ ಕವಿ ದ್ವಿಪದಿಯಲ್ಲಿಯೇ ತಮ್ಮ ತಮ್ಮ ಗ್ರಂಥಗಳನ್ನು ರಚಿಸುತ್ತಿದ್ದರು. ಈ ದ್ವಿಪದ ರಾಮಾಯಣಗಳು ರಚಿತವಾದ ಮೇಲೆ ಪದ್ಯಕಾವ್ಯಗಳ ರಚನೆ ಆರಂಭವಾಯಿತು. ಪದ್ಯಕಾವ್ಯಗಳಲ್ಲಿ ಭಾಸ್ಕರ ರಾಮಾಯಣ ಹೆಚ್ಚು ಹೆಸರುವಾಸಿಯಾದದ್ದು, ತಿಕ್ಕನ ಸನಯಾಜಿ ವೈಷ್ಣವರಿಗೂ ಶೈವರಿಗೂ ರಾಜಿ ಮಾಡಿಸುವ ಸಲುವಾಗಿ ತನ್ನ ಮಹಾಭಾರತವನ್ನು ನೆಲ್ಲೂರಿನ ಹರಿಹರನಾಥನಿಗೆ ಅರ್ಪಿಸಿ ಹರಿಹರನಾಥಪಂಥವನ್ನು ಮೇಲಕ್ಕೇರಿಸಿದನು. ಆದರೆ ಇವನ ಉದ್ದೇಶ ಈಡೇರಲಿಲ್ಲ ಭಾಸ್ಕರನು ರಚಿಸಿದ ಭಾಸ್ಕರ ರಾಮಾಯಣ ಒಂದು ಶ್ರೇಷ್ಠ ಗ್ರಂಥವೆಂದು ಪರಿಗಣಿತವಾಗಿದೆ. ಕವಿಯ ಭಾಷೆ, ಶೈಲಿ ಮತ್ತು ಕಾವ್ಯಲಕ್ಷಣಗಳು ಇದರಲ್ಲಿ ವ್ಯತ್ಯಾಸಗೊಂಡಿವೆ. ಭಾಸ್ಕರನ ರಾಮಾಯಣದಲ್ಲಿ ಅರಣ್ಯ ಪರ್ವ ಉತ್ತಮವಾದುದಾಗಿದೆ. ಇದು ಶ್ರೀಮಂತವಾದ ಕಾವ್ಯಸೌಂದರ್ಯವನ್ನು ಪ್ರದರ್ಶಿಸುತ್ತದೆ.

ತೆಲುಗು ಸಾಹಿತ್ಯದಲ್ಲಿ ಅನಂತರ ಇಪ್ಪತ್ತೈದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ರಾಮಾಯಣಗಳು ಪ್ರಕಟವಾದವು. ವಿಶ್ವನಾಥ ಸತ್ಯನಾರಾಯಣ ಮತ್ತು ಅತ್ತಕೂರಿಗೋವಿಂದಾಚಾರ್ಯುಲುಗಳು ರಾಮಾಯಣ ಕಲ್ಪವೃಕ್ಷಂ ಮತ್ತು ಗೋವಿಂದ ರಾಮಾಯಣ ಗ್ರಂಥಗಳನ್ನು ರಚಿಸಿದ್ದಾರೆ. ಈಚಿನ ರಾಮಾಯಣಗಳಲ್ಲಿ 14ನೆಯ ಶತಮಾನದ ಮೊಲ್ಲರಾಮಾಯಣ ಸರಳವೂ ಜನಪ್ರಿಯವೂ ಆಗಿದೆ. ಹತ್ತೊಂಬತ್ತನೆಯ ಶತಮಾನದ ಗೋಪಿನಾಥ ರಾಮಾಯಣ ವಾವಿಲಕೊಲನು ಸುಬ್ಬರಾಯನ ರಾಮಾಯಣ ವಾಲ್ಮೀಕಿ ರಾಮಾಯಣದ ಮೂಲಕ್ಕೆ ಹತ್ತಿರವಾಗಿದೆ. ಆಂಧ್ರ ಪ್ರದೇಶದ ರಾಷ್ಟ್ರಕವಿಯಾಗಿದ್ದ ಶ್ರೀಪಾದ ಕೃಷ್ಣಮೂರ್ತಿಶಾಸ್ತ್ರಿಯ ರಾಮಾಯಣ ಮೂಲಕ್ಕೆ ತುಂಬಾ ಹತ್ತಿರವಾದುದಾಗಿದೆ.

ಕ್ರಿ.ಶ 1380 ರಿಂದ 1500ರ ನಡುವೆ ಅನೇಕ ಕವಿಗಳಿದ್ದರು, ಅವರಲ್ಲಿ ಶ್ರೀನಾಥ ಮತ್ತು ಬಮ್ಮೆರಪೋತನ ಎಂಬುವವರು ಮುಖ್ಯರೆನಿಸಿಕೊಂಡಿದ್ದಾರೆ. ಶ್ರೀನಾಥನ್ ವಿದ್ವತ್ ಪ್ರೌಢನೂ, ಕವಿತಾಕೌಶಲನು ಆಗಿದ್ದನು. ವೇಮರೆಡ್ಡಿಯ ಕಾಲದಲ್ಲಿ ಈತನು ಅತ್ಯುತ್ತಮ ಪದವಿಗೇರಿದ್ದನು. ಇವನು ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಶೃಂಗಾರನೈಷಧ ಎಂಬುದು ಬಹಳ ಮುಖ್ಯವಾದದ್ದು. ಇದು ಶ್ರೀಹರ್ಷನ ನೈಷಧ ಕಾವ್ಯದ ಸರಳಾನುವಾದ. ಇದನ್ನು ಅರ್ಥಮಾಡಿಕೊಳ್ಳುವುದು ಕಷ್ಟವೆಂದು ಕೆಲವರ ಅಭಿಪ್ರಾಯ. ಇದರಲ್ಲಿ ತುಂಬ ಸರಳ ಹಾಗೂ

ಮನೋಹರವಾದ ಪದ್ಯಗಳಿವೆ. ಕಾಶೀಖಂಡಂ ಮತ್ತು ಭೀಮೇಶ್ವರ ಪುರಾಣಗಳು, ಹರವಿಲಾಸಂ ಎಂಬ ಕೃತಿಗಳು ಹೆಸರುವಾಸಿಯಾಗಿವೆ. ದ್ವಿಪದ ಛಂದಸ್ಸಿನಲ್ಲಿರುವ ಈತನ ಪಲ್ನಾಟಿವೀರ ಚರಿತ್ರೆ ಎಂಬ ಜಾನಪದ ಕಥನಕವನ ಹೆಚ್ಚು ಜನಪ್ರಿಯತೆಯನ್ನು ಗಳಿಸಿಕೊಂಡಿದೆ. ಈತನ ಕೃತಿಗಳಲ್ಲಿ ಮುಖ್ಯವಾಗಿ ಶಿವರಾತ್ರಿ ಮಹಾತ್ಮೆ ಎಂಬುದನ್ನು ನೋಡಿದರೆ ಇವನು ಶೈವಕವಿ ಎಂಬುದು ತಿಳಿದುಬರುತ್ತದೆ. ಆದರೆ ಇವನು ಶೈವನಾದರೂ ಶೈವಮತ ಪ್ರಚಾರಕನಾಗಿರಲಿಲ್ಲ.

ಬಮ್ಮೆರಪೋತನ ಒಬ್ಬ ನಿಜವಾದ ಭಕ್ತ. ತೆಲುಗು ಸಾಹಿತ್ಯದಲ್ಲಿ ಜನಪ್ರಿಯವಾಗಿರುವ ಇವನ ಭಾಗವತ ಭಕ್ತಿಭಾವನೆ ಧ್ಯೇಯ ನಿಷ್ಠೆಗಳಲ್ಲಿ ಬಹು ಶ್ರೀಮಂತವಾಗಿದೆ. ಇದರ 12 ಸ್ಕಂಧಗಳನ್ನು ಒಬ್ಬನೇ ರಚಿಸಲಿಲ್ಲ. ಅವುಗಳಲ್ಲಿ ಕೆಲವನ್ನು ಈತನ ಶಿಷ್ಯರು ರಚಿಸಿದರೆಂದು ಕೆಲವರ ಅಭಿಪ್ರಾಯ. ಇದರ ಬಹುಭಾಗ ಪೋತನನಿಂದಲೇ ರಚಿತವಾದದ್ದು. ಪೋತನನು ಈ ತನ್ನ ಕೃತಿಯನ್ನು ಶ್ರೀರಾಮನಿಗೆ ಅರ್ಪಿಸಿದ್ದಾನೆ. ಆ ಕಾಲದ ಇತರ ಕವಿಗಳಲ್ಲಿ ಪಿಳ್ಳಲಮರ್ರಿಪಿನ ವೀರಭದ್ರ ಎಂಬಾತನ ಹೆಸರನ್ನು ಹೆಸರಿಸಿಕೊಳ್ಳಬಹುದು. ಈತನು ಜೈಮಿನಿ ಭಾರತಂ ಮತ್ತು ಶಕುಂತಲಾ ಪರಿಣಯಂ ಎಂಬ ಗ್ರಂಥಗಳನ್ನು ರಚಿಸಿದ್ದಾನೆ. ದೂಬಗುಂಟನಾರಾಯಣ ಕವಿ ಸಂಸ್ಕೃತದ ಪಂಚತಂತ್ರವನ್ನು ತೆಲುಗಿಗೆ ಅನುವಾದ ಮಾಡಿದ್ದಾನೆ. ಈ ಕಾವ್ಯ ಸರಳವೂ, ಮಧುರವೂ ಸುಸಂಸ್ಕೃತವೂ ಆದ ಭಾಷೆಯಲ್ಲಿ ರಚಿತವಾಗಿದೆ. ತಾಳ್ಳಪಾಕಂ ಅಣ್ಣಮಾಚಾರ್ಯರ ಕೀರ್ತನೆಗಳು, ಭಾವಗೀತೆಗಳು ಮತ್ತು ಭಕ್ತಿಗೀತೆಗಳು ಮುಂತಾದುವುಗಳನ್ನು ತೆಲುಗಿನಲ್ಲಿ ರಚಿಸಿ ತೆಲುಗು ಸಾಹಿತ್ಯಕ್ಕೆ ಹೊಸ ಸಂಪತ್ತನ್ನು ತಂದುಕೊಟ್ಟಿದಾನೆ. ಇವೆಲ್ಲವೂ ತಿರುಮಲೆಯ ಶ್ರೀವೆಂಕಟೇಶ್ವರನ ಮೇಲೆ ರಚಿತವಾಗಿವೆ. ಈತ ತೆಲುಗಿನಲ್ಲಿಯೂ ಸಂಸ್ಕೃತದಲ್ಲಿಯೂ ರಚಿಸಿರುವ ಕೀರ್ತನೆಗಳ ಸಂಖ್ಯೆ ಅಪಾರ.

ಕ್ರಿ.ಶ. 1500 ರಿಂದ 1750ರ ನಡುವಿನ ಕಾಲವನ್ನು ತೆಲುಗು ಸಾಹಿತ್ಯದ ಸುವರ್ಣ ಯುಗವೆಂದು ಕರೆಯುವರು. ಇದರ ಮೊದಲ ಭಾಗವನ್ನು ರಾಯರ ಯುಗವೆಂದು ಕರೆಯಬಹುದು. ಆಗ ಕೃಷ್ಣದೇವರಾಯನ ಆಳ್ವಿಕೆ ಆರಂಭವಾಗಿದ್ದಿತು. ಅವನ ಆಸ್ಥಾನದಲ್ಲಿ ಅಷ್ಟದಿಗ್ಗಜಗಳೆಂಬ ಪ್ರಸಿದ್ಧರಾದ ಎಂಟು ಜನ ಕವಿಗಳಿದ್ದರು. ಅವರಲ್ಲಿ ಪೆದ್ದನನೇ ಅತಿ ಮುಖ್ಯನು. ಅವನೇ ಅಂದಿನ ರಾಷ್ಟ್ರಕವಿ. ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ಕೃಷ್ಣದೇವರಾಯನು ಹೆಚ್ಚು ಶ್ರೀಮಂತನೂ ಸಾಹಿತ್ಯ ಮತ್ತು ಕಲೆಗಳಿಗೆ ಹೆಚ್ಚು ಆಶ್ರಯದಾತನು ಆಗಿದ್ದನು. ಸ್ವತಃ ಚಕ್ರವರ್ತಿಯೇ ಘನವಿದ್ವಾಂಸನಾಗಿದ್ದನು ಆಮುಕ್ತಮಾಲ್ಯ ಎಂಬ ಘನವಾದ ಪ್ರಬಂಧವನ್ನು ಆತನು ರಚಿಸಿದ್ದಾನೆ. ಈತ ಸಂಸ್ಕೃತದಲ್ಲಿಯೂ ಅನೇಕ ಗ್ರಂಥಗಳನ್ನು ಬರೆದಿದ್ದಾನೆ. ಅವುಗಳಲ್ಲಿ ಯಾವ ಗ್ರಂಥಗಳೂ ಈಗ ದೊರೆಯುವುದಿಲ್ಲ. ವಿಷ್ಣು ಭಕ್ತಿಯನ್ನು ಉಕ್ಕಿಸುವ ಆತನ ಆಮುಕ್ತಮಾಲ್ಯದ ಎಂಬ ಗ್ರಂಥ ಶ್ರೇಷ್ಠ ಕವಿತೆಯ ವರ್ಗಕ್ಕೆ

ಸೇರಿದ್ದಿತು. ಅದರಲ್ಲಿ ಬರುವ ಕಲ್ಪನೆಗಳು ಹೆಚ್ಚು ಜನ ವಿದ್ವಾಂಸರ ಪ್ರಶಂಸೆಗೆ ಪಾತ್ರವಾಗಿವೆ. ಕೃಷ್ಣದೇವರಾಯನಿಗೆ ತೆಲುಗು ಭಾಷೆಯ ಬಗ್ಗೆ ಅಪಾರವಾದ ಪ್ರೀತಿ. ಆತನ ಕವಿತೆಯೊಂದರಲ್ಲಿ ಇದು ವ್ಯಕ್ತವಾಗುವುದು. ರಾಷ್ಟ್ರಕವಿ ಪೆದ್ದನನು ಸ್ವಾರೋಚಿಷ ಮನುಚರಿತ ಎಂಬ ಪ್ರಬಂಧವನ್ನು ರಚಿಸಿದನು. ತೆಲುಗು ಸಾಹಿತ್ಯದ ಪಂಚಮಹಾಕಾವ್ಯಗಳಲ್ಲಿ ಇದು ಅತ್ಯುತ್ತಮವಾಗಿದೆ ಎಂದು ಪರಿಗಣಿತವಾಗಿದೆ. ಉಳಿದ ನಾಲ್ಕು ಮಹಾಕಾವ್ಯಗಳು ಯಾವುವೆಂದರೆ, ಶ್ರೀನಾಥನ ಶೃಂಗಾರ ನೈಷಧಂ, ಕೃಷ್ಣದೇವರಾಯನ ಆಮುಕ್ತಮಾಲ್ಯದ ಭಟ್ಟುಮೂರ್ತಿಯ ವಸುಚರಿತ್ರೆ ಮತ್ತು ತೆನಾಲಿ ರಾಮಕೃಷ್ಣನ ಪಾಂಡುರಂಗಮಹಾತ್ಮ್ಯೆ. ಕೆಲವರು ಪಿಂಗಳಿ ಸೂರನನ್ನ ಕಲಾಪೂರ್ಣೋದಯಂ ಎಂಬುದನ್ನು ಮತ್ತೆ ಕೆಲವರು ಚೇಮಕೂರಿ ವೆಂಕಟಕವಿಯ ವಿಜಯ ವಿಲಾಸಂ ಎಂಬುದನ್ನು ತೆನಾಲಿ ರಾಮಕೃಷ್ಣನ ಪಾಂಡುರಂಗ ಮಹಾತ್ಮ್ಯೆಯ ಬದಲು ಹೇಳುತ್ತಾರೆ. ಇದರಿಂದ ಮೇಲೆ ಹೇಳಿದ ಏಳು ಗ್ರಂಥಗಳು ತೆಲುಗು ಸಾಹಿತ್ಯದಲ್ಲಿ ಅತ್ಯುತ್ತಮ ಗ್ರಂಥಗಳು ಎನಿಸಿಕೊಂಡಿವೆ.

ಕೃಷ್ಣದೇವರಾಯನು ಪೆದ್ದನ ಕವಿಯನ್ನು ಆಂಧ್ರ ಕವಿತಾಪಿತಾಮಹನೆಂದು ಕರೆಯುತ್ತಿದ್ದನು. ಈತನ ಕಾವ್ಯದಲ್ಲಿ ಪಾತ್ರಗಳಿಗೆ ತಕ್ಕ ಭಾಷೆ ಉದ್ದಕ್ಕೂ ಪ್ರಯುಕ್ತವಾಗಿದೆ. ಅಲಂಕಾರಯುಕ್ತವಾದ ಶೈಲಿಯಿಂದಲೂ ಮನಸೆಳೆಯುವ ಪ್ರಸಂಗಗಳಿಂದಲೂ ಈ ಕಾವ್ಯ ಎಲ್ಲರ ಮೆಚ್ಚುಗೆಗೆ ಕಾರಣವಾಗಿದೆ.

ಪಾರಿಜಾತಾಪಹರಣಂ ಎಂಬ ಕೃತಿಯನ್ನು ಬರೆದ ನಂದಿ ತಿಮ್ಮನ, ಕಾಳಹಸ್ತೀಶ್ವರ ಮಹಾತ್ಮ್ಯಂ ಎಂಬ ಕೃತಿಯನ್ನು ಬರೆದ ಧೂರ್ಜಟಿ, ರಾಜಶೇಖರ ಚರಿತ್ರಂ ಎಂಬ ಕೃತಿಯನ್ನು ಬರೆದ ಮಾದಯಗಾರಿ ಮಲ್ಲನ, ರಾಮಾಭ್ಯುದಯವನ್ನು ಬರೆದ ಅಯ್ಯಲರಾಜು ರಾಮಭದ್ರುಡು, ಪಾಂಡುರಂಗ ಮಾಹತ್ಮೆ ಬರೆದ ತೆನಾಲಿ ರಾಮಕೃಷ್ಣ, ರಾಧಾಮಾಧವಂ ಎಂಬುದನ್ನು ಬರೆದ ಚಿಂತಲಪುಡಿಯೆಲ್ಲನ ಮತ್ತು ನಿರಂಕುಶೋಪಾಖ್ಯಾನ ಬರೆದ ಕಂದುಕೂರಿ ರುದ್ರಕವಿ ಇವರು ಕೃಷ್ಣದೇವರಾಯನ ಆಸ್ಥಾನದ ಅಷ್ಟದಿಗ್ಗಜಗಳು ವಸುಚರಿತ್ರೆಯನ್ನು ಬರೆದ ಭಟ್ಟುಮೂರ್ತಿ ಅಥವಾ ರಾಮರಾಜಭೂಷಣ ಮತ್ತು ಪಿಂಗಲಸೂರನ್ನ ಎಂಬಿಬ್ಬರನ್ನು ಅಷ್ಟದಿಗ್ಗಜಗಳ ಪಂಕ್ತಿಗೆ ಸಾಂಪ್ರದಾಯಿಕವಾಗಿ ಸೇರಿಸಿದ್ದರೂ ಅವರು ಕೃಷ್ಣದೇವರಾಯನ ಕಾಲಕ್ಕೆ ಸೇರಿದವರಲ್ಲ.

ಪಿಂಗಳಸೂರನ್ನ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಮೂರು ಮುಖ್ಯವಾಗಿವೆ. ತೆಲುಗು ಸಾಹಿತ್ಯದ ಪಂಚಮಹಾಕಾವ್ಯಗಳಲ್ಲಿ ಕಲಾ ಪೂರ್ಣೋದಯಂ ಎಂಬ ಪ್ರಖ್ಯಾತಪ್ರಬಂಧವನ್ನು ಸೇರಿಸಬಹುದೆಂದು ಕೆಲವರ ಅಭಿಪ್ರಾಯ. ಭಟ್ಟುಮೂರ್ತಿ ಎಂಬ ಕವಿ ಕೃಷ್ಣದೇವರಾಯನ ಅಳಿಯನಾದ ರಾಮರಾಜನ ಆಸ್ಥಾನದಲ್ಲಿದ್ದು ಅನೇಕ ಕಾವ್ಯಗಳನ್ನು ರಚಿಸಿದ್ದಾನೆ. ಆದರೆ

ಅವುಗಳಲ್ಲಿ ಮೂರು ಗ್ರಂಥಗಳು ಮಾತ್ರ ದೊರೆಯುತ್ತವೆ. ಗಂಭೀರವಾದ ಶೈಲಿಗೂ ಘನವಾದ ಉಕ್ತಿಗೂ ಇವನ ಕಾವ್ಯಗಳು ಹೆಸರುವಾಸಿಯಾಗಿವೆ.

ತೆಲುಗು ಸಾಹಿತ್ಯ 1530 ರಿಂದ 1750ರ ವರೆಗೆ ತಂಜಾವೂರು, ಮಧುರೈ, ಪುದುಕೋಟೆ ಮತ್ತು ಮೈಸೂರುಗಳಲ್ಲಿ ರಾಜರ ಆಶ್ರಯದಲ್ಲಿ ಬೆಳೆಯಿತು. ಇದನ್ನೇ ದಾಕ್ಷಿಣಾತ್ಯ ಪಂಥವೆಂದು ಕರೆಯುವರು. ದ್ವಿಪದ ಮತ್ತು ದೇಶೀ ಛಂದಸ್ಸುಗಳ ಬಳಕೆ ಇಲ್ಲಿ ಹೆಚ್ಚು. ಜೀವಂತವಾದ ಆಡು ಭಾಷೆಗೆ ಇಲ್ಲಿ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ. ಸಂಗೀತ, ಹಾಡು ಮತ್ತು ಯಕ್ಷಗಾನಗಳು ಹೆಚ್ಚು ಪ್ರಾಶಸ್ತ್ಯ ಪಡೆದಿವೆ ಜನರ ವಿಶೇಷ ಮೆಚ್ಚುಗೆಗೆ ಪಾತ್ರವಾಗಿರುವ ಶೃಂಗಾರರಸ ಇಲ್ಲಿ ಮೆರೆಯುತ್ತಿದೆ. ಸಂಗೀತ, ಕಲೆ, ಕಸಬು, ಜೀವನ ಚರಿತ್ರೆ ಮುಂತಾದುಗಳಿಗೆ ಸಂಬಂಧಿಸಿದ ಗ್ರಂಥಗಳು ಇಲ್ಲಿ ವಿಶೇಷವಾಗಿ ರಚಿತವಾಗಿವೆ. ಇದರಿಂದ ಗದ್ಯ ಸಾಹಿತ್ಯ ಬೆಳೆದಿದೆ.

ಮೊಘಲರು ದಕ್ಷಿಣಕ್ಕೆ ದಾಳಿಮಾಡಿದ ಪರಿಣಾಮವಾಗಿ ತೆಲುಗು ಸಾಹಿತ್ಯಕ್ಕೆ ಆದರದ ಆಸರೆ ತಪ್ಪಿಹೋಯಿತು. ಇದರಿಂದಾಗಿ ತೆಲುಗು ಸಾಹಿತ್ಯದ ಬೆಳವಣಿಗೆ ಕ್ಷೀಣಗೊಂಡಿತು. ದೀನರಾದ ಜನ ಸ್ವಾವಲಂಬನೆ ತೊರೆದು ದೇವರುಗಳಿಗೆ ಮೊರೆಯಿಡಲಾರಂಭಿಸಿದರು. ಈ ಕಾಲದಲ್ಲಿ ತೆಲುಗರ ಹೀನಸ್ಥಿತಿ ತಲೆದೋರಿತು. ನರಸಿಂಹಕವಿ ರಚಿಸಿದ ಭದ್ರಾದ್ರಿ ರಾಮಶತಕಂ ಇದು ಮುಸಲ್ಮಾನರು ಮುತ್ತಿಗೆ ಹಾಕಿದ ಊರುಗಳನ್ನು ಕೊಳ್ಳೆಹೊಡೆದ ಭದ್ರಾಚಲದ ದೇವಸ್ಥಾನಗಳನ್ನು ನಾಶಮಾಡಲು ಯತ್ನಿಸಿದಾಗ ರಚಿತವಾದರೆ, ಕಾಸುಲ ಪುರುಷೋತ್ತಮನು ರಚಿಸಿದ ಆಂಧ್ರನಾಯಕಶತಕಂ ಎಂಬುದು ವಿಜಯವಾಡದ ಹತ್ತಿರದಲ್ಲಿರುವ ಶ್ರೀಕಾಕುಲಕ್ಕೆ ಮುತ್ತಿಗೆಹಾಕಿದಾಗ ಅಲ್ಲಿನ ವಿಷ್ಣುದೇವಸ್ಥಾನವನ್ನು ಮುಸಲ್ಮಾನರು ಧ್ವಂಸಮಾಡಲು ಯತ್ನಿಸಿದಾಗ ರಚಿತವಾಯಿತು. ಇದೇರೀತಿ ಗೋಗುಲಪಾಟಿ ಕೂರ್ಮನಾಥ ಕವಿ ಸಿಂಹಾದ್ರಿ ನರಸಿಂಹಶತಕಂ ಎಂಬ ಕೃತಿಯನ್ನು ಇದೇ ಸಮಯದಲ್ಲಿ ರಚಿಸಿದನು. ಈ ಮೂರು ಸ್ಥಳಗಳಲ್ಲಿಯೂ ಆಗಬಹುದಾಗಿದ್ದ ದುರಂತ ತಪ್ಪಿಹೋಯಿತು. ನಂಬುವ ಜನ ದೇವರು ಇವರ ಮೊರೆಯನ್ನು ಆಲಿಸಿ ಇದನ್ನು ತಪ್ಪಿಸಿದನೆಂದು ಭಾವಿಸುವರು. ಈ ಹೀನಸ್ಥಿತಿಯ ಕಾಲದಲ್ಲಿ ಕೂಚಿಮಂಚಿ ತಿಮ್ಮಕವಿ ರುಕ್ಮಿಣೀ ಪರಿಣಯ ಅನಂತರ ರಸಿಕಜನಮನೋಭಿರಾಮಂ ಮುಂತಾದ ಅನೇಕ ಶೃಂಗಾರರಸದ ಕೃತಿಗಳು ಅಚ್ಚ ತೆಲುಗಿನಲ್ಲಿ ರಚನೆಯಾದವು.

18 ನೆಯ ಶತಮಾನದ ಮಧ್ಯಭಾಗದಲ್ಲಿ ಕಂಕಟಿ ಪಾಪರಾಜು ಎಂಬಾತನು ತೆಲುಗಿನಲ್ಲಿ ಉತ್ತರ ರಾಮಾಯಣವನ್ನು ಬರೆದನು. ಆದಿದಂಸೂರ ಕವಿ ಕವಿಜನ ರಂಜನಂ ಎಂಬ ಗ್ರಂಥವನ್ನು ರಚಿಸಿದನು. ಈತನು ವ್ಯಾಕರಣಕ್ಕೂ ಅಲಂಕಾರ ಶಾಸ್ತ್ರಕ್ಕೂ ಸಂಬಂಧಿಸಿದಂತೆ ಕವಿ ಸಮಸ್ಯಾವಿಚ್ಛೇದಂ, ಚಂದ್ರಲೋಕಂ ಎಂಬ ಗ್ರಂಥಗಳನ್ನು ರಚಿಸಿದನು. ಇವರು ರಚಿಸಿರುವ ಕಾವ್ಯಗಳು ತೆಲುಗು ಸಾಹಿತ್ಯ ಕ್ಷೇತ್ರಕ್ಕೆ ಉತ್ತಮವಾದ ಗ್ರಂಥಗಳಾಗಿ ತೋರಿಬರುತ್ತವೆ. ತೆಲುಗು ಸಾಹಿತ್ಯಗಳಲ್ಲಿ

ಅನೇಕ ಶತಕಗಳು ರಚಿತವಾಗಿವೆ. ಅವುಗಳಲ್ಲಿ ವೇಮನ ಶತಕಂ, ಕೃಷ್ಣ ಶತಕಂ, ರಾಮಾಯಣ ಶತಕಂ. ದಾಶರಥಿ ಶತಕಂ, ವೃಷಾಧಿಪ ಶತಕಂ, ಕಾಳಹಸ್ತೀಶ್ವರ ಶತಕಂ ಮುಂತಾದುವು ಮುಖ್ಯವಾಗಿವೆ—ಇವುಗಳಲ್ಲಿ ಭಾಷೆ ಸರಳ, ಮಾತು ಬಿಗಿ. ಭಾವ ಗಂಭೀರವಾಗಿದೆ.

1850 ರಿಂದ ಇಂದಿನವರೆಗಿನ ಕಾಲವನ್ನು ತೆಲುಗುಸಾಹಿತ್ಯದಲ್ಲಿ ಆಧುನಿಕ ಕಾಲವೆಂದು ಕರೆಯುವರು. ಪೋರ್ಚುಗೀಸರು ಫ್ರೆಂಚರು ಮತ್ತು ಬ್ರಿಟೀಷರು ಈ ದೇಶಕ್ಕೆ ಬಂದು ಆಧುನಿಕ ಭಾವನೆಯನ್ನು ಜನರಲ್ಲಿ ಬಿತ್ತಿದರು. ಪರದೇಶೀ ಶಬ್ದಗಳಿಂದ ಅಂದಿನ ತೆಲುಗುಭಾಷೆ ಶ್ರೀಮಂತವಾಯಿತು. ಬ್ರಿಟೀಷರು ಇಂಗ್ಲಿಷಿನ ಮೂಲಕ ವಿದ್ಯಾಭ್ಯಾಸವನ್ನು ನಡೆಸಲು ಪ್ರಯತ್ನಿಸಿದರು. ಇಂಗ್ಲಿಷ್ ಸಾಹಿತ್ಯ ವ್ಯಾಸಂಗದಿಂದ ಪಾಶ್ಚಾತ್ಯಭಾವನೆ ಮತ್ತು ಹೊಸ ಹೊಸ ವಿಚಾರಗಳು ಜನರನ್ನು ಆಕರ್ಷಿಸಿದವು. ಇವುಗಳ ಫಲವಾಗಿ ಆಧುನಿಕ ತೆಲುಗು ಸಾಹಿತ್ಯ ಹೊಸ ರೀತಿಯಲ್ಲಿ ಮುಂದುವರಿಯಿತು. ವಿಲಿಯಂಬ್ರೌನ್, ಕ್ಯಾಂಬೆಲ್ ಸಿ. ಪಿ. ಬ್ರೌನ್ ಮುಂತಾದ ವಿದ್ವಾಂಸರು ತೆಲುಗು ಶಬ್ದಕೋಶವನ್ನು ವ್ಯಾಕರಣ ಗ್ರಂಥಗಳನ್ನು ಪ್ರಕಟಿಸಿ ತೆಲುಗುಭಾಷೆಯ ಬೆಳವಣಿಗೆಗೆ ಮಹೋಪಕಾರಮಾಡಿದ್ದಾರೆ. ಕ್ರೈಸ್ತ ಮಿಷನರಿಗಳು ಅನೇಕ ಸಂಸ್ಥೆಗಳು ತೆಲುಗಿನಲ್ಲಿ ಅಚ್ಚುಕೂಟಗಳನ್ನು ಸ್ಥಾಪಿಸಿ ವಿದ್ಯಾಭ್ಯಾಸವನ್ನು ಕುದುರಿಸಿದರು. ಪುಸ್ತಕಗಳ ಪ್ರಕಟಣೆಗೆ ಪ್ರೋತ್ಸಾಹ ದೊರಕಿಸಿಕೊಟ್ಟರು. ಸಿ. ಪಿ. ಬ್ರೌನ್ ಹಳೆಯ ಪ್ರೌಢ ಗ್ರಂಥಗಳನ್ನು ಪ್ರಕಟಿಸಿದನಲ್ಲದೆ ಆಧುನಿಕ ಗದ್ಯ ಸಾಹಿತ್ಯದ ಬೆಳವಣಿಗೆಗೆ ಸಹಾಯಮಾಡಿದನು. ಕಾದಂಬರಿಗಳು, ಸಣ್ಣ ಕಥೆಗಳು, ನಾಟಕಗಳು, ನಗೆನಾಟಕಗಳು ಪ್ರಬಂಧಗಳು, ಚಿಕ್ಕ ಚಿಕ್ಕ ಪದ್ಯಗಳು ಸಾಹಿತ್ಯ ವಿಮರ್ಶೆಗಳು, ಜೀವನ ಚರಿತ್ರೆಗಳು, ಆತ್ಮ ಚರಿತ್ರೆಗಳು ಬಗೆಬಗೆಯಲ್ಲಿ ಹೊರ ಬಂದವು. ಕೆ. ವೀರೇಶಲಿಂಗಂಪಂತುಲು ಎಂಬುವವನನ್ನು ಆಧುನಿಕ ತೆಲುಗು ಸಾಹಿತ್ಯದ ಯುಗಪುರುಷನೆಂದು ಕರೆಯಲಾಗುತ್ತಿದೆ. ಇಂಗ್ಲಿಷ್ ಸಾಹಿತ್ಯದಲ್ಲಿನ ಅನೇಕ ಗ್ರಂಥಗಳು ತೆಲುಗಿಗೆ ಪರಿವರ್ತಿತವಾದವು. ಕಾಲಕ್ರಮೇಣ ಆಧುನಿಕ ಗದ್ಯಸಾಹಿತ್ಯ ಬೆಳೆಯತೊಡಗಿತು. 1920 ರಿಂದೀಚೆಗೆ ಎಲ್ಲತರಹದ ಗದ್ಯಸಾಹಿತ್ಯಕ್ಕೆ ತೆಲುಗಿನಲ್ಲಿ ಜನರ ಆಡುಮಾತನ್ನೇ ಬಳಸಿಕೊಳ್ಳಲಾಯಿತು.

ಈ ಶತಮಾನದ ಆದಿಭಾಗದ ತೆಲುಗು ಸಾಹಿತ್ಯ ಕ್ಷೇತ್ರದಲ್ಲಿ ಸಣ್ಣ ಕವಿತೆಗಳು, ಭಾವಗೀತೆಗಳು ಅಂತೆಯೇ ಕಥನ ಕವನಗಳು ಶೋಕಗೀತೆಗಳು, ವಿಕಟಾನುಕರಣಗಳು ವಿಡಂಬನೆಗಳು. ಆಧ್ಯಾತ್ಮಿಕ ಮತ್ತು ದಾರ್ಶನಿಕ ಕವಿತೆಗಳು ಮುಂತಾದುವು ಹೊರಬಂದವು. ಗದ್ಯ ಕ್ಷೇತ್ರದಲ್ಲಿ ಕಥೆ, ಸಣ್ಣಕಥೆ, ಪ್ರಬಂಧಗಳು, ಸಾಹಿತ್ಯ ವಿಮರ್ಶೆಗಳು, ಚರಿತ್ರೆಗಳು ವೈಜ್ಞಾನಿಕ ಕೃತಿಗಳು, ಜೀವನಚರಿತ್ರೆಗಳು, ಆತ್ಮಕಥೆಗಳು, ಜ್ಞಾನ ಪ್ರಸಾರಕ ಪುಸ್ತಕಗಳು, ವಿಶ್ವಕೋಶಗಳು, ತೆಲುಗು ಕವಿಗಳ ಮತ್ತು ಸಾಹಿತ್ಯ ಚರಿತ್ರೆಗಳು ಮುಂತಾದುವು ಹೊರಬಂದವು. 1500 ಕ್ಕೂ ಹೆಚ್ಚು

ದೊಡ ಚಿಕ್ಕ ನಾಟಕಗಳು ಏಕಾಂಕಗಳು ರಚಿತವಾದವು. ಹರಿಕಥೆಗಳು, ಬೊರ್ರ ಕಥೆಗಳು, ತೆಲುಗು ಸಾಹಿತ್ಯದ ವಿಶಿಷ್ಟವಾದ ಸಾಹಿತ್ಯ ಪ್ರಕಾರಗಳಾಗಿವೆ. ಆಧುನಿಕ ರೀತಿಯಲ್ಲಿ ಮಕ್ಕಳ ಸಾಹಿತ್ಯವೂ ನಿರ್ಮಾಣವಾಯಿತು. ಪತ್ರಿಕಾ ಸಾಹಿತ್ಯ ಅಭಿವೃದ್ಧಿ ಹೊಂದಿತು. ಹೀಗೆ ತೆಲುಗು ಸಾಹಿತ್ಯ ಕಾಲಕಾಲಕ್ಕೆ ತನ್ನದೇ ಆದ ರೀತಿಯಲ್ಲಿ ಬೆಳೆದುಬಂದಿದೆ. ಮಾತ್ರವಲ್ಲದೆ ಅದು ಎಲ್ಲ ಕ್ಷೇತ್ರಗಳಲ್ಲಿ ಶ್ರೀಮಂತ ವಾಗಿದೆ.

ಡಾ. ಅಂಬಳಿಕೆ ಹಿರಿಯಣ್ಣ

ಜಾನಪದ ಸಿದ್ಧಾಂತಗಳು : ಒಂದು ವಿವೇಚನೆ

ಜಾನಪದ ಒಂದು ಸಾರ್ವತ್ರಿಕ ವಿಷಯ (Universal Phenomena). ಅಂತರಶಿಸ್ತೀಯ ಹಿನ್ನೆಲೆಯಲ್ಲಿ ಲೋಕದೃಷ್ಟಿಯಿಂದ (World View) ವಿವೇಚಿಸಲಾಗುವ ಇದರ ಸಾಮಗ್ರಿಗಳನ್ನು ತಾತ್ವಿಕ ನೆಲೆಯಲ್ಲಿ ಪರಿಭಾವಿಸುವ, ಅರ್ಥೈಸುವ ಮತ್ತು ವ್ಯಾಖ್ಯಾನಿಸುವ ಪ್ರಯತ್ನಗಳು ಈಗ ಎಲ್ಲೆಡೆ ನಡೆಯುತ್ತಿವೆ. ಪ್ರಪಂಚದ ಯಾವುದೋ ಒಂದು ಪ್ರದೇಶ/ಭಾಷೆಯಲ್ಲಿ ನಡೆದಿರಬಹುದಾದ ಜಾನಪದ ಅಧ್ಯಯನ, ಅದರ ಬಗೆಗೆ ತಳೆದಿರಬಹುದಾದ ಅಭಿಪ್ರಾಯಗಳು ಇತರ ಪ್ರದೇಶದ ಜಾನಪದಕ್ಕೂ ಅನ್ವಯವಾಗುವುದು ಸ್ವಾಭಾವಿಕ. ಆಯಾ ಪ್ರದೇಶದ ಜಾನಪದವನ್ನು ಆಯಾ ಪ್ರದೇಶದ ಚಾರಿತ್ರಿಕ ಭೌಗೋಳಿಕ ವೈಶಿಷ್ಟ್ಯಗಳ ಹಿನ್ನೆಲೆಯಲ್ಲಿ ಸಾಮಾಜಿಕ, ಮಾನಸಿಕ ಅಂಶಗಳ ಆಧಾರದ ಮೇಲೆ ವಿವೇಚನೆಗೆ ಗುರಿಪಡಿಸುವುದು ಅರ್ಥಪೂರ್ಣ. ಮನುಷ್ಯನ ಒಟ್ಟು ಸ್ವಭಾವ, ನಡವಳಿಕೆಯ ಮೇಲೆ ಬೆಳಕು ಚೆಲ್ಲುವುದಕ್ಕಾಗಿ ಅದನ್ನು ಜಾಗತಿಕ ನೆಲೆಯಲ್ಲಿ ಸೈದ್ಧಾಂತಿಕ ಹಿನ್ನೆಲೆಯಲ್ಲಿ ನೋಡುವುದೇ ಹೆಚ್ಚುಯುಕ್ತ. ವಿವಿಧ ಆಯಾಮಗಳ ಗುಣ ಸ್ವಭಾವವನ್ನು ಮೈಗೂಡಿಸಿಕೊಂಡಿರುವ ಜಾನಪದದ ಸ್ಪಷ್ಟ ಪರಿಕಲ್ಪನೆ ಇಲ್ಲದ ಕೆಲವರು ಒಂದೇ ಸಮನೆ ವೇದಿಕೆಗಳ ಮೇಲಿನಿಂದ ಯೂರೋಪಿನ ಅಧ್ಯಯನ ವಿಧಾನಗಳನ್ನು ಜರಿಯುವುದು ಒಂದು ಫ್ಯಾಷನ್ ಆಗಿಬಿಟ್ಟಿದೆ. ನಮ್ಮ ಜಾನಪದ ರೂಪಗಳ ಸಮರೂಪತೆ ಮತ್ತು ಅನನ್ಯತೆಯನ್ನು ಕಂಡು ಹಿಡಿಯಲು ಅವನ್ನು ಜಾಗತಿಕ ಮಟ್ಟದ ಸೈದ್ಧಾಂತಿಕ ಪರಿಶೀಲನೆಗೆ ಗುರಿಪಡಿಸಬೇಕಾಗುತ್ತದೆ. ಹಾಗಾದಾಗ ಮಾತ್ರ ಮನುಷ್ಯನ ಒಟ್ಟು ಸ್ವಭಾವ, ವರ್ತನೆಯನ್ನು ಗ್ರಹಿಸಲು, ಅರ್ಥೈಸಲು ಮತ್ತು ವ್ಯಾಖ್ಯಾನಿಸಲು ಸಾಧ್ಯವಾಗುತ್ತದೆ.

ಪ್ರಚಲಿತವಿರುವ ಅಧ್ಯಯನ ಮಾದರಿಗಳಲ್ಲಿ ಹೆಚ್ಚಿನವು ಯೂರೋಪ್‌ನವು. ನಿಜ. ಲೋಕದೃಷ್ಟಿಯಿಂದ ಜಾನಪದ ವಸ್ತು ವಿಷಯವನ್ನು ಪರಿಭಾವಿಸುವ ಮತ್ತು ವ್ಯಾಖ್ಯಾನಿಸುವ ಧೋರಣೆಯನ್ನು ಅನುಸರಿಸಲು ಅವು ನಮಗೆ ಪ್ರೇರಣೆ ಒದಗಿಸುತ್ತಾ ಬಂದಿರುವುದೂ ನಿಜ. ಆದರೆ ನಮ್ಮಲ್ಲಿ ಕೆಲವರು ತಿಳಿದಿರುವಂತೆ, ಅವು ಸೀಮಿತ

ದೃಷ್ಟಿಕೋನದ ಅರ್ಥಹೀನ ಪ್ರಮೇಯಗಳಲ್ಲ. ಅಂತೆಯೇ ಅವುಗಳ ಯಾಂತ್ರಿಕ ಅನ್ವಯಿಕತೆಯೂ ಸರಿಯಲ್ಲ. ಈ ವಿಧಾನಗಳು ಎಷ್ಟರಮಟ್ಟಿಗೆ ಅಂತರ ಸಾಂಸ್ಕೃತಿಕ ವಾಗಿ ಹಾಗೂ ಅಂತರ ಪ್ರಕಾರವಾಗಿ ನಮ್ಮ ಸಾಮಗ್ರಿಗೂ ಅಳವಡುತ್ತವೆ ಎಂಬುದನ್ನು ತಿಳಿದುಕೊಳ್ಳಲು ಅನ್ವಯಿಕತೆಯ ಕೆಲವು ಪ್ರಯೋಗಗಳು ನಡೆದಿರುವು ದುಂಟು. ನಮ್ಮ ಜಾನಪದ ಘಟನೆ (event) ಯೊಂದು ಹೇಗೆ ಪ್ರಪಂಚದ ಜಾನಪದ ದೊಡನೆ ನಿಕಟ ಸಂಬಂಧವನ್ನು ಇಟ್ಟುಕೊಂಡಿದೆ ಮತ್ತು ಹೇಗೆ ಏಕಮುಖವಾದ ಸಾಂಸ್ಕೃತಿಕ ವಿಕಾಸದ ಕಾರಣದಿಂದ ನಮ್ಮ ಜಾನಪದದಲ್ಲಿ ಸಾಮ್ಯತೆ ಸ್ಥಾಪಿತವಾಗಿದೆ ಎಂಬುದನ್ನು ತಿಳಿಯಲು ಕೂಡ ಈ ವಿಧಾನಗಳು ಪ್ರಸ್ತುತವೆನಿಸಿವೆ.

ಹತ್ತೊಂಬತ್ತನೆಯ ಶತಮಾನದ ಆದಿಯಿಂದ, ಜಾನಪದ, ಕಲಿಕೆಯ ಒಂದು ಹೊಸ ಕ್ಷೇತ್ರವಾಗಿ ಪರಿಣಮಿಸಿದೆ. ವಿಭಿನ್ನ ಪರಂಪರೆಯ ವಿಭಿನ್ನ ಸಂಸ್ಕೃತಿಗಳನ್ನು ಅದು ಒಳಗೊಳ್ಳುತ್ತದಾದರೂ ಬಹು ಹಿಂದಿನಿಂದಲೂ ಪ್ರಪಂಚದ ಅನೇಕ ಸಂಸ್ಕೃತಿಗಳು ಬೇರೆ ಬೇರೆ ಹೆಸರುಗಳಲ್ಲಿ ಕಾಣಿಸಿಕೊಳ್ಳುತ್ತಾ ಬಂದಿವೆ. ಸದ್ಯ Folklore ಪ್ರಯೋಗ ಸಾರ್ವತ್ರಿಕವಾಗಿ ಚಲಾವಣೆಯಲ್ಲಿದ್ದು ಜ್ಞಾನದ ಒಂದು ಹೊಸ ಕ್ಷೇತ್ರ ಹಾಗೂ ಪರಿಶೀಲನೆಯ ಹೊಸ ವಿಷಯ ಎಂದು ಅದನ್ನು ಸಮರ್ಥಿಸಿಕೊಳ್ಳಲಾಗಿದೆ. ಆದರೆ ಅದು ಗೊಂದಲ ಮತ್ತು ವಿವಾದವನ್ನೂ ಹುಟ್ಟುಹಾಕಿದೆ (ಡಾರ್ಸನ್ : 1972 : 1). ಪಂಡಿತ–ಪಾಮರರಿಬ್ಬರಿಗೂ ಅದು ನಿನ್ನೆ ಮೊನ್ನೆಯವರೆಗೂ ತಪ್ಪು ಕಲ್ಪನೆ, ಭ್ರಾಂತಿ ಹಾಗೂ ಅಸ್ಪಷ್ಟತೆಯ ಸೂಚಕವಾಗಿತ್ತು. ಮೌಖಿಕ ಪರಂಪರೆಯ ಜ್ಞಾನವನ್ನು ಸಮರ್ಪಕ ರೀತಿಯಲ್ಲಿ ಗ್ರಹಿಸದೆ ಅಧ್ಯಯನ ನಡೆಸಿದ್ದು ಅದಕ್ಕೆ ಕಾರಣ. ಈ ತಪ್ಪು ಗ್ರಹಿಕೆ ಮತ್ತೆ ಮತ್ತೆ ಆಗಲು ಕಾರಣ ಆರಂಭಿಕ ವಿದ್ವಾಂಸರಲ್ಲಿ ಜಾನಪದ ಸಿದ್ಧಾಂತಗಳು ಹಾಗೂ ಮೌಖಿಕ ಪರಂಪರೆಯ ವೈಜ್ಞಾನಿಕ ಅರಿವಿನ ಕೊರತೆ ಇದ್ದುದು.

ವಿಲಿಯಂ ಜಾನ್ ಥಾಮ್ಸ್ Folklore ಶಬ್ದವನ್ನು ಚಲಾವಣೆಗೆ ತರುವ ಮೊದಲೇ ಜಾನಪದ ಸಾಮಗ್ರಿಯನ್ನು ಅತ್ಯಂತ ಹುರುಪಿನಿಂದ ಅಭ್ಯಸಿಸಲಾಗಿತ್ತು. ಎದ್ದು ಕಾಣುವ ಒಂದು ಉತ್ತಮ ಕೆಲಸವೆಂದರೆ ಗ್ರಿಮ್ ಸೋದರರದು (ಹಂಡೂ : 1989 : 34). ಜಾನಪದ ಅಧ್ಯಯನದ ಇತಿಹಾಸವನ್ನು ತಿಳಿದ ಯಾರೂ ಗ್ರಿಮ್ಮರ ಕೆಲಸವನ್ನು ಲಘುವಾಗಿ ಪರಿಗಣಿಸುವುದಿಲ್ಲ. ಅವರು ತಮ್ಮ ಅಧ್ಯಯನದಲ್ಲಿ ಪ್ರದರ್ಶಿಸಿದ ಸೈದ್ಧಾಂತಿಕ ಮುನ್ನಡೆಯ ಪರಿಣಾಮವೂ ಅಸಾಧಾರಣವಾದುದು.

ವಿಲ್‌ಹೆಲ್ಮ್ ಮತ್ತು ಜಾಕಬ್ ಗ್ರಿಮ್ಮರು ಮುಖ್ಯವಾಗಿ ಜರ್ಮನ್ ಭಾಷೆ ಯಲ್ಲಿ ಆಸಕ್ತಿ ಹೊಂದಿದ್ದರು. ಆ ಭಾಷೆಯ ಪರಂಪರೆಯನ್ನು ತಿಳಿಯಲು ಹಾಗೂ ಅದರ ಉಪಭಾಷೆಗಳನ್ನು ಗುರುತಿಸಲು ಅವರು ದ್ವಿಕಾಲಿಕ ಭಾಷಾಶಾಸ್ತ್ರೀಯ ಕ್ಷೇತ್ರದಲ್ಲಿ ಪ್ರಚಲಿತವಿದ್ದ ತೌಲನಿಕ ವಿಧಾನವನ್ನು ಅನುಸರಿಸಿದರು. ಮೌಖಿಕ ಕಾವ್ಯ ಹಾಗೂ ಗದ್ಯಕಥನಗಳ ಅಧ್ಯಯನ ಸಂದರ್ಭದಲ್ಲೂ ಅದೇ ತೌಲನಿಕ

ವಿಧಾನವನ್ನು ಅವರು ಅಳವಡಿಸಿ ನೋಡಿದರು. ವಾಸ್ತವವಾಗಿ, ಮೌಖಿಕ ಕಾವ್ಯದ ಸ್ವಭಾವ ಹಾಗೂ ವಿಕಾಸದ ಮೇಲೆ ಬೆಳಕು ಚೆಲ್ಲಿದ ಈ ವಿಧಾನ ಸಮಕಾಲೀನ ಯೂರೋಪಿಯನ್ ಜಾನಪದ ವಿದ್ವಾಂಸರಿಂದ ಸ್ಫೂರ್ತಿ ಪಡೆಯಿತು.

ಜನಪದ ಕತೆಗಳ ವೈಜ್ಞಾನಿಕ ಅಧ್ಯಯನಕ್ಕೆ ನಾಂದಿ ಹಾಡಿದ ಗ್ರಿಮ್ ಸೋದರರು ಅದನ್ನು ಕುರಿತ ವಿದ್ವತ್ತು ಬೆಳೆಯಲೂ ಕಾರಣರಾದರು. ಜಾನಪದದ ಮೂಲದ ಬಗೆಗೆ ಅವರು ತಮ್ಮ Kinder Und Haus Marchen ಗ್ರಂಥದಲ್ಲಿ ಎತ್ತಿದ ಪ್ರಶ್ನೆಗಳು ಮುಂದೆ ಅನೇಕ ಸಿದ್ಧಾಂತಗಳು ಉಗಮಿಸಲು ಕಾರಣವಾದುವು.

ಪುರಾಣ ಮೂಲ ಸಿದ್ಧಾಂತ: ಪ್ರಪಂಚದ ಬೇರೆ ಬೇರೆ ಕಡೆಗಳಲ್ಲಿನ ಕತೆಗಳೂ ಬೆಳಕು ಕಂಡ ಮೇಲೆ ಜನಪದ ಕತೆಗಳಲ್ಲಿ ತೋರಿಬಂದ ಸಾಮ್ಯ ಗ್ರಿಮ್ ಸೋದರರಿಗೆ ಸೋಜಿಗವನ್ನುಂಟುಮಾಡಿತು. ವಿಲ್‌ಹೆಲ್ಮ್ ಗ್ರಿಮ್ ಜಾನಪದದ ಈ ಗುಣದ ಮೂಲವನ್ನು ವಿವರವಾಗಿ ಚರ್ಚಿಸಿದರು. ಆ ವೇಳೆಗಾಗಲೇ ಭಾಷಾಶಾಸ್ತ್ರದಲ್ಲಿ ಸಾಕಷ್ಟು ಸಂಶೋಧನೆ ನಡೆದು ಇಂಡೊಯೂರೊಪಿಯನ್ ಭಾಷಾವರ್ಗದ ಸಿದ್ಧಾಂತ ಜನಪ್ರಿಯವಾಗಿತ್ತು. ಈ ಹಿನ್ನೆಲೆಯಲ್ಲಿ ವಿಲ್‌ಹೆಲ್ಮ್, ಜನಪದ ಕತೆಗಳನ್ನು ಆರ್ಯನ್ ಮೂಲಕ್ಕೆ ಕೊಂಡೊಯ್ಯುವ ಸಾಹಸವೆಸಗಿದರು. ಕತೆಗಳ ಮೂಲವನ್ನು ಶೋಧಿಸ ಹೊರಟ ಅವರು ಈ ಕೆಳಗೆ ಕಾಣಿಸಿದ ಅಭಿಪ್ರಾಯಗಳಿಗೆ ಬಂದರು:

೧. ಪರಸ್ಪರ ಹೋಲಿಕೆ ತೋರಿ ಬರುವ ಎಲ್ಲ ಕತೆಗಳೂ ಒಂದೇ ಇಂಡೊ ಯೂರೊಪಿಯನ್ ಭಾಷಾ ಮೂಲದಿಂದ ಹರಡಿಕೊಂಡವು.

೨ ಎಲ್ಲ ಕತೆಗಳೂ ಪುರಾಣಗಳ ಒಡೆದ ಚೂರುಗಳು, ಅವುಗಳು ಬಂದ ಮೂಲಪುರಾಣಗಳನ್ನು ಅರ್ಥಮಾಡಿಕೊಳ್ಳದ ಹೊರತು ಕತೆಗಳನ್ನು ಅರ್ಥೈಸುವುದು ತಪ್ಪು.

ಇದರ ಜೊತೆಗೆ ಗ್ರಿಮ್ ಇನ್ನೂ ಮಹತ್ವದ ವಿಚಾರವೊಂದನ್ನು ಪ್ರಸ್ತಾಪಿಸಿದ್ದುಂಟು: ಕಥಾ ಸನ್ನಿವೇಶಗಳು ಸರಳ ಮತ್ತು ಸಹಜವಾದವಾಗಿದ್ದು ಈ ಗುಣದಿಂದ ಅವು ಮತ್ತೆ ಮತ್ತೆ ಬೇರೆಡೆಗಳಲ್ಲಿಯೂ ಕಾಣಿಸಿಕೊಳ್ಳಬಲ್ಲವು—ಆದರೆ ಈ ವಿಚಾರವನ್ನು ಆನಂತರ ಬಂದ ವಿದ್ವಾಂಸರು ಜಾನಪದ ಹುಟ್ಟಿನ ವಿಕಾಸದ ಚರ್ಚೆಗೆ ಆಧಾರವಾಗಿ ಬಳಸಿಕೊಂಡರು (ಸ್ಟಿತ್ ಥಾಂಪಸನ್ : 1951 : 370).

ಹದಿನೆಂಟನೆಯ ಶತಮಾನದ ಕೊನೆಯ ಹೊತ್ತಿಗೆ ಸಂಸ್ಕೃತ ಸಾಹಿತ್ಯದಲ್ಲಿ ಯೂರೋಪಿನವರಿಗೆ ತೀವ್ರಾಸಕ್ತಿ ಬೆಳೆಯಿತು. ಸಂಸ್ಕೃತದ ಅಧ್ಯಯನದಿಂದ ಈ ಕ್ಷೇತ್ರದಲ್ಲಿ ಹೊಸ ವಿಚಾರ ಕ್ರಾಂತಿಯೇ ನಡೆದುಹೋಯಿತು. ಸಂಸ್ಕೃತಕ್ಕೂ ಇತರ ಐರೋಪ್ಯ ಭಾಷೆಗಳಿಗೂ ನಿಕಟ ಸಂಬಂಧವಿರುವುದನ್ನು ವಿದ್ವಾಂಸರು ಬಹುಬೇಗ ಮನಗಂಡರು. ಕತೆಗಳೆಲ್ಲ ಇಂಡೊ ಯೂರೊಪಿಯನ್ ಭಾಷಾ ಮೂಲವುಳ್ಳವು ಎಂಬ ನಿಲುವಿಗೆ ಬಂದರು. ಈ ಮೂಲದಿಂದ ಭಾರತ ಯೂರೋಪ್ ಮುಂತಾದ ದೇಶಗಳಿಗೆ

ಜನರು ವಲಸೆ ಹೋಗಿರಬಹುದೆಂದೂ ತಿಳಿಸಿದರು[1]. ಭಾರತದಿಂದ ಐರ್ಲೆಂಡಿನವರೆಗೆ ವ್ಯಾಪಿಸಿರುವ ಭಾಷೆಗಳಿಗೆಲ್ಲ ಮೂಲವಾದ ಯಾವುದೋ ಭಾಷೆ ಇದ್ದಿರಬೇಕೆಂದು ವಿದ್ವಾಂಸರು ಅದನ್ನು ಪುನರ್ರಚಿಸಲು ಯತ್ನಿಸಿದರು. ಹೊಸದಾಗಿ ಶೋಧಿಸಲ್ಪಟ್ಟ ಶಬ್ದಗಳ ಆಧಾರದ ಮೇಲೆ ಪ್ರಾಚೀನ ಇಂಡೊ ಯುರೋಪಿಯನ್ನರ ಭಾಷೆಯ ಸ್ವರೂಪವನ್ನು ಕಲ್ಪಿಸಿಕೊಂಡು ಇಂಡೋಯೂರೋಪಿಯನ್ ಪುರಾಣಗಳು, ಕತೆಗಳು ಆ ಭಾಷೆಯಿಂದ ಜನಿಸಿದವು ಎಂದು ಅವರು ಊಹಿಸಿದರು

ಯೂರೋಪಿಯನ್ ಭಾಷೆಗಳ ಸಾದೃಶ್ಯದಿಂದ ಜನಪದ ಕತೆಗಳ ಸಾದೃಶ್ಯವನ್ನು ಲಕ್ಷಿಸಿ ಒಂದೇ ಭಾಷೆಯನ್ನು ಮಾತಾಡುವ ಜನರಿಂದ ಜನಪದ ಕತೆಗಳು ಉಗಮಿಸಿರಬಹುದು ಎಂಬ ಗ್ರಿಮ್ ಸಿದ್ಧಾಂತ ತೌಲನಿಕ ಭಾಷಾಶಾಸ್ತ್ರದ ಫಲ ಎಂಬುದು ಸ್ಪಷ್ಟ. ಜನಾಂಗ ಮತ್ತು ಭಾಷೆಗಳ ಮೂಲ-ಎರಡನ್ನೂ ಪತ್ತೆ ಮಾಡಿದರೆ ಜನಪದ ಕತೆಗಳ ಮೂಲವನ್ನು ಕಂಡು ಹಿಡಿದಂತಾಗುತ್ತದೆ ಎಂದು ಭಾವಿಸಿದ ವಿದ್ವಾಂಸರು ಜನಾಂಗ ಮತ್ತು ಭಾಷೆಗಳ ವಿತರಣೆಗನುಗುಣವಾಗಿ ಕತೆಗಳ ಪ್ರಸರಣ ಮತ್ತು ವಿತರಣೆ ಇರುತ್ತದೆ ಎಂದೂ ತಿಳಿದರು. ಭಾಷೆಯಾಗಲಿ ಜನಾಂಗವಾಗಲಿ ಮೂಲತಃ ಎಷ್ಟು ಎಂಬುದರ ಮೇಲೆ ಕಥಾಪರಂಪರೆಗಳು ನಿಂತಿವೆ ಎಂದು ಗ್ರಿಮ್ ಸಿದ್ಧಾಂತ ಅಭಿಪ್ರಾಯ ಪಡುವುದು ಗಮನಾರ್ಹ. ಈ ಬಗೆಯ ಸಂಶೋಧನೆ ಜನಾಂಗದ ಮೂಲವನ್ನೂ ಭಾಷೆಯ ಮೂಲವನ್ನೂ ಶೋಧಿಸಲು ಸಹಾಯಕವಾಯಿತು. ಆದರೆ ಈ ವಾದವನ್ನು ಅನಂತರ ಬಂದ ಮ್ಯಾಕ್ಸ್‌ಮುಲ್ಲರ್ ಮತ್ತು ಅವರ ಅನುಯಾಯಿಗಳು ಒಪ್ಪಿಕೊಳ್ಳಲಿಲ್ಲ. ಅವರು, ಜನಪದ ಕತೆ ಮತ್ತು ಪುರಾಣಗಳಲ್ಲಿನ ಸಾದೃಶ್ಯಗಳು ಸ್ವೀಕೃತವಾದವಲ್ಲ; ಇಂಡೊ ಯುರೋಪಿಯನ್ ಮೂಲವೊಂದರಿಂದ ಅನುವಂಶೀಯವಾಗಿ ಬಂದವು ಎಂದು ಹೇಳಿದರು.

ಸಂಸ್ಕೃತ ಹಾಗೂ ಭಾಷಾಶಾಸ್ತ್ರದ ತಜ್ಞರಾಗಿದ್ದ ಮ್ಯಾಕ್ಸ್‌ಮುಲ್ಲರ್ ಸಾಹಿತ್ಯ ಹಾಗೂ ಭಾಷಾಶಾಸ್ತ್ರದ ವಿದ್ಯಾರ್ಥಿಯಾಗಿ ಗ್ರಿಮ್ ರೂಪಿಸಿದ ತೌಲನಿಕ ವಿಧಾನವನ್ನು ಅನುಸರಿಸಿ ಪುರಾಣಗಳ ಉಗಮವನ್ನು ಹೇಳಲು ಯತ್ನಿಸಿದರು. ಈ ವೈಧಾನಿಕತೆಯನ್ನಾಧರಿಸಿ ಮ್ಯಾಕ್ಸ್‌ಮುಲ್ಲರ್ ಜರ್ಮಾನಿಕ್ ಅಥವಾ ಇಂಡಿಕ್ ಪುರಾಣಗಳ ಮೂಲ ರೂಪಗಳನ್ನಷ್ಟೇ ಸಾಧಿಸಲಿಲ್ಲ. ಪುರಾಣ ಸೃಷ್ಟಿಯ ಸಂಕೀರ್ಣ ಸಂಗತಿಯ ವಿವರಕ್ಕೂ ಅವರು ಹೋದರು. ಮುಖ್ಯವಾಗಿ ಪುರಾಣಗಳಲ್ಲಿ ಕಾಣಬರುವ ದೇವತೆಗಳ ಹೆಸರುಗಳ ನಿಷ್ಪತ್ತಿಯನ್ನು ಶೋಧಿಸುತ್ತ ಹೋದರು. ಗ್ರೀಕ್ ಮತ್ತು ಭಾರತೀಯ ಪುರಾಣಗಳಿಗೆ ಸಂಬಂಧ ಕಲ್ಪಿಸಿ ಮೂಲತಃ ಇವೆಲ್ಲ ಒಂದೇ ಆಗಿದ್ದವು ಎಂದು ಪ್ರತಿಪಾದಿಸಲು ಯತ್ನಿಸಿದರು. ಅಲ್ಲದೆ ಪುರಾಣಗಳ ಉಗಮಕ್ಕೆ ಭಾಷಾರುಗ್ಣತೆಯೇ ಕಾರಣ ಎಂದರು. ತಪ್ಪಾಗಿ ಉಚ್ಚಾರಣೆಗೊಂಡ ಹೆಸರುಗಳನ್ನು ವ್ಯಾಖ್ಯಾನಿಸಲು

1. ಆದರೆ ವಲಸೆ ಹೋಗುವ ಮುನ್ನ ಎಲ್ಲಿದ್ದರು ಎಂಬುದಕ್ಕೆ ಉತ್ತರ ಸಿಗಲೇ ಇಲ್ಲ.

ಕತೆಗಳು ಹುಟ್ಟಿಕೊಂಡವು ಎಂದು ಸ್ಪಷ್ಟಪಡಿಸಿ ಎಲ್ಲ ಜನಪದ ಕತೆಗಳಿಗೂ ಇಂಡೊ ಯುರೋಪಿಯನ್ ಪುರಾಣಗಳಲ್ಲಿ ಮೂಲವನ್ನು ಕಾಣಬಹುದು ಎಂದು ಹೇಳಿದರು. ಅವೆಲ್ಲ, ಒಟ್ಟಾರೆ, ಪುರಾಣಗಳ ಒಡೆದ ಚೂರುಗಳು ಎಂದು ಮ್ಯಾಕ್ಸ್‌ಮುಲ್ಲರ್ ಪ್ರತಿಪಾದಿಸಿದರು. ಈ ವಾದ ಸಂದಿಗ್ಧತೆಯನ್ನುಂಟು ಮಾಡಿದುದಲ್ಲದೆ ಪ್ರಬಲ ಸಮರ್ಥನೆ ಒದಗಿಸದೆ ಬಿದ್ದುಹೋಯಿತು. ಇಷ್ಟಾದರೂ, ಮ್ಯಾಕ್ಸ್‌ಮುಲ್ಲರ್ ಜನಪದ ಕತೆ ಮತ್ತು ಪುರಾಣಗಳ ಸಂಬಂಧವನ್ನು ಕಲ್ಪಿಸಿ ತಮ್ಮ ತೌಲನಿಕ ಪುರಾಣ ಸಿದ್ಧಾಂತವನ್ನು ಪ್ರತಿಪಾದಿಸುವುದರ ಮೂಲಕ ಜಾನಪದ ಜಗತ್ತಿಗೆ ಒಂದು ಹೊಸ ರೋಮಾಂಚನವನ್ನು ತಂದುಕೊಟ್ಟರೆಂದೇ ಹೇಳಬೇಕು.

೧೮೫೬ ರಲ್ಲಿ ಮ್ಯಾಕ್ಸ್‌ಮುಲ್ಲರ್ ತೌಲನಿಕ ಪುರಾಣ ಕುರಿತು ವಿಚಾರ ಮಾಡುವಾಗ ಪುರಾಣಜಿಜ್ಞಾಸೆಯ ಮೇಲೆ ಮತ್ತೆ ಬೆಳಕು ಚೆಲ್ಲಿದರು. ಅವರ ವಿಚಾರಗಳಿಂದ ಜಾನ್ ಫಿಸ್ಕೆ ಹಾಗೂ ಕಾಕ್ಸ್ ಆಕರ್ಷಿತರಾದರು ಆರ್ಯ ಪರಂಪರೆಯ ಪುರಾಣಗಳು ಕತೆಗಳು, ಐತಿಹ್ಯಗಳು, ವೀರರು—ಈ ಮುಂತಾದ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ತೌಲನಿಕ ಭಾಷಾಶಾಸ್ತ್ರ ಹಾಗೂ ವೈದಿಕ ಸಂಸ್ಕೃತಿಯ ಸಮರ್ಪಕ ಅಧ್ಯಯನದಿಂದ ಮಾತ್ರ ಸಾಧ್ಯ ಎಂದು ಸಾರಿದರು (ಡಾರ್ಸನ್ : 1972 : 59).

ಜನಪದ ಕಥೆಗಳು ಸ್ವೀಕರಣದಿಂದ ಬಂದವು ಎಂಬುದನ್ನು ತೌಲನಿಕ ಪುರಾಣ ವಾದಿಗಳು ಒಪ್ಪುವುದಿಲ್ಲ. ಪ್ರಾಚೀನ ಇಂಡೊಯುರೋಪಿಯನ್ ಮೂಲದಿಂದ ಆರ್ಯರು ಚದುರಿಹೋಗುವ ಮೊದಲೇ ಇಟಲಿ, ನಾರ್ವೆ ಮತ್ತು ಭಾರತಗಳಲ್ಲಿ ಪ್ರಚಲಿತವಾಗಿರುವ ಕತೆಗಳು ಅವರಲ್ಲಿದ್ದವು ಎಂದು ಸರ್ ಜಾರ್ಜ್ ಕಾಕ್ಸ್ ವಾದಿಸಿದ್ದಾರೆ. ಆದರೆ ಈ ಪಂಥದವರಿಗೆ ಲಭ್ಯವಾಗುವ ನಿದರ್ಶನಗಳು ಅತ್ಯಲ್ಪ ವಾದವು. ನಿಜವಾಗಿಯೂ ಪುರಾಣ ಮೂಲದಿಂದ ಹರಿದುಬಂದ ಕತೆಗಳು ಬೆರಳೆಣಿಕೆಯವು. ಇಂಥ ಕೆಲವು ಕಥೆಗಳನ್ನು ಕ್ರಾಪ್ಪೆ ಪಟ್ಟಿಮಾಡಿದ್ದಾರೆ (ಕ್ರಾಪ್ಪೆ : 1965 : 4–5).

ಒಂದು ಶತಮಾನಕಾಲ ಉಸಿರಾಡುತ್ತಿದ್ದ ಈ ಸಿದ್ಧಾಂತ ಹತ್ತೊಂಬತ್ತನೆಯ ಶತಮಾನದ ಕೊನೆಯ ಹೊತ್ತಿಗೆ ಹಿಂದೆ ಸರಿಯತೊಡಗಿತು[2]. ಈ ಅವಧಿಯಲ್ಲಿ

2 ಈ ಕೆಳಗೆ ಕಾಣಿಸಿದ ಕಾರಣಗಳು ಪುರಾಣ ಮೂಲ ಸಿದ್ಧಾಂತ ಸೋಲುವಂತೆ ಮಾಡಿದವು:

೧. ಗ್ರಿಮ್ಮರಿಗಾಗಲಿ ಅವರ ಸಮರ್ಥಕರಿಗಾಗಲಿ ಆರ್ಯೇತರರ ಪರಿಚಯವಿರಲಿಲ್ಲ.
೨. 'ಕತೆಗಳು ಪುರಾಣಗಳ ಉಳಿಕೆಗಳು'—ಈ ಹೇಳಿಕೆಯನ್ನು ಯಾರೂ ಸಮರ್ಥವಾಗಿ ಪ್ರತಿಪಾದಿಸಲಿಲ್ಲ.
೩. ಪುರಾಣಗಳನ್ನು ಹೋಲುವ ಕತೆಗಳನ್ನು ಬಿಟ್ಟರೆ ಉಳಿದ ಕಥಾರೂಪಗಳಿಗೆ ಈ ಸಿದ್ಧಾಂತ ಅನ್ವಯವಾಗುವುದಿಲ್ಲ.
೪. ಈ ಪಂಥದವರಿಗೆ ಪುರಾಣ ಕತೆಗಳ ಹೊರತಾಗಿ ಉಳಿದ ಕಥಾರೂಪಗಳ ಪರಿಚಯವೇ ಇರಲಿಲ್ಲ.

ಭಾರತೀಯ ಪ್ರಾಚೀನ ಸಾಹಿತ್ಯದ ಬಗೆಗೆ ಯುರೋಪಿನ ವಿದ್ವಾಂಸರಲ್ಲಿ ಉಂಟಾದ ಆಸಕ್ತಿಯ ಫಲವಾಗಿ ಅವರ ಒಲವು ವೈದಿಕ ಸಾಹಿತ್ಯದ ಕಡೆಯಿಂದ ಲೌಕಿಕ ಸಾಹಿತ್ಯಕ್ಕೂ ಹರಿಯಿತು.

ಭಾರತೀಯ ಮೂಲ ಸಿದ್ಧಾಂತ : ಹತ್ತೊಂಬತ್ತನೆಯ ಶತಮಾನದ ಮಧ್ಯ ಭಾಗದಲ್ಲಿ ಯುರೋಪಿನಲ್ಲಿ ಪೌರಾಣಿಕ ಮೂಲ ಸಿದ್ಧಾಂತ ಸಾಕಷ್ಟು ನಿಶ್ಚಿತವಾಗಿ ನೆಲೆ ಕಂಡುಕೊಳ್ಳುತ್ತಿದ್ದ ಸಂದರ್ಭದಲ್ಲಿ ಮ್ಯಾಕ್ಸ್‌ಮುಲ್ಲರ್ ಕಟ್ಟುಗಳು ಚಿಂತನಶೀಲ ವಿದ್ವಾಂಸರ ಚರ್ಚೆಗೆ ಗ್ರಾಸ ಒದಗಿಸಿದವು. ಮ್ಯಾಕ್ಸ್‌ಮುಲ್ಲರ್ ವಿಚಾರಗಳಿಂದ ಸ್ಫೂರ್ತಿಪಡೆದ ಥಿಯೋಡರ್ ಬೆನ್ಫೆ 'ಪಂಚತಂತ್ರ'ದ ಅನುವಾದ ಕಾರ್ಯದಲ್ಲಿ ತೊಡಗಿದರು. ಆ ಸಂದರ್ಭದಲ್ಲಿ ಎಲ್. ಡಿ. ಥಾಂಪ್ಸ್ ಅವರ ಹೇಳಿಕೆಯೊಂದು ಅವರ ಗಮನ ಸೆಳೆಯಿತು : 'ಯುರೋಪಿಯನ್ ಕತೆಗಳ ಮೂಲಗಳು ಭಾರತದಲ್ಲಿರ ಬಹುದು' ಎಂದು ಥಾಂಪ್ಸ್ ಹೇಳಿದ್ದರು. ಈ ಎಳೆಯ ಆಧಾರದ ಮೇಲೆ ಬೆನ್ಫೆ 1858ರಲ್ಲಿ 'ಪಂಚತಂತ್ರ'ಕ್ಕೆ ಬರೆದ ಬಹು ವಿಸ್ತಾರವಾದ ಹಾಗೂ ಸಮಗ್ರ ಹಿನ್ನೆಲೆಯ ಪ್ರಸ್ತಾವನೆಯಲ್ಲಿ ಸಂಸ್ಕೃತ ಮತ್ತು ಯುರೋಪಿಯನ್ ಕತೆಗಳ ನಡುವಿನ ಸಾಮ್ಯತೆಯ ಕಡೆಗೆ ಗಮನಸೆಳೆದರು. ಅಷ್ಟೇ ಅಲ್ಲ; ಸಾಂಸ್ಕೃತಿಕ ಐತಿಹಾಸಿಕ ಸಂಬಂಧಗಳಿಂದ ಕತೆಗಳ ಸ್ವೀಕರಣ (borrowing) ನಡೆದಿರಬೇಕು ಎಂದೂ ಅಭಿಪ್ರಾಯಪಟ್ಟರು. ಯುದ್ಧಗಳು ಮತ್ತು ವಿಜಯೋತ್ಸವಗಳಿಂದ ವಲಸೆ ಸಂಭವಿಸಿ ಕೊಳುಕೊಡುಗೆಗಳಿಗೆ ದಾರಿಯಾಯಿತು ಎಂದು ತಮ್ಮ ಮಾತನ್ನು ಸಮರ್ಥಿಸಿಕೊಂಡರು. ಎಲ್ಲಕ್ಕಿಂತ ಮುಖ್ಯವಾಗಿ ಯುರೋಪಿಯನ್ನರು ತಮ್ಮ ಸೃಜನಶೀಲ ಚಟುವಟಿಕೆಗೆ ಪ್ರಾಚೀನ ಭಾರತದಿಂದ ಸಾಮಗ್ರಿಯನ್ನು ಪಡೆದರು ಎಂದು ಬೆನ್ಫೆ ವಾದಿಸಿದರು (ಸೊಕೊಲೊವ್ : 1950 : 79). ಕಥೆಗಳಲ್ಲಿ ಕೇವಲ ವಸ್ತು ಸಾಮ್ಯವನ್ನಷ್ಟೇ ಬೆನ್ಫೆ ಗುರುತಿಸಲಿಲ್ಲ. ಅವುಗಳ ಭೌಗೋಳಿಕ ಸಂಚಾರ ಹಾಗೂ ಕೆಲಮಟ್ಟಿಗೆ ಕತೆಗಳ ಇತಿಹಾಸ ಮತ್ತು ಆಶಯಗಳ ಸಾಮ್ಯತೆಯನ್ನೂ ಅವರು ಗುರುತಿಸಿದರು. ಬೆನ್ಫೆ ಪ್ರಕಾರ, ಅಂಥ ಕಥೆಗಳು ಭಾರತದಿಂದ ಮೆಡಿಟರೇನಿಯನ್ ಸಮುದ್ರದವರೆಗೆ ಇನ್ನೂ ಪಶ್ಚಿಮಕ್ಕೆ ಎಂದರೆ ಸ್ಪೇನ್, ಗ್ರೀಸ್ ಹಾಗೂ ಯುರೋಪಿಗೆ ಪ್ರವಾಸ ಕೈಗೊಂಡಿವೆ.

ಬೆನ್ಫೆ ಅಭಿಪ್ರಾಯದಲ್ಲಿ ಜನಪದ ಕಥೆಗಳು ಮೂರು ಮೂಲಗಳಿಂದ ಪ್ರಸರಣಗೊಂಡಿವೆ :

೧. ಹತ್ತನೆಯ ಶತಮಾನಕ್ಕೆ ಮೊದಲು ಮೌಖಿಕ ಪರಂಪರೆಯ ಮೂಲದಿಂದ.
೨. ಹತ್ತನೆಯ ಶತಮಾನದ ಈಚೆಗೆ ಇಸ್ಲಾಮಿಕ್ ಪ್ರಭಾವದಿಂದ.
೩. ಬೌದ್ಧ ಸಾಹಿತ್ಯ ಮೂಲದಿಂದ, ಟಿಬೆಟ್, ಚೀನಾ ಮೂಲದಿಂದ ಅಥವಾ ಮಂಗೋಲಿಯನ್ ಮೂಲದಿಂದ.

—ಹೀಗೆ ಪ್ರವಾಸಿಗರು, ವ್ಯಾಪಾರಿಗಳು, ಧರ್ಮ ಪ್ರಸಾರಕರು ಹಾಗೂ

ದಂಡಯಾತ್ರೆಗಳಿಂದ ಭಾರತದ ಕತೆಗಳು ಬೇರೆ ಬೇರೆ ಕಡೆಗೆ ಹರಡಿವೆ ಎಂದು ಬೆನ್ಫೆ ಪ್ರತಿಪಾದಿಸಿದರು. ಸಮಕಾಲೀನ ವಿದ್ವಾಂಸರ ದ್ವಿಕಾಲಿಕ ಅಧ್ಯಯನದ ಫಲವನ್ನು ಗುರುತಿಸಿದ ಅವರು ದ್ವಿಕಾಲಿಕ ಅಧ್ಯಯನಕ್ಕೆ ಸಾಕಷ್ಟು ಒತ್ತುನೀಡಿದರು. ಯುರೋಪಿನ ಎಲ್ಲ ಕಥಾರೂಪಗಳನ್ನು ಮೂಲಭೂತವಾದ ಅಣುವಿಗೆ ಮಿತಿಗೊಳಿಸಿ ಅಲ್ಲಿಂದ ಬೇರೆ ಬೇರೆ ದೇಶ, ಖಂಡಗಳಿಗೆ ವಾಂಶಿಕವಾಗಿ ಸಂಬಂಧವಿಲ್ಲದ ಆದರೆ ಚಾರಿತ್ರಿಕವಾಗಿ ಸಂಬಂಧಹೊಂದಿರುವ ದೇಶ, ಖಂಡಗಳಿಗೆ ಕತೆಗಳು ಪ್ರಸಾರ ಕೈಕೊಂಡಿವೆ ಎಂದು ಹೇಳಿದರು. ಈ ಅಣುವಿನ ಆಕರ, ಬೆನ್ಫೆ ಪ್ರಕಾರ, ಭಾರತ. ವಾಂಶಿಕವಾಗಿ ಸಂಬಂಧ ಸಾಧಿಸದ ಸಂಸ್ಕೃತಿಯೊಂದರಿಂದ ಮತ್ತೊಂದು ಸಂಸ್ಕೃತಿಗೆ ಕತೆಗಳು ಪ್ರಸರಣ ಕೈಕೊಂಡಿವೆ ಎಂಬ ಅವರ ವಾದ ಸೈದ್ಧಾಂತಿಕ ಮುನ್ನಡೆಯನ್ನು ದಾಖಲಿಸಿತು. ಇದು ಏಕಮೂಲವಾದಕ್ಕಿಂತ ಬಹು ಮೂಲವಾದ ಕಲ್ಪನೆಗೆ ಹತ್ತಿರವಾದುದು.

ಬೆನ್ಫೆ ಸಿದ್ಧಾಂತವನ್ನು ಪ್ರಬಲವಾಗಿ ಸಮರ್ಥಿಸಿದ ರೀನ್‌ಹೋಲ್ಡ್ ಕೋಹ್ಲರ್ ಬೆನ್ಫೆಯವರ ಎಲ್ಲ ವಿಚಾರಗಳನ್ನೂ ಒಪ್ಪಿಕೊಳ್ಳಲಿಲ್ಲ. ಅವರು ಭಾರತವೇ ಎಲ್ಲ ಕತೆಗಳಿಗೂ ಉಗಮಸ್ಥಾನವಲ್ಲ; ಯುರೋಪಿನ ಕತೆಗಳ ವಿಷಯದಲ್ಲಿ ಭಾರತದ ಪಾತ್ರ ಮಹತ್ವದ್ದಾದರೂ ಅದನ್ನು ಬೆನ್ಫೆ ಬಹುವಾಗಿ ಉತ್ಪ್ರೇಕ್ಷಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿರುವುದು ಗಮನಾರ್ಹ. ಇದೇ ರೀತಿಯಾಗಿ ಮತ್ತೊಬ್ಬ ಸಮರ್ಥಕ ಎಮ್ಯಾನುಯಲ್ ಕಾಸ್ಕ್ವಿನ್ ಬೆನ್ಫೆ ವಾದದ ಹಿನ್ನೆಲೆಯಲ್ಲಿ ಕಥೆಗಳನ್ನು ಅಭ್ಯಸಿಸಿ ಎರಡು ಅಭಿಪ್ರಾಯಗಳಿಗೆ ಬಂದರು:

೧. ಯುರೋಪಿನ ಕತೆಗಳಿಗೆ ಮಂಗೋಲಿಯನ್ನರು ಪ್ರೇರಕರು.

೨. ಈಜಿಪ್ಟಿನ ಕತೆಗಳು ಭಾರತದ ಕತೆಗಳಿಗಿಂತ ಹಳೆಯವು.

ಬೆನ್ಫೆಗೆ ಸಮರ್ಥಕರಿದ್ದಂತೆಯೇ ವಿರೋಧಿಗಳೂ ಇದ್ದರು. ಖಚಿತತೆಯ ಅಭಾವ ಹಾಗೂ ಕಲ್ಪನೆಗೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದಕ್ಕಾಗಿ ಜೋಸೆಫ್ ಬೇಡಿಯರ್ ಬೆನ್ಫೆ ಸಿದ್ಧಾಂತವನ್ನು ಬಹು ಕಟುವಾಗಿ ಟೀಕಿಸಿದರು. ಇನ್ನೊಬ್ಬ ವಿರೋಧಿ ಆಂಡ್ರ್ಯೂ ಲ್ಯಾಂಗ್ ಭಾರತೀಯ ಮೂಲವಾದವನ್ನೇ ಅಲ್ಲಗಳೆದರು. ತಮ್ಮ ಅಭಿಪ್ರಾಯವನ್ನು ದೃಢೀಕರಿಸಲು ಅವರು ಪ್ರತ್ಯೇಕ ಮೂಲಗಳ ಕಡೆಗೆ ಬೊಟ್ಟು ಮಾಡಿ ತೋರಿಸಿದರು. ಈಜಿಪ್ಟಿನ ಕತೆಗಳು, ಹಿರಡೋಟಸ್ ಹಾಗೂ ಹೋಮರರಲ್ಲಿ ಪ್ರಸ್ತಾಪವಾಗಿರುವ ಕತೆಗಳನ್ನೇ ಆಧಾರ ಒದಗಿಸಿದರು

ಹೀಗೆ ಪ್ರಬಲ ಟೀಕೆಗೊಳಗಾದ ಬೆನ್ಫೆ ಸಿದ್ಧಾಂತ ಬಹುಬೇಗ ಸೋತು ಹೋಯಿತು. ಇದಕ್ಕೆ ಕಾರಣಗಳು ಅನೇಕ. ಇಂಡೊ ಯುರೋಪಿಯನ್ ಪಂಥದವರಿಗಿದ್ದ ಕೆಲವು ತೊಡಕುಗಳು ಬೆನ್ಫೆಯ ಕಾಲದಲ್ಲೂ ಇದ್ದವು. ಬೆನ್ಫೆಯವರಿಗೂ ಜನಪದ ಕತೆಗಳ ಸ್ವರೂಪದ ಸ್ಪಷ್ಟ ತಿಳುವಳಿಕೆ ಇರಲಿಲ್ಲ. ಅವರ ಕಾಲಕ್ಕೂ ಕತೆಗಳ ವರ್ಗೀಕರಣ ಕೆಲಸ ಸಮರ್ಪಕವಾಗಿ ನಡೆದಿರಲಿಲ್ಲ. ಇದರಿಂದಾಗಿ ಯುರೋಪಿನ

ವಾಕ್ಪರಂಪರೆಯ ಪರಿಚಯ ಬೆನ್ಫೆಗೆ ಸರಿಯಾಗಿ ಆಗಲೇ ಇಲ್ಲ. ಅವರು ತಮ್ಮ ಸಿದ್ಧಾಂತವನ್ನು ಪಂಚತಂತ್ರದಂತಹ ಗ್ರಂಥಸ್ಥ ಮೂಲವನ್ನು ಆಧರಿಸಿ ಮಂಡಿಸಿದರು. ಆದರಿಂದ ಅವರಿಗೆ ಗ್ರಂಥಸ್ಥ ಮೂಲದ ಕತೆಗಳ ಪ್ರಸರಣ ಮಾರ್ಗವನ್ನು ಗುರುತಿಸಲು ಸಾಧ್ಯವಾಯಿತು. ಆದರೆ ಅದು ಮೌಖಿಕ ಕತೆಗಳ ಪ್ರಸರಣಕ್ಕಿಂತ ಬೇರೆ ರೀತಿಯದು. ಅಲ್ಲದೆ ಆರ್ನೆ–ಥಾಂಸನ್ನರ ವರ್ಗಸೂಚಿಯಲ್ಲಿ ಪಂಚತಂತ್ರದ ಕತೆಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದಿರುವುದೂ ಯೂರೋಪ್‌ಮೂಲದ ಕತೆಗಳು ದೊಡ್ಡ ಸಂಖ್ಯೆಯಲ್ಲಿ ಇರುವುದೂ ಗಮನಾರ್ಹ. ಇದು ಭಾರತವೇ ಎಲ್ಲ ಕತೆಗಳ ಉಗಮಸ್ಥಾನ ಎಂಬುದನ್ನು ನಿರಾಕರಿಸುತ್ತದೆ. ಆದರೂ ಬೆನ್ಫೆಯ ಕ್ರಮದಲ್ಲಿ ಅನೇಕರು ಕತೆಗಳ ತೌಲನಿಕ ಅಧ್ಯಯನ ನಡೆಸಿದರು. ಇದರಿಂದಾಗಿ ದೊಡ್ಡ ಸಂಖ್ಯೆಯಲ್ಲಿ ಸಮಾನ ಕತೆಗಳನ್ನು ಶೇಖರಿಸಿದಂತಾಯಿತು. ಭಾರತೀಯ ಕಥಾಪರಂಪರೆ ನಿಸ್ಸಂಶಯವಾಗಿಯೂ ಪಾಶ್ಚಾತ್ಯ ಕಥೆಗಳ ಮೇಲೆ ಪ್ರಭಾವ ಬೀರಿದೆ. ಮಧ್ಯಯುಗದ ಅನಂತರವಂತೂ ಕತೆಗಳ ಸತತ ಕೊಳುಕೊಡುಗೆ ನಡೆದದ್ದಕ್ಕೆ ಆಧಾರಗಳಿವೆ. ಐರ್ಲೆಂಡಿನಿಂದ ಭಾರತದವರೆಗಿನ ದೇಶಗಳಲ್ಲಿ ಕಥನ ಆಶಯ ಮತ್ತು ಸಂವಿಧಾನಗಳ ಸಾಮ್ಯಕ್ಕೆ ಈ ಗ್ರಾಂಥಿಕ ಪ್ರಸರಣದ ಮೂಲಕವಾದ ಸ್ವೀಕರಣ ಮುಖ್ಯ ಕಾರಣ ಎಂಬುದನ್ನು ಈ ಪಂಥದಿಂದ ತಿಳಿಯಬಹುದು[3]. ಕೆಲವಾದರೂ ಕತೆಗಳ ಸಾಮ್ಯಕ್ಕೆ ಸ್ವೀಕರಣವೇ ಕಾರಣ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಬೆನ್ಫೆ ತಿಳಿದಂತೆ, ಭಾರತವೇ ಎಲ್ಲ ಕತೆಗಳ ತವರು ಎಂಬುದನ್ನು ಇಂದು ವಿದ್ವಾಂಸರು ಒಪ್ಪಿಕೊಳ್ಳದಿದ್ದರೂ ಕತೆಗಳ ಉಗಮಕ್ಕೆ ಕಾರಣವಾದ ಅನೇಕ ದೇಶಗಳಲ್ಲಿ ಭಾರತವೂ ಮುಖ್ಯವಾದುದು (ಸ್ಟಿತ್ ಥಾಂಸನ್ : 1951 : 379)

ಏನೇ ಇರಲಿ, ಭಾರತೀಯ ಮೂಲಸಿದ್ಧಾಂತ, ೧೯ನೆಯ ಶತಮಾನದ ಕಡೆಯ ದಶಕಗಳು ಮತ್ತು ೨೦ನೆಯ ಶತಮಾನದ ಆರಂಭದ ದಶಕಗಳಲ್ಲಿ ಹೆಚ್ಚು ಜನಪ್ರಿಯವಾಗಿತ್ತು. ಮೊದಲ ಘಟ್ಟದಲ್ಲಿ ಅದು ಮ್ಯಾಕ್ಸ್‌ಮುಲ್ಲರ್ ಅವರ ಚಾರಿತ್ರಿಕ ಪುನರ್ರಚನಾ ವೈಧಾನಿಕತೆಗೆ ಸಮರ್ಥನೆ ಒದಗಿಸಿತು. ಅದರೊಂದಿಗೆ ವಾಂಶಿಕವಾಗಿ ಸಂಬಂಧವಿರದ ಸಂಸ್ಕೃತಿಗಳಲ್ಲಿ ಕತೆಗಳ ಪ್ರಸರಣ ಸಾಧ್ಯ ಎಂಬ ಮತ್ತೊಂದು ಸೈದ್ಧಾಂತಿಕ ಹಾಗೂ ವೈಧಾನಿಕ ಗುರಾಣಿಯನ್ನು ಒದಗಿಸಿತು. ಅದು, ಫಿನ್ನರಿಗೆ, ಕತೆಗಳ ಮೂಲ, ಅದರ ಜೀವನ ಚರಿತ್ರೆ ಹಾಗೂ ಅದು ಹಾದುಹೋದ ಮಾರ್ಗಗಳನ್ನು ಗುರುತಿಸುವ ಪ್ರಯಾಸಕರ ಕೆಲಸ ಕೈಕೊಳ್ಳಲು ಪ್ರೇರಣೆ ನೀಡಿತು. ಆಮೇಲೆ ಅದು ಚಾರಿತ್ರಿಕ–ಭೌಗೋಳಿಕ ವಿಧಾನದ ಹುಟ್ಟಿಗೆ ಕಾರಣವಾಯಿತು.

ಮಾನವಶಾಸ್ತ್ರೀಯ ಸಿದ್ಧಾಂತ : ಮ್ಯಾಕ್ಸ್‌ಮುಲ್ಲರ್ ಚಿಂತನೆ ಹಾಗೂ ಪುರಾಣ ಸಂಬಂಧವಾದ ಸೈದ್ಧಾಂತಿಕ ಚರ್ಚೆ ಜನಪ್ರಿಯವಾಗಿದ್ದ ಸಂದರ್ಭದಲ್ಲಿ

---

3. Encyclopaedia Britannica, Vol. 9 p. 447

ಯುರೋಪ್ ಔದ್ಯೋಗಿಕವಾದ ಬದಲಾವಣೆಗೆ ಗುರಿಯಾಗಿತ್ತು. ಈ ಬದಲಾವಣೆ ಯುರೋಪಿಯನ್ ಚಿಂತನೆಗಳ ಮೇಲೂ ನಿಧಾನಗತಿಯಲ್ಲಿ ಪರಿಣಾಮ ಬೀರಿತು. ಈ ಬದಲಾವಣೆಯಿಂದ ಪ್ರೇರೇಪಿತರಾಗಿ ಮಾನವಿಕ ಕ್ಷೇತ್ರದ ಅಧ್ಯಯನಕಾರರು ಹತ್ತಿರದ ಹಾಗೂ ದೂರದ ನಾಡುಗಳಿಂದ ವಲಸೆಬಂದ ಜನ, ಅವರ ಸ್ಥಿತಿಗತಿ, ಅವರ ಜೀವನವಿಧಾನಗಳನ್ನು ಅಭ್ಯಸಿಸಲು ವ್ಯಾಪಕ ಪ್ರವಾಸ ಕೈಕೊಂಡರು. ಫಲವಾಗಿ ವಿಭಿನ್ನ ನೆಲದ ಜನರ ಮೌಖಿಕ ಪರಂಪರೆಗಳ ಎದ್ದು ಕಾಣುವ ಸಾಮ್ಯಗಳನ್ನು ಕಂಡು ಹಿಡಿಯಲು ಸಾಧ್ಯವಾಯಿತು. ವಾಸ್ತವವಾಗಿ ಈ ಹೋಲಿಕೆಗಳನ್ನು ವಿಭಿನ್ನ ಜನರ ವಾಂಶಿಕ ಸಂಬಂಧಗಳ ಹಿನ್ನೆಲೆಯಲ್ಲಿ ವಿವರಿಸಲಾಗಲಿ ಪತ್ತೆ ಮಾಡಲಾಗಲಿ ಆಗುವುದಿಲ್ಲ. ಸಮಕಾಲೀನ ಯುರೋಪಿಯನ್ ಚಿಂತನೆಯ ಫಲವಿದು. ಟೈಲರ್ ಮತ್ತು ಆಂಡ್ರ್ಯೂ ಲ್ಯಾಂಗ್ ಈ ವಿಚಿತ್ರ ಸಂಗತಿಯನ್ನು ಬಹುಮೂಲವಾದದ ನೆಲೆ ಯಿಂದ ವಿವರಿಸಲು ಯತ್ನಿಸಿದರು. ಸಾಂಸ್ಕೃತಿಕ ಕೌಶಲವೊಂದು ಎರಡಕ್ಕಿಂತ ಹೆಚ್ಚು ಸಂಬಂಧವಿಲ್ಲದ ಸ್ಥಳಗಳಿಂದ ಸ್ವತಂತ್ರವಾಗಿ ಉಗಮಿಸಿರಬಹುದು ಮತ್ತು ಅದದೇ ಸಂದರ್ಭದಲ್ಲಿ ಆದರೆ ಸದೃಶ ಸನ್ನಿವೇಶಗಳಲ್ಲಿ ಸ್ವತಂತ್ರವಾಗಿ ಉಗಮಿಸಿರಬಹುದು ಎಂಬುದು ಅವರ ತಿಳಿವಳಿಕೆಯಾಗಿತ್ತು. ಈ ಕಲ್ಪನೆ, ನಿಜವಾಗಿಯೂ, ಮಾನವ ಮನಸ್ಸು ಮತ್ತು ಮಾನವ ನಡವಳಿಕೆಯ ಸಾರ್ವತ್ರಿಕತೆಯ ಅಸ್ತಿತ್ವವನ್ನು ವಿದ್ವಾಂಸರು ಮನಗಂಡಿದ್ದಾರೆಂಬ ಸಂಗತಿಯನ್ನಾಧರಿಸಿದೆ. ಇದರೊಂದಿಗೆ ಟೈಲರ್ ತಾವು ಸಂಗ್ರಹಿಸಿದ ಸಾಮಗ್ರಿಯ ಮೂಲಕ ಮಾನವ ಸ್ವಭಾವ, ಮನಸ್ಸು, ಆಲೋಚನೆ ಹಾಗೂ ಮಾನವ ಸಂಸ್ಕೃತಿಗಳ ವಿಕಾಸದ ದಾರಿಗಳ ಅನನ್ಯತೆಯನ್ನು ಗುರುತಿಸುವ ಪ್ರಯತ್ನ ಮಾಡಿದರು.

ಜನಪದ ಕತೆಗಳಲ್ಲಿ ಎದ್ದು ಕಾಣುವ ಸಾಮ್ಯತೆಗೆ ಅಸಂಗತ ಅಂಶಗಳಿಗೆ ಮಾನವಶಾಸ್ತ್ರೀಯ ಕಾರಣಗಳನ್ನು ಕೊಡುವ ಈ ಪಂಥ ಮಾನವಶಾಸ್ತ್ರದಿಂದ ಪ್ರಭಾವಿತವಾಯಿತು. ಆಂಡ್ರ್ಯೂ ಲ್ಯಾಂಗ್ ಈ ಪಂಥದ ನೇತಾರರು. ಆದಿಮಾನವ ಸಂಸ್ಕೃತಿಯ ಪುನರ್ರಚನೆ ಕುರಿತು ಇ. ಬಿ ಟೈಲರ್ ವ್ಯಕ್ತಪಡಿಸಿದ ಅಭಿಪ್ರಾಯ ಗಳನ್ನಾಧರಿಸಿ ಲ್ಯಾಂಗ್ ಕತೆ, ಪುರಾಣಗಳ ವಿಶ್ಲೇಷಣೆ ನಡೆಸಿದರು. ಮಾನವ ಶಾಸ್ತ್ರೀಯ ಧೋರಣೆಯಿಂದಲೇ ಲ್ಯಾಂಗ್ ಅವರು ಕತೆಗಳ ಬಗೆಗೆ ಪ್ರಚಲಿತವಿದ್ದ ಇಂಡೊ–ಯುರೋಪಿಯನ್ ಹಾಗೂ ಭಾರತೀಯ ಮೂಲ ಸಿದ್ಧಾಂತಗಳನ್ನು ಸಕಾರಣವಾಗಿ ಪ್ರಬಲವಾಗಿ ವಿರೋಧಿಸಿದರು. ಲ್ಯಾಂಗ್ ಪ್ರಕಾರ, ಕತೆಗಳು ಪ್ರಾಚೀನ ಕಾಲದ ಉಳಿಕೆಗಳು. ಕತೆಗಳಲ್ಲಿರುವ ಅನೇಕ ಪ್ರಾಚೀನ ನಂಬಿಕೆಗಳೇ ಅದಕ್ಕೆ ಆಧಾರ. ಮಾನವನ ಸಾಂಸ್ಕೃತಿಕ ಚರಿತ್ರೆಯ ಬಹುಕೆಳಗಿನ ಹಂತದಲ್ಲಿ ಪ್ರಚಲಿತವಿದ್ದ ಕೆಲವು ಅನಾಗರಿಕ ನಂಬಿಕೆಗಳಾದ ನರಭಕ್ಷಕತನ, ಕುಲದೇವತಾ ಪದ್ಧತಿ, ರೂಪಾಂತರಗಳನ್ನು ಕತೆಗಳು ಒಳಗೊಂಡಿವೆ. ಈ ಅಂಶಗಳು ಇಂದಿನ ಆದಿವಾಸಿ ಸಮೂಹದಲ್ಲಿ ಯಥಾವತ್ತಾಗಿ ಉಳಿದು ಬಂದಿವೆ. ನಾಗರಿಕ ಸಮಾಜದಲ್ಲಿ

ಅವು ಮರೆಯಾಗಿರುವುದರಿಂದ ಕತೆಗಳು ಅಸಂಗತ ಅಂಶಗಳ ಕಂತೆಗಳಾಗಿ ಕಾಣುತ್ತವೆ. ಆದಿವಾಸಿ ಜೀವನದ ಅಧ್ಯಯನದಿಂದ ಕತೆಗಳ ಈ ಅಸಂಗತತೆಗಳನ್ನು ಅರ್ಥೈಸಲು ಸಾಧ್ಯ—ಇದು ಆಂಡ್ರ್ಯೂ ಲ್ಯಾಂಗ್ ವಿಚಾರಧಾರೆ.

ಮನುಷ್ಯರೆಲ್ಲ ಹೇಗೆ ಸಮಾನ ಸಾಂಸ್ಕೃತಿಕ ಸ್ತರಗಳ ನೇರ ವಿಕಾಸದಲ್ಲಿ ಹಾದು ಬಂದಿದ್ದಾರೆ ಎಂಬುದನ್ನು ಪ್ರತಿಪಾದಿಸಲು ಆಂಡ್ರ್ಯೂ ಲ್ಯಾಂಗ್ ನೀಡಿರುವ ಸಮರ್ಥನೆ ಗಮನಾರ್ಹವಾದುದು. ಅವರ ಪ್ರಕಾರ ಕತೆಗಳು ಪುರಾಣಗಳಿಗಿಂತ ಹಳೆಯವು. ಪುರಾಣಗಳು ಇತ್ತೀಚಿನ ಸೃಷ್ಟಿಗಳು. ಪುರಾಣಗಳಲ್ಲಿ ಇಲ್ಲದ ಅನೇಕ ಅನಾಗರಿಕ ಅಂಶಗಳು ಕತೆಗಳಲ್ಲಿವೆ. ಅಲ್ಲದೆ ನಾಗರಿಕತೆಯೊಡನೆ ಕತೆಗಳಲ್ಲಿ ವ್ಯಕ್ತಗೊಳ್ಳುವ ಸಂಸ್ಕೃತಿಯೂ ಬದಲಾಗುತ್ತದೆ. ಯುರೋಪಿನ ಕಟ್ಟುಕತೆಗಳಲ್ಲಿ ಇರುವುದಕ್ಕಿಂತ ಹೆಚ್ಚಿನ ಪ್ರಾಣಿ ಪಾತ್ರಗಳು ಬುಶ್‌ಮನ್, ಜುಲೂಗಳ ಕತೆಗಳಲ್ಲೂ ಇವೆ. ಇದು ಕತೆಗಳು ಅನಾಗರಿಕತೆಯಿಂದ ನಾಗರಿಕತೆಯತ್ತ ಸಂಸ್ಕಾರಗೊಳ್ಳುತ್ತಾ ಬಂದಿವೆ ಎನ್ನಲು ಆಧಾರ (ಸ್ಟಿಥ್‌ಥಾಂಸನ್ : 1951 : 380).

ಆಂಡ್ರ್ಯೂ ಲ್ಯಾಂಗ್ ಅವರ ನಿಲುವನ್ನು ಸಮರ್ಥಿಸುವ ಅಭಿಪ್ರಾಯಗಳು ಅನಂತರವೂ ಕಾಣಿಸಿಕೊಂಡದ್ದುಂಟು. ಜೆ. ಜಿ. ಫ್ರೇಜರ್ ಅವರು ಆದಿವಾಸಿಗಳಲ್ಲಿ ಪ್ರಚಲಿತವಿರುವ ಅನೇಕಾನೇಕ ನಂಬಿಕೆ ಸಂಪ್ರದಾಯಾಚರಣೆಗಳ ಬಗೆಗಿನ ಸಾಮಗ್ರಿಯನ್ನು ಸಂಗ್ರಹಿಸಿ ಅಮೆರಿಕನ್ ಇಂಡಿಯನ್, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ರಾಷ್ಟ್ರಗಳಲ್ಲಿನ ಕಥನ ಆಶಯ, ಆಚರಣೆ, ನಂಬಿಕೆಗಳಲ್ಲಿರುವ ಸಾಮ್ಯವನ್ನು ತೋರಿಸಿ ಎಲ್ಲ ಮನುಷ್ಯರೂ ಸಮಾನರೀತಿಯ ಸಾಂಸ್ಕೃತಿಕ ಸ್ತರಗಳ ನೇರ ವಿಕಾಸದಲ್ಲಿ ಹಾದು ಬಂದಿದ್ದಾರೆ. ಆದುದರಿಂದ ಅವರ ಅಭಿವ್ಯಕ್ತಿಗಳು ಒಂದೇ ತೆರನಾಗಿವೆ ಎಂದು ಹೇಳಿದರು. ಜೆ. ಎ. ಮ್ಯಾಕಾಲಕ್ ಮತ್ತು ಜಿ. ಎಲ್. ಗೊಮ್ಮೆ ಇದನ್ನು ಅನುಮೋದಿಸಿದರು. ಆದರೆ ಈ ಸಿದ್ಧಾಂತ ಸರಳ ಜ್ಞಾನವನ್ನೂ ಪ್ರದರ್ಶಿಸಲಿಲ್ಲ: ಪ್ರತಿಯೊಂದು ಜನ ಸಮೂಹದ ಸಂಸ್ಕೃತಿಯೂ ಐತಿಹಾಸಿಕ ಬೆಳವಣಿಗೆಯ ಫಲ. ಅದು ಆಂತರಿಕ ಹಾಗೂ ಬಾಹ್ಯ ಪ್ರಭಾವಗಳಿಗೆ ಈಡಾಗುತ್ತದೆ ಮತ್ತು ಅನೇಕ ಸಾಂಸ್ಕೃತಿಕ ಅಂಶಗಳು ಪ್ರದೇಶದಿಂದ ಪ್ರದೇಶಕ್ಕೆ ವಲಸೆ ಹೋಗುತ್ತವೆ ಎಂಬ ಅಂಶಗಳನ್ನು ಕಡೆಗಣಿಸಿದ್ದು ತಪ್ಪು (ಸ್ಟಿಥ್‌ಥಾಂಸನ್ : 1951 : 382-383).

ಈ ಹಿನ್ನೆಲೆಯಲ್ಲಿ ನೋಡುವುದಾದರೆ, ಜಾನಪದ ಒಂದು ಪ್ರಾಚೀನ ವಾಸ್ತವ ಸ್ಥಿತಿಯೇ ಹೊರತು ಕಾಲ್ಪನಿಕವಾದುದಲ್ಲ. ಕತೆಗಳಲ್ಲಿ ಅಸಂಗತವಾಗಿ ಕಾಣುವುದೆಲ್ಲಾ ನಮ್ಮ ತಪ್ಪು ಗ್ರಹಿಕೆ. ನಾಗರಿಕರಿಗೆ ಅತಾರ್ಕಿಕವಾಗಿರುವುದೆಲ್ಲ ಆದಿಮಾನವನಿಗೆ ತಾರ್ಕಿಕ ಆಗಿತ್ತು. ಆದುದರಿಂದಲೇ ಜಾನಪದದ ಆಳದಲ್ಲಿರುವ ಸಂಗತಿಗಳನ್ನು ಕಂಡು ಹಿಡಿದು ಮಾನವನ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್ರಚಿಸುವುದು ಇವರ ಗುರಿಯಾಗಿತ್ತು. ಈ ಬೆಳಕಿನಲ್ಲಿ ಆಸ್ಟ್ರೇಲಿಯನ್ ಆದಿವಾಸಿಗಳ ಕತೆಗಳನ್ನು ವಿಶ್ಲೇಷಿಸಿದ ಅರ್ನಾಲ್ಡ್ ವಾನ್‌ಗಿನ್ನೆಪ್ ಕತೆಗಳು ಹೇಗೆ ಉಗಮಿಸಿದವು ಎಂಬುದನ್ನು ಹೇಳುತ್ತಾ

ಕತೆಗಳ ಉಗಮದಲ್ಲಿ ಕುಲದೇವತಾರಾಧನ ಪದ್ಧತಿಯ ಪ್ರಾಮುಖ್ಯವನ್ನು ಗುರುತಿಸಿದರು (ಸ್ಟಿತ್‌ಥಾಂಪಸನ್ : 1951 : 387). ಗಿನ್ನೆಪ್‌ನಂತೆ ನ್ಯೂವನ್ ಕೂಡ ಆದಿಮಾನವ ಆಚರಣೆಗಳಲ್ಲಿ ಕತೆಗಳ ಉಗಮವನ್ನು ಕಂಡುಹಿಡಿಯುತ್ತಾರೆ. ಗಿನ್ನೆಪ್ ಮತ್ತು ನ್ಯೂವನ್–ಇಬ್ಬರೂ ಆದಿಮಾನವರಲ್ಲಿ ವ್ಯಾಪಕವಾಗಿರುವ ನಂಬಿಕೆ ಮತ್ತು ಆಚರಣೆಗಳನ್ನು ತೀವ್ರವಾಗಿ ಗಮನಿಸಿ ಅದರ ಹಿಂದಿರುವ ಮನಸ್ಥಿತಿಯನ್ನು ಕಂಡುಹಿಡಿದಿದ್ದಾರೆ. ಜಗತ್ತಿನ ಭಿನ್ನ ಪ್ರದೇಶಗಳಲ್ಲಿ ಸ್ವತಂತ್ರವಾಗಿಯೇ ಸಮಾನ ಕತೆಗಳು ಹುಟ್ಟಿವೆ ಎಂದು ಅಭಿಪ್ರಾಯಪಡುವುದರಿಂದ ಇವರಿಬ್ಬರೂ ಬಹುಮೂಲ ಸಿದ್ಧಾಂತದ ಪ್ರತಿಪಾದಕರಾಗಿದ್ದಾರೆ. ಇವರ ತೀರ್ಮಾನಗಳಲ್ಲೂ ಲೋಪಗಳಿಲ್ಲವೆಂದಲ್ಲ. ಅವೆಂದರೆ: ೧. ಆದಿವಾಸಿ ಬದುಕಿನ ಯಾವುದೊ ಒಂದು ಅಂಶವನ್ನಾಧರಿಸಿ ಅದೇ ಆದಿಮಾನವ ಜೀವನದಲ್ಲಿ ಅತಿ ಮುಖ್ಯವಾಗಿತ್ತು ಎಂಬ ಅತಿರೇಕಕ್ಕೆ ಹೋದದ್ದು. ೨. ಆದಿಮಾನವರಲ್ಲಿ ಬಹಳಷ್ಟು ವಿಷಯಗಳಲ್ಲಿ ಸಮಾನತೆಯಿದೆ ಎಂದು ಭಾವಿಸಿದ್ದು. ಈ ವಿದ್ವಾಂಸರು ಹೇಳುವ ಕಾರಣಗಳಿಂದ ಕೆಲವು ಕಥೆಗಳು ಹುಟ್ಟಿಕೊಂಡಿರಬಹುದಾದರೂ ಒಟ್ಟು ಜನಪದ ಕತೆಗಳ ಉಗಮಕ್ಕೆ ಇವು ಮುಖ್ಯ ಕಾರಣಗಳಲ್ಲ ಕೆಲವು ತತ್ವಗಳಿಗಷ್ಟೇ ದೃಢವಾಗಿ ಅಂಟಿಕೊಂಡಿದ್ದರಿಂದ ಈ ಸಿದ್ಧಾಂತ ವಿಫಲವಾಯಿತು. ಆ ತತ್ವಗಳೆಂದರೆ: ೧. ಕತೆಗಳಲ್ಲಿರುವ ಅಂಶಗಳೆಲ್ಲಾ ವಾಸ್ತವವಾಗಿ ಇರುವಂಥ, ನಡೆದಂಥ, ಅಂಶಗಳು ಎಂದು ತಿಳಿದು ಅವನ್ನು ಬಾಹ್ಯಸ್ತರದಲ್ಲೇ ವಿಶ್ಲೇಷಿಸಿದ್ದು. ೨. ಯಾವುದೊ ಒಂದು ಸಾಂಸ್ಕೃತಿಕ ಪರಿಸರದಲ್ಲಿ ದೊರಕಿದ ಆಧಾರಗಳನ್ನು ಇಡೀ ಮಾನವ ಸಂಸ್ಕೃತಿಗೆ ಅನ್ವಯಿಸಿದ್ದು.

ಈ ಲೋಪಗಳನ್ನು ಮನಗಂಡ ಆಧುನಿಕ ಮಾನವಶಾಸ್ತ್ರಜ್ಞರು ಸಂಸ್ಕೃತಿಯ ಪ್ರಕ್ರಿಯೆಗಳ ಬಗೆಗೆ ಹೊಸ ನಿಲುವು ತಳೆದಿದ್ದಾರೆ. ಆಧುನಿಕರ ಪ್ರಕಾರ, ಆದಿಮಾನವ ಜೀವನದ ಯಾವುದೇ ವಿಷಯವನ್ನಾಗಲಿ ಒಂದು ಸರಳ ಸೂತ್ರದಲ್ಲಿ ವಿವರಿಸಲಾಗದು. ಕುಲದೇವತಾಪದ್ಧತಿ, ಸತ್ತವರ ಬಗೆಗಿನ ಭಯ, ಆಕಾಶಕಾಯಗಳ ಬಗೆಗಿನ ಭ್ರಾಂತಿ— ಈ ಎಲ್ಲ ಮೂಲಗಳಿಂದಲೂ ಕೆಲವು ಆಶಯಗಳು ಹುಟ್ಟಿಕೊಂಡಿವೆ. ಆದಿಮಾನವ ಜೀವನದ ವಿಷಯಗಳನ್ನು ಸಾಮಾನ್ಯೀಕರಿಸಬಾರದು. ಬೇರೆ ಬೇರೆ ಪ್ರದೇಶಗಳ ಸಂಸ್ಕೃತಿಗಳಲ್ಲಿ ಕಾಣುವ ಸಾಮ್ಯಗಳೆಲ್ಲವೂ ಚಾರಿತ್ರಿಕ ಹಾಗೂ ಮಾನಸಿಕ ದೃಷ್ಟಿಯಿಂದ ಒಂದೇ ಆಗಿಲ್ಲ. ನಾಗರಿಕ ಸಂಸ್ಕೃತಿಗಳ ಹೊರಗಿರುವ ಸಂಸ್ಕೃತಿಗಳಲ್ಲಿ ಇರುವ ಸಮಾನ ಅಂಶಗಳು ಎಷ್ಟೋವೇಳೆ ನಾಗರಿಕ ಸಂಸ್ಕೃತಿಗಳಲ್ಲಿ ನ್ಯೂನವಾಗಿರುವ ಅಂಶಗಳೇ ಆಗಿವೆ. ಸರಿಯಾಗಿ ಗಮನಿಸಿದಾಗ ಅವುಗಳ ಸಾಮ್ಯ ವೈಷಮ್ಯಗಳ ಪರಿಚಯವಾಗುತ್ತದೆ. ಈ ಹಿನ್ನೆಲೆಯಲ್ಲೇ ಮಲಿನೋಸ್ಕಿ, ಫ್ರಾಂಜ್ ಬೊವಾಸ್ ಮುಂತಾದವರು ಕತೆಗಳನ್ನು ಆಯಾ ಸಾಂಸ್ಕೃತಿಕ ಪರಿಸರವನ್ನು ಗಮನದಲ್ಲಿಟ್ಟುಕೊಂಡೇ ಅಭ್ಯಸಿಸಬೇಕು ಎಂದು ಪ್ರತಿಪಾದಿಸಿದ್ದಾರೆ.

ಚಾರಿತ್ರಿಕ ಭೌಗೋಳಿಕ ವಿಧಾನ: ವಾಂಶಿಕವಾಗಿ ಸಂಬಂಧಪಡುವ

ಹಾಗೂ ಸಂಬಂಧಪಡದ ಸಂಸ್ಕೃತಿಗಳಲ್ಲಿ ಜನಪದ ಕತೆಗಳ ಪ್ರಸರಣ ಹಾಗೂ ವಲಸೆ ಸಾಧ್ಯ ಎಂಬ ಬೆನ್ಫಿವಾದ ವೈಜ್ಞಾನಿಕ ಸ್ವರೂಪದ ವೈಧಾನಿಕತೆಯ ವಿಕಾಸಕ್ಕೆ ತೀವ್ರ ಪ್ರೇರಣೆ ಒದಗಿಸಿತು. ಕತೆಗಳು ಪ್ರಸರಣ ಹೊಂದುವಾಗ ಹಾಗೂ ವಲಸೆಹೋಗುವಾಗ ರೂಪ ಮತ್ತು ವಸ್ತುವಿನಲ್ಲೂ ಸಾಕಷ್ಟು ಬದಲಾವಣೆ ಸಾಧಿಸಿಕೊಳ್ಳುತ್ತವೆಯಲ್ಲದೆ ಗುರುತಿಸಲು ಸಾಧ್ಯವಾಗುವಂಥ ಅನೇಕ ಮೂಲಭೂತ ಲಕ್ಷಣಗಳನ್ನು ಉಳಿಸಿಕೊಳ್ಳುತ್ತವೆ ಎಂದು ಸ್ಕ್ಯಾಂಡಿನೇವಿಯನ್ ವಿದ್ವಾಂಸರು ಬಗೆದರು. ಕತೆಗಳು ಸಂಚರಿಸುವ ಮಾರ್ಗ ಹಾಗೂ ಅವುಗಳ ಮೂಲರೂಪವನ್ನು ಶೋಧಿಸುವುದಕ್ಕಾಗಿ ವಿಶೇಷ ರೂಪದ ವೈಧಾನಿಕತೆಯೊಂದನ್ನು ಅವರು ರೂಪಿಸಿದರು. ವಾಸ್ತವವಾಗಿ, ಈ ವೈಧಾನಿಕತೆ ಫಿನ್ನಿಷ್ ರಾಷ್ಟ್ರೀಯ ಮಹಾಕಾವ್ಯವಾದ ಕಲೆವಾಲದ ಮೇಲೆ ನಡೆಸಿದ ಹಲವಾರು ಪ್ರಯೋಗಗಳಿಂದ ರೂಪುಗೊಂಡಿತು. ಇದನ್ನು ಹೆಲ್ಸಿಂಕಿಯ ಜೂಲಿಯಸ್ ಕ್ರಾಹ್ನ್ (1835-1888), ಆತನ ಮಗ ಕಾರ್ಲೆಕ್ರಾಹ್ನ್ (1863-1933), ಆತನ ಶಿಷ್ಯ ಆರ್ನೆ ಆಂಟಿ (1867-1925) ಹಾಗೂ ಸ್ಮಿಥ್ ಥಾಂಸನ್ ಬೆಳೆಸಿ ಚಲಾವಣೆಗೆ ತಂದರು.

ಜನಪದ ಕತೆಗಳು ಮೌಖಿಕ ಪರಂಪರೆಯಲ್ಲಿ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬರುವಾಗ ಚಾರಿತ್ರಿಕ, ಭೌಗೋಳಿಕ, ಸಾಮಾಜಿಕ ಮತ್ತು ಮಾನಸಿಕ ಅಂಶಗಳ ಪ್ರಭಾವಗಳಿಗೊಳಗಾಗಿ ಭಿನ್ನರೂಪಗಳನ್ನು ಪಡೆದುಕೊಳ್ಳುತ್ತವೆ ಎಂಬ ಅಂಶವನ್ನು ಈ ಪಂಥ ಬೆಳಕಿಗೆ ತಂದಿತು. ಈ ಅಂಶಗಳನ್ನು ಬಳಸಿಕೊಂಡು ಕತೆಗಳ ವೈಜ್ಞಾನಿಕ ಅಧ್ಯಯನ ನಡೆಸಬಹುದು ಎಂದು ತಿಳಿಸಿದ್ದೂ ಈ ಪಂಥದಿಂದಲೇ. ಅದರಲ್ಲೂ, ಜೂಲಿಯಸ್ ಕ್ರಾಹ್ನ್ ಅವರು ಕಲೆವಾಲ ಮಹಾಕಾವ್ಯದ ಕತೆಯ ಮೂಲರೂಪವನ್ನು ಕಂಡುಹಿಡಿಯಲು ಫಿನ್ಲೆಂಡ್ ಹಾಗೂ ನೆರೆಹೊರೆಯ ಪ್ರದೇಶಗಳಲ್ಲಿ ಚದುರಿಹೋದ ಅನೇಕಾನೇಕ ಭಿನ್ನರೂಪಗಳನ್ನು ಗಣನೆಗೆ ತೆಗೆದುಕೊಂಡು ಹಲವಾರು ಪ್ರಯೋಗಗಳನ್ನು ನಡೆಸಿದರು. ಕಲೆವಾಲದ ಎಲ್ಲ ಭಾಗಗಳ ಸಮಗ್ರ ಪಾಠವನ್ನು ದೊರಕಿಸಿಕೊಂಡು ಅವನ್ನು ಆಶಯಗಳಾಗಿ ವಿಭಜಿಸಿಕೊಂಡು ಅವರು ಅಧ್ಯಯನ ನಡೆಸಿದರು. ಇದರಿಂದ ಒಂದೊಂದು ಪಾಠ ಸಂಪ್ರದಾಯವೂ ಯಾವ ಭೌಗೋಳಿಕ ಮಾರ್ಗದಲ್ಲಿ ಪ್ರಯಾಣ ಬೆಳೆಸಿತು ಎಂಬುದನ್ನು ಗುರುತಿಸಲು ಸಾಧ್ಯವಾಯಿತು. ಕತೆಯ ಇತಿಹಾಸವನ್ನು ರೇಖಿಸುವುದು ಅದರ ಗುರಿಯಾಯಿತು. ಆದುದರಿಂದಲೇ ಈ ವಿಧಾನವನ್ನು ಚಾರಿತ್ರಿಕ-ಭೌಗೋಳಿಕ ವಿಧಾನ ಎಂದು ಕರೆಯಲಾಯಿತು. ಫಿನ್ಲೆಂಡಿನ ಹೆಲ್ಸಿಂಕಿಯಲ್ಲಿ ಫಿನ್ನಿಷ್ ಜಾನಪದ ಅಧ್ಯಯನಕ್ಕೆ ಮೊಟ್ಟಮೊದಲು ಬಳಸಿದ್ದರಿಂದ ಅದನ್ನು ಫಿನ್ನಿಷ್ ವಿಧಾನ ಎಂದೂ ಕರೆಯಲಾಯಿತು.

ಫಿನ್ಲೆಂಡಿನ ಜೂಲಿಯಸ್ ಕ್ರಾಹ್ನ್, ಕಾರ್ಲೆಕ್ರಾಹ್ನ್, ಈಲಿಯಾಸ್ ಲೊನ್ರಾಟ್ ಅವರುಗಳಲ್ಲದೆ ಸ್ಕ್ಯಾಂಡಿನೇವಿಯನ್ ವಿದ್ವಾಂಸರಲ್ಲಿ ಪ್ರಮುಖರಾದ ಸ್ವೀಡನ್ನಿನ ಸಿ. ಡಬ್ಲ್ಯು. ವಾನ್‌ಸಿಡೊ, ಡೆನ್ಮಾರ್ಕಿನ ಆಕ್ಸೆಲ್ ಓಲ್ರಿಕ್ ಮುಂತಾ

ದವರು ಈ ವಿಧಾನವನ್ನು ಮತ್ತಷ್ಟು ಪರಿಷ್ಕರಿಸಿ ಅದಕ್ಕೆ ಒಂದು ರೂಪಕೊಟ್ಟರು. ಹೀಗೆ ಇದು ಗದ್ಯಕಥನ ಸಾಮಗ್ರಿಗಳ ವಿಶ್ಲೇಷಣೆಯ ಉಪಯುಕ್ತ ಮಾದರಿಯಾಗಿ ಪರಿಣಮಿಸಿತು. ಮೊದಮೊದಲು ಇದು ಕೇವಲ ಮೌಖಿಕ ಕಾವ್ಯಗಳ ವಿಶ್ಲೇಷಣೆಗೆ ಸೀಮಿತವಾಗಿದ್ದರೂ ಆಮೇಲೆ ಗದ್ಯಕಥನಗಳ ಅಧ್ಯಯನಕ್ಕೂ ವಿಸ್ತರಣೆಗೊಂಡಿತು.

ಗೊತ್ತಾದ ಕತೆಯ ಜೀವನಚರಿತ್ರೆಯನ್ನು ನಿರ್ಧರಿಸುವುದೇ ಚಾರಿತ್ರಿಕ-ಭೌಗೋಳಿಕ ವಿಧಾನದ ಗುರಿ. ಆ ಕತೆಯ ಉಗಮಕ್ಕೆ ಇರುವ ನಿಜವಾದ ಕಾರಣಗಳನ್ನು ಕಂಡುಕೊಳ್ಳುವುದು ಇದರ ಉದ್ದೇಶ. ಈ ವಿಧಾನವನ್ನನುಸರಿಸಿ ಅಧ್ಯಯನ ಮಾಡುವವರಿಗೆ ಅಸಂಖ್ಯ ಭಿನ್ನರೂಪಗಳಲ್ಲಿ ಲಭ್ಯವಾಗುವ ಒಂದು ಕತೆ ಒಂದು ಗೊತ್ತಾದ ಕಾಲ ಮತ್ತು ಸ್ಥಳದಲ್ಲಿ ಉದ್ದೇಶಪೂರ್ವಕವಾಗಿ ರಚಿತವಾಗಿರಬೇಕು ಮತ್ತು ಅದು ಹುಟ್ಟಿದ ಸ್ಥಳದಿಂದ ಬೇರೆ ಕಡೆಗಳಿಗೆ ಪ್ರಸರಣಗೊಂಡಿರಬೇಕು ಎಂಬ ತಿಳಿವಳಿಕೆ ಇರಬೇಕು. ಈ ವಿಧಾನದ ಪ್ರಕಾರ ಮೌಖಿಕ ಪರಂಪರೆಯ ಲಕ್ಷಣಗಳ ಸಹಾಯದಿಂದ ಯಾವುದೇ ಕಥೆಯ ಮೂಲರೂಪಕ್ಕೆ ಹತ್ತಿರವಾದ ಒಂದು ಕಥಾರೂಪವನ್ನು ಪಡೆಯಲು ಸಾಧ್ಯ. ಇದರಿಂದ ಮೂಲಕತೆಯ ಉಗಮ, ವಿಕಾಸ ಮತ್ತು ಪ್ರಸರಣವನ್ನು ಕುರಿತು ನಿರ್ಣಾಯಕ ತೀರ್ಮಾನಗಳಿಗೆ ಬರಬಹುದು. ಈ ವಿಧಾನದ ಗಮನಾರ್ಹವಾದ ಇನ್ನೊಂದು ಅಂಶ ಎಂದರೆ ಜನಪದ ಕತೆಗಳು ಸಾಂಸ್ಕೃತಿಕ ಹಾಗೂ ಭಾಷಿಕ ಗಡಿಗಳನ್ನು ದಾಟಿಹೋಗುವುದಿಲ್ಲ ಎಂಬ ಹೇಳಿಕೆಯನ್ನು ಇದು ನಿರಾಕರಿಸುವುದು.

ಈ ವಿಧಾನ ಅನುಸರಿಸಿ ಅಧ್ಯಯನ ನಡೆಸಲು ಈ ಕೆಳಗೆ ಸೂಚಿಸಿದ ಕೆಲಸಗಳನ್ನು ನಿರ್ವಹಿಸಬೇಕಾಗುತ್ತದೆ :

೧. ಕತೆಗಳ ಭಿನ್ನರೂಪಗಳ ಸಂಗ್ರಹ.
೨. ಅವುಗಳ ಆಶಯಾನುಸಾರ ವಿಶ್ಲೇಷಣೆ.
೩. ಆಯಾ ಭಿನ್ನರೂಪಗಳಿಗೆ ಹಿನ್ನೆಲೆಯಾದ ಚಾರಿತ್ರಿಕ ಮತ್ತು ಭೌಗೋಳಿಕ ಅಂಶಗಳ ಪರಿಶೀಲನೆ.
೪. ಆಯಾ ಭಿನ್ನರೂಪಗಳ ಮೌಖಿಕ ಪ್ರಸರಣದ ಬಗೆಗೆ ರೂಢವಾಗಿರುವ ಅಂಶಗಳು.

ಈ ಕಾರ್ಯಗಳನ್ನು ಕ್ರಮಬದ್ಧ ರೀತಿಯಲ್ಲಿ ನಿರ್ವಹಿಸಿದರೆ ಕತೆಯ ಮೂಲರೂಪ ಅಥವಾ ಅದಕ್ಕೆ ಸಮೀಪವಾದ ರೂಪವನ್ನು ಕಂಡುಹಿಡಿಯಲು ಸಾಧ್ಯ. ಭಿನ್ನರೂಪಗಳ ಹುಟ್ಟಿಗೆ ಪ್ರೇರಕವಾದ ಕಾರಣ, ಕತೆಯು ಹುಟ್ಟಿದ ಕಾಲ, ದೇಶಗಳನ್ನು ನಿರ್ಣಯಿಸುವುದು ಹಾಗೂ ಕತೆ ಸಂಚಾರಗೈದ ಮಾರ್ಗಗಳನ್ನು ನಿರ್ದೇಶಿಸುವುದು ಕೂಡ ಸಾಧ್ಯವಾಗುತ್ತದೆ.

ಈ ವಿಧಾನ ಅನುಸರಿಸಿ ಅಧ್ಯಯನ ನಡೆಸುವಾಗ ಎದುರಾಗುವ ದೊಡ್ಡ ಸವಾಲು ಎಂದರೆ ಭಿನ್ನರೂಪಗಳ ಸಂಗ್ರಹಣೆ. ಹಸ್ತಪ್ರತಿ ಭಂಡಾರದಿಂದ, ಅಚ್ಚಾದ

ಸಂಗ್ರಹಗಳಿಂದ, ಶಿಷ್ಟ ಸಾಹಿತ್ಯದಿಂದ ಅವನ್ನು ಒಟ್ಟುಗೂಡಿಸಿಕೊಳ್ಳಬೇಕಾಗುತ್ತದೆ. ಲಭ್ಯವಿರುವ ಮಾಹಿತಿಯನ್ನಷ್ಟೇ ಆಧರಿಸದೆ ಪ್ರಶ್ನಾವಳಿ ವಿಧಾನದಲ್ಲಿ ಬೇರೆ ಬೇರೆ ಮೂಲಗಳಿಂದಲೂ ದೊರಕಿಸಿಕೊಳ್ಳಬೇಕು. ಹೀಗೆ ದೊರಕಿಸಿಕೊಳ್ಳುವ ಭಿನ್ನ ರೂಪಗಳ ಸಂಖ್ಯೆ ಹೆಚ್ಚಿದಷ್ಟೂ ನಿರ್ಣಯಗಳು ಅಷ್ಟೇ ತೃಪ್ತಿಕರವಾಗಿರುತ್ತವೆ. ಹೇಗೋ ದೊರಕಿಸಿಕೊಂಡ ಪ್ರತಿಯೊಂದು ಭಿನ್ನರೂಪವನ್ನೂ ಅದರ ಮುಖ್ಯ ಸ್ವಭಾವ ಲಕ್ಷಣ (trait) ಗಳಾಗಿ ವಿಂಗಡಿಸಿಕೊಳ್ಳಬೇಕು. ಮೌಖಿಕ ಪರಂಪರೆಯ ಮೂಲದ ಭಿನ್ನರೂಪಗಳನ್ನು ಪ್ರಾದೇಶಿಕ ಕ್ರಮದಲ್ಲೂ ಶಿಷ್ಟಮೂಲದವನ್ನು ಕಾಲಾನುಕ್ರಮದಲ್ಲೂ ಜೋಡಿಸಿಕೊಳ್ಳಬೇಕು. ಪ್ರತಿಯೊಂದು ಭಿನ್ನರೂಪವು ಯಾವಾಗ ಸಂಗ್ರಹವಾಯಿತು, ಎಲ್ಲಿ ಸಂಗ್ರಹವಾಯಿತು ಎಂಬುದನ್ನು ಸರಿಯಾಗಿ ಗುರುತಿಸಬೇಕು. ಆಯಾ ಪ್ರದೇಶದಲ್ಲಿ ದೊರಕುವ ಪ್ರತಿಯೊಂದು ಸ್ವಭಾವ ಲಕ್ಷಣದ ಶೇಕಡಾವಾರು ಪ್ರಮಾಣವನ್ನು ಕಂಡುಕೊಳ್ಳಬೇಕು. ಅಲ್ಲದೆ ಎಲ್ಲ ಭಿನ್ನರೂಪಗಳನ್ನೂ ಪ್ರಾದೇಶಿಕ ವಿವರಗಳೊಡನೆ ಪಟ್ಟಿಮಾಡಿ ಪ್ರತಿಯೊಂದನ್ನೂ ಸಂಕ್ಷಿಪ್ತ ಹೆಸರಿನಿಂದ ಸೂಚಿಸಬೇಕು (ಉದಾ. ಕ$_1$ ಕ$_2$ ಕ$_3$... ಹೀಗೆ). ಇದರಿಂದ ಆಯಾ ಕತೆಯನ್ನು ಸುಲಭವಾಗಿ ಸಂಕೇತಿಸಲು ಸಾಧ್ಯ. ಹೀಗೆ ಸಿದ್ಧಮಾಡಿಕೊಳ್ಳಲಾಗುವ ಪಟ್ಟಿಯೂ ಕತೆಗಳ ಸಂಗ್ರಹವೂ ಅಧ್ಯಯನಕ್ಕೆ ತಳಹದಿಯಾಗುವುದು. ಪ್ರತಿಯೊಂದು ಭಿನ್ನರೂಪವನ್ನು ಪಟ್ಟಿಮಾಡುವುದರಿಂದ ಕತೆಯ ಯಾವುದೇ ವೈಲಕ್ಷಣ್ಯವನ್ನು ಚಾರಿತ್ರಿಕ-ಭೌಗೋಳಿಕ ದೃಷ್ಟಿಯಿಂದ ಅಭ್ಯಸಿಸಲು ಅನುಕೂಲವಾಗುತ್ತದೆ. ಗಮನಾರ್ಹ ವೈಲಕ್ಷಣ್ಯಗಳಿರುವ ಭಿನ್ನರೂಪಗಳನ್ನು ಪ್ರತ್ಯೇಕವಾಗಿ ಪರಿಶೀಲಿಸುವುದು ಯುಕ್ತ. ಕತೆಯ ಮೂಲವನ್ನು ಅನ್ವೇಷಿಸುವಾಗ ಅದರ ವಿಕಾಸದ ಎಲ್ಲ ಹಂತಗಳನ್ನೂ ಗಮನಿಸಬೇಕಾಗುತ್ತದೆ. ಮೌಖಿಕ ಪರಂಪರೆಯ ಕತೆಗಳಲ್ಲಿ ಕಾಣಿಸಿಕೊಳ್ಳಲೇಬೇಕಾದ ವೈಲಕ್ಷಣ್ಯಗಳನ್ನು ಗಮನಿಸಲು ಶಕ್ತನಾದವನು ಮಾತ್ರ ಭಿನ್ನರೂಪಗಳಲ್ಲಿನ ಮುಖ್ಯ ಅಮುಖ್ಯ ಅಂಶಗಳನ್ನು ಸುಲಭವಾಗಿ ಗುರುತಿಸುತ್ತಾನೆ.

ಕತೆಗಳ ಮೂಲರೂಪವನ್ನು ಅನ್ವೇಷಿಸುವಾಗ ಅವುಗಳ ವೈಲಕ್ಷಣ್ಯದ ಪರಿಶೀಲನೆ ಎರಡನೆಯ ಘಟ್ಟದ ಕೆಲಸ. ಆ ಪರಿಶೀಲನೆ ಈ ಕೆಳಗೆ ಕಾಣಿಸಿದ ಕ್ರಮದಲ್ಲಿ ನಡೆಯಬೇಕು:

೧. ಪ್ರತಿಯೊಂದು ಸ್ವಭಾವ ಲಕ್ಷಣ ಪ್ರತಿಶತವಾಗಿ ಉಳಿದವುಗಳಿಗಿಂತ ಹೇಗೆ ಹೆಚ್ಚು ಅಥವಾ ಕಡಿಮೆ ಪ್ರಮಾಣದಲ್ಲಿ ಕಾಣಿಸಿಕೊಳ್ಳುವುದು ಎಂಬುದನ್ನು ನೋಡಬೇಕು.

೨. ಅದರ ಪ್ರಸರಣದ ವ್ಯಾಪ್ತಿಯನ್ನು ಗುರುತಿಸಬೇಕು.

೩. ಅದರ ಪ್ರಸರಣದಲ್ಲಿ ಮೂಲ ಕಥಾರೂಪದೊಂದಿಗಿರುವ ಸಾಮ್ಯತೆಯನ್ನು ಪತ್ತೆ ಹಚ್ಚಬೇಕು.

೪. ಉತ್ತಮ ಭಿನ್ನರೂಪಗಳಲ್ಲಿ ಅದರ ಇರುವಿಕೆಯನ್ನು ಸಾದರಪಡಿಸಬೇಕು.

೫. ಅದು ಸಹಜವಾಗಿ ನೆನಪಿನಲ್ಲಿ ಉಳಿದು ಬರುವಂತೆ ಮಾಡಿದ ಅದರಲ್ಲಿಯೇ ಇರುವ ಚಿತ್ತಸೆಳೆಯುವ ಗುಣ ಯಾವುದೆಂಬುದನ್ನು ಸ್ಪಷ್ಟಪಡಿಸಬೇಕು.

೬. ಉಳಿದ ಸ್ವಭಾವ ಲಕ್ಷಣಗಳೊಡನೆ ಹೋಲಿಸಿದಾಗ ಆ ಸ್ವಭಾವ ಲಕ್ಷಣದಲ್ಲಿ ಎದ್ದು ಕಾಣುವ ಸ್ವಾಭಾವಿಕತೆಯನ್ನು ವರ್ಣಿಸಬೇಕು.

೭. ಕಥಾ ಪ್ರದರ್ಶನದಲ್ಲಿ ಅದರ ಸ್ಥಾನ ಯಾವುದೆಂಬುದನ್ನು ಹೇಳಬೇಕು.

೮. ಏಕಮಾತ್ರ ಮಾದರಿಯಲ್ಲಿ ಅದರ ಅಸ್ತಿತ್ವವನ್ನು ದೃಢೀಕರಿಸುವುದು.

೯. ಅದರ ಇತರ ರೂಪಗಳು ಬೆಳೆದಿರಬಹುದಾದ ಸಾಧ್ಯತೆಯನ್ನು ನಿರೂಪಿಸುವುದು.

—ಈ ರೀತಿಯಾಗಿ ವಿವಿಧ ದೃಷ್ಟಿಕೋನಗಳಿಂದ ಭಿನ್ನರೂಪಗಳನ್ನು ಅಭ್ಯಸಿಸಿ ಯಾವ ಭಿನ್ನರೂಪವು ಕತೆಯ ಮೂಲಮಾದರಿ (Archetype)ಗೆ ಸೇರಬೇಕು ಯಾವುದು ಅನಂತರ ಸೇರಿಕೊಂಡುದು ಎಂಬುದನ್ನು ನಿರ್ದೇಶಿಸಬೇಕು. ಮೂಲ ಕಥಾರೂಪಕ್ಕೆ ಸೇರಲು ಅರ್ಹವಾದವು ಎಂದು ಗುರುತಿಸಿದ ಅಂಶಗಳನ್ನೆಲ್ಲಾ ಒಟ್ಟುಗೂಡಿಸಿದಾಗ ಕತೆಯ ಮೂಲರೂಪ ತಾನೇ ತಾನಾಗಿ ರೂಪುಗೊಳ್ಳುತ್ತದೆ. ಆದರೆ ಹೀಗೆ ನಿರ್ಮಿಸಿದ ರಚನೆ ಕತೆಯ ನಿಜವಾದ ಮೂಲಮಾತೃಕೆಯಾಗುವುದಿಲ್ಲ. ಇದು ಕೇವಲ ಪ್ರಾಯೋಗಿಕ ಮೂಲಮಾದರಿ (Trial Archetype or Urtype) ಎಂದಷ್ಟೇ ಹೇಳಬಹುದು.

ಇಷ್ಟಾದರೂ, ಹೀಗೆ ರಚಿಸಿದ ಕತೆಯ ಉಗಮಸ್ಥಾನವನ್ನು ನಿರ್ದೇಶಿಸುವುದು ಕಷ್ಟಸಾಧ್ಯದ ಕೆಲಸ. ಅದರ ಸಾಮಾನ್ಯ ನೆಲೆಯನ್ನಷ್ಟೇ ಗುರುತಿಸುವುದು ಸಾಧ್ಯ. ಒಂದು ಕತೆಯ ಪ್ರದೇಶದಲ್ಲಿನ ಅದರ ಪ್ರಸರಣ, ಅದು ಗಳಿಸಿರುವ ಜನಪ್ರಿಯತೆ, ಮತ್ತೆ ಮತ್ತೆ ಅದು ಕಾಣಿಸಿಕೊಳ್ಳುವಿಕೆ—ಇವು ಆ ಕತೆಯ ಪ್ರಸರಣ ಕೇಂದ್ರವನ್ನು ಗುರುತಿಸಲು ನೆರವಾಗುವ ಅಂಶಗಳು ಶಿಷ್ಟಮೂಲದ ಭಿನ್ನರೂಪಗಳ ಕಾಲ ನಿಶ್ಚಿತವಿರುವುದರಿಂದ ಕತೆ ಅನುಸರಿಸಿದ ಮೌಖಿಕ ಪರಂಪರೆಯ ಭಿನ್ನರೂಪದ ಕಾಲವನ್ನು ನಿರ್ಧರಿಸಬಹುದು. ಯಾವುದೊ ಒಂದು ಅಂಶ ಪ್ರಾಚೀನರೂಪಗಳಲ್ಲಿ ತಪ್ಪದೆ ಬಂದಿದ್ದು ಭಿನ್ನರೂಪಗಳಲ್ಲಿ ಇಲ್ಲದಿದ್ದರೆ ಅದನ್ನು ಗುರುತುಹಾಕಿಕೊಳ್ಳಬೇಕು. ಅದೇ ರೀತಿಯಾಗಿ ಇನ್ನಾವುದಾದರೂ ಅಂಶ ಪ್ರಾಚೀನ ರೂಪಗಳಲ್ಲಷ್ಟೇ ಬಂದಿದೆಯೆ ? ಎಂಬುದನ್ನು ಶೋಧಿಸಬೇಕು. ಈ ಎಲ್ಲ ಅಂಶಗಳನ್ನು ಒಂದು ಘಟಕವಾಗಿಸಿ ಅದಕ್ಕೆ ವಿಶೇಷ ಮಹತ್ವ ನೀಡಬೇಕು. ಅವುಗಳ ಪ್ರಾಚೀನತೆಯಿಂದಾಗಿ ಅವು ಮೂಲ ರೂಪಕ್ಕೆ ಹತ್ತಿರವಾಗಿರಬಹುದು. ಗೊತ್ತಾದ ಭೌಗೋಳಿಕ ಎಲ್ಲೆಗೆ ಸೀಮಿತವಾದ ಅಂಶಗಳು ಎಲ್ಲ ಭಿನ್ನರೂಪಗಳಲ್ಲೂ ಇದೆಯೆ ಎಂಬುದನ್ನು ಗೊತ್ತುಹಚ್ಚಬೇಕು. ಅವುಗಳಿಗೇ ಒಂದು ಮೂಲವಿರಲು ಸಾಧ್ಯ. ಆ ಮೂಲಕ ಅದರ ಭಿನ್ನರೂಪಗಳಿಗೂ ಹೊಂದಾಣಿಕೆಯಿದ್ದರೆ ಅದನ್ನು ಒಂದು ಉಪಮಾದರಿ ಎಂದು ಪರಿಗಣಿಸಬಹುದು.

ಹೀಗೆ ಪ್ರತ್ಯೇಕ ಬೆಳವಣಿಗೆ ಹೊಂದಿದ ಕತೆಗಳ ಮೂಲರೂಪವನ್ನು ನಿರ್ಧರಿಸಿದ ಮೇಲೆ ಅವುಗಳನ್ನು ಒಟ್ಟಿಗೆ ಅಭ್ಯಸಿಸಿ ಅವೆಲ್ಲದರ ಮೂಲರೂಪದ ಮೇಲೆ ಅವು ಬೆಳಕು ಚೆಲ್ಲುತ್ತವೆಯೆ ಎಂಬುದನ್ನು ಪರಿಶೀಲಿಸಬೇಕು. ಈ ಬಗೆಯ ಭೌಗೋಳಿಕ ಘಟಕಗಳ ಅಧ್ಯಯನದಿಂದ ಕತೆಯ ಉಗಮಸ್ಥಾನ ಯಾವುದೆಂಬುದನ್ನು ಗುರುತಿಸಬಹುದು. ಈ ಭಿನ್ನರೂಪಗಳ ಪರಂಪರೆಗೂ ಶಿಷ್ಟಮೂಲದ ಭಿನ್ನರೂಪಗಳಿಗೂ ಇರುವ ಸಂಬಂಧದಿಂದ ಕತೆಯ ಕಾಲವನ್ನು ಅಂದಾಜು ಮಾಡಬಹುದು.

ಕತೆಯ ಉಗಮಸ್ಥಳವನ್ನು ನಿರ್ಧರಿಸುವ ಈ ವಿಧಾನದ ಬಗೆಗೆ ಕೆಲವು ವಿದ್ವಾಂಸರು ಆಕ್ಷೇಪಣೆಗಳನ್ನು ಎತ್ತಿದ್ದಾರೆ. ಆರ್ನೆ ಆ್ಯಂಡರ್‌ಸನ್ ಅವರು ಕತೆಗಳು ತರಂಗ ರೀತಿಯಲ್ಲಿಷ್ಟೇ ಪ್ರಸಾರವಾಗುವುದಿಲ್ಲ ಎಂದು ಟೀಕಿಸಿದ್ದಾರೆ. ಅವು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗಬಲ್ಲವು ಎಂದು ವಾನ್‌ಸಿಡೊ ಹೇಳಿದ್ದಾರೆ. ಪ್ರಾದೇಶಿಕ ಉಪಮಾದರಿ ಎಂದು ಪರಿಗಣಿಸಬಹುದಾದ ವಿಶಿಷ್ಟ ಪ್ರಾದೇಶಿಕ ಗುಣವನ್ನು ಪಡೆದುಕೊಂಡ Oikotype ಗಳನ್ನು ವಿಶೇಷವಾಗಿ ಗಮನಿಸುವುದು ಅಗತ್ಯ. ಏಕೆಂದರೆ ಈ ರಚನೆಗಳಿಗೆ ತನ್ನದೇ ಆದ ಇತಿಹಾಸವಿರುತ್ತದೆ. ಆದರೆ ಕತೆಗಳಲ್ಲಿನ ಬದಲಾವಣೆಗೆ ನುರಿತ ಕತೆಗಾರರ ಪ್ರಾದೇಶಿಕ ಸಂಚಾರವೇ ಕಾರಣ ಎಂದಿದ್ದಾರೆ. ಆಲ್ಬರ್ಟ್ ವೆಸ್ಸಲ್‌ಸ್ಕಿ ಅವರು ಕತೆಯ ಗ್ರಂಥಸ್ಥ ಮೂಲದ ಭಿನ್ನ ರೂಪವು ಪ್ರಸರಣದಲ್ಲಿ ಹೆಚ್ಚು ಪ್ರಭಾವಶಾಲಿಯಾದುದರಿಂದ ಮೌಖಿಕ ಪರಂಪರೆಯ ಭಿನ್ನರೂಪದ ಪ್ರಸರಣವನ್ನು ಕುರಿತ ಯಾವುದೇ ಪ್ರಯತ್ನವೂ ಫಲಕಾರಿಯಾಗುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ (ಡಂಡೆಸ್:1975:9).

ಕೆಲವು ಆಧುನಿಕ ವಿದ್ವಾಂಸರು ಈ ವಿಧಾನವನ್ನು ಅದರ ನಿಷ್ಠುರತೆ ಹಾಗೂ ಯಾಂತ್ರಿಕತೆಗಾಗಿ ಅಲ್ಲಗಳೆದಿದ್ದಾರೆ. ಈ ವಿಧಾನ ಕತೆಯನ್ನು ಸಾಂಖ್ಯಿಕ ವಸ್ತುವಾಗಿ, ಸಂಕ್ಷೇಪವಾಗಿ, ಸೂತ್ರಗಳಾಗಿ, ಸಂಕೇತಗಳಾಗಿ ಮತ್ತು ಭೂಪಟವಾಗಿ ಕಿರಿದುಗೊಳಿಸುತ್ತದೆ ಎಂಬುದು ಅವರ ಆಕ್ಷೇಪ. ವಾಸ್ತವವಾಗಿ ಈ ವಿಧಾನದಲ್ಲಿ ಕತೆಯ ಕಲಾತ್ಮಕತೆಗೆ, ಶೈಲಿಗೆ ಮತ್ತು ಕತೆಗಾರನಿಗೆ ಹೆಚ್ಚು ಪ್ರಾಶಸ್ತ್ಯವಿಲ್ಲ ಎಂದು ಅವರ ಟೀಕೆ. ಎಲ್ಲ ಭಿನ್ನರೂಪಗಳನ್ನು ಸಂಗ್ರಹಿಸುವುದು ಕಷ್ಟಸಾಧ್ಯದ ಕೆಲಸ. ವ್ಯಾಪಕ ಪ್ರಯತ್ನದಿಂದ ಅವನ್ನು ಸಂಗ್ರಹಿಸಿ ರಚಿಸಿದ ಮೂಲಮಾತೃಕೆಯಿಂದ ದೊರಕುವ ಪ್ರಯೋಜನವಾದರೂ ಏನು ಎಂದು ಪ್ರಶ್ನಿಸಿದ್ದಾರೆ

ಈ ಟೀಕೆಗಳನ್ನು ಗಮನಿಸಿದ ರಾಬರ್ಟ್ಸ್ ಅವರು ಜನಪದ ಕತೆಗಳ ಅಧ್ಯಯನದಲ್ಲಿ ಗ್ರಂಥಸ್ಥ ಮೂಲದ ಭಿನ್ನರೂಪಗಳಿಗೂ Oikotype ಗಳಿಗೂ ಹೆಚ್ಚು ಒತ್ತು ನೀಡಿದರು. ಒಂದು ಪ್ರದೇಶದಲ್ಲಿ ದೊರಕುವ ಭಿನ್ನರೂಪಗಳ ಮೇಲೆ ಹೆಚ್ಚು ಪ್ರಭಾವಬೀರಿದ ಮುಖ್ಯ ಭಿನ್ನರೂಪವನ್ನೇ Archetype ಎಂದು ಪರಿಗಣಿಸಬೇಕೆಂದೂ ಹೇಳಿದರು.

ಟೈಲರ್ ಅವರು ಚಾರಿತ್ರಿಕ ಭೌಗೋಳಿಕ ವಿಧಾನದ ಹಿಂದಿರಬೇಕಾದ ದೃಷ್ಟಿ

ಅತ್ಯಂತ ಸಾಮಾನ್ಯ ತಿಳಿವಳಿಕೆಯದು ಎಂದು ಅಭಿಪ್ರಾಯಪಟ್ಟು ಈ ತಿಳಿವಳಿಕೆಯನ್ನು ಜಾನಪದದ ಯಾವುದೇ ರೂಪಕ್ಕಾದರೂ ಅನ್ವಯಿಸಬಹುದು ಎಂದಿದ್ದಾರೆ.

ಈ ಎಲ್ಲ ಅಭಿಪ್ರಾಯಗಳನ್ನೂ ಲಕ್ಷ್ಯದಲ್ಲಿರಿಸಿಕೊಂಡು ಚಾರಿತ್ರಿಕ–ಭೌಗೋಳಿಕ ವಿಧಾನದ ಗುಣದೋಷಗಳನ್ನು ಹೀಗೆ ಸಂಕ್ಷೇಪಿಸಬಹುದು: ಈ ವಿಧಾನ ಕತೆಗಳ ಬಗೆಗೆ ಯಾವುದೇ ಊಹಾತ್ಮಕ ನಿಲುವು ತಳೆಯದೆ ದೊರಕುವ ಆಧಾರಗಳಿಂದಲೇ ತನ್ನ ನಿಲುವನ್ನು ಸಮರ್ಥಿಸಿಕೊಳ್ಳುವುದು. ಇದು ಈ ವಿಧಾನದ ನಿಷ್ಕೃಷ್ಟ ವೈಜ್ಞಾನಿಕ ದೃಷ್ಟಿಯನ್ನು ತೋರಿಸುತ್ತದೆ. ಆದರೆ ಸಂಶೋಧಕರ ಅಪಾರ ಪರಿಶ್ರಮಕ್ಕೆ ಇಲ್ಲಿ ದೊರಕುವ ಪ್ರತಿಫಲ ಮೂಲ ಮಾತೃಕೆಗೆ ಹತ್ತಿರವಾದ ಒಂದು ಕಥಾರೂಪ ಮಾತ್ರ. ಹೆಚ್ಚು ಸಂಖ್ಯೆಯಲ್ಲಿ ಕತೆಯ ಭಿನ್ನರೂಪಗಳನ್ನು ಸಂಗ್ರಹಿಸಿದಾಗ ಆ ಕತೆ ಪಡೆಯು ಬಹುವಾದ ರೂಪಾಂತರ, ಅದರ ಮೇಲಾಗುವ ಪ್ರಾದೇಶಿಕತೆಯ ಪ್ರಭಾವ, ಸಾಮಾಜಿಕ ಸಾಂಸ್ಕೃತಿಕ ಸಂದರ್ಭ, ಕತೆಗಾರರ ಪ್ರತಿಭೆ ಮುಂತಾದ ವಿಷಯಗಳ ಕಡೆಗೆ ಈ ಸಿದ್ಧಾಂತ ಹೆಚ್ಚು ಗಮನಕೊಡದಿರುವುದು ಒಂದು ದೊಡ್ಡ ಲೋಪ. ಈ ವಿಧಾನ ಪರಿಗಣಿಸದಿರುವ ಮತ್ತೊಂದು ಅಂಶವೆಂದರೆ ಕಥನಪ್ರಕಾರಗಳ ನಡುವಿನ ಭಿನ್ನತೆ. ಈ ಸಿದ್ಧಾಂತದ ಪ್ರಕಾರ ಕತೆಗಳ ರೂಪ ಬದಲಾಗುತ್ತಾ ಹೋದರೂ ಅವುಗಳ ಸಂವಿಧಾನ ಸ್ಥಿರವಾಗಿರುತ್ತದೆ. ಕತೆಯ ಇತಿಹಾಸವನ್ನು ರೂಪಿಸುವಾಗ ವಿವಿಧ ಪ್ರಕಾರಗಳ ನಡುವಿನ ಅಂತರ ಅಷ್ಟೇನೂ ಮಹತ್ವದ ಅಂಶವಲ್ಲವೆಂದು ಭಾವಿಸಿದ್ದು ಕೂಡ ಈ ವಿಧಾನದ ಒಂದು ದೋಷ. ಈ ಪಂಥದವರಿಗೆ ಕತೆಯ ಉಗಮಸ್ಥಳ, ಅದರ ಬೆಳವಣಿಗೆ ಮತ್ತು ಪ್ರಸರಣಗಳನ್ನು ಶೋಧಿಸುವುದೇ ಮುಖ್ಯ ಉದ್ದೇಶವಾಗಿತ್ತು. ಆದರಿಂದಾಗಿ ಅವರು ಕತೆಯ ಸ್ವರೂಪ, ಅದರ ಪರಿಣಾಮದ ಬಗೆಗೆ ಯಾವೊಂದು ಆಸಕ್ತಿಯನ್ನೂ ತೋರಲಿಲ್ಲ. ಕಥಾವಕ್ತೃ, ಶ್ರೋತೃಗಳ ದೃಷ್ಟಿಯಿಂದ ಕತೆ ಮನರಂಜನಾ ಸಾಧನವಾಗಿ ಹೇಗೆ ಪ್ರಭಾವ ಬೀರಬಲ್ಲದು ಎಂಬ ವಿಚಾರದ ಕಡೆಗೂ ಗಮನಹರಿಸಲಿಲ್ಲ. ಜಾನಪದದ ಯಾವುದೇ ರೂಪ ಯಾವ ಜನರಲ್ಲಿ ಲಭ್ಯವಾಯಿತು ಎಂಬುದರ ಆಧಾರದ ಮೇಲೆ ಅಲ್ಲಿನ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅದರ ಮೂಲವನ್ನು ಶೋಧಿಸಬೇಕು ಎಂಬ ವಿಚಾರವೂ ಅವರಿಗೆ ಹೊಳೆಯಲಿಲ್ಲ. ಕತೆಯನ್ನು ಅದರ ಸಾಮಾಜಿಕ ಸಂದರ್ಭದಿಂದ ಸಂಪೂರ್ಣವಾಗಿ ಪ್ರತ್ಯೇಕಿಸಿ ನೋಡಿದ್ದರಿಂದಲೇ ಈ ವಿಧಾನ ಹೆಚ್ಚು ಯಶಕಾಣಲಿಲ್ಲ. ಏನೇ ಇರಲಿ, ಕತೆಯ ಮೂಲರೂಪವನ್ನು ನಿರ್ಧರಿಸುವ ಈ ವಿಧಾನ ಬಹುಮಟ್ಟಿಗೆ ಭಾಷಾ ವಿಜ್ಞಾನದ ಇಂಡೊಯೂರೊಪಿಯನ್ ಮಾದರಿಯನ್ನು ಹೋಲುತ್ತದೆ.

ವಾಸ್ತವವಾಗಿ, ಮೂಲರೂಪವನ್ನು ಗುರುತಿಸುವ ಉದ್ದೇಶದಿಂದ ಹಾಗೂ ಜಾನಪದದ ಯಾವುದೇ ಬಗೆಯೊಂದು ಪ್ರಮಾಣಿಸಲಬಹುದಾದ ಮಾರ್ಗವನ್ನು ಕಂಡುಕೊಳ್ಳುವ ದೃಷ್ಟಿಯಿಂದ ಇಲ್ಲಿ ರೂಪಕ್ಕೆ ಹೆಚ್ಚು ಒತ್ತುಕೊಡಲಾಯಿತು. ಇದು ಕೇವಲ ಸಾಂಖ್ಯಿಕ ನಿರೂಪವಾಗಿ ಸಿದ್ಧಾಂತ ಎನ್ನುವುದಕ್ಕಿಂತ ವಿಧಾನ ಎಂದು

ಕರೆಸಿಕೊಳ್ಳಲು ಅರ್ಹವೆನಿಸಿತು. ಆದ್ದರಿಂದ ಈ ವಿಧಾನ ಯಾವುದೇ ಬದಲಾದ ಅಥವಾ ಹೊಸ ಸೈದ್ಧಾಂತಿಕ ದೃಷ್ಟಿಕೋನವನ್ನು ಮುಂದಿಡಲಿಲ್ಲ. ಮೂಲಮಾತೃಕೆ ಅಥವಾ Urform ನ್ನು ಚಾರಿತ್ರಿಕವಾಗಿ ಪುನರ್ರಚಿಸುವ ಸಾಂಕೇತಿಕ ಸೂತ್ರಗಳನ್ನು ಇದು ಕೊಟ್ಟಿದೆ. ಕತೆಯೊಂದನ್ನು ಅದರ ಗುಣಸ್ವಭಾವ ಅಥವಾ ಉಪಗುಣ ಸ್ವಭಾವಗಳನ್ನಾಗಿ ಒಡೆಯಲು, ಸಾಂಖ್ಯಿಕ ರೂಪಕ್ಕಿಳಿಸಲು ಈ ವಿಧಾನವನ್ನು ಕಾರ್ಲ್ ಕ್ರೊಹ್ನ್, ಸಿ.ಡಬ್ಲ್ಯು. ವಾನ್‌ಸಿಡೊ ಹಾಗೂ ಆ್ಯಕ್ಸೆಲ್ ಓಲ್ರಿಕ್ ಮುಂತಾದವರು ಬಳಸಿಕೊಂಡರು ಆದರೆ ಈ ವಿಧಾನವನ್ನನುಸರಿಸುವವರು ಅರ್ಥದ ಸಮಸ್ಯೆ ಹಾಗೂ ತಾವು ಅಭ್ಯಸಿಸುವ ಬಗೆಗಳ ಅಂತಿಮ ರೂಪದ ಸಮಸ್ಯೆಗಳನ್ನು ದೂರ ಮಾಡುತ್ತಾರೆ. ಇಲ್ಲಿಯ ವೈಧಾನಿಕ ಪರಿಕರಗಳ ಅಸಾಮರ್ಥ್ಯದಿಂದಾಗಿ ಧ್ವನಿಮುದ್ರಿತ ರೂಪಗಳಿಂದಾಚೆಗೂ ಹೋಗುವ ಸಾಧ್ಯತೆಯಿಲ್ಲ. ಉದಾಹರಣೆಗೆ ಗೊತ್ತಾದ ಸಂಸ್ಕೃತಿಯೊಂದು ನೂರು ವರ್ಷಗಳ ಧ್ವನಿಮುದ್ರಣ, ಮುದ್ರಣ ಇತ್ಯಾದಿಗಳ ಇತಿಹಾಸ ಹೊಂದಿದ್ದರೆ ಆಗ ಈ ವಿಧಾನದ ಪ್ರಕಾರ ಮೂಲ ಅಥವಾ ಇನ್ನಾವುದೇ ಪುನರ್ರಚಿತ ಮೂಲರೂಪ ನೂರು ವರ್ಷಗಳ ಹಿಂದಕ್ಕೆ ಹೋಗುವುದಿಲ್ಲ. ವಾಸ್ತವವಾಗಿ ಅದು ನೂರು ವರ್ಷಕ್ಕೂ ಮೊದಲೇ ಇರುತ್ತದೆ ಎಂದು ನಾವು ಬಲ್ಲೆವು. ಒಂದು ವೇಳೆ ಹಾಗಿಲ್ಲದಿದ್ದರೆ ಅದರ ಮೊದಲ ಭಿನ್ನರೂಪವನ್ನು ತಾರ್ಕಿಕವಾಗಿ ಗಣನೆಗೆ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ.

ಈ ವಿಧಾನ ಅನುಸರಿಸುವ ಯಾರೇ ಆದರೂ ಪರಿಗಣನೆಗೆ ತೆಗೆದುಕೊಳ್ಳುವ ಪ್ರಕ್ರಿಯಾತ್ಮಕ ಧೋರಣೆ ಭಾಷಾವಿಜ್ಞಾನಿಗಳ ತತ್ವಕ್ಕೆ ಬಲು ಹತ್ತಿರ. ಸಾಂಸ್ಕೃತಿಕ ಸನ್ನಿವೇಶಗಳನ್ನು ನಿರ್ಲಕ್ಷಿಸಿ ನಿಯಮಗಳನ್ನು ರೂಪಿಸುವುದರ ಮೂಲಕ ಪಠ್ಯ ಹಾಗೂ ಪಠ್ಯಮಾತ್ರದಿಂದ ಸಾಧ್ಯವಿರುವ ಎಲ್ಲವನ್ನೂ ಹೊರ ಹಾಕಲು ಪ್ರಯತ್ನಿಸುವುದು, ಸಂಗ್ರಹಗೊಂಡ ಮಾಹಿತಿಯನ್ನಷ್ಟೇ ಗಣನೆಗೆ ತೆಗೆದುಕೊಳ್ಳುವುದು, ಕಾಲಗಣನಾ ದೃಷ್ಟಿ—ಈ ವಿಧಾನದ ಮಿತಿಗಳು.

ಪರಿಣಾಮ ಏನೇ ಇರಲಿ, ಈ ವಿಧಾನ ಜಾನಪದ ವಿದ್ವತ್ತಿನಲ್ಲಿ ನಾವೀನ್ಯವನ್ನು ತಂದಿತು. ವಿಶ್ಲೇಷಣಾತ್ಮಕ ಪ್ರಕ್ರಿಯೆಯಲ್ಲಿ ಗಣಿತಾತ್ಮಕ ಕರಾರುವಾಕ್ಕತೆಯನ್ನು ಒತ್ತಿಹೇಳಿತು.4 ಕಲ್ಪನಾತ್ಮಕ ಊಹೆಗಳನ್ನು ಕಡಿಮೆಮಾಡಿತು. ಇತರ ಪೂರಕ ಅಂಶಗಳೊಡನೆ ಆಶಯಸೂಚಿ ಮತ್ತು ವರ್ಗಸೂಚಿಯಂಥ ಮೌಲಿಕ ಜಾನಪದ ಸೂಚಿಗಳ ಸೃಷ್ಟಿಗೆ ಸ್ಫೂರ್ತಿ ಒದಗಿತು. ಅಲ್ಲದೆ ಕಂಪ್ಯೂಟರ್ ತಂತ್ರಜ್ಞಾನದ

---

4. ಸ್ಕ್ಯಾಂಡಿನೇವಿಯನ್ನರಲ್ಲದೆ ಅಮೆರಿಕನ್ ಹಾಗೂ ಯೂರೊಪಿಯನ್ ವಿದ್ವಾಂಸರು ಕೂಡ ಫಿನ್ನಿಷ್ ವೈಧಾನಿಕತೆಯನ್ನು ಅಳವಡಿಸಿ ಅಧ್ಯಯನ ನಡೆಸಿರುವುದುಂಟು. ಉದಾಹರಣೆಗೆ ಆರ್ಚರ್ ಟಯ್ಲರ್ ಅವರ The Black Ox, ವಾರನ್ ಇ. ರಾಬರ್ಟ್ಸ್ ಅವರ The tale of the kind and unkind girls ಹಾಗೂ Stith Thompson ಅವರ The star Husband Tale ಇಂಗ್ಲಿಷಿನಲ್ಲಿ ಲಭ್ಯವಿರುವ ಅತ್ಯುತ್ತಮ ಮಾದರಿಗಳು.

ಬಳಕೆಯ ಸಾಧ್ಯತೆಯನ್ನು ತೆರೆಯಿತು.[5] ಫಿನ್ನಿಷ್ ವೈಧಾನಿಕತೆ ಹಾಗೂ ದ್ವಿಕಾಲಿಕ ಅಧ್ಯಯನಗಳಿಗೆ ಪ್ರತಿಕ್ರಿಯೆಯಾಗಿ ರಚನಾವಾದ ಹುಟ್ಟಿಕೊಂಡಿತು ಎಂಬ ವಾದವಿದ್ದರೂ ಅದು ಫಿನ್ನಿಷ್ ವಿಧಾನದಿಂದ ಪಡೆದುಕೊಂಡಿತೆಂದೇ ಹೇಳಬೇಕು.

ಒಟ್ಟಿನಲ್ಲಿ ಜಾನಪದದ ಚಾರಿತ್ರಿಕ ಅಧ್ಯಯನದಲ್ಲಿ ಇಂದಿಗೂ ಈ ಫಿನ್ನಿಷ್ ವಿಧಾನ ಒಂದು ವೈಜ್ಞಾನಿಕ ವಿಧಾನವಾಗಿ ಉಳಿದಿದೆ. ಪ್ರಚಲಿತ ಸೈದ್ಧಾಂತಿಕ ಹಾಗೂ ವೈಧಾನಿಕ ಪರಿಷ್ಕರಣದ ಗುರುತುಗಳನ್ನು ಫಿನ್ನಿಷ್ ವಿಧಾನದಲ್ಲಿ ಸುಲಭವಾಗಿ ಪತ್ತೆ ಮಾಡಬಹುದು.

ಮನೋವಿಶ್ಲೇಷಣಾತ್ಮಕ ಪಂಥ : ಜಾನಪದ ರೂಪಗಳನ್ನು ಮನೋ ವಿಶ್ಲೇಷಣಾತ್ಮಕ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುವ ಪ್ರಯತ್ನಗಳೂ ನಡೆದಿವೆ. ಕತೆಗಳು ಏಕೆ ಹುಟ್ಟಿದವು? ಅವು ಏನನ್ನು ಹೇಳುತ್ತವೆ? ಎಂಬುದನ್ನು ವಿಶ್ಲೇಷಿಸಲು ಯತ್ನಿಸಿದವರಲ್ಲಿ ಫ್ರಾಯ್ಡ್ ಮತ್ತು ಅವರ ಅನುಯಾಯಿಗಳು ಮುಖ್ಯರು. ಅವರ ದೃಷ್ಟಿಯಲ್ಲಿ ಕತೆ, ಪುರಾಣಗಳು ಸಮಾಜದಲ್ಲಿ ದಮನಕ್ಕೊಳಗಾಗಿ ವ್ಯಕ್ತಪಡಿಸಲಾಗದ ವಿಷಯಗಳ ಅಭಿವ್ಯಕ್ತಿ ಮಾಧ್ಯಮಗಳು. ಸಂಸ್ಕೃತಿಯಲ್ಲಿ ಹೀಗೆ ದಮನಕ್ಕೊಳಗಾಗಿರುವ ಬಹು ಮುಖ್ಯ ವಿಷಯ ಲೈಂಗಿಕತೆಗೆ ಸಂಬಂಧಿಸಿದ್ದಾಗಿದೆ. ದಮನಗೊಂಡ ಆಸೆಗಳು, ಶೈಶವಾವಸ್ಥೆಯ ಲೈಂಗಿಕ ಭಯ ಕನಸುಗಳಲ್ಲಿ ಸಾಂಕೇತಿಕವಾಗಿ ಅಭಿವ್ಯಕ್ತಗೊಳ್ಳುತ್ತವೆ (ಉದ್ಧೃತ, ಡಾರ್ಸನ್ : 1975 : 26). ಅದುಮಿಟ್ಟ ಭಾವನೆಗಳು ಹೇಗೆ ಕತೆಯಲ್ಲಿ ವ್ಯಕ್ತಗೊಳ್ಳುತ್ತವೆ ಎಂಬುದನ್ನು ವಿವರಿಸಲು ಫ್ರಾಯ್ಡ್ ಈಡಿಪಸ್ ಪುರಾಣವನ್ನು ಬಳಸಿಕೊಂಡರು. ಮುಂದೆ ಅದೇ ಅವರ ಸಿದ್ಧಾಂತದ ತಳಹದಿಯಾಯಿತು.

ಸಿಗ್ಮಂಡ್ ಫ್ರಾಯ್ಡ್ ಅವರ ಬರಹಗಳು, ಪ್ರಯೋಗಗಳು ಹಾಗೂ ಶೋಧಗಳು ಜಾನಪದ ಅಧ್ಯಯನಕಾರರ ಸೈದ್ಧಾಂತಿಕ ಹಾಗೂ ವೈಧಾನಿಕ ಆವಕಾಶಗಳನ್ನು ಸಾಕಷ್ಟು ಚೆನ್ನಾಗಿಯೇ ಪ್ರಭಾವಿಸಿದವು. ಸ್ವಯಂ ಫ್ರಾಯ್ಡ್ ಅವರೇ ಪುರಾಣಗಳು, ಕತೆಗಳು ಅದರಲ್ಲೂ ಕನಸುಗಳನ್ನಾಧರಿಸಿ ಮಾನವ ಮನಸ್ಸಿನ ಮನೋವಿಶ್ಲೇಷಣಾತ್ಮಕ ಪರಿಶೋಧಗಳನ್ನು ನಡೆಸಿರುವುದುಂಟು. ಫ್ರಾಯ್ಡಿಯನ್ ತತ್ವಗಳನ್ನು ಅನುಮೋದಿಸುವವರು ಕತೆ ಪುರಾಣಗಳಲ್ಲಿರುವ ಅಸಂಗತವೆಂದು ಕಾಣುವ ಎಲ್ಲ ವಿಷಯಗಳೂ ಒಂದಲ್ಲ ಒಂದು ರೀತಿಯಲ್ಲಿ ಲೈಂಗಿಕತೆಗೆ ಸಂಬಂಧಿಸಿದ ವಿಷಯವನ್ನೇ ಸಂಕೇತಿಸುತ್ತವೆ ಎಂದು ನಂಬುವುದು ಸಾಮಾನ್ಯ. ರಕ್ತಹೀರುವ ಬ್ರಹ್ಮರಾಕ್ಷಸನ ಕಲ್ಪನೆಗೆ ಸ್ವಪ್ನೇಂದ್ರಿಯ ಮತ್ತು ದಮನಕ್ಕೊಳಗಾದ ಕಾಮ ಕಾರಣ. ಸರ್ಪರೂಪದಲ್ಲಿರುವ

5. ಇತ್ತೀಚೆಗೆ ಪೆನ್ಸಿಲ್ವೇನಿಯಾ ವಿಶ್ವವಿದ್ಯಾನಿಲಯದ ಕೆಲವು ಪ್ರತಿಭಾವಂತ ಜಾನಪದ ಅಧ್ಯಯನಕಾರರು ಫಿನ್ನಿಷ್ ಮಾದರಿಯಲ್ಲಿ ಎಲೆಕ್ಟ್ರಾನಿಕ್ ಕಂಪ್ಯೂಟರ್‌ಗಳನ್ನು ಬಳಸಲು ಆರಂಭಿಸಿದ್ದಾರೆ.

ಡ್ರ್ಯಾಗನ್ ಶಿಶ್ನದ ಸಂಕೇತ ಎಂದು Ernest Jones ಅಭಿಪ್ರಾಯಪಟ್ಟಿದ್ದಾರೆ (ಡಂಡೆಸ್ : 1965 : 88–102).

ಈ ಪಂಥದ ಪ್ರಕಾರ, ಕನಸುಗಳು ವ್ಯಕ್ತಿಯೊಬ್ಬನ ಶೈಶವ ರೂಪದ ಅಪೇಕ್ಷೆಗಳನ್ನು ಅಭಿವ್ಯಕ್ತಿಸಿದರೆ ಪುರಾಣಗಳು ಇಡೀ ಜನತೆಯ ಮಾನಸಿಕ ದಮನಗಳನ್ನು ಬಯಲಿಗೆಳೆಯುತ್ತವೆ. ಮೌಖಿಕ ಪರಂಪರೆಯ ಸಾಹಿತ್ಯವೂ ಹಲವು ಸ್ತರಗಳಲ್ಲಿ ಲೈಂಗಿಕ ತೃಷ್ಣೆ, ಅಪರಾಧ ಹಾಗೂ ಅವಮಾನಗಳನ್ನು ಕುರಿತ ಕತೆಗಳನ್ನು ಹೇಳುತ್ತವೆ. ಸಲಿಂಗರತಿ, ಶಿಶ್ನಕಿಚ್ಚು, ದೈಹಿಕ ಹಿಂಸೆ, ಅನೈತಿಕ ಲೈಂಗಿಕ ಸಂಬಂಧ ಇವೇ ಮುಂತಾದ ಸಂಗತಿಗಳು ಆ ಕತೆಗಳಲ್ಲಿ ಗುಪ್ತಗಾಮಿನಿಯಾಗಿರುತ್ತವೆ (ಡಾರ್ಸನ್ : 1975 : 26). ಫ್ರಾಯಡ್, ಈಡಿಪಸ್ ಪುರಾಣದಲ್ಲಿ ಮಗ ಮತ್ತು ತಾಯಿಯರ ನಡುವೆ ಲೈಂಗಿಕ ಆಕರ್ಷಣೆ ಚೋದಿತವಾಗುವುದನ್ನು, ತಂದೆಯ ಬಗೆಗೆ ವೈರತ್ವ ಭಾವನೆ ಬೆಳೆಸಿಕೊಳ್ಳುವ ಈಡಿಪಸ್ ಕಾಂಪ್ಲೆಕ್ಸನ್ನು ವಿಶ್ಲೇಷಿಸಿರುವುದು ಈ ಕ್ಷೇತ್ರಕ್ಕೆ ಸಂದ ಉತ್ತಮ ಕೊಡುಗೆಯಾಗಿದೆ.

ಫ್ರಾಯ್ಡಿಯನ್ ತತ್ವವನ್ನು ಮೆಚ್ಚಿಕೊಂಡ ಇನ್ನೂ ಅನೇಕರು ಜಾನಪದ ಸಾಮಗ್ರಿಯನ್ನು ಆ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಯತ್ನ ನಡೆಸಿರುವುದುಂಟು. Erich–Fromm ಕತೆ ಮತ್ತು ಪುರಾಣಗಳನ್ನು ಸೌರಪುರಾಣ ವಿಧಾನದಲ್ಲಿ ವಿಶ್ಲೇಷಿಸಿ ಕತೆಗಳಲ್ಲಿರುವ ಸಂಕೇತಗಳನ್ನು ಹೇಳಿದ್ದಾರೆ. Geza Roheim ದೃಷ್ಟಿಯಲ್ಲಿ ಕನಸು ಮತ್ತು ಕತೆಗಳು ಒಂದೇಯಲ್ಲ. ಕನಸಿನಿಂದ ಕತೆಗಳು ಹುಟ್ಟಿದವು. ಯಾರೋ ಒಬ್ಬಾತ ಒಂದು ವಿಚಿತ್ರ ಕನಸು ಕಂಡು ಇತರರಿಗೆ ನಿರೂಪಿಸಿರಬೇಕು. ಇತರರೂ ಇಂಥ ಅನೇಕ ಕನಸುಗಳನ್ನು ಕಂಡಿರಬೇಕು. ಹೀಗೆ ಅದನ್ನೇ ಮತ್ತೆ ಮತ್ತೆ ನಿರೂಪಿಸುವ ಪ್ರಕ್ರಿಯೆಯಲ್ಲಿ ಕನಸುಗಳೇ ಕತೆಯಾಗಿ ಬೆಳೆದವು (ಡಾರ್ಸನ್ : 1975 : 28) Vonder Layen ಮತ್ತು Ludwig Laistner ಅವರೂ ಕನಸುಗಳೇ ಕತೆಗಳ ಹುಟ್ಟಿಗೆ ಕಾರಣ ಎನ್ನುತ್ತಾರೆ. ಭಯಾನಕ ಕನಸುಗಳ ಬಗೆಗೆ ತೀವ್ರ ಆಸಕ್ತಿ ತೋರಿದ Laistner ಕತೆ, ಐತಿಹ್ಯಗಳು ಮುಂತಾದುವನ್ನು ಅರ್ಥೈಸಲು ಕನಸು ಮತ್ತು ಅದರ ಅರ್ಥವೇ ಕೀಲಿಕೈ ಎಂದಿದ್ದಾರೆ.

ಈ ದೃಷ್ಟಿಯಿಂದ ಮನೋವಿಶ್ಲೇಷಣಾತ್ಮಕ ಅಧ್ಯಯನ ಪ್ರಧಾನವಾಗಿ ಅರ್ಥವನ್ನು ಕುರಿತದ್ದಾಗಿದೆ. ಆದರೆ ಈ ಪಂಥದ ವಿಚಾರಗಳು ಲೈಂಗಿಕ ಸಂಕೇತಗಳಿಂದ ತುಂಬಿ ಹೋಗಿರುವುದು ಕುತೂಹಲಕರ. ಜಾನಪದ ಸಾಮಗ್ರಿಯ ಸೈದ್ಧಾಂತಿಕ ಅಧ್ಯಯನದ ಮೇಲೆ ತೀವ್ರ ಪ್ರಭಾವ ಬೀರಿದ ಫ್ರಾಯ್ಡ್ ಚಿಂತನೆಗಳು ಪ್ರಧಾನವಾಗಿ ಕನಸುಗಳು ಮತ್ತು ಕನಸುಗಾರರನ್ನು ಆಧರಿಸಿವೆ. ವಾಸ್ತವವಾಗಿ, ಜಾನಪದವು ವಾಸ್ತವವನ್ನು ಅರ್ಥೈಸುವಂಥದಲ್ಲ. ಮೊದಲಿಗೆ ಇದು ಕನಸುಗಳನ್ನು ಹೋಲುತ್ತದೆ ಎಂದು ತಿಳಿದುಕೊಳ್ಳಲಾಗಿತ್ತು. ಅಲ್ಲದೆ ಅಂಥವೇ ವಿಶ್ಲೇಷಣೆಗೆ ಒಳಪಡುತ್ತದೆ ಎಂದೂ ಭಾವಿಸಲಾಗಿತ್ತು. ಆದರೆ ಎರಡರ ನಡುವೆ ಇದ್ದ ಮೂಲಭೂತ ವ್ಯತ್ಯಾಸ

ಗಳನ್ನು ಕಂಡುಕೊಳ್ಳಲಾಗಿತ್ತು. ಕನಸುಗಾರರನ್ನು ಮನೋವಿಶ್ಲೇಷಣಾತ್ಮಕವಾಗಿ ಅಭ್ಯಸಿಸದ ಹೊರತು ಮನೋವಿಶ್ಲೇಷಣಾತ್ಮಕ ವೈಧಾನಿಕತೆ ಉಪಯೋಗಕ್ಕೆ ಬರುವುದಿಲ್ಲ. ಅಂತೆಯೇ ಪುರಾಣ ಮತ್ತು ಕತೆಗಳನ್ನು ಹಳೆಯ ಕಾಲದವು ಎಂದು ತಿಳಿದುಕೊಳ್ಳಲಾಗಿತ್ತು. ಅವನ್ನು ರಚಿಸಿದವರ ಅನುಭವದ ಹಿನ್ನೆಲೆಯಲ್ಲಿ ಪರಿಲಕ್ಷಿಸ ಬೇಕಾಗುತ್ತದೆ. ಈ ವಾದ ಎಷ್ಟೇ ಮೌಲಿಕವಾದದ್ದಾಗಿರಲಿ ಕೆಲವು ಸಮಸ್ಯೆಗಳನ್ನು ಒಡ್ಡುತ್ತದೆ. ಪುರಾಣ ರಚನಾಕಾರನ ಅನುಭವದ ನೆಲೆ ಲಭ್ಯವಾದರೂ ಪುರಾಣ ವಿಶ್ಲೇಷಣಾ ಸಂದರ್ಭದಲ್ಲಿ ಅದು ಉಪಯೋಗಕ್ಕೆ ಬಾರದಂತೆ ವಿಶ್ಲೇಷಣಾ ಪರಿಕರಗಳೇ ತಡೆಯೊಡ್ಡುತ್ತವೆ. ವ್ಯಕ್ತಿ ವಿಶಿಷ್ಟವಾದ ಭಾವನೆಯ ಅಭಿವ್ಯಕ್ತಿಯೇ ವ್ಯಕ್ತಿಯೊಬ್ಬನ ಕನಸು. ಪುರಾಣವಾದರೊ ಗುಂಪೊಂದರ ಮನಸ್ಸುಗಳಿಂದ ಪರಿಪ್ಲುತ ವಾದುದು. ಕೆಲವೊಮ್ಮೆ ಅದು ಇಡೀ ರಾಷ್ಟ್ರದ ಮನಸ್ಸಿನಿಂದ ಪೋಷಿತವಾಗಿರುತ್ತದೆ. ಕನಸೊಂದು ಕನಸುಗಾರನ ವ್ಯಕ್ತಿತ್ವಕ್ಕೆ ಸಂಬಂಧಿಸಿದರೆ ಪುರಾಣವು ವ್ಯಕ್ತಿತ್ವವೊಂದಕ್ಕೆ ಬೆಸೆದಿರುವುದು ಸೈದ್ಧಾಂತಿಕ ದೃಷ್ಟಿಯಿಂದ ಅಪೇಕ್ಷಣೀಯವಲ್ಲ. ಎರಡೂ ಒಂದೇ ಸೈದ್ಧಾಂತಿಕ ಮಾದರಿಗೆ ಒಳಪಡುತ್ತವೆ ಎಂದು ಹೇಳುವುದು ಕಷ್ಟ. ಪುರಾಣದ ಅವ್ಯಕ್ತ ವಸ್ತು ಹಾಗೂ ಪರಿಣಾಮವನ್ನು ಸಂಬದ್ಧಗೊಳಿಸುವುದು ಇಡೀ ಸಂಸ್ಕೃತಿಗೆ ಅನ್ವಯವಾಗುವಂತೆ ಉತ್ತಮ ಫಲಶ್ರುತಿಗಾಗಿ ಸಂಸ್ಕೃತಿಯನ್ನು ಪರಿಗಣಿಸುವುದು, ಚರಿತ್ರೆಯನ್ನು ಒಳಗೊಂಡಂತೆ ಎಲ್ಲ ಗುಂಗಳಿಗೂ ಪುರಾಣವನ್ನು ಹತ್ತಿರ ತರುವುದು ಬಹುಮಹತ್ವದ ಕೆಲಸ. ಸಂಪೂರ್ಣ ಸತ್ಯವನ್ನೇ ಆಧರಿಸುವುದು ಮನೋ ವಿಶ್ಲೇಷಣಾತ್ಮಕ ಸಿದ್ಧಾಂತದ ಅಭಿಲಾಷೆಗೆ ವಿರುದ್ಧವಾದುದು ಎಂಬುದನ್ನು ಮರೆಯ ಲಾಗದು.

ವಿದ್ವಾಂಸರಿಂದ ಕಡೆಗಣಿಸಲ್ಪಟ್ಟ ಈ ವಿಧಾನ ಹೆಚ್ಚು ಒತ್ತಿ ಹೇಳಿದ ಅಂಶ ವೆಂದರೆ ಪುರಾಣ, ಕತೆಗಳೊಡನೆ ಸಾಗಿ ಬರುವ ರಹಸ್ಯ ಸಂದೇಶಗಳು ವಸ್ತುವಿನಲ್ಲಿ ಗೋಚರಿಸದೆ ಅಂತಃಸ್ಥವಾಗಿರುತ್ತವೆ ಎಂದು ಹೇಳಿದುದು. ಗಾದೆಗಳು, ಒಗಟುಗಳು ಮತ್ತಿತರ ಪ್ರಕಾರಗಳಲ್ಲಿ ಅರ್ಥಗಳು ಸಾಮಾನ್ಯವಾಗಿ ವಸ್ತುವಿನಲ್ಲಿ ಅಡಕವಾಗಿರುವುದು ಸ್ಪಷ್ಟ. ಪ್ರಾಯಃ ಇದು ಪುರಾಣಗಳು ಮತ್ತು ಕತೆಗಳು ಏಕೆ ಹೆಚ್ಚು ಮನೋ ವಿಶ್ಲೇಷಣಾತ್ಮಕ ವ್ಯಾಖ್ಯಾನಕ್ಕೆ ಗುರಿಯಾಗಿವೆ ಎಂಬುದನ್ನು ವಿವರಿಸುತ್ತದೆ. ಪುರಾಣಗಳು ಮತ್ತು ಕತೆಗಳು ರಹಸ್ಯ ಸಾಂಕೇತಿಕಾರ್ಥಗಳಿಂದ ತುಂಬಿರುತ್ತವೆ ಎಂಬುದು ಸುಳ್ಳೇನಲ್ಲ. ಈ ಕಾರಣಕ್ಕಾಗಿಯೇ ಅವುಗಳನ್ನು ಅರ್ಥೈಸಲು ವಿಶಿಷ್ಟ ತಂತ್ರ ವಿಧಾನಗಳು ಬೇಕು. ಆಶ್ಚರ್ಯದ ಮಾತೆಂದರೆ ಒಂದೆಡೆ ಅಂತರರೂಪಗಳ ನಡುವಿನ ಸಾಂಸ್ಕೃತಿಕ ಅರ್ಥಗಳನ್ನು ಹುಡುಕುವ ಕೆಲಸವನ್ನು ವಿದ್ವಾಂಸರು ಆರಂಭಿಸಿಯೇ ಬಿಟ್ಟದ್ದು. ಇನ್ನೊಂದೆಡೆಯಲ್ಲಿ ಅವರು ತಮ್ಮ ತಂತ್ರ ವಿಧಾನಗಳನ್ನು ಅಂತರ-ರೂಪಗಳಲ್ಲಿ ಕಾರ್ಯಗತಗೊಳಿಸಲು ಇಚ್ಛಿಸದಿರುವುದು. ಇದು ನಮ್ಮ ಸಾಮಾನ್ಯ ಸೈದ್ಧಾಂತಿಕ ಪರಿಕರಗಳಿಗಷ್ಟೇ ಪ್ರತಿಕೂಲವಾದುದಲ್ಲ. ನಮ್ಮ ವರ್ಗೀಕರಣ

ಪದ್ಧತಿ ಮತ್ತು ವಿನ್ಯಾಸಗಳ ಸಮರ್ಪಕ ವಿಶ್ಲೇಷಣೆಯನ್ನು ಕರಾರುವಾಕ್ಕಾಗಿಸಲು ಅಷ್ಟೇ ಅನಾನುಕೂಲ.

ಮನೋವಿಶ್ಲೇಷಣಾತ್ಮಕ ವಿಧಾನದ ಹಿನ್ನೆಲೆಯಲ್ಲಿ ಜಾನಪದ ರೂಪಗಳನ್ನು ವ್ಯಾಖ್ಯಾನಿಸುವುದು ಚಾಲ್ತಿಗೆ ಬಂದ ಮೇಲೆ ಆಧುನಿಕ ಜಾನಪದ ಎದುರಿಸುತ್ತಿರುವ ಸಮಸ್ಯೆಗಳ ಪರಿಚಯವೂ ಆಗುತ್ತಿದೆ. ಅಷ್ಟೇ ಮಹತ್ವದ್ದೆಂದರೆ ವಿವಾದಾತ್ಮಕವಾದ ಲೈಂಗಿಕ ಸಾಂಕೇತಿಕತೆಯ ಸಮಸ್ಯೆ. ಮನೋವಿಶ್ಲೇಷಣಾತ್ಮಕ ವಿಶ್ಲೇಷಣೆಯ ಸಮರ್ಥನೆಗಾಗಿ ಅದು ಒಂದು ಸೈದ್ಧಾಂತಿಕ ತಂತ್ರವಾಗಿ ಚಾಲ್ತಿಗೆ ಬಂದಿದೆ. ಈ ವಿಧಾನಗಳಲ್ಲಿ ಲೈಂಗಿಕತೆ ಹೆಚ್ಚು ಗಮನ ಸೆಳೆದಿದ್ದರೂ ಪಠ್ಯ/ಸಂದರ್ಭ ಅಥವಾ ಎರಡರಿಂದಲೂ ಉತ್ಪನ್ನಗೊಳ್ಳುವುದಕ್ಕಿಂತ ಹೆಚ್ಚು ಬಲಾತ್ಕಾರಕ್ಕೆ ಒಳಪಟ್ಟಿದೆ. ಲೈಂಗಿಕ ಸಾಂಕೇತಿಕತೆ ಮನೋವಿಜ್ಞಾನದಿಂದ ಆರೋಪಿತವಾಗಿದ್ದರೂ ಜಾನಪದ ತಜ್ಞರಿಗೆ ಜಾನಪದದ ಅರ್ಥವನ್ನು ಗ್ರಹಿಸಲು ಸ್ಫೂರ್ತಿ ನೀಡಿದೆ. ವಾಸ್ತವವಾಗಿ, ಲೈಂಗಿಕತೆ ಸಾಂಕೇತಿಕ ರೂಪದಲ್ಲಿ ಅಥವಾ ಹಾಗಿಲ್ಲದೆಯೂ ಗಾದೆ ಒಗಟು ಗೀತೆ ಈ ರೂಪಗಳಲ್ಲಿ ಗೋಚರಿಸಬಹುದು. ಕುತೂಹಲಕಾರಕ ಪ್ರಶ್ನೆಯೆಂದರೆ ಲೈಂಗಿಕತೆ ಈ ರೂಪಗಳ ವಸ್ತುವಿನಲ್ಲಷ್ಟೇ ಏಕೆ ಎದ್ದು ಕಾಣುತ್ತದೆ? ಪುರಾಣ ಕತೆಗಳಲ್ಲಿ ಏಕೆ ಅಂತಸ್ಥವಾಗಿ ಬರುತ್ತದೆ? ಇವು ಕೇವಲ ರೂಪ ವ್ಯತ್ಯಯಗಳೆ? ಅಥವಾ ಜಾನಪದ ಸಿದ್ಧಾಂತದ ದೌರ್ಬಲ್ಯವೆ?—ಇವೇ ಮುಂತಾದ ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ.

ಮತ್ತೊಂದು ಮಹತ್ವದ ಸಂಗತಿಯೆಂದರೆ ಜಾನಪದ ತಜ್ಞರು ಮನೋವಿಶ್ಲೇಷಣಾತ್ಮಕ ತಂತ್ರ ಅನುಸರಿಸಿ ರೂಢಿಸಿಕೊಂಡಿರುವ ಲೈಂಗಿಕ ಸಾಂಕೇತಿಕತೆ ಸಾಮಾನ್ಯವಾಗಿ ತಾವು ಅನ್ವೇಷಿಸುವ ಸಾಮಗ್ರಿಯ ಅಂತಃಸ್ಥ ಹಾಗೂ ಎದ್ದು ಕಾಣುವ ವಸ್ತುಸ್ವಾಮ್ಯದ ಪ್ರಕ್ರಿಯೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿರುವುದು. ಈ ಶೋಧನೆ ತಾರ್ಕಿಕವಾಗಿ ಅರ್ಥದ ಸಮಸ್ಯೆಗೆ ಸ್ವೀಕಾರಾರ್ಹ ಉತ್ತರವಾಗಿದೆ. ಕಠಿಣವಾದ ಸೈದ್ಧಾಂತಿಕ ನಿಲುವು ವಸ್ತುವಿನ ಮೌಲ್ಯವನ್ನು ಪರಿಗಣಿಸಲು ಅವಕಾಶ ಮಾಡಿಕೊಟ್ಟಂತೆ ಕಾಣುವುದಿಲ್ಲ. ಈ ಸೈದ್ಧಾಂತಿಕ ಸಂಭಾವನೆಯಿಂದಾಗಿ ಅದನ್ನು ಜಾನಪದ ತಜ್ಞರು ಹಾಗೂ ಮಾನವಶಾಸ್ತ್ರಜ್ಞರು ಸಂಸ್ಕೃತಿಯೊಂದರ ಎಲ್ಲ ಆಕಾಂಕ್ಷೆಗಳ ಮೂಲ ಸೆಲೆಯಾಗಿ ಲೈಂಗಿಕ ಆತಂಕವಾಗಿ ವರ್ಣಿಸತೊಡಗಿದರು. ಅದು ಅನೇಕ ಸಂಸ್ಕೃತಿಗಳಲ್ಲಿ ಇನ್ನೂ ಜೀವಂತವಾಗಿರುವ ಲೈಂಗಿಕ ಸಾಂಕೇತಿಕ ಪದ್ಧತಿಗಳ ವ್ಯತ್ಯಾಸಗಳನ್ನು ಕಡೆಗಣಿಸುವ ಹೇಳಿಕೆಗಳನ್ನು ಮಾಡಿರುವಂತೆ ತೋರುತ್ತದೆ.

ಹೀಗೆ ಮನೋವಿಶ್ಲೇಷಣಾತ್ಮಕ ಸಿದ್ಧಾಂತ ಕತೆಗಳಲ್ಲಿನ ಅಸಂಗತತೆಗಳನ್ನು ವರ್ಣಿಸುವುದರತ್ತಲೇ ಗಮನ ಕೇಂದ್ರೀಕರಿಸಿತು. ಕತೆಗಳು ಯಾವಾಗ ಯಾರಿಂದ ಎಲ್ಲಿ ಮೊದಲು ನಿರೂಪಣೆಗೊಂಡವು ಎಂಬುದರ ಅರಿವಿಲ್ಲದೆ ಇಂಥವೇ ಸಂದರ್ಭದಲ್ಲಿ ಕತೆ ಹುಟ್ಟಿತು ಎಂಬ ಅಭಿಪ್ರಾಯಕ್ಕೆ ಬರುವುದು ಕತೆಯ ಹುಟ್ಟು ಅಥವಾ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿರುವುದಿಲ್ಲ. ಮನೋವೈಜ್ಞಾನಿಕ

ವಿಶ್ಲೇಷಣೆ ಒಂದು ಸಾಧ್ಯತೆಯಾಗಬಹುದೇ ಹೊರತು ವಾಸ್ತವ ವಿವರಣೆಯಾಗುವುದಿಲ್ಲ (ಸ್ಟಿಥ್‌ಥಾಂಸನ್ : 1951 : 386)

ಸಂಪ್ರದಾಯಬದ್ಧ ಜಾನಪದ ವಿದ್ವಾಂಸರು, ಮಾನವಶಾಸ್ತ್ರಜ್ಞರು ಮನೋವಿಶ್ಲೇಷಣಾತ್ಮಕ ಸಿದ್ಧಾಂತದ ಬಗೆಗೆ ಬೇರೆ ಬೇರೆ ನಿಲುವುಗಳನ್ನು ಹೊಂದಿದ್ದಾರೆ. ಈ ಪಂಥದವರು ಸಾಂಸ್ಕೃತಿಕ ಸಂದರ್ಭವನ್ನು ಗಮನಕ್ಕೆ ತಂದುಕೊಳ್ಳದಿರುವುದು ದೊಡ್ಡ ಲೋಪವಾಗಿದೆ. ಆಯಾ ಸಂಸ್ಕೃತಿಯಿಂದ ರೂಪುಗೊಳ್ಳುವ ನಂಬಿಕೆ ಪದ್ಧತಿಗಳನ್ನು ಇವರು ಜೈವಿಕ ಆನುವಂಶೀಯತೆ ಎಂದು ವರ್ಣಿಸುತ್ತಾರೆ. ಯಾವುದೇ ದಮನ ಅಥವಾ ವಿಪ್ಲವದ ಕಾರಣಗಳನ್ನು ವಿಶ್ಲೇಷಿಸುವಾಗ ಆ ಸಾಂಸ್ಕೃತಿಕ ಸಂದರ್ಭ ಮತ್ತು ಪರಿಸರದ ಸನ್ನಿವೇಶಗಳನ್ನು ಅಗತ್ಯವಾಗಿ ಗಮನಿಸಬೇಕು (ಬಾಸ್ಕಂ : 1965 : 291) ಈ ಸಿದ್ಧಾಂತ ಪ್ರಕೃತಿ, ಸಂಸ್ಕೃತಿ, ಚರಿತ್ರೆ ಎಲ್ಲದರಿಂದ ಬೆನ್ನು ತಿರುಗಿಸಿ ಮಾನವನ ಸುಪ್ತ ಪ್ರಜ್ಞೆಯ ಕತ್ತಲೆಯ ಆಳಕ್ಕೆ ದುಮುಕಿ ಸಂಕೇತಗಳನ್ನು ಕಂಡುಹಿಡಿಯುತ್ತದೆ (ಮಲಿನೋಸ್ಕಿ : 1948 : 15). ತಾವು ಎಲ್ಲೋ ಒಂದು ಕಡೆ ಗಮನಿಸಿದ ವಿಷಯಗಳನ್ನೇ ಇಡೀ ಮಾನವಕುಲಕ್ಕೆ ಸಮಾನವಾದವು ಎನ್ನುವ ತಪ್ಪು ಗ್ರಹಿಕೆಯಿಂದ ವಿಶ್ಲೇಷಣೆ ನಡೆಸಿದ್ದು ದೊಡ್ಡ ಅತಿರೇಕವೇ ಸರಿ ಜಾನಪದ ಸಾಮಗ್ರಿಯನ್ನು ಆಯಾ ಸಾಂಸ್ಕೃತಿಕ ಸಂದರ್ಭಗಳ ಹಿನ್ನೆಯಲ್ಲಿ ಪರಿಭಾವಿಸಿ ನಿರ್ಣಯಗಳನ್ನು ಆ ಮಿತಿಯಲ್ಲೇ ಅನ್ವಯಿಸುವುದು ಯುಕ್ತ.

ರಾಚನಿಕ ವಿಶ್ಲೇಷಣಾ ಸಿದ್ಧಾಂತ : ಜಾನಪದ ರೂಪಗಳನ್ನು ರಚನೆಯ ದೃಷ್ಟಿಯಿಂದ ವಿಶ್ಲೇಷಿಸುವ ಮತ್ತು ಅರ್ಥೈಸುವ ಪ್ರಯತ್ನ ಈಚಿನದು. ಮೊದಲಿಗೆ ಜಾನಪದ ಸಾಮಗ್ರಿಗಳ ಅಧ್ಯಯನಕ್ಕೆ ಸಾಂಪ್ರದಾಯಿಕ ರೀತಿಯ ಚಾರಿತ್ರಿಕ ಧೋರಣೆ ಹಾಗೂ ಸೂಕ್ಷ್ಮ ಅಧ್ಯಯನ ವಿಧಾನಗಳನ್ನೇ ಅನುಸರಿಸಲಾಗುತ್ತಿತ್ತು. ಇಪ್ಪತ್ತನೆಯ ಶತಮಾನದ 20 ಮತ್ತು 30 ರ ದಶಕಗಳಲ್ಲಿ ರಾಚನಿಕ ವಿಶ್ಲೇಷಣಾ ವಿಧಾನ ಒಂದು ಪರಿಣಾಮಕಾರಿ ಚಿಂತನವಾಗಿ ಹರಿದುಬಂದಿತು. ಆಂಡ್ರೆ ಜೊಲ್ಲೆಸ್ ಲಾರ್ಡ್ ರ‍್ಯಾಗ್ಲಾನ್, ಓಲ್ರಿಕ್, ವಾನ್‌ಸಿಡೊ ಮುಂತಾದವರು ಜಾನಪದವನ್ನು ರಾಚನಿಕ ದೃಷ್ಟಿಯಿಂದ ಅಭ್ಯಸಿಸುವ ಯತ್ನಮಾಡಿದರು ಆದರೆ ಸಂಪ್ರದಾಯನಿಷ್ಠ ವಿದ್ವಾಂಸರು ಅವರ ಪ್ರಯತ್ನಗಳಿಗೆ ಹೆಚ್ಚು ಮಹತ್ವ ನೀಡಲಿಲ್ಲ. ಈ ಪ್ರತಿರೋಧದ ನಡುವೆಯೇ ರಷ್ಯನ್ ರೂಪವಿಜ್ಞ ವಿ. ಜೆ. ಪ್ರಾಪ್ 1928 ರಲ್ಲಿ ರಷ್ಯನ್ ಭಾಷೆಯಲ್ಲಿ Morphology of the Folktale ಗ್ರಂಥವನ್ನು ಹೊರತಂದು ನಿಜವಾದ ಅರ್ಥದಲ್ಲಿ ರಚನಾತತ್ವವನ್ನು ಬೆಳಗಿಸಿದರು. ಈ ಪ್ರತಿಭಾಪೂರ್ಣ ಅಸಾಧಾರಣ ಗ್ರಂಥ ತನ್ನ ಪ್ರಖರ ವಿಚಾರಗಳಿಂದ ಹಿಂದಿನ ಎಲ್ಲ ಅಧ್ಯಯನಗಳನ್ನೂ ಮಸುಳುವಂತೆ ಮಾಡಿತು. ದುರ್ದೈವದಿಂದ, ಈ ಗ್ರಂಥ ವಿದ್ವದ್ ಮನ್ನಣೆಗಾಗಿ ಸುಮಾರು ಮೂವತ್ತು ವರ್ಷ ಕಾಲ ಕಾಯಬೇಕಾಯಿತು. ಇದಕ್ಕೆ ಕಾರಣಗಳಿವೆ: ಮೊದಲನೆಯದಾಗಿ, ಇದು 1958ರ ವರೆಗೂ ಇಂಗ್ಲಿಷಿಗೆ ತರ್ಜುಮೆಗೊಳ್ಳಲಿಲ್ಲ ಎರಡನೆಯದಾಗಿ, ಪ್ರಧಾನವಾಗಿ

ಸಮಕಾಲಿಕ ತತ್ವಗಳನ್ನಾಧರಿಸಿದ ಈ ಗ್ರಂಥವನ್ನು ರಷ್ಯಾ ಮತ್ತು ಇತರೆಡೆಗಳಲ್ಲಿ ಆಗ ಪ್ರಬಲವಾಗಿದ್ದ ದ್ವಿಕಾಲಿಕಧೋರಣೆ ಸಂಪೂರ್ಣವಾಗಿ ನಿರ್ಲಕ್ಷಿಸಿತ್ತು. ದೈವವಶಾತ್, 1958ರ ಹೊತ್ತಿಗೆ ಅಧ್ಯಯನಕಾರರ ಧೋರಣೆಗಳು ಬದಲಾಗಿ ಜಾನಪದೀಯ ವೈಧಾನಿಕತೆಯಲ್ಲಿ ವೈಜ್ಞಾನಿಕತೆ ಕಾಣಿಸಿಕೊಳ್ಳಲಾರಂಭಿಸಿತು. ಈ ವೈಜ್ಞಾನಿಕ ಚಿಂತನೆಯ ಬೇರುಗಳು ಆಳವಾಗಿ ಇಳಿಯಲು ಪ್ರಾಪ್ ಗ್ರಂಥ ಅವಕಾಶ ಕಲ್ಪಿಸಿದ್ದೇ ಅಲ್ಲದೆ ಆಧುನಿಕ ಜಾನಪದ ವಿದ್ವತ್ತಿನಲ್ಲಿ ಕ್ರಾಂತಿಕಹಳೆಯನ್ನೇ ಮೊಳಗಿಸಿತು. 'ಯಾವುದೇ ಘಟನೆಯ ಮೂಲವನ್ನು ಹುಡುಕುವ ಮೊದಲು ಆ ಘಟನೆಯನ್ನು ವರ್ಣಿಸಬೇಕು' ಎಂಬ ಕ್ರಾಂತಿಕಾರಕ ವಿಚಾರಧಾರೆಯಿಂದ ಅದು ಆಗಲೇ ಬಿರುಕುಬಿಡತೊಡಗಿದ್ದ ಸೂಕ್ಷ್ಮ ಅಧ್ಯಯನ ಹಾಗೂ ದ್ವಿಕಾಲಿಕ ಅಧ್ಯಯನಗಳ ಬುಡವನ್ನೇ ನಲುಗಿಸಿಬಿಟ್ಟಿತು.

ಗ್ರಿಮ್ಮರ ಕಾಲದಿಂದಲೂ ವಿದ್ವಾಂಸರು ಜಾನಪದ ಕ್ಷೇತ್ರ ಎದುರಿಸುತ್ತಿದ್ದ ಅನೇಕಾನೇಕ ಕ್ಲಿಷ್ಟ ಸಮಸ್ಯೆಗಳಿಗೆ ಉತ್ತರಗಳನ್ನು ದೊರಕಿಸಿಕೊಳ್ಳುವ ಯತ್ನ ಮಾಡುತ್ತ ಬಂದಿದ್ದಾರೆ. ವಿವಿಧ ಪ್ರದೇಶದ ಕತೆಗಳು ಏಕೆ ಒಂದೇ ರೀತಿಯಾಗಿ ಕಾಣುತ್ತವೆ ಎಂಬ ಸಮಸ್ಯೆಯನ್ನು ಎತ್ತಿಕೊಂಡು ಪ್ರಾಪ್ ಅದನ್ನು ಸಂಪೂರ್ಣ ವಿಭಿನ್ನ ರೀತಿಯಲ್ಲಿ ಪರಿಶೀಲಿಸಿದರು. ಉಳಿದವರಂತೆ ಜನಪದ ಕತೆಗಳಲ್ಲಿ ಕಂಡುಬರುವ ಸಾಮ್ಯಗಳ ಮೂಲವನ್ನು ಹುಡುಕುವ ನಿಷ್ಫಲ ಕಸರತ್ತಿಗೆ ಅವರು ಇಳಿಯಲಿಲ್ಲ. ಅಲ್ಲದೆ ಸದೃಶ ರಚನೆಗಳನ್ನು ಸ್ವೇಚ್ಛೆಯಿಂದ ವರ್ಗೀಕರಿಸುವ ಮತ್ತು ಅವುಗಳ ಸೂಚಿಯನ್ನು ಸಿದ್ಧಪಡಿಸುವ ಗೋಜಿಗೂ ಅವರು ಹೋಗಲಿಲ್ಲ. ನಿಜವಾದ ಅರ್ಥದಲ್ಲಿ ಹೊಸ ಬಗೆಯ ಅಧ್ಯಯನವಿಧಾನವೊಂದನ್ನು ರೂಪಿಸಿ ಅದನ್ನು ರೂಪರಚನಾತ್ಮಕ ಮಾದರಿ ಎಂದು ಕರೆದರು. ರೂಪರಚನಾತ್ಮಕತೆ ಎಂದರೆ ಕಥಾಘಟಕ ಭಾಗಗಳಿಗನುಸಾರವಾಗಿ ಕತೆಯನ್ನು ಮತ್ತು ಕಥಾಘಟಕ ಭಾಗಗಳ ಪರಸ್ಪರ ಮತ್ತು ಒಟ್ಟು ಸಂಬಂಧವನ್ನು ವರ್ಣಿಸುವುದು (ಪ್ರಾಪ್ : 1968 : 19). ಪ್ರಾಪ್ ಪ್ರಕಾರ, ಘಟಕ ಭಾಗಗಳು ಎಂದರೆ ಕ್ರಿಯೆಗಳು (functions) ಅಥವಾ ಕಥಾವಸ್ತುವಿನ ಮುನ್ನಡೆಗಾಗಿ ಕ್ರಿಯಾಶೀಲ ಪಾತ್ರವಹಿಸುವ ಚರ (variable) ಪಾತ್ರಗಳ ನಿಯತ (constant) ಕ್ರಿಯೆಗಳು. ಪಾತ್ರಗಳ ಕ್ರಿಯೆಗಳು ಸ್ಥಿರವಾಗಿದ್ದರೆ ಪಾತ್ರವರ್ಗಗಳ ಹೆಸರುಗಳು ಅಸ್ಥಿರವಾಗಿರುತ್ತವೆ ಎಂದರ್ಥ. ಇದು ಕಥೆಯನ್ನು ಅದರ ಪಾತ್ರವರ್ಗಗಳ ಕ್ರಿಯೆಗಳಿಗೆ ಅನುಗುಣವಾಗಿ ಅಧ್ಯಯನ ಮಾಡುವ ಧೋರಣೆಯನ್ನು ಸಮರ್ಥಿಸುತ್ತದೆ (ಹಿರಿಯಣ್ಣ : 1984 : 64). ಪ್ರಾಪ್ ಅವರು ಕತೆಗಳಲ್ಲಿ ನಿಯತವಾಗಿ ಕಾಣಿಸಿಕೊಳ್ಳುವ ಅಂಶಗಳನ್ನು ಪಾತ್ರವರ್ಗಗಳ ಕ್ರಿಯೆಗಳಲ್ಲಿ ಗುರುತಿಸಿದ್ದಾರೆ. ಈ ಕ್ರಿಯೆಗಳನ್ನು ಮೂಲಭೂತ ವಿಶ್ಲೇಷಣಾತ್ಮಕ ಘಟಕಗಳಾಗಿ ಪರಿಗಣಿಸಿ ಒಟ್ಟು ಜನಪದ ಕತೆಗಳಲ್ಲಿ ಕಂಡುಬರುವ ಕ್ರಿಯೆಗಳ ಸಂಖ್ಯೆ ಮೂವತ್ತೊಂದು ಮಾತ್ರ ಎಂದು ಸಾರಿದರು. ತಮ್ಮ ಅಧ್ಯಯನ ಮಾದರಿಯಲ್ಲಿ ಪ್ರಾಪ್ ರೂಪರಚನಾತ್ಮಕ

ಮೂಲಾಂಶಗಳನ್ನು ಕಾಲಗಣನಾಕ್ರಮದ ರೂಪರೇಖಾತ್ಮಕ ಆನುಪೂರ್ವಿಯಲ್ಲಿ ಜೋಡಿಸಿದ್ದಾರೆ. ಕತೆಯೊಂದು 'ಅ' ದಿಂದ 'ಳ' ವರೆಗಿನ ಅಂಶಗಳನ್ನು ಹೊಂದಿದ್ದರೆ ಕತೆಯ ರಚನೆಯನ್ನು ಅದೇ ಸರಣಿಯಲ್ಲಿ ವರ್ಣಿಸಲಾಗುತ್ತದೆ. ಆದ್ದರಿಂದಲೇ ಈ ಮಾದರಿಯನ್ನು ವಾಕ್ಯವಿನ್ಯಾಸಕ್ರಮ ಎಂದು ಕರೆಯಲಾಗಿದೆ.

ರೂಪರಚನೆಯನ್ನು ಆಧರಿಸಿದ ಪ್ರಾಪ್ ಮಾದರಿಯಲ್ಲಿ ಜಾನಪದ ರೂಪಗಳನ್ನು ಅಂತರ ಸಾಂಸ್ಕೃತಿಕವಾಗಿ ಹಾಗೂ ಅಂತರ ಪ್ರಕಾರವಾಗಿ ಅಭ್ಯಾಸಮಾಡಿದ ಹಲವು ನಿದರ್ಶನಗಳಿವೆ. ಫಲವಾಗಿ ಗದ್ಯಕಥನಗಳ ಕ್ಷೇತ್ರದಲ್ಲಿ ಗಂಭೀರ ಸಂಶೋಧನೆ ನಡೆಯಲು ಸಾಧ್ಯವಾಯಿತು. ಆದರೂ ಈ ಮಾದರಿ ಅನೇಕ ವಾದ ವಿವಾದಗಳಿಗೆ ಅವಕಾಶ ಕಲ್ಪಿಸಿಕೊಟ್ಟು ವ್ಯಾಪಕ ವಲಯದಲ್ಲಿ ಚರ್ಚೆಗೂ ಆಸ್ಪದಮಾಡಿಕೊಟ್ಟಿತು ಕತೆಯ ವಸ್ತು ಮತ್ತು ಸಂದರ್ಭವನ್ನು ಈ ಮಾದರಿ ಕಡೆಗಣಿಸುತ್ತದೆ ಎಂದೂ ಹಲವರು ದೂರಿದರು. ಇದು ಅರ್ಥವನ್ನು ಕಡೆಗಣಿಸಿ ರೂಪನಿಷ್ಠ ಚಿಂತನೆಯನ್ನು ಅವಲಂಬಿಸಿದ ಭಾಷಾವಿಜ್ಞಾನದ ರಚನಾವಾದಕ್ಕಿಂತ ಬೇರೆಯಲ್ಲ ಎಂದೂ ಕೆಲವರು ಹೇಳಿದರು.

ಅದೇನೇ ಇರಲಿ, ಪ್ರಾಪ್ ತಮ್ಮ ಮಾದರಿಯಲ್ಲಿ ವಾಕ್ಯವಿನ್ಯಾಸಾತ್ಮಕ ವಿಶ್ಲೇಷಣೆಗೆ ಹೆಚ್ಚು ಮಹತ್ವ ನೀಡಿದರು. ರೂಪ ಮತ್ತು ವಸ್ತುಗಳ ನಡುವಿನ ವ್ಯತ್ಯಾಸವನ್ನು ವಿರೋಧಾತ್ಮಕವಾಗಿ ವ್ಯಾಖ್ಯಾನಿಸಿದರು. ಅಲ್ಲದೆ ವಸ್ತುಗಳ ನೈಜ ಸ್ವಭಾವವನ್ನು ಪರಿಗಣಿಸದೆ ವಸ್ತು ಕಣ್ಮರೆಯಾಗಿ ರೂಪ ಮಾತ್ರ ಎದ್ದುಕಾಣುವ ನೆಲೆಯನ್ನಷ್ಟೇ ಅವರು ಆಯ್ದುಕೊಂಡರು. ಒಟ್ಟಿನಲ್ಲಿ ಪ್ರಾಪ್, ಕತೆಗಳ ರೂಪ ರಚನೆ, ಅವುಗಳನ್ನು ನಿರ್ಮಿಸುವಲ್ಲಿ ಅಡಿಗೂಡುಗಳಾಗಿ ರೂಪರಚನಾತ್ಮಕ ಸಂಯೋಗಗಳು ಹೇಗೆ ಅರ್ಥವನ್ನು ರೂಪಿಸುತ್ತವೆ? ಅವುಗಳ ಅಂತಿಮ ರೂಪ ಮತ್ತು ಅವು ಕಾರ್ಯರೂಪಕ್ಕೆ ಬರುವ ಸನ್ನಿವೇಶಗಳಾವುವು?—ಇವೇ ಮುಂತಾದ ಪ್ರಶ್ನೆಗಳಿಗೆ ಉತ್ತರಿಸುವ ಯತ್ನ ಮಾಡಿದ್ದಾರೆ.

ಜಾನಪದ ಸಾಮಗ್ರಿಯ ಮತ್ತೊಂದು ಬಗೆಯ ರಾಚನಿಕ ವಿಶ್ಲೇಷಣಾ ಮಾದರಿ ಲೆವಿಸ್ಟ್ರಾಸ್ ಅವರಿಂದ ರೂಪುತಾಳಿತು. ಡಿ ಸಸ್ಯೂರ ಅವರ ಭಾಷಾ ವೈಜ್ಞಾನಿಕ ಸಿದ್ಧಾಂತಗಳು ಡರ್ಕೀಮ್ ಮತ್ತು ಮಾಸ್ ಅವರ ಮಾನವಶಾಸ್ತ್ರೀಯ ವಿಚಾರಗಳನ್ನು ಪ್ರಧಾನವಾಗಿ ಅವಲಂಬಿಸಿ ರಚಿಸಿದ ಮಾದರಿ ಇದು. ಸಾಂಸ್ಕೃತಿಕ ಸಂದರ್ಭದಿಂದ ಬೇರೆಯಾದ ಜಾನಪದ ಘಟನೆಯನ್ನು, ಲೆವಿಸ್ಟ್ರಾಸ್, ವಿಶ್ಲೇಷಿಸುವ ಯತ್ನ ಮಾಡುವುದಿಲ್ಲ. ಪ್ರಾಯಃ ಈ ಕಾರಣಕ್ಕಾಗಿಯೇ ಲೆವಿಸ್ಟ್ರಾಸ್ ಮಾದರಿ ರೂಪವನ್ನು ವಸ್ತುವಿನಿಂದ ಪ್ರತ್ಯೇಕಗೊಳಿಸುವುದಿಲ್ಲ. ಅವರ ವೈಧಾನಿಕತೆ ಪುರಾಣಗಳ ರಾಚನಿಕ ಅರ್ಥದ ಬಗೆಗೆ ಹೆಚ್ಚು ಕಾಳಜಿ ವಹಿಸಿದರೆ ಪ್ರಾಪ್ ಮಾದರಿ ವಸ್ತು ಮತ್ತು ರೂಪಗಳ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತದೆ. ಹಾಗೂ ಅವನ್ನು ಎರಡು ಪ್ರತ್ಯೇಕ ಅಸ್ತಿತ್ವಗಳಲ್ಲಿ ಗುರುತಿಸುತ್ತದೆ. ಪ್ರಾಪ್ ಅವರು ಜನಪದ ಕತೆಯ ಈ

ಬಾಹ್ಯರಚನೆಯ ವಲಯದಾಚೆಗೆ ಹೋಗದೆ ಅದರ ರೂಪರಚನೆಯನ್ನು ವಾಕ್ಯವಿನ್ಯಾಸಾತ್ಮಕವಾಗಿ ವರ್ಣಿಸುತ್ತಾರೆ. ಲೆವಿಸ್ಟ್ರಾಸ್ ಪುರಾಣಗಳ ಆಳರಚನೆಯ ಶೋಧನೆಯಲ್ಲಿ ಮುಳುಗಿ ಮೂಲಾಂಶಗಳನ್ನು ಅರ್ಥಪೂರ್ಣ ರೂಪಾವಳಿಗಳಾಗಿ ಮರುಜೋಡಣೆಗೈದು ರಚನೆಯ ಒಟ್ಟು ಸಂದೇಶವನ್ನು ಕಂಡುಕೊಳ್ಳಲು ಯತ್ನಿಸುತ್ತಾರೆ.

ಪುರಾಣ ಕೂಡ, ಭಾಷೆಯಂತೆ, ಉನ್ನತಮಟ್ಟದ ಸಂವಹನ ಸಂಕೇತವಾಗಿದೆ ಎಂದು ಲೆವಿಸ್ಟ್ರಾಸ್ ನಂಬುತ್ತಾರೆ. ಆದ್ದರಿಂದಲೇ ಪುರಾಣವನ್ನು ಭಾಷೆಗೆ ಸದೃಶವಾದುದು ಎಂದು ಬಗೆದು ಇಲ್ಲಿಯೂ ಭಾಷೆಯ ವಿಶ್ಲೇಷಣಾಕ್ರಮವನ್ನೇ ಅನುಸರಿಸುತ್ತಾರೆ. ಅವರು ತಮ್ಮ ವಿಶ್ಲೇಷಣೆಯನ್ನು ಈಡಿಪಸ್ ಪುರಾಣದಿಂದ ಆರಂಭಿಸಿ ಬ್ರೆಜಿಲ್ ಮತ್ತು ದಕ್ಷಿಣ ಅಮೇರಿಕೆಯ ಪುರಾಣಗಳನ್ನು ತಮ್ಮ ರಾಚನಿಕ ಮಾದರಿಗೆ ಅನ್ವಯಿಸಿ ನೋಡಿದ್ದಾರೆ. ಭಾಷಾವೈಜ್ಞಾನಿಕ ವಿಧಾನಗಳ ಸೈದ್ಧಾಂತಿಕ ನಿರ್ಬಂಧಗಳಿಂದ ನಿರ್ದೇಶಿತರಾಗಿ ಅವರು ಪುರಾಣವನ್ನು ಅದರ ಮೂಲಭೂತ ಘಟಕ ಅಥವಾ ಪುರಾಣಿಮಗಳಾಗಿ ಒಡೆದು ಕಿರಿದುಗೊಳಿಸಿ ಅರ್ಥಪೂರ್ಣ ರೂಪಾವಳಿಗಳಾಗಿ ಮರುಜೋಡಣೆಗೈಯುತ್ತಾರೆ. ಈ ಕೌಶಲದಿಂದ ಪ್ರಕಟಗೊಳ್ಳುವ ಸ್ಥಾಪಿತ ಸಂಬಂಧಗಳು ಪುರಾಣದ ಸಂದೇಶವನ್ನು ಸಾರುತ್ತವೆ ಎಂಬುದು ಅವರ ಅಭಿಪ್ರಾಯ. ಲೆವಿಸ್ಟ್ರಾಸ್ ಪ್ರಕಾರ, ಈ ಸಂದೇಶಗಳು ದ್ವಿಮುಖ ವಿರೋಧ ಸ್ವಭಾವದವು. ಅವು ಮಾನವ ಬದುಕು ಅಥವಾ ಸಂಸ್ಕೃತಿಯಲ್ಲಿ ವ್ಯಕ್ತಗೊಳ್ಳುವ ವಿರೋಧಾಭಾಸಗಳನ್ನು ಹತ್ತಿಕ್ಕಲು ತಾರ್ಕಿಕ ಸೂತ್ರಗಳಾಗಿ ಪರಿವರ್ತಿತವಾಗುತ್ತವೆ ಎಂದು ಲೆವಿಸ್ಟ್ರಾಸ್ ಭಾವನೆ. ಈ ವಿಧಾನ ಪುರಾಣಗಳಿಗೆ ಒಂದು ಹೊಸ ವ್ಯಾಖ್ಯಾನವನ್ನೇ ಒದಗಿಸಿತು. ಮಾನವನ ಆದಿವಾಸಿ ಮೂಲ ನಂಬಿಕೆ ಹಾಗೂ ಪುರುಷ ಮತ್ತು ಸ್ತ್ರೀಯ ಸಂಯೋಗದಿಂದ ಮಾನವನ ಉಗಮವಾಗುತ್ತದೆ ಎಂಬ ವಾಸ್ತವ ಸತ್ಯಕ್ಕೂ ಇರುವ ಅಸಂಬದ್ಧ ವಿರೋಧವನ್ನು ಶಮನಗೊಳಿಸಲು ಈಡಿಪಸ್ ಪುರಾಣ ಪ್ರಯತ್ನಿಸುತ್ತದೆ ಎಂದು ಲೆವಿಸ್ಟ್ರಾಸ್ ಹೇಳಿದ್ದಾರೆ. ಪ್ರತಿಯೊಂದು ಪುರಾಣದ ಪ್ರತಿಯೊಂದು ಭಿನ್ನರೂಪವು ದ್ವಿಮುಖ ವಿರೋಧಗಳನ್ನು ಸಮರಸಗೊಳಿಸುವುದಕ್ಕಾಗಿ ಹುಟ್ಟಿಕೊಂಡಿದೆ ಎಂದೂ ಅವರು ಪ್ರತಿಪಾದಿಸಿದ್ದಾರೆ. ಆ ದ್ವಿಮುಖ ವಿರೋಧಗಳು ಏನು ಬೇಕಾದರೂ ಆಗಿರಬಹುದು: ಆಕಾಶ–ಭೂಮಿ; ಬಂಜರುಭೂಮಿ—ಫಲವತ್ತಾದ ಭೂಮಿ; ಪುರುಷ–ಸ್ತ್ರೀ; ಒಳ್ಳೆಯ–ಕೆಟ್ಟ–ಹೀಗೆ.

ಲೆವಿಸ್ಟ್ರಾಸ್ ಪುರಾಣವನ್ನು ಎಲ್ಲಿಯೂ ಒಂಟಿಯಾಗಿಟ್ಟು ಅಭ್ಯಸಿಸಿಲ್ಲ. ಅವರಿಗೆ ಪುರಾಣಪಠ್ಯವನ್ನು ಅದರ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಸನ್ನಿವೇಶಗಳಿಂದ ಬೇರೆ ಇಟ್ಟು ನೋಡುವುದಕ್ಕೆ ಆಗುವುದೇ ಇಲ್ಲ. ಪುರಾಣ ಪ್ರದರ್ಶಿಸುವ ಸಂವಹನ ಬಗೆಯನ್ನು ಸಂಸ್ಕೃತಿಯ ಸಂವಹನದ ಒಟ್ಟು ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳದೆ ಅದನ್ನು ಗ್ರಹಿಸುವುದು ಅಥವಾ ವ್ಯಾಖ್ಯಾನಿಸುವುದು ಆಗದ ಕೆಲಸ

ಎಂದಿದ್ದಾರೆ. ಇದು ಲೆವಿಸ್ಟ್ರಾಸ್ ಅವರು ಪುರಾಣಗಳೇ ಅಲ್ಲದೆ ಆಹಾರ, ಉಡುಪು, ಬಂಧುತ್ವ ಕ್ರಮ ಮುಂತಾದವನ್ನು ಏಕೆ ರಾಚನಿಕವಾಗಿ ಅಭ್ಯಸಿಸಬಯಸುತ್ತಾರೆ ಎಂಬುದನ್ನು ಹೇಳುತ್ತದೆ.

ಲೆವಿಸ್ಟ್ರಾಸ್ ಮಾದರಿಯನ್ನು, ಈಗಾಗಲೇ, ಸಾಮಾಜಿಕ ವ್ಯವಸ್ಥೆ ಹಾಗೂ ಪುರಾಣಗಳನ್ನು ಅಂತರ ಸಾಂಸ್ಕೃತಿಕವಾಗಿ ಅಭ್ಯಸಿಸಲು ಬಳಸಿಕೊಳ್ಳಲಾಗಿದೆ. ಅನೇಕ ಗದ್ಯಕಥನಗಳನ್ನು ಈ ಮಾದರಿಯಲ್ಲಿ ಅಭ್ಯಸಿಸಲಾಗಿದೆ. ಪ್ರಕಟವಾಗಿರುವ ಅಧ್ಯಯನಗಳನ್ನು ನೋಡಿದರೆ ಲೆವಿಸ್ಟ್ರಾಸ್ ಮಾದರಿ ಎಷ್ಟರಮಟ್ಟಿಗೆ ಚರ್ಚೆಗೆ ಗುರಿಯಾಗಿದೆ ಅಥವಾ ಸ್ವೀಕರಣಗೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ.

ರೂಪವನ್ನು ವಸ್ತುವಿಗೆ ವೈದೃಶ್ಯವಾಗಿ ವ್ಯಾಖ್ಯಾನಿಸಿರುವುದು ಲೆವಿಸ್ಟ್ರಾಸ್ ಮಾದರಿಯ ವಿಶೇಷ. ಉದ್ದಕ್ಕೂ ರಚನೆಯು ವಸ್ತುವನ್ನು ಹೊಂದಿಲ್ಲವೆಂದೇ ಪ್ರತಿಪಾದಿಸಿದ್ದು ಅವರ ವಿಶ್ಲೇಷಣೆಯ ಮತ್ತೊಂದು ಗಮನಾರ್ಹ ಅಂಶ. ವಸ್ತು ತಾರ್ಕಿಕ ವ್ಯವಸ್ಥೆಯೊಳಗೇ ಮನಸ್ಸಿಗೆ ಗ್ರಹಿಕೆಗೆ ಬರುತ್ತದೆ ಹಾಗೂ ಅದನ್ನು ವಾಸ್ತವಿಕದ ಒಂದು ಗುಣ ಎಂದು ವ್ಯಾಖ್ಯಾನಿಸಿದ್ದು ಲೆವಿಸ್ಟ್ರಾಸರ ವಾದಸರಣಿಗೆ ಸಹಜವೇ ಇದೆ. ಒಟ್ಟನಲ್ಲಿ ಪ್ರಾಪ್ ಮಾದರಿ ರೂಪವನ್ನಷ್ಟೇ ಕುರಿತಿದ್ದರೆ ಲೆವಿಸ್ಟ್ರಾಸ್ ಮಾದರಿ ಏಕಕಾಲದಲ್ಲಿ ರೂಪ ಮತ್ತು ವಸ್ತುವಿನ ಬಗೆಗೆ ಕಾಳಜಿ ತೋರಿಸುತ್ತದೆ.

ಈ ಎರಡೂ ಮಾದರಿಗಳ ರಾಚನಿಕ ವಿಶ್ಲೇಷಣೆಯ ಮಹತ್ವದ ವ್ಯತ್ಯಾಸ ವೆಂದರೆ ಪ್ರಾಪ್ ಮಾದರಿ ರಷ್ಯನ್ ಕಿನ್ನರ ಕತೆಗಳನ್ನು ಆಧರಿಸಿದ್ದರೆ ಲೆವಿಸ್ಟ್ರಾಸ್ ವಿಧಾನ ಗ್ರೀಕ್ ಪುರಾಣವನ್ನು ಆವಲಂಬಿಸಿರುವುದು. ಪ್ರಾಪ್ ಅವರು ಕತೆಯ ಸರಣಿಯಲ್ಲೇ ಅದರ ರಚನೆಯನ್ನು ವಿವರಿಸುವ ಯತ್ನಮಾಡಿದರೆ ಲೆವಿಸ್ಟ್ರಾಸ್ ಪುರಾಣದ ಸರಣಿಯನ್ನು ಬದಲಿಸಿ ಪುನರ್‌ಜೋಡಣೆಗೈಯುತ್ತಾರೆ. ಮೊದಲನೆಯದನ್ನು ವಾಕ್ಯವಿನ್ಯಾಸಾತ್ಮಕವೆಂದೂ ಎರಡನೆಯದನ್ನು ನಿದರ್ಶನಾತ್ಮಕ ಎಂದೂ ಕರೆಯಲಾಗಿದೆ. ವಾಕ್ಯವಿನ್ಯಾಸವನ್ನು ಬದಲಿಸದೆ ವಕ್ತೃ ನಿರೂಪಿಸಿದ ಸರಣಿಯಲ್ಲೇ ಸಂಯೋಜನೆಗಳನ್ನು ವರ್ಣಿಸಿ ಅದರ ರೂಪ ರಚನೆಯನ್ನು ಅಭ್ಯಸಿಸು ವುದರಿಂದ ಪ್ರಾಪ್ ಮಾದರಿಗೆ ವಾಕ್ಯವಿಶ್ಲೇಷಣಾ ಕ್ರಮ ಎಂದು ಹೆಸರು ಬಂದಿತು. ಲೆವಿಸ್ಟ್ರಾಸ್ ಪ್ರಕಾರ, ಪುರಾಣದ ವಸ್ತು ತರ್ಕಬದ್ಧ ಕ್ರಮದಲ್ಲಿರುತ್ತದೆಯೇ ಹೊರತು ದತ್ತರಚನೆಯಲ್ಲಲ್ಲ ಅರ್ಥಪೂರ್ಣ ರೂಪಾವಳಿಗಳ ರಾಚನಿಕ ಘಟಕಗಳಾಗಿ ಒಡೆಯು ವುದರ ಮೂಲಕ ಪುರಾಣದ ಮೂಲಾಂಶಗಳನ್ನು ಮರುಜೋಡಣೆಗೆ ಗುರಿಪಡಿಸ ಲಾಗುವುದು. ಆದ್ದರಿಂದ ಇದನ್ನು ನಿದರ್ಶನಾತ್ಮಕ ವಿಶ್ಲೇಷಣಾ ಮಾದರಿ ಎಂದು ಕರೆಯಲಾಯಿತು.

ಪ್ರಾಪ್ ಅವರ ಸಾಂಪ್ರದಾಯಿಕ ವೈಧಾನಿಕತೆಯಿಂದ ದೂರವಾದ ಲೆವಿಸ್ಟ್ರಾಸ್ ರಚನಾವಾದ ಅರ್ಥವನ್ನು ಕುರಿತದ್ದು ಮಹತ್ವದ ಮತ್ತೊಂದು ಅಂಶ. ಅದನ್ನು

ಪೃಥಕ್ಕರಿಸಲು, ಲೆವಿಸ್ಟ್ರಾಸ್ ತಮ್ಮ ವಿಶ್ಲೇಷಣೆಯ ಉದ್ದೇಶವು ರಚನೆಯ ಆಳದಲ್ಲಿ ಹುದುಗಿರುವ ನಿಗೂಢ ಅರ್ಥವನ್ನು ಶೋಧಿಸಲು ಯತ್ನಿಸಿದ್ದಾರೆ. ಅವರ ಮಟ್ಟಿಗೆ ಈ ಅರ್ಥ ಪ್ರಪಂಚದುದ್ದಕ್ಕೂ ಒಂದೇ. ಪುರಾಣಗಳು ಹೇಗೆ ಸಂಸ್ಕೃತಿಯಲ್ಲಿ ಜಾಗೃತಗೊಳ್ಳುತ್ತವೆ? ಅವು ಹೇಗೆ ಉಳಿದುಬರುತ್ತವೆ? ಅವು ಏಕೆ ಉಗಮಿಸುತ್ತವೆ? ಮನುಕುಲ ಪರಂಪರೆಯ ಜ್ಞಾನದಲ್ಲಿ ಅವು ಹೇಗೆ ನಿರಂತರವಾಗಿ ಸಾಗಿ ಬಂದಿವೆ ?— ಈ ಪ್ರಶ್ನೆಗಳಿಗೆ ಲೆವಿಸ್ಟ್ರಾಸ್ ಉತ್ತರಿಸುವುದಿಲ್ಲ.

ಇಷ್ಟಾದರೂ, ಲೆವಿಸ್ಟ್ರಾಸ್ ಸೂತ್ರಗಳು ಖಂಡಿತವಾಗಿಯೂ ಜಾನಪದೀಯ ಸಂಶೋಧನೆಗೆ ಹೊಸ ಆಯಾಮವನ್ನೇ ಸೇರಿಸಿವೆ. ರಾಚನಿಕ ಸಾರ್ವತ್ರಿಕತೆಗಳ ಬಗೆಗೆ ಅವು ವಿದ್ವಾಂಸರ ಲಕ್ಷ್ಯ ಕೇಂದ್ರೀಕೃತವಾಗುವಂತೆ ಮಾಡಿದುವು. ಒಟ್ಟಿನಲ್ಲಿ ರಾಚನಿಕ ವಿಧಾನ ಮಾನವ ಮನಸ್ಸಿನ ಅಥವಾ ಮನೋವೈಜ್ಞಾನಿಕ ಸಂಶೋಧನೆಗಳ ಮೌಲ್ಯವನ್ನು ಹೆಚ್ಚಿಸಿತು.

ಸಾಂದರ್ಭಿಕ ಸಿದ್ಧಾಂತ: 20ನೆಯ ಶತಮಾನದಲ್ಲಿ ಜಾನಪದ ಅಧ್ಯಯನ ಹೊಸ ರೀತಿಯಲ್ಲಿ ನಡೆಯುವುದನ್ನು ನೋಡಬಹುದು. ಪಠ್ಯಸಾಮಗ್ರಿಗಳ ಸಂದರ್ಭಕ್ಕೆ ವಿಶೇಷ ಮಹತ್ವ ನೀಡುವ ಹೊಸ ದೃಷ್ಟಿ ಬೆಳೆಯಿತು. ಜಾನಪದ ವಿದ್ವತ್ತಿನ ಸುದೀರ್ಘ ಇತಿಹಾಸದಲ್ಲಿ ಅದೇ ಮೊದಲ ಬಾರಿಗೆ ಪ್ಯಾರಿ ಮತ್ತು ಲಾರ್ಡ್ ಅವರ ಮೌಖಿಕ ಸೂತ್ರೀಯ ಸಿದ್ಧಾಂತ ಜಾನಪದ ಪಠ್ಯಗಳ ಸಂದರ್ಭಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿತು. ಪಠ್ಯ ಸಂದರ್ಭಕ್ಕೆ ಒತ್ತು ನೀಡುವುದೇ ಅವರ ಗುರಿಯಾಗಿರಲಿಲ್ಲ. ಗಾಯಕರು ಕತೆ ಹೇಳುವ ಕಲೆಯನ್ನು ಪರಂಪರೆಯಲ್ಲಿ ಮುಂದುವರಿಸಿಕೊಂಡು ಹೋಗಲು ಮತ್ತು ಕತೆಯನ್ನು ಬಹುಕಾಲ ನೆನಪಿನಲ್ಲಿಟ್ಟುಕೊಳ್ಳಲು ಅಗತ್ಯವಾದ ಸೂತ್ರಗಳನ್ನು ಶೋಧಿಸುವುದಾಗಿತ್ತು. ಮೌಖಿಕಸೂತ್ರ ಮಹಾಕಾವ್ಯ ಹಾಡುಗಾರಿಕೆಗೆ ಹೆಚ್ಚು ಗಮನ ನೀಡಿದ್ದರೂ ಪ್ರಧಾನವಾಗಿ ಇದು ಪಠ್ಯ ಒಲವಿನ ಸಿದ್ಧಾಂತವಾಗಿತ್ತು. ಸಾಂದರ್ಭಿಕ ಅಧ್ಯಯನಕ್ಕೆ ಇದು ನೀಡಿದ ಪ್ರಾಶಸ್ತ್ಯವನ್ನು ಲಕ್ಷಿಸಿದ ವಿದ್ವಾಂಸರು ಅದಕ್ಕೆ ಇನ್ನೂ ಹೆಚ್ಚು ಚಾಲನೆಯನ್ನು ಒದಗಿಸುತ್ತಾ ಬಂದರು. ಮುಂದೆ ಅದು 'ಸಾಂದರ್ಭಿಕ ಸಿದ್ಧಾಂತ'ದ ಹೆಸರಿನಲ್ಲಿ ಪ್ರಬಲವಾದ ಸೈದ್ಧಾಂತಿಕ ಅಸ್ತ್ರವಾಗಿ ಬೆಳಕಿಗೆ ಬಂದಿತು. ಯೂರೋಪ್ ಮತ್ತು ಅಮೇರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಸಾಮಾಜಿಕ ವಿಜ್ಞಾನಗಳ ರಭಸದ ಬೆಳವಣಿಗೆ ಮತ್ತು ವೈವಿಧ್ಯತೆ ಈ ಪ್ರವೃತ್ತಿಗೆ ಮತ್ತಷ್ಟು ಪ್ರಚೋದನೆ ಒದಗಿಸಿತು

ಜಾನಪದ ಪಠ್ಯಗಳನ್ನು ಹೊಸ ದೃಷ್ಟಿಯಿಂದ ಅಭ್ಯಸಿಸಿದವರ ಪೈಕಿ ರೋಜರ್ ಅಬ್ರಹಂಸ್, ಡಾನ್‌ಬೆನ್ ಅಮಾಸ್, ಅಲನ್ ಡಂಡೆಸ್, ರಾಬರ್ಟ್‌ಜಾರ್ಜಸ್, ಕೆನೆತ್ ಗೋಲ್ಡ್‌ಸ್ಟೀನ್ ಮುಖ್ಯರು. ಇವರು ತಮ್ಮ ಹಿಂದಿನವರಂತಿರಲಿಲ್ಲ. ಹಿಂದಿನ ವಿದ್ವಾಂಸರು ಕತೆಗಳ ಉಗಮ ಅರ್ಥಗಳನ್ನು ಕಂಡುಹಿಡಿಯುವುದರಲ್ಲೇ ಮಗ್ನರಾಗಿದ್ದುದಲ್ಲದೆ ಕಥನ ನಿರೂಪಣೆಯನ್ನು ಅದರ ಸಾಮಾಜಿಕ ಸಂದರ್ಭದಿಂದ

ಬೇರ್ಪಡಿಸಿ ನೋಡಿದ್ದರು. 1860ರ ಆರಂಭದಲ್ಲಿ ರಷ್ಯನ್ ಜಾನಪದ ವಿದ್ವಾಂಸರ ಒಂದು ಗುಂಪು ಕತೆಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಯಿಂದ ಅಭ್ಯಾಸ ಮಾಡುವ ದೃಷ್ಟಿಹೊಂದಿತ್ತು. ಅವರು ಕತೆಗಾರನ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಿ ಅವನ ಸೃಜನಾತ್ಮಕ ಚಟುವಟಿಕೆ ಮತ್ತು ಭೌಗೋಳಿಕ, ಸಾಮಾಜಿಕ ಹಿನ್ನೆಲೆಗಳು ಹೇಗೆ ಕತೆಯ ಮೇಲೆ, ಮುಖ್ಯವಾಗಿ ಭಿನ್ನಪಾಠಗಳಾಗುವುದರ ಮೇಲೆ ಪ್ರಭಾವ ಬೀರುತ್ತವೆ ಎಂಬ ಅಂಶವನ್ನು ಅಭ್ಯಸಿಸಿದರು.

ಇದೇ ದೃಷ್ಟಿಯಿಂದ ಲಿಂಡಾಡೇಗ್ ಅವರು ಕತೆಗಳನ್ನು ಅಭ್ಯಾಸ ಮಾಡಿದರು. ಅವರು ಒಂದು ಕತೆಯ ಅಸ್ತಿತ್ವಕ್ಕೆ ಸಂಪ್ರದಾಯ, ಇರುವ ಕಥಾವಕ್ತೃಗಳ ಸಮುದಾಯ, ಕಥೆಗಾರ—ಈ ಮೂರೂ ಅಂಶಗಳು ಅನಿವಾರ್ಯ ಎಂದರು. ಅವರ ಪ್ರಕಾರ, ಏಕಕಾಲಕ್ಕೆ ನಡೆಯುವ ಈ ಮೂಲಭೂತ ಅಂಶಗಳ ಪರಸ್ಪರ ಆಂತರಿಕ ಕ್ರಿಯೆಗಳ ಫಲವಾಗಿ ಕತೆ ರಚಿತವಾಗುತ್ತದೆ. ಕತೆಗೆ ರೂಪ ಕೊಡುವವನು ಒಬ್ಬನಾದರೂ ಸಂಪ್ರದಾಯ ಮತ್ತು ಜನಸಮುದಾಯಗಳಿಂದ ಹೊರತಾಗಿ ಸ್ವತಂತ್ರವಾಗಿ ಅವನು ಏನನ್ನೂ ಸೃಷ್ಟಿಸಲಾರ. ಕತೆ ನಿರೂಪಣೆಗೊಳ್ಳುತ್ತಿರುವಾಗ ಮನೋರಂಜನಾತ್ಮಕವಾಗಿರುವಂತೆಯೇ ರಚನಾತ್ಮಕವೂ ಆಗಿರುತ್ತದೆ. ಇದಕ್ಕೆ ಶ್ರೋತೃಗಳ ಪಾತ್ರ ಅತ್ಯಗತ್ಯ. ಸೇರಿರುವ ಜನರ ಮನೋಧರ್ಮ, ಹೇಳುತ್ತಿರುವಾಗಿನ ಕಾಲದೇಶಗಳು ಕಥಾನಿರೂಪಣೆಯನ್ನು ಎಷ್ಟರ ಮಟ್ಟಿಗೆ ಪ್ರಭಾವಿಸುತ್ತವೆ ಎಂದರೆ ಅದೇ ಬೇರೊಂದು ವಾತಾವರಣದಲ್ಲಿ ಗಮನಾರ್ಹವಾಗಿ ಬದಲಾಗುತ್ತದೆ.

ಇತ್ತೀಚೆಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಕೂಡ ಕತೆಗಳನ್ನು ಈ ದೃಷ್ಟಿಯಿಂದ ಪರಿಶೀಲಿಸಲಾಗುತ್ತಿದೆ. ಜಾನಪದ ಸಾಮಗ್ರಿಯ ಹಿನ್ನೆಲೆಯಲ್ಲಿರುವ ಭಾಷಿಕ, ಮಾನಸಿಕ, ಸಾಮಾಜಿಕ ಪರಿಸರಗಳನ್ನು ಇವರು ವಿಶೇಷವಾಗಿ ಲಕ್ಷಿಸುತ್ತಿದ್ದಾರೆ. ಕತೆಯ ನಿರೂಪಣೆಯನ್ನು ಅದರ ಭಾಷಿಕ, ಸಾಮುದಾಯಿಕ ಮತ್ತು ಅಭಿವ್ಯಕ್ತಿಯ ರೀತಿಗಳ ಸಂದರ್ಭದಿಂದ ಬೇರ್ಪಡಿಸಿ ನೋಡುವುದನ್ನು ಇವರು ಪ್ರಬಲವಾಗಿ ವಿರೋಧಿಸುತ್ತಾರೆ. ಇವರ ಪ್ರಕಾರ, ಜಾನಪದ ಕೇವಲ ಒಂದು ಪದಸಮೂಹವಲ್ಲ. ಒಂದು ಪರಂಪರೆಯನ್ನು ನಿರೂಪಿಸುವ ಅಥವಾ ಸಂವಹಿಸುವ ಒಂದು ಘಟನೆ. ಆದ್ದರಿಂದ ನಿರೂಪಣೆಯ ಅಥವಾ ಸಂವಹನೆಯ ಪ್ರತಿಯೊಂದು ಅಂಶವನ್ನು ದಾಖಲಿಸಿಕೊಳ್ಳುವುದು ಅಗತ್ಯ. ಇಂಥ ಸನ್ನಿವೇಶದಲ್ಲಿ ಕತೆಯ ಪಠ್ಯ ಆದಗ ಕೇವಲ ಒಂದು ಅಂಶ ಮಾತ್ರ ಎಂಬುದು ಈ ಪಂಥದ ಅಭಿಪ್ರಾಯ (ಡಾರ್ಸನ್ : 1972 : 45).

ಜಾನಪದ ಅಧ್ಯಯನದ ಸೈದ್ಧಾಂತಿಕ ಹಿನ್ನಡೆಗೆ ಕಾರಣವಾದದ್ದು ಪಠ್ಯಾಧಾರಿತ ಅಧ್ಯಯನ. ಆಗಿನ ಸೈದ್ಧಾಂತಿಕ ಒಲವು ಪಳೆಯುಳಿಕೆ ಸ್ವಭಾವದ ಜಾನಪದಕ್ಕೆ ಸಹಜವಾಗಿತ್ತು. ಆದಕ್ಕಾಗಿಯೇ ಅಲ್ಲಿ ಪಠ್ಯ ಬಹುಮಹತ್ವದ ಸಂಗತಿಯಾಗಿತ್ತು. ಪಳೆಯುಳಿಕೆಗಳ ಸಂಗ್ರಹ, ಶೇಖರಣೆ ಮತ್ತು ಮೂಲ

ರೂಪಗಳ ಪುನರ್ರಚನೆ ಆಗಿನ ಜಾನಪದ ಅಧ್ಯಯನದ ಅಂತಿಮ ಗುರಿಯಾಗಿತ್ತು. ಬಹುಪಾಲು ಅಧ್ಯಯನಗಳು ಜಾನಪದದ ಬಹುಶ್ರುತತ್ವವನ್ನು ಕಂಡುಕೊಳ್ಳಲಿಲ್ಲ. ಆದರೂ ಭಾಷಾವಿಜ್ಞಾನ, ಮನೋವಿಜ್ಞಾನ ಮಾನವವಿಜ್ಞಾನ ಹಾಗೂ ಇತರ ಸಾಮಾಜಿಕ ವಿಜ್ಞಾನಗಳಲ್ಲಿ ಸಂಭವಿಸಿದ ಬದಲಾವಣೆಗಳು ಜಾನಪದದ ಪಠ್ಯಾಧಾರಿತ ವಿದ್ವತ್ತಿನ ಮೇಲೂ ಪ್ರಭಾವ ಬೀರಿದವು. ಮೌಖಿಕ ಪರಂಪರೆಯಲ್ಲಿ ಬಹುಶ್ರುತತ್ವ ಒಂದು ವಾಸ್ತವ. ಪಠ್ಯಾಧಾರಿತ ಅಧ್ಯಯನ ವಿಧಾನಗಳು ತುಂಬ ಸೀಮಿತ ಉದ್ದೇಶದ ವಾದ್ದರಿಂದ ಜಾನಪದದ ಸಮಗ್ರತೆಯನ್ನು ಮನಗಾಣಲಾಗಲಿಲ್ಲ ಸಾಂದರ್ಭಿಕ ಅಧ್ಯಯನ ಇದನ್ನು ಮನಗಂಡು ಜಾನಪದ ಪಠ್ಯಗಳು ಸಂದರ್ಭ, ಕಾಲ, ಸನ್ನಿವೇಶ ಗಳಿಗನುಗುಣವಾಗಿ ಬದಲಾಗುತ್ತಾ ಹೋಗುತ್ತವೆ ಎಂದಿತು.[6] ಈ ಬೆಳವಣಿಗೆ ಜಾನಪದವನ್ನು ಹೊಸರೀತಿಯಲ್ಲಿ ಗ್ರಹಿಸುವ, ಅರ್ಥೈಸುವ ಒಂದು ಹೊಸ ತಂಡವನ್ನೇ ಹುಟ್ಟುಹಾಕಿತು. ಸಾಂದರ್ಭಿಕ ಸಿದ್ಧಾಂತದಿಂದ ಅವರ ಕೊಡುಗೆಗಳು ಸಾಕಷ್ಟು ಸ್ಫೂರ್ತಿಹೊಂದಿದವು. ಅವರು ತಮ್ಮ ಹಿಂದಿನವರಂತಾಗಲಿಲ್ಲ; ಕೇವಲ ಸೈದ್ಧಾಂತಿಕ ನಿರ್ದೇಶನದಿಂದಷ್ಟೇ ಕಲಿಹಾಕಿದ ಸಾಮಗ್ರಿಯನ್ನು ಆಧರಿಸಲಿಲ್ಲ. ಸಂಸ್ಕೃತಿಯ ಅಖಂಡ ಸತ್ಯವನ್ನು ಗ್ರಹಿಸಲು ತಮಗೆ ಯಾವ ಯಾವ ಶಿಸ್ತುಗಳ, ವಿಷಯಗಳ ನೆರವು ಅಗತ್ಯವೆನಿಸಿತೋ ಆ ಎಲ್ಲವುಗಳಿಂದ ಉಪಯುಕ್ತವಾದುದನ್ನು ಹೀರಿಕೊಂಡು ಬೆಳೆದರು. ಡಾರ್ಸನ್ ಪ್ರತಿಪಾದಿಸಿರುವಂತೆ, ವಿಶೇಷವಾಗಿ ಮಾನವಶಾಸ್ತ್ರ ಸಮಾಜ ಶಾಸ್ತ್ರ ಮತ್ತು ಮನೋವಿಜ್ಞಾನ ಕ್ಷೇತ್ರದ ದೃಷ್ಟಿಕೋನಗಳನ್ನು ಜಾನಪದ ಪರಂಪರೆಗೆ ಅನ್ವಯಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಿದರು.

ಸಾಂದರ್ಭಿಕ ತತ್ವ, ವಾಸ್ತವವಾಗಿ, ಪಠ್ಯಮಾತ್ರಕ್ಕೆ ಸಂಬಂಧಪಡದೆ ಒಂದು ಪರಂಪರೆಯಲ್ಲಿ ಪ್ರಸ್ತುತಗೊಳ್ಳುವ ಅಥವಾ ಸಂವಹನಗೊಳ್ಳುವ ಒಂದು ಘಟನೆಗೆ ಇಡಿಯಾಗಿ ಅನ್ವಯವಾಗುತ್ತದೆ. ಆದಕ್ಕಾಗಿ ಈ ವಿಧಾನದಲ್ಲಿ ಇಡೀ ಪ್ರದರ್ಶನ ಅಥವಾ ಸಂವಹನ ಕ್ರಿಯೆಯನ್ನು ದಾಖಲೀಕರಿಸಿಕೊಳ್ಳಲಾಗುತ್ತದೆ. ಇಲ್ಲಿ ಸಂಗ್ರಹಕ ಪಠ್ಯಕ್ಕಾಗಿ ಪಠ್ಯವನ್ನು ಬರೆದುಕೊಳ್ಳುತ್ತಾ ಹೋಗುವುದಿಲ್ಲ. ಪಠ್ಯವು ಪ್ರತಿಯೊಂದು ಅಪೂರ್ವ ಘಟನೆಯ ಒಂದು ಭಾಗ ಮಾತ್ರ. ಈ ದೃಷ್ಟಿಯಿಂದ ಅಧ್ಯಯನ ಯಶಸ್ಸು ಕಾಣಲು ಸಾಹಿತ್ಯಕ, ಮಾನವಕುಲ ಶಾಸ್ತ್ರೀಯ ಹಾಗೂ ಕಠಿಣ ಕ್ಷೇತ್ರ ಕಾರ್ಯ ಕೌಶಲಗಳು ಬೇಕೇಬೇಕು. ಇಲ್ಲಿಯ ಕ್ಷೇತ್ರಕಾರ್ಯ ಕೇವಲ ಮಾಹಿತಿಯ ಸೇರ್ಪಡೆಯಲ್ಲ. ಪಠ್ಯದ ದೃಷ್ಟಿಕೋನವನ್ನು ಸರಣಿ ನಿರೂಪಣೆಯಿಂದ ಬಹು ಆಯಾಮದ ಪ್ರದರ್ಶನಕ್ಕೆ ಒಗ್ಗಿಸುವುದು.

ಇಷ್ಟಾದರೂ ಈ ಪಂಥದವರು ತಮ್ಮ ಚಿಂತನೆಗಳನ್ನು ಏಕಸೂತ್ರದಲ್ಲಿ ಹಿಡಿದಿಡುವ ಗ್ರಂಥವೊಂದನ್ನು ಇದುವರೆಗೂ ಕೊಟ್ಟಿಲ್ಲ. ಉನ್ನತ ಗುಣಮಟ್ಟದ

6 ವಾಸ್ತವವಾಗಿ ಇದನ್ನು ಮೌಖಿಕ ಸೂತ್ರೀಯ ಸಿದ್ಧಾಂತ ಸಂಶಯಾತೀತವಾಗಿ ಸಾಬೀತು ಮಾಡಿತು.

ಬರಹಗಳನ್ನೂ ಹೊರತಂದಿದ್ದಾರೆ. ಅವು ಜನಪ್ರಿಯವಾಗುತ್ತಿರುವ ಈ ವಿಧಾನದ ವೈಧಾನಿಕ ಆಯಾಮಗಳನ್ನು ಪರಿಚಯಿಸುತ್ತವೆ. ಪಠ್ಯವನ್ನಷ್ಟೇ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳಿಗೆ ಜಾನಪದದ ಹೊಸ ಆಯಾಮಗಳ ತಿಳಿವಳಿಕೆಯನ್ನು ಇದು ತಂದುಕೊಡುತ್ತದೆ. ಬಹುಕಾಲದಿಂದ ಬರೆದಿಡಲಾಗುತ್ತಿರುವ ಜಾನಪದ ಪಠ್ಯ ಮಾಹಿತಿ ರೂಪದ ಒಂದು ನೀರಸ ಪುನಃಸೃಷ್ಟಿ ಎಂಬುದು ಈ ಸಿದ್ಧಾಂತದ ನಿಲುವು. ಅದರ ಪ್ರಕಾರ, ಈ ದಾಖಲೀಕರಣದಲ್ಲಿ ಜಾನಪದ ಘಟನೆ ಸಮಗ್ರರೂಪದಲ್ಲಿ ಪ್ರತಿಬಿಂಬಿತವಾಗಿರುವುದೇ ಇಲ್ಲ. ಬಹು ಎಚ್ಚರಿಕೆಯಿಂದ ನಾವು ಅದನ್ನು ದಾಖಲೀಕರಿಸಿದ್ದರೂ ಅದರ ಬಹುಭಾಗವನ್ನು ನಾವು ದಾಖಲೀಕರಿಸಿಕೊಂಡೇ ಇರುವುದಿಲ್ಲ. ಮುಕ್ಕಾಲು ಪಾಲು ನಮಗೆ ಅರ್ಥವೇ ಆಗಿರುವುದಿಲ್ಲ.

ಈ ವಿಧಾನದಲ್ಲಿ ಜಾನಪದ ಘಟನೆ, ಅದು ಕತೆಯಾಗಿರಬಹುದು ಅಥವಾ ಕುಣಿತವಾಗಿರಬಹುದು—ಅದರ ಸರ್ವಮುಖಗಳ ಆಚೆಗೂ ಹೋಗುವ ಪ್ರಯತ್ನವಿದೆ. ಇದು ಘಟನೆಯೊಂದರ ಸಾಂದರ್ಭಿಕ ಆಯಾಮದ ರೂಪಾವಳಿಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಕತೆ ಹೇಳುವ ಘಟನೆ ಇಲ್ಲಿ ಪಠ್ಯವಷ್ಟೇ ಅಲ್ಲ; ಕತೆಗಾರ, ಕತೆ ಹೇಳುವ ಸಂದರ್ಭ, ಕತೆ ಹೇಳುವ ಶೈಲಿ, ಕತೆಗಾರ ಮತ್ತು ಶ್ರೋತೃಗಳ ನಡುವಿನ ಪಾರಸ್ಪರ್ಯತೆ ಹಾಗೂ ಇಡೀ ಘಟನೆಯನ್ನು ರೂಪಿಸುವ ಪೂರ್ಣ ಸಾಂಸ್ಕೃತಿಕ ಹಿನ್ನೆಲೆ. ಈ ಕಾರಣಕ್ಕಾಗಿ ಪಠ್ಯದ ಧ್ವನಿಮುದ್ರಣ ಬಹು ಅಗತ್ಯ. ಪಠ್ಯವನ್ನು ಪ್ರಸ್ತುತಪಡಿಸುವ ಶ್ರೋತೃಗಳಿಂದ ಅದು ಸ್ವೀಕೃತವಾಗುವ ಎಲ್ಲ ಸನ್ನಿವೇಶಗಳನ್ನೂ ನಿರೂಪಕ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಮಾಹಿತಿ ಸಂಗ್ರಹಣೆಗೆ ಧ್ವನಿಮುದ್ರಣ ಹಾಗೂ ಇತರ ಪರಂಪರಾಗತ ವಿಧಾನಗಳನ್ನು ಬಳಸುವುದಲ್ಲದೆ ಘಟನೆಯ ಸಾಂದರ್ಭಿಕ ಸಾರವನ್ನು ಹಿಡಿದಿಡಲು ವೀಡಿಯೊ ಸಾಧನವನ್ನು ಬಳಸುವುದು ಅಗತ್ಯ ಎಂದು ಈ ವಿಧಾನ ಹೇಳುತ್ತದೆ. ಈ ವಿಧಾನದಲ್ಲಿ ಅಭ್ಯಸಿಸುವ ಎಲ್ಲರೂ ಅತ್ಯಾಧುನಿಕ ಉಪಕರಣಗಳನ್ನು ಬಳಸಿಯೇ ತೀರುತ್ತಾರೆ.

ಈ ವಿಧಾನದ ಭವಿಷ್ಯ ಏನೇ ಇರಲಿ, ಇದು ಪಠ್ಯಾಧಾರಿತ ಜಾನಪದ ಸಿದ್ಧಾಂತಗಳಿಂದ ಬಹು ದೂರ ಹೋಗಿರುವುದಂತೂ ಖಚಿತ. ಅಪಠ್ಯರೂಪಗಳಾದ ಕುಣಿತ, ನಾಟಕ ಇತ್ಯಾದಿಗಳ ವಿಶ್ಲೇಷಣೆಗೆ ಸಾಕಷ್ಟು ಶಕ್ತಿ ಹಾಗೂ ಸತ್ವವನ್ನು ಇದು ತುಂಬುತ್ತದೆ. ಹಿಂದಿನ ಕಾಲದಲ್ಲಿ ಯಾರೂ ಈ ರೂಪಗಳನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಕಾಲಕ್ರಮದಲ್ಲಿ ರೂಪುಗೊಂಡ ಈ ಬಗೆಯ ಸೈದ್ಧಾಂತಿಕ ವಿಧಿವಿಧಾನಗಳು ಪ್ರಮುಖವಾಗಿ ಪಠ್ಯಾಧಾರಿತ ಸಾಮಗ್ರಿಯನ್ನೇ ಕುರಿತಿದ್ದವು ಎಂಬುದು ಗಮನಾರ್ಹ.

ಪ್ರದರ್ಶನ ಸಿದ್ಧಾಂತ : ಜಾನಪದ ಅಧ್ಯಯನದಲ್ಲಿ ಇತ್ತೀಚೆಗೆ ಪ್ರಚುರಕ್ಕೆ ಬಂದ ಒಂದು ವೈಧಾನಿಕತೆ. ಇದು ಐವತ್ತರ ದಶಕದಲ್ಲಿ ಅಂಕುರಿಸಿದ ಸಾಂದರ್ಭಿಕ ಅಧ್ಯಯನದ ಮುಂದುವರಿದ ಹೆಜ್ಜೆ. ಜಾನಪದ ರೂಪವೊಂದನ್ನು ಅದು ನಿಜವಾಗಿ

ಬಳಕೆಗೊಳ್ಳುವ ವಿಶಿಷ್ಟ ಸಾಮಾಜಿಕ ಸಂದರ್ಭದ ಹಿನ್ನೆಲೆಯಲ್ಲಿ ಪರಿಭಾವಿಸಿ ಅದರ ಸಂದರ್ಭ ಮತ್ತು ಕ್ರಿಯೆಗಳ ನಡುವಿನ ಭಿನ್ನತೆಯನ್ನು ಗುರುತಿಸಿ ಅಭ್ಯಸಿಸುವುದು ಸಾಂದರ್ಭಿಕ ಅಧ್ಯಯನದ ಉದ್ದೇಶವಾಗಿತ್ತು. ಈ ಸಿದ್ಧಾಂತದಿಂದ ಆಕರ್ಷಿತರಾದ ಅಮೆರಿಕೆಯ ತರುಣ ಪೀಳಿಗೆ (Young Turks) ಸಾಮಾಜಿಕ ಜೀವನದ ವಾಸ್ತವಗಳ ಹಿನ್ನೆಲೆಯಲ್ಲಿ ಜಾನಪದವನ್ನು ವ್ಯಾಖ್ಯಾನಿಸುವ ಪ್ರಯತ್ನ ಮಾಡಿತು. ಇವರು ಜಾನಪದವನ್ನು ಸಮಾಜದ ಒಂದು ನೈಜಪ್ರಕ್ರಿಯೆಯಾಗಿ ಪರಿಗಣಿಸುವ ದೃಷ್ಟಿಯನ್ನು ಬೆಳೆಸಿದರು ಆ ಮೂಲಕ ಸಾಂದರ್ಭಿಕತೆಯನ್ನು ಜಾನಪದ ಸಂಶೋಧನೆಯ ತಳಹದಿಯಾಗಿ ಮಾರ್ಪಡಿಸಿದರು. ಸಾಮಾಜಿಕ ಸನ್ನಿವೇಶಗಳ ಹಿನ್ನೆಲೆಯಲ್ಲಿ ಜಾನಪದೀಯ ಘಟನೆಗಳನ್ನು ಅಭ್ಯಸಿಸುವ ಈ ಪ್ರವೃತ್ತಿ ಕ್ರಮೇಣ ಅಖಂಡ ನೋಟವನ್ನು ಪಡೆದುಕೊಳ್ಳುತ್ತಾ ವ್ಯಾಪಕ ಹಿನ್ನೆಲೆಯ ಅಧ್ಯಯನವಾಗಿ ಪರಿಣಮಿಸಿತು. ಇದೇ ಮುಂದೆ ಪ್ರದರ್ಶನ ಸಿದ್ಧಾಂತ (Performance theory) ಎಂಬ ಹೆಸರಿನಲ್ಲಿ ಒಂದು ಪ್ರಬಲ ವೈಧಾನಿಕತೆಯಾಗಿ ರೂಢಿಗೆ ಬಂದಿತು. ಮೊದಲಿಗೆ ಪಠ್ಯಗಳನ್ನು ಅವುಗಳ ಸಾಂಸ್ಕೃತಿಕ ಸಂದರ್ಭದೊಡನಿಟ್ಟು ಅಧ್ಯಯನ ಮಾಡುವ ದೃಷ್ಟಿಯನ್ನು ಹುಟ್ಟುಹಾಕಿದ್ದು ಮೌಖಿಕ ಸೂತ್ರೀಯ (oral formula) ಹಾಗೂ ಸಾಂದರ್ಭಿಕ ಸಿದ್ಧಾಂತಗಳು (contextual theory). ಮುಂದೆ ಅವನ್ನೇ ಪ್ರದರ್ಶನ ಸಂದರ್ಭದಲ್ಲಿಟ್ಟು ನೋಡುವ ಮತ್ತೊಂದು ಹೆಜ್ಜೆ ಮುಂದುವರಿಯಿತು. ಎಪ್ಪತ್ತು ಮತ್ತು ಎಂಬತ್ತರ ದಶಕದಲ್ಲಿ ಮಾನವ ಸಂಸ್ಕೃತಿಯನ್ನು ಅಂತರಶಿಸ್ತೀಯವಾಗಿ ಅಭ್ಯಾಸ ಮಾಡುವ ಏಕಮಾತ್ರ ಉದ್ದೇಶದಿಂದ ಜಾನಪದ, ಮಾನವಕುಲ ಶಾಸ್ತ್ರ, ಸಾಹಿತ್ಯ ತಜ್ಞರು ಹಾಗೂ ಭಾಷಾ ವಿಜ್ಞಾನಿಗಳು ಒಂದುಗೂಡಿದ್ದರ ಫಲದಿಂದ ಪ್ರದರ್ಶನ ವಿಧಾನಕ್ಕೆ ಪ್ರಸ್ತುತತೆ ಸಾಧಿತವಾಯಿತು ಜೆನ್ ಅಮಾಸ್ (1972) ಹೈಮ್ಸ್ (1975) ಅಬ್ರಾಹಮ್ಸ್ (1977) ಬೌಮನ್ (1977) ಇವರೇ ಮುಂತಾದವರು ಜಾನಪದ ಸಾಮಗ್ರಿಯನ್ನು ಪ್ರದರ್ಶಕ ಸಿದ್ಧಾಂತದ ಹಿನ್ನೆಲೆಯಲ್ಲಿ ಅಭ್ಯಸಿಸಿದರು. ಇದೇ ಹೊತ್ತಿನಲ್ಲಿ ವ್ಯಾಡ್ಲಿ (1975, 1978) ಕ್ಲಾಸ್ (1975, 1979) ಸ್ಮಿತ್ (1977) ವಟುರ್ ಮತ್ತು ವಟುರ್ (1979) ಬೆರ್ ಬ್ರೆಂಡಾ (1982) ಬ್ಲ್ಯಾಕ್ ಬರ್ನ್ (1981) ಇವರೇ ಮುಂತಾದ ಮಾನವಕುಲಶಾಸ್ತ್ರಜ್ಞರು ಪ್ರದರ್ಶನ ಸಂದರ್ಭದಲ್ಲಿ ಜನಪದ ಗದ್ಯಕಥನಗಳ ಸಂಗ್ರಹಣೆ ನಡೆಸಿದರು.

ಅಂತರಶಿಸ್ತೀಯ ವಿಧಾನಗಳ ಹಿನ್ನೆಲೆಯಲ್ಲಿ ಲೋಕದೃಷ್ಟಿಯಿಂದ ಜಾನಪದ ಸಂಗತಿಯನ್ನು ವಿವರಿಸುವ ಪ್ರದರ್ಶನ ಸಿದ್ಧಾಂತ ರಾಚನಿಕ ವಿಧಾನದಲ್ಲಿ ಅಡಕವಾಗಿರುವ ಆದರ್ಶವಾದಕ್ಕಿಂತ ಭಿನ್ನವಾದುದನ್ನು ಹೊಂದಿದೆ. ಪ್ರದರ್ಶನದಲ್ಲಿ ನಡೆಯುವುದೇನು? ಅದರ ಸಾಂದರ್ಭಿಕತೆಯೇನು? — ಇವಕ್ಕೆ ಉತ್ತರಿಸುವ ಯತ್ನ ಈ ಪ್ರದರ್ಶಕ ತತ್ವದ್ದು. ಸಹಜವಾಗಿ ಈ ಅಧ್ಯಯನ ವಿಧಾನದಲ್ಲಿ ರಾಚನಿಕ ವಿಶ್ಲೇಷಣಾ ವಿಧಾನಕ್ಕಿಂತ ಹೆಚ್ಚು ವಿವರಣಾತ್ಮಕ ವಿಶ್ಲೇಷಣೆ ಅಪೇಕ್ಷಣೀಯ. ಆದರೆ ಇಲ್ಲಿ ಅರ್ಥ

ವಿಶ್ಲೇಷಣೆಗೆ ಅವಕಾಶ ಕಡಿಮೆ. ಮೌಖಿಕ ಪಠ್ಯಗಳು ಹೇಗೆ ಸಂದರ್ಭಗಳಾಗಿ ರೂಪಪರಿವರ್ತನೆ ಹೊಂದುತ್ತವೆ ಎನ್ನುವುದನ್ನು ಇಲ್ಲಿ ವಿಶೇಷವಾಗಿ ಲಕ್ಷ್ಯಕ್ಕೆ ತೆಗೆದುಕೊಳ್ಳಲಾಗುತ್ತದೆ. 'ಯಾವುದೇ ಸಂದರ್ಭವು ಪಠ್ಯವೊಂದರ ನಿಜವಾದ ಅರ್ಥವನ್ನು (very meaning) ಬದಲಾಯಿಸುತ್ತದೆ (ಉದ್ಧೃತ : ವಾಮನ ನಂದಾವರ : 1991 : 22). ಒಟ್ಟಿನಲ್ಲಿ ಸಾಂದರ್ಭಿಕತೆಯಿಲ್ಲದೆ ಯಾವುದೇ ಪಠ್ಯವನ್ನು ಅಭಿವ್ಯಕ್ತಗೊಳಿಸಲಾಗುವುದಿಲ್ಲ. ಮತ್ತು ಅರ್ಥೈಸಲಾಗುವುದಿಲ್ಲ. ಇದೇ ಪ್ರದರ್ಶನ ಸಿದ್ಧಾಂತದ ತಿರುಳು. ಇದು ಈ ವಾದದ ಪ್ರಸ್ತುತತೆಯನ್ನು ತಿಳಿಸುತ್ತದೆ.

ಪ್ರದರ್ಶಕ ತತ್ವದ ಪ್ರಕಾರ, ಜಾನಪದ ರೂಪವೊಂದು ಪ್ರತಿ ಸಲವೂ ಹೊಸದೇ ಆಗಿ ರೂಪುಗೊಳ್ಳುತ್ತದೆ. ಆದರೆ ಯಾವುದೇ ಜಾನಪದ ರೂಪದ ಅರ್ಥ ಮತ್ತು ಕಾರ್ಯವನ್ನು ವಿವರಿಸುವುದು ಈ ವಿಧಾನದ ಗುರಿಯಲ್ಲ. ಇಷ್ಟಾದರೂ ಆ ಬಗೆಯ ಅರ್ಥ ವಿಶ್ಲೇಷಣೆಗೆ ಇದು ಅವಕಾಶ ಕಲ್ಪಿಸಿಕೊಡುವುದು ಸಮಾಧಾನದ ಸಂಗತಿ. ಪ್ರದರ್ಶನವೊಂದನ್ನು ಅದೇ ಸಂದರ್ಭದಲ್ಲಿ ಮತ್ತೆ ಮತ್ತೆ ನೋಡಿ ಮರು ಪ್ರದರ್ಶನದಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಗುರುತಿಸಿಕೊಳ್ಳುವುದಕ್ಕೆ ಇಲ್ಲಿ ಅವಕಾಶವಿರುವುದು ಗಮನಾರ್ಹ. ಕ್ಲಾಸ್ ಮತ್ತು ಕೋರಂ ಪ್ರಕಾರ "ಪ್ರದರ್ಶನ ದೃಷ್ಟಿಕೋನದ ವಿಶ್ಲೇಷಣೆ ಜಾನಪದ ಅಂಶವೊಂದನ್ನು ನಿರ್ದಿಷ್ಟ ನಿರ್ವಹಣೆ ಸಂದರ್ಭದ ಸಂಗತಿಯಾಗಿ ಮಾತ್ರ ಸ್ಥಿರೀಕರಿಸುವುದಲ್ಲ. ಅದನ್ನು ನಿರ್ದಿಷ್ಟ ಸಂಸ್ಕೃತಿ ಹಾಗೂ ಸಮಾಜದಲ್ಲಿ ಕೂರಿಸುವುದು. ತಮ್ಮ ಬದುಕಿನಲ್ಲಿ ಮೈಗೂಡಿಸಿಕೊಂಡಿರುವ ಜಾನಪದೀಯರ ಆಚರಣೆಗಳನ್ನು ಅವುಗಳ ಕಾರ್ಯಗಳನ್ನು ಅರ್ಥವಿಸಿಕೊಳ್ಳುವುದನ್ನು ಆದು ಬಯಸುತ್ತದೆ. ಸಾಂಸ್ಕೃತಿಕ ಸಾಮಾಜಿಕ ಉದ್ದೇಶಿತ ಪ್ರೇರಣೆಗಳು ಪ್ರದರ್ಶನಕಾರರಲ್ಲಿ (performers) ಹೊಂದಿರುವ ಅರ್ಥದ ಮೇಲೆ ಮಾತ್ರ ಪ್ರಭಾವ ಬೀರುತ್ತವೆ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನವಲ್ಲದೆ ಪ್ರೇಕ್ಷಕರು ಹೊಂದಿರುವ ಅರ್ಥದ ಮೇಲೂ ಪ್ರಭಾವ ಬೀರುತ್ತವೆ ಎಂಬುದನ್ನು ತಿಳಿದುಕೊಳ್ಳುವುದು ಈ ಸಿದ್ಧಾಂತದ ಉದ್ದೇಶ" (ಕ್ಲಾಸ್ ಮತ್ತು ಕೋರಂ : 1988 : 94)

ಸಾಮಾನ್ಯವಾಗಿ ಪ್ರದರ್ಶನವೊಂದರ ಮೇಲೆ ಅನೇಕ ಸಂದರ್ಭಗಳು ಪ್ರಭಾವ ಬೀರುವುದು ಸಹಜ. ಈ ತತ್ವದ ಪ್ರಕಾರ, ಸುಮಾರು ಒಂಬತ್ತು ಅಂಶಗಳನ್ನು ಪ್ರದರ್ಶನವೊಂದು ಅವಲಂಬಿಸಿರುತ್ತದೆ :

೧. ಭೌಗೋಳಿಕ ಸಂದರ್ಭ : ಯಾವುದೇ ಘಟನೆ/ಸಂಗತಿಯ ಪ್ರದರ್ಶನ ಎಲ್ಲಿ ಸಂಭವಿಸುತ್ತದೆ ಎಂಬುದು ಬಹು ಮುಖ್ಯ.

೨. ಸಾಮಾಜಿಕ ಸಂದರ್ಭ : ಜಾತಿ, ವರ್ಗ, ಬುಡಕಟ್ಟು, ಕುಲ, ಬಳಿ–ಹೀಗೆ ಬಂಧುತ್ವದ ಅಂಶಗಳನ್ನು ಗಮನಿಸಬೇಕಾಗುತ್ತದೆ.

೩. ಆರ್ಥಿಕ ಸಂದರ್ಭ : ಉದ್ಯೋಗ, ವರಮಾನ ಸ್ಥಿತಿಗತಿಗಳು ಇತ್ಯಾದಿ.

೪. ಕಾಲದ ಸಂದರ್ಭ : ವಾರ್ಷಿಕ ಹಾಗೂ ದೈನಿಕ ಆವರ್ತನಗಳನ್ನು ಲಕ್ಷಿಸಬೇಕಾಗುತ್ತದೆ (ಉದಾಹರಣೆಗೆ ವಾರ್ಷಿಕ ಆವರ್ತನದಲ್ಲಿ ಸುಗ್ಗಿಕಾಲ ; ದೈನಿಕ ಆವರ್ತನದಲ್ಲಿ ರಾತ್ರಿ–ಹಗಲು).

೫. ಪ್ರೇಕ್ಷಕರು : ವೀಕ್ಷಕರು, ಶ್ರೋತೃಗಳು—ಸ್ವೀಕರಿಸುವ ವರ್ಗ

೬. ಪ್ರದರ್ಶನಕಾರ : ಹಾಡುಗಾರ, ನರ್ತಕ, ನಿರೂಪಕ, ವಕ್ತೃ ಮುಂತಾದವರು.

೭. ಮಾಧ್ಯಮ : ಗದ್ಯ, ಪದ್ಯ, ನಾಟಕ

೮. ಪಠ್ಯ : ರೂಪ, ಬಂಧ, ಶೈಲಿ ಇತ್ಯಾದಿ

೯. ಅರ್ಥದ ಪದರಗಳು : ಅರ್ಥ, ಸಂಕೇತಗಳು ಲಕ್ಷ್ಯಾರ್ಹ

ಈ ಎಲ್ಲ ಒಂಬತ್ತು ಅಂಶಗಳ ನಡುವೆ ಪರಸ್ಪರ ಸಂಬಂಧವಿರುವುದು ಗಮನಾರ್ಹ. ಯಾವುದೇ ಒಂದು ಅಂಶದಲ್ಲಿ ಬದಲಾವಣೆಯಾದರೂ ಒಟ್ಟು ಸಂದರ್ಭದಲ್ಲಿ ಬದಲಾವಣೆ ಸಾಮಾನ್ಯ. ಆದುದರಿಂದ ರೂಪವೊಂದರ ರಚನೆ ಮತ್ತು ಅರ್ಥದ ಮೇಲೂ ಬದಲಾವಣೆ ಸಂಭವನೀಯ. ರೂಪವೊಂದರ ಅರ್ಥ ಮತ್ತು ರಚನೆಯನ್ನು ತಿಳಿಯಲು ಸಂದರ್ಭ ಪರಿಶೀಲನೆ ಆವಶ್ಯಕ ಈ ಸಂದರ್ಭ ರೂಪವೊಂದರ ಮೇಲೂ ಪರಿಣಾಮ ಬೀರಬಹುದು. ಹೀಗೆ ನಾವು ದೊರಕಿಸಿಕೊಳ್ಳುವ ಪಠ್ಯದ ಭಿನ್ನ ರೂಪಗಳಿಗೂ ಮೂಲಕಾರಣ ಸಂದರ್ಭದಲ್ಲುಂಟಾಗುವ ಬದಲಾವಣೆಯೇ ಈ ಅರ್ಥದಲ್ಲಿ ಸ್ಥಾಪಿತ ಮೌಲ್ಯವಿನ್ಯಾಸವೊಂದನ್ನು ಯಾವ ರೂಪದಲ್ಲೂ ನಿರೀಕ್ಷಿಸುವುದು ಅಸಾಧ್ಯ. ಇದಕ್ಕೆ ರೂಪಪರಿವರ್ತನೆಯೇ ಕಾರಣ. ನಾವು ಬಯಸುವ ಮೌಲ್ಯ ವಿನ್ಯಾಸ ಕ್ರಿಯೆಗಳ ಶೋಧ ಮತ್ತು ಪರಿಶೀಲನೆಯಲ್ಲಿ ಸ್ಪಷ್ಟಗೊಳ್ಳಬೇಕು. ಅದಕ್ಕಾಗಿ ಪ್ರದರ್ಶನವೊಂದನ್ನು ಅದೇ ಸಂದರ್ಭದಲ್ಲಿ ಅನೇಕ ಬಾರಿ ವೀಕ್ಷಿಸಿ ದಾಖಲೀಕರಿಸಿ ಕೊಳ್ಳಬೇಕಾಗುತ್ತದೆ. ಎಂದರೆ ಸಂದರ್ಭದ ಆವರ್ತನವನ್ನು ಬಯಸಿದಂತಾಯಿತು. ಈ ಕಾರಣದಿಂದಾಗಿಯೇ ಪ್ರದರ್ಶನ ಸಿದ್ಧಾಂತ ವಿಶಿಷ್ಟವೆನಿಸುವುದು.

ಪ್ರದರ್ಶನವೊಂದು ಅವಲಂಬಿಸಿದ ಒಟ್ಟಾರೆ ಅಂಶಗಳ ಒಟ್ಟು ವ್ಯವಸ್ಥೆಯನ್ನೇ ಸಂದರ್ಭವೆಂದು ಪರಿಗಣಿಸುವುದಾದರೆ ಇಲ್ಲಿ ಪಠ್ಯ ಯಾವುದು ಎನ್ನುವ ಪ್ರಶ್ನೆ ಎದುರಾಗುತ್ತದೆ. ಈ ತೊಡಕನ್ನು ನಿವಾರಿಸಿಕೊಳ್ಳಲು ಇಡಿಯ ಸ್ವರೂಪವನ್ನೇ ಒಂದು ಪಠ್ಯವನ್ನಾಗಿ ಸ್ವೀಕರಿಸಬೇಕಾಗುತ್ತದೆ. ಆಗ ಒಂದು ಗೊತ್ತಾದ ಸಂದರ್ಭವೇ ಒಂದು ಪಠ್ಯ ಎನಿಸುತ್ತದೆ. ಈ ತೆರನ ಒಂದು ಸಂದರ್ಭವೇ ಒಂದು ಪ್ರದರ್ಶನ ಸಂದರ್ಭವಾಗಿ (Performance context) ಪರಿಗಣಿಸಲ್ಪಡುತ್ತದೆ.

ರಂಗದಲ್ಲಿ ನಡೆಯಬಹುದಾದ ರಂಗಕಲೆಯನ್ನು ಪ್ರದರ್ಶನ ಎಂದು ಕರೆಯುವುದು

ಸಾಮಾನ್ಯ. ಇಲ್ಲಿ ಕುಣಿತ, ಹಿಮ್ಮೇಳ, ಹಾಡು, ಮೌಖಿಕತೆ ಪ್ರಧಾನವಾಗಿರುತ್ತವೆ. ಪ್ರದರ್ಶನದಲ್ಲಿ ಮೌಖಿಕ ಪರಂಪರೆ ಕ್ರಿಯಾರೂಪವನ್ನು ಪಡೆಯುವುದು ಇಲ್ಲಿನ ವಿಶೇಷ. ಇದನ್ನು ಪ್ರದರ್ಶನ ಸಂಗತಿ (Performance event) ಎನ್ನುತ್ತಾರೆ. ಸಾಮಾಜಿಕ ಸಂದರ್ಭ, ಪ್ರದರ್ಶನಕಾರ ಮತ್ತು ಪ್ರೇಕ್ಷಕರು—ಈ ಎಲ್ಲ ಅಂಶಗಳೂ ಮುಖ್ಯ ಸಂಗತಿಗೆ (event) ಸಂಬಂಧಿಸುತ್ತವೆ.

ಪ್ರದರ್ಶನದ ಘಟಕಗಳಲ್ಲಿ ಪಠ್ಯ(Text) ಸಂದರ್ಭ(context) ಬಂಧ (Texture) ಮುಖ್ಯವಾದವು. ಪಠ್ಯವೆಂದರೆ ಇಲ್ಲಿ ಕೇವಲ ಲಿಖಿತ ಪಠ್ಯವಲ್ಲ. ಗೊತ್ತಾದ ಸಂದರ್ಭವೊಂದರಲ್ಲಿ ಮೌಖಿಕವಾಗಿ ನಿರ್ವಹಣೆಗೊಳ್ಳುವ ಜಾನಪದ ಸಂಗತಿಯೇ ಪಠ್ಯ. ಪ್ರದರ್ಶನ ಸಂದರ್ಭದಲ್ಲಿ ಧ್ವನಿಮುದ್ರಣದಲ್ಲಿ ದಾಖಲಿಸಿಕೊಳ್ಳುವಂಥದು. "ಪ್ರದರ್ಶನ ದೃಷ್ಟಿ ಎಂದ ಮಾತ್ರಕ್ಕೆ ಪಠ್ಯ ವಿಶ್ಲೇಷಣೆಯನ್ನು ತ್ಯಜಿಸಬೇಕು ಎಂದರ್ಥವಲ್ಲ. ಪಠ್ಯದ ಹೊರತು ಪ್ರದರ್ಶನವೊಂದರ ಅಧ್ಯಯನ ಸಾಧುವಲ್ಲ. ಪ್ರದರ್ಶನ ತತ್ವ ಪಠ್ಯವನ್ನು ಬೇರೊಂದು ದೃಷ್ಟಿಯಿಂದ ನೋಡುವುದನ್ನು ಕಲಿಸಿ ಕೊಡುತ್ತದೆ. ಯಾವುದೇ ಪರಿಣಾಮಕಾರಿ ಪ್ರದರ್ಶನಾಧ್ಯಯನ ತನ್ನ ಕೆಲಸವನ್ನು ಕತೆಯ ಒಳಗಿನಿಂದ ಆರಂಭಿಸಿ ಹೊರಸರಿದು ಆವೃತ್ತಗೊಂಡು ಅಲ್ಲಿಗೆ ಬಂದು ಸೇರುತ್ತದೆ (ಬ್ಲ್ಯಾಕ್‌ಬರ್ನ್ : 1986 : 1988).

ಪ್ರದರ್ಶನವೊಂದು ಅಸ್ತಿತ್ವಪಡೆಯುವ, ಸಮಂಜಸ ಎನಿಸುವ ಸಾಮಾಜಿಕ ಸನ್ನಿವೇಶಗಳಿಗೆ ಸಂಬಂಧಿಸಿದ ವ್ಯಾಪಕ ವೀಕ್ಷಣೆಗಳ ಮೊತ್ತವೇ ಸಂದರ್ಭ. ಅದು ನಿರ್ದಿಷ್ಟ ಪ್ರಕಾರವು ನಿಜವಾಗಿ ಬಳಕೆಗೊಳ್ಳುವ ವಿಶಿಷ್ಟ ಸಾಮಾಜಿಕ ಸನ್ನಿವೇಶ (ವಿವೇಕ ರೈ : 1985 : 84).

ಗೊತ್ತಾದ ರೂಪವೊಂದರ ರಚನಾವಿನ್ಯಾಸವನ್ನು ಹೇಳುವಾಗ ಮತ್ತು ರಂಗ ಕಲೆಗಳ ಅಧ್ಯಯನದ ಸಂದರ್ಭದಲ್ಲಿ ವ್ಯಾಪಕಾರ್ಥದಲ್ಲಿ ಬಳಸುವ ಪ್ರಯೋಗ 'ಬಂಧ'. ಮೌಖಿಕ ಪಠ್ಯ, ಸಂಗೀತ ಮುಂತಾದ ಪ್ರತಿ ಮಾಧ್ಯಮದ ಗುಣಲಕ್ಷಣ ಹಾಗೂ ವಿಶ್ಲೇಷಣೆಯ ದಾಖಲೆಗಳನ್ನು ಇದು ಒಳಗೊಳ್ಳುತ್ತದೆ (ಡಂಡೆಸ್ : 1978 : 22–37).

ಜಾನಪದದ ಯಾವುದೇ ರೂಪದ ಪ್ರದರ್ಶಕ ಅಧ್ಯಯನ ಸಂದರ್ಭದಲ್ಲಿ ಪಠ್ಯ, ಸಂದರ್ಭ ಮತ್ತು ಬಂಧ—ಇವು ಮೂರೂ ಮುಖ್ಯ ಘಟಕಗಳಾಗುತ್ತವೆ. ಈ ಅಂಶ ಪ್ರದರ್ಶನ ವಿಧಾನ ಇತರ ಅಧ್ಯಯನ ವಿಧಾನಗಳಿಂದ ಹೇಗೆ ಭಿನ್ನ ಎಂದು ತಿಳಿಯಲು ಸಹಾಯಕವಾಗಿದೆ: ೧. ಮೊದಲನೆಯದಾಗಿ ಇದು ರಾಚನಿಕ ವಿಶ್ಲೇಷಣಾ ವಿಧಾನ ಮತ್ತು ಕ್ರಿಯಾ ತತ್ವವಿಧಾನ—ಈ ಎರಡನ್ನೂ ಒಂದುಗೂಡಿಸಲು ಯತ್ನಿಸುತ್ತದೆ. ೨. ಪ್ರದರ್ಶನದ ಸಮಗ್ರ ಪರಿಭಾವನೆಗೆ ಇಲ್ಲಿ ಅವಕಾಶವಿದೆ. ೩. ವೃತ್ತಿ ಮಾನವ ಕುಲ ಶಾಸ್ತ್ರೀಯ ಅಧ್ಯಯನದ ಆವಶ್ಯಕತೆಗಳನ್ನು ಇದು ಪೂರೈಸುತ್ತದೆ. ೪. ಪ್ರದರ್ಶನ ಕಾರನ ಬಗ್ಗೆ ಇದು ಹೆಚ್ಚು ಕಾಳಜಿವಹಿಸುತ್ತದೆ.

ಈ ವೈಶಿಷ್ಟ್ಯಗಳ ನಡುವೆಯೂ ಈ ಸಿದ್ಧಾಂತ ಕೆಲವು ಮಿತಿಗಳನ್ನು ಹೊಂದಿದೆ. ಈ ಸಿದ್ಧಾಂತ ಕ್ಷೇತ್ರಕಾರ್ಯಕರ್ತನಿಗೆ ಅನೇಕ ತೆರನ ಸವಾಲುಗಳನ್ನು ಒಡ್ಡುತ್ತದೆ. ಅದಕ್ಕಾಗಿ ಅವನು ಬಹು ಸೂಕ್ಷ್ಮದೃಷ್ಟಿಯ ವೀಕ್ಷಕನಾಗಿರಬೇಕಾಗುತ್ತದೆ. ಪ್ರದರ್ಶನ ವಸ್ತು ರೂಪದ ನಡುವೆ ಇರುವ ಸಂಬಂಧದ ಬಗ್ಗೆ ತೀರ್ಮಾನಕ್ಕೆ ಬರಲು ಅದು ಆವಶ್ಯಕ. ಏನೇ ಇರಲಿ, ಈ ತತ್ವ ಅರ್ಥ ಮತ್ತು ಕಾರ್ಯವನ್ನು ಸಂಪೂರ್ಣವಾಗಿ ವಿವರಿಸುವುದಿಲ್ಲ. ಇದೇ ಈ ತತ್ವದ ಲೋಪ. ಆದರೆ ಪ್ರತಿ ಸಂದರ್ಭ ಪುನರಾವರ್ತನೆಯೂ ಒಂದು ಪ್ರತ್ಯೇಕ ಪಠ್ಯವಾಗಿ ಕಾಣಿಸಿಕೊಳ್ಳುತ್ತದೆ—ಎಂಬುದನ್ನು ಈ ಸಿದ್ಧಾಂತ ಪ್ರತಿಪಾದಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಸಿದ್ಧಾಂತ ವ್ಯಾಪಕವಾದ ಕ್ಷೇತ್ರಕಾರ್ಯವನ್ನು ಬಯಸುತ್ತದೆ. ಒಬ್ಬನಿಗಿಂತ ಹೆಚ್ಚು ಮಂದಿ ಕ್ಷೇತ್ರಕಾರ್ಯದಲ್ಲಿ ತೊಡಗಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತದೆ ಹೀಗೆ ಬೇರೆ ಬೇರೆ ಕಾರಣಗಳಿಂದಾಗಿ ಇದು ತೊಡಕನ್ನು ತರುವಂಥದಾಗಿದೆ. ಮೊದಲನೆಯದಾಗಿ ಅಧ್ಯಯನವೊಂದರಲ್ಲಿ ಒಬ್ಬನಿಗಿಂತ ಹೆಚ್ಚು ಮಂದಿಯನ್ನು ತೊಡಗಿಸಿಕೊಳ್ಳುವುದು ಅನೇಕ ವೇಳೆ ಸಾಧ್ಯವಾಗದೆ ಹೋಗಬಹುದು. ಒಬ್ಬನೇ ವ್ಯಕ್ತಿ ಪ್ರದರ್ಶನವೊಂದರ ವಿವಿಧ ಅಂಶಗಳನ್ನು ದಾಖಲಿಸಿಕೊಳ್ಳುವುದೂ ಕಷ್ಟವೇ. ವೈಜ್ಞಾನಿಕವಾದ ಅಧ್ಯಯನ ಪ್ರದರ್ಶನ ಸಂದರ್ಭವೊಂದರ ಸಮಗ್ರ ದಾಖಲೆಯನ್ನು ಬೇಡುವುದರಿಂದ ಪರಿಪೂರ್ಣ ಎನ್ನಬಹುದಾದ ಅಧ್ಯಯನ ಕೇವಲ ಊಹೆ (hypothesis) ಆಗಿಬಿಡುತ್ತದೆ. ಪ್ರಾಯಃ ಈ ಸಿದ್ಧಾಂತದ ಅತಿ ಮುಖ್ಯ ಮಿತಿಗಳಲ್ಲಿ ಇದೂ ಒಂದು.

ಇದುವರೆಗೆ ಗಮನಿಸಿದ ಎಲ್ಲ ಸಿದ್ಧಾಂತಗಳಲ್ಲೂ ಅಧ್ಯಯನಕಾರರು ಸಂಕೇತಗಳನ್ನು ಸಾರ್ವತ್ರಿಕವಾಗಿ ಅನ್ವಯಿಸುವ ತಪ್ಪು ಮಾಡಿರುವುದನ್ನು ಕಾಣುತ್ತೇವೆ. ಈ ಎಲ್ಲ ಪ್ರವರ್ತಕರಿಗೂ ತಾವು ಎಲ್ಲೋ ಒಂದು ಕಡೆ ಗಮನಿಸಿದ ಅಂಶಗಳು ಇಡೀ ಮಾನವಕುಲಕ್ಕೇ ಸಮಾನವಾದವು ಎಂಬ ಕಲ್ಪನೆಯಿರುವುದು ಸ್ಪಷ್ಟ. ಇವೆಲ್ಲವೂ ಅತಿರೇಕಗಳೆಂದೇ ಹೇಳಬೇಕಾಗಿದೆ. ಜಾನಪದವನ್ನು ಆಯಾ ಸಾಂಸ್ಕೃತಿಕ ಸಂದರ್ಭಗಳ ಹಿನ್ನೆಲೆಯಲ್ಲೇ ಪರಿಶೀಲಿಸಿ ನಿರ್ಣಯಗಳನ್ನು ಆ ಮಿತಿಯಲ್ಲೇ ಅನ್ವಯಿಸುವುದು ಯುಕ್ತವೆಂಬ ಭಾವನೆ ಇದೀಗ ವ್ಯಕ್ತಪಟ್ಟಿದೆ.

ಸಿದ್ಧಾಂತಗಳ ಅನ್ವಯಿಕತೆಯ ವಿಷಯದಲ್ಲಿ ಕೆಲವು ಅಪಸ್ವರಗಳು ಎದ್ದಿರುವುದು ನಿಜ. ವಾಸ್ತವವಾಗಿ, ಇತರ ಮಾನವಿಕ ವಿಷಯಗಳಂತೆ ಜಾನಪದವೂ ಒಂದು ಜಾಗತಿಕ ವಿಷಯವಾಗಿದ್ದು ಜಗತ್ತಿನ ಯಾವುದೋ ಒಂದು ಸಾಂಸ್ಕೃತಿಕ ಸಂದರ್ಭದಲ್ಲಿ ಪ್ರತಿಪಾದಿಸಿದ ಜಾನಪದ ಸಿದ್ಧಾಂತವೊಂದು ಜಗತ್ತಿನ ಇತರ ಸಂಸ್ಕೃತಿಗಳಿಗೂ ಅನ್ವಯವಾಗುತ್ತದೆ ಎಂಬುದನ್ನು ಇಲ್ಲಿ ಗಮನಿಸಬೇಕು. ಮಾನವ ನಿಷ್ಠವಾದ ಈ ಜ್ಞಾನಕ್ಷೇತ್ರ ಬಹು ಮುಖ್ಯವಾಗಿ ಒಂದು ಸಾರ್ವತ್ರಿಕ ವಿಷಯ.

ಕೊನೆಯದಾಗಿ, ಪ್ರಚಲಿತವಿರುವ ಬಹುತೇಕ ಸಿದ್ಧಾಂತಗಳು ಅವ್ಯಾಪ್ತಿ ಅತಿವ್ಯಾಪ್ತಿ ದೋಷಗಳಿಂದ ಮುಕ್ತವಾಗಿಲ್ಲದಿರುವುದೂ ನಿಜ. ಆದರೂ ಈ ಎಲ್ಲ

ವಿಾತಿಗಳ ನಡುವೆಯೂ ಅವು ಸಾಧಿಸಿದ ಸಾಧನೆ ಕಡಿಮೆಯೇನಲ್ಲ. 50, 60 ಮತ್ತು 70 ರ ದಶಕಗಳಲ್ಲಿ ಚಾರಿತ್ರಿಕ ಭೌಗೋಳಿಕ ವಿಧಾನ ಬಹು ಜನಪ್ರಿಯವಾಗಿದ್ದು ಪ್ರಪಂಚದ ಎಲ್ಲ ಗದ್ಯಕಥನಗಳನ್ನೂ ಆ ತಾತ್ವಿಕ ನೆಲೆಯಲ್ಲೇ ಅಭ್ಯಸಿಸುವ ಪ್ರವೃತ್ತಿ ಇತ್ತು. ಈಚಿನ ದಶಕಗಳಲ್ಲಿ ರಾಚನಿಕ ವಿಶ್ಲೇಷಣೆ ಮತ್ತು ಸಾಂದರ್ಭಿಕ ವಿಧಾನಗಳು ಪ್ರಸ್ತುತತೆಯನ್ನು ಗಳಿಸಿದ್ದವಾದರೂ ವ್ಯಾಪಕವಾಗಿ ಆ ತತ್ವಗಳ ನೆಲೆಯಲ್ಲಿ ಅಧ್ಯಯನಗಳು ನಡೆಯಲಿಲ್ಲ. ಇದೀಗ ಪ್ರದರ್ಶಕ ವಿಧಾನ ಎಲ್ಲೆಡೆ ಮನ್ನಣೆ ಗಳಿಸುತ್ತಿದೆ.

ಆಕರ ಗ್ರಂಥಗಳು

Abrahams, Roger, 1976, *Folklore Genres*, Austin ; University of Texas Press

Bascom, William R, 1981, *Contributions to Folkloristics*, Archana Publications, Meerut, India

Bauman, Richard (ed.), 1977, *Verbal Art as Performance*, Rowley Mass: New bury Books

Ben—Amos, Dan, 1982, *Folklore in context, Essays*, New Delhi South Asian Publishers

Ben—Amos, Dan and Kenneth Goldstein, 1975; *Folklore Performance and Communication*, The Hague: Mouton

Blackburn, Stuart H, 1986, *Another Harmony : New Essays on the Folklore of India*: Berkely University of California Press

Boas, Franz, 1940, *Race, Languoge and Culture*, New York, The Free Press

Claus, Peter J and Korom, Frank J., 1991: *Folkloristics and Indian Folklore*, RRC, Udupi

Dorson, Richard. M (ed) 1972, *Folklore and Folklife*, Chicago, University of Chicago Press

Dorson, Richard M. (ed), 1968: *Peasant customs and Savage Myths* (2 vols), Routeledge and Keganpaul, London

Dundes, Alan (ed) 1965: *The study of Folklore*, Englewood Cliffs, New Jersey: Prentice Hall

Dundes, Alan, 1975 *Analytic Essays in Folklore*, The Hague Mouton

razer J. G. 1959: *The Golden Bough* (Abridged edition) New York, Macmillon Co.,

Freud Sigmund, 1950 *Totem and Taboo*, New York : W.W. Norton and Co., Inc.

Grimm Jacob and Wilhelm, 1972 : *The complete Grimm's Fairy Tales* New York ; Random House

Handoo, Jawaharalal, 1979 : *Current Trends in Folklore*, Mysore, Institute of Kannada Studies

1989 . *Folklore-an Introduction*, Mysore, Central Institute of Indian Languages

Kongas, Elli and Pierre Maranda, 1962 : Structural Models in Folklore, *Midwest Folklore* 12/3 133-192

Krohn Kaarle, 1971 : *Folklore Methodology*, Austin : University of Texas Press for the American Folklore Socity

Levi-strauss, Claude 1963 : *Structural Anthropology*, New York Basic Books

Malinowski, B. 1948 : *Magic Science and Religion and other Essays*, Garden City, New York : Double day & Co.,

Propp, Vladimir, 1968 : *The Morphology of the Folktale*, Austin : University of Texas Press

Thompson, Stith 1951 : *The Folktale*, New York : The Dryden Press

ಕನ್ನಡ ನಿಯತಕಾಲಿಕೆಗಳು ಮತ್ತು ಗ್ರಂಥಗಳು

ಕವಿಮಾರ್ಗ ೧೪, ೧೫, ಮತ್ತು ೧೬, ೧೯೯೧

ಅಂಬಳಿಕೆ ಹಿರಿಯಣ್ಣ 1984 : ಜಾನಪದ ಕೆಲವು ವಿಚಾರಗಳು, ಪ್ರಜ್ವಲ ಪ್ರಕಾಶನ. ಮೈಸೂರು

1986 : ಜಾನಪದ ವಿಪಕ್ಷೆ, ಪ್ರಜ್ವಲ ಪ್ರಕಾಶನ, ಮೈಸೂರು

ವಿವೇಕ ರೈ 1985 : ಅನ್ವಯಿಕ ಜಾನಪದ, ಮಂಗಳಗಂಗೋತ್ರಿ ದ.ಕ.

ಸಂಧ್ಯಾರೆಡ್ಡಿ 1982 : ಕನ್ನಡ ಜನಪದ ಕಥೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಚಾಮ.ರಾಜಪೇಟೆ ಬೆಂಗಳೂರು–18

ಪರಮಶಿವಯ್ಯ ಜೀ. ಶಂ 1979 : ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಪ್ರಸಾರಾಂಗ, ಮೈ ವಿ ವಿ.

ವೆಂಕಟೇಶ್, ಯಂ. ಗಿರಿ

ಸಂಸ್ಕೃತ ರಂಗಭೂಮಿ ಮತ್ತು ಅದರ ಇತಿಮಿತಿಗಳು

'ರಂಗಭೂಮಿ' ಎಂಬುದಕ್ಕೆ ಭಾರತದಲ್ಲಿ ವಿಶಿಷ್ಟ ಸ್ಥಾನವಿದೆ. ಹಲವಾರು ಲಲಿತ ಕಲೆಗಳ ಸಂಗಮ ಕ್ಷೇತ್ರವಿದು. ನೃತ್ಯ, ಗೀತ, ವಾದ್ಯ, ಅಭಿನಯ, ಪುರಾಣ, ಜಾನಪದ ಇತ್ಯಾದಿಗಳನ್ನು ಒಳಗೊಂಡಂತೆ ಮಧುರವಾಗಿ ಹೆಣೆದ ಸಮ್ಮಿಶ್ರ ರೂಪವಿದು. ನಾಟ್ಯ–ನಾಟಕಗಳು ರಂಗಭೂಮಿಯ ಜೀವಾಳಗಳು. ನಾಟಕವೆಂದರೆ ಪ್ರಾಜ್ಞರ ಪ್ರಕಾರ ಮನಸ್ಸನ್ನು ರಂಜಿಸಿ ಆತ್ಮವನ್ನು ಮೇಲೆತ್ತುವ ಕಲೆ. ಅದರ ಪ್ರಭಾವ ವೈಶಿಷ್ಟ್ಯಗಳನ್ನು ಗುರುತಿಸಿದ ನಮ್ಮ ಪ್ರಾಚೀನರು 'ಕಾವ್ಯೇಷು ನಾಟಕಂ ರಮ್ಯಂ' ಎಂದು ಬಣ್ಣಿಸಿದರು. ಭರತಮುನಿಯು ಅಭಿಪ್ರಾಯ ಪಡುವಂತೆ ನಾಟ್ಯವೆಂಬುದು ಮೂರು ಲೋಕದ ಅನುಕರಣೆ. ಅದರ ಮುಖ್ಯ ಉದ್ದೇಶ ವಿಶ್ರಾಮ ಜನನ. ನಾಟ್ಯದಲ್ಲಿಲ್ಲದ ಶಿಲ್ಪ, ವಿದ್ಯೆ, ಕಲೆ, ನ್ಯಾಯ, ಯೋಗ, ಕರ್ಮಗಳು ಬೇರೆಲ್ಲೂ ಇಲ್ಲ[1]. ಪ್ರಾಪಂಚಿಕ ಜೀವನವನ್ನು ಪಾರಮಾರ್ಥಿಕತೆಯೆಡೆಗೆ ಹರಿಸಿ ಧರ್ಮ ಜೀವನಕ್ಕೆ ಅಣಿಗೊಳಿಸುವುದೇ ನಾಟಕದ ಧ್ಯೇಯ. ನಮ್ಮ ಸಂಸ್ಕೃತಿಯ ಉದಾತ್ತ ತತ್ವಗಳನ್ನು ವೇದ, ಆಗಮ, ಪುರಾಣ, ಇತಿಹಾಸಗಳ ತತ್ವಗಳನ್ನು ನಾಟಕಗಳ ಮೂಲಕ ತಿಳಿಸಿಕೊಡುವುದರಿಂದ ರಂಗಭೂಮಿಗೆ ನಾವು ದೇವಮಂದಿರದಂತಹ ಪವಿತ್ರಸ್ಥಾನ ನೀಡಿದ್ದೇವೆ.

ಭಾರತದಲ್ಲಿ ರಂಗಭೂಮಿಯು ಯಾವಾಗ ಉಗಮವಾಯಿತೆಂದು ನಿರ್ಧರಿಸುವುದು ಸಾಧ್ಯವಿಲ್ಲ. ಅನುಕರಣೆ ಮತ್ತು ರಂಜನೆಗಳೆಂಬ ಎರಡು ಮೂಲಾಂಶಗಳನ್ನು ಹೊಂದಿರುವ ರಂಗಭೂಮಿಯ ಹುಟ್ಟು ಮಾನವನೊಂದಿಗೇ ಆಗಿರಬೇಕು. ರಂಗಭೂಮಿಯು ಅಭಿನಯವೆಂದರೆ ತ್ಯಾಗದ ಸಂಕೇತ. ಅದರಿಂದ ಸಿಗುವ ಆನಂದ ಬ್ರಹ್ಮಾನಂದ ಸದೃಶ. ಜೀವಾತ್ಮರನ್ನು ಒಟ್ಟುಗೂಡಿಸುವ ವಿಶಿಷ್ಟ ಕ್ರಿಯ ಕೇಂದ್ರಬಿಂದುವದು.

ಸಂಸ್ಕೃತ ಸಾಹಿತ್ಯದಲ್ಲಿ ರಂಗ, ರಂಗಭೂಮಿಯ ವಿಧಿ ವಿಧಾನಗಳನ್ನು ತಿಳಿಸುವ ಪ್ರಮಾಣ ಗ್ರಂಥ ನಮಗೆ ಉಪಲಬ್ಧವಾಗಿರುವುದು ಭರತಮುನಿ ಪ್ರಣೀತ ನಾಟ್ಯಶಾಸ್ತ್ರ. ಇ ನಂತರದ ದಿನಗಳಲ್ಲಿ ಹತ್ತು ಹಲವಾರು ಗ್ರಂಥಗಳು

ಭರತನನ್ನೇ ಅನುಸರಿಸಿಕೊಂಡು ಬಂದಿವೆ. ನಾಟ್ಯ, ನಾಟ್ಯಕಲೆಯ ಸರ್ವಾಂಗಗಳನ್ನೂ ವಿವರವಾಗಿ ತಿಳಿಸುವ ವಿಶ್ವಕೋಶವಾಗಿರುವುದು ನಾಟ್ಯಶಾಸ್ತ್ರದ ಹಿರಿಮೆ. ಪದ್ಯಮಯವಾದ ಈ ವಿರಾಟ್‌ಕೃತಿಯಲ್ಲಿ 37 ಅಧ್ಯಾಯಗಳಿದ್ದು ಸುಮಾರು 6000 ಶ್ಲೋಕಗಳಿವೆ. ನಿರ್ಜೀವರಂಗಕ್ಕೆ ಜೀವಕಳೆ ಕೊಡುವ ರೀತಿ ನೀತಿಗಳನ್ನು ಆಮೂಲಾಗ್ರವಾಗಿ ನಿರೂಪಿಸಿ, ಶಾಸ್ತ್ರೀಯ ಮುದ್ರೆ ಕೊಡುವುದೇ ಈ ನಾಟ್ಯಶಾಸ್ತ್ರದ ಮಹೋದ್ದೇಶ. ನಾಟ್ಯವೆಂದರೇನು? ನಾಟಕದ ಉತ್ಪತ್ತಿ ಎಂತಾಯಿತು? ಹೇಗಾಯಿತು? ರಂಗಮಂದಿರ ನಿರ್ಮಾಣವೆಂತಿರಬೇಕು, ನರ್ತಕರ ಹಾವ, ಭಾವ, ಅಭಿನಯಗಳು, ರೂಪಕ ಪ್ರಭೇದಗಳು, ಗುಣದೋಷಾದಿಗಳು, ಭಾಷಾ ವಿಧಾನ, ರಂಗಸಜ್ಜಿಕೆ, ನಾಟ್ಯಸಿದ್ಧಿ, ಧ್ರುವಾದಿಸಂಗೀತಗಳು, ಇತ್ಯಾದಿ ಸಮಸ್ತ ವಿಚಾರಗಳು ಈ ಗ್ರಂಥದಲ್ಲಿ ವಿಶದವಾಗಿ ಬಂದಿದೆ.

ರಂಗಮಂಟಪಗಳು

ನಾಟ್ಯಶಾಸ್ತ್ರದ ಎರಡನೇ ಅಧ್ಯಾಯದಲ್ಲಿ ಭರತನು ದೇವಶಿಲ್ಪಿ ವಿಶ್ವಕರ್ಮನಿಂದ ಶಾಸ್ತ್ರೀಯವಾಗಿ ಹೇಳಲ್ಪಟ್ಟ ಮೂರು ಪ್ರಕಾರದ ರಂಗಮಂಟಪಗಳ ಬಗ್ಗೆ ವಿವರಿಸಿದ್ದಾನೆ. ಆ ಮೂರು ರಂಗಮಂದಿರಗಳೆಂದರೆ[2]: (1) ವಿಕೃಷ್ಟ (ಆಯತ) (2) ಚತುರಸ್ರ (ಚೌಕ) ಮತ್ತು (3) ತ್ರ್ಯಶ್ರ (ತ್ರಿಕೋನ) ಇವುಗಳು ಪುನಃ ಆಕಾರಗಳಿಗನುಸಾರವಾಗಿ ಮತ್ತೆ ಮೂರು ವಿಧಗಳಾಗುತ್ತವೆ. ಜ್ಯೇಷ್ಠ (ಹಿರಿದು), ಮಧ್ಯಮ ಮತ್ತು ಕನಿಷ್ಠ (ಚಿಕ್ಕದು). ಈ ಮಂಟಪಗಳನ್ನು 'ಹಸ್ತ' ಮತ್ತು 'ದಂಡ' ಎಂದು ಕರೆಯಲ್ಪಡುವ ಅಳತೆಯ ಪ್ರಕಾರಗಳಲ್ಲಿ ಅಳೆಯುತ್ತಿದ್ದರು. ಒಂದು ಹಸ್ತವೆಂದರೆ ಇಂದಿನ 18 ಇಂಚುಗಳಿಗೆ ಸಮ. 108 ಹಸ್ತಗಳುಳ್ಳ ಮಂಟಪವು ಜ್ಯೇಷ್ಠ ಮಂಟಪವೆಂದೂ, 64 ಹಸ್ತಗಳುಳ್ಳದ್ದು ಮಧ್ಯಮವೆಂದೂ ಮತ್ತು 32 ಹಸ್ತಗಳುಳ್ಳದ್ದು ಕನಿಷ್ಠವೆಂದೂ ಗುರುತಿಸಲಾಗಿದೆ. ನಾಟ್ಯಶಾಸ್ತ್ರದ ವ್ಯಾಖ್ಯಾನಕಾರನಾದ ಅಭಿನವಗುಪ್ತನು ಇದರ ವಿವರಣೆಯನ್ನು ಮಾಡುತ್ತಾ, ಜ್ಯೇಷ್ಠ ಮಂಟಪವು ದೇವತೆಗಳಿಗಾಗಿಯೇ ವಿಶೇಷವಾಗಿ ರಚಿತವಾದದ್ದೆಂದೂ, ಅಂತಹ ನಾಟಕಗಳಲ್ಲಿ ದೇವತೆಗಳೇ ನಾಯಕರೆಂದೂ ತಿಳಿಸುತ್ತಾನೆ. ಮಧ್ಯಮ ಮಂಟಪವು ರಾಜರುಗಳೇ ನಾಯಕರಾಗಿರುವ ನಾಟಕಗಳ ಅಭಿನಯಕ್ಕೇ ಮೀಸಲು. ಕನಿಷ್ಠ ಮಂಟಪವು ಸಾಮಾನ್ಯ ಜನರು, ನಾಯಕರುಗಳಾಗಿ ಅಭಿನಯಿಸಬೇಕಾದ ನಾಟಕಗಳ ಅಭಿನಯಕ್ಕೆ ಮೀಸಲು ಎಂದು ಸ್ಪಷ್ಟಪಡಿಸುತ್ತಾನೆ. ನಾಟ್ಯಶಾಸ್ತ್ರದ ಈ ವಿವರಣೆಯಿಂದ ನಾನವರು 64×32 ಹಸ್ತಗಳುಳ್ಳ ಆಯತಾಕಾರದ ಮಂಟಪಗಳಲ್ಲೂ 32×32 ಹಸ್ತಗಳುಳ್ಳ ಚೌಕಾಕಾರದ ಮಂಟಪಗಳಲ್ಲೂ ಮತ್ತು 32 ಹಸ್ತಗಳನ್ನು ಸುತ್ತಲೂ ಹೊಂದಿರುವ ತ್ರಿಕೋನ ಮಂಟಪಗಳಲ್ಲೂ ನಾಟಕವನ್ನಾಡಲು ಅರ್ಹರೆಂಬುದು ನಮಗೆ ತಿಳಿದುಬರುತ್ತದೆ.

ರಂಗಮಂದಿರದ ನಿರ್ಮಾಣದ ಮೊದಲು ನಿರ್ಮಿತವಾಗಲಿರುವ ನೆಲದ ಪರೀಕ್ಷೆ ನಡೆಯುತ್ತಿತ್ತು. ಭೂಮಿಯನ್ನು ನೇಗಿಲುಗಳಿಂದ ಉಳುಮೆ ಮಾಡಿ ಹುಲ್ಲುಕಡ್ಡಿ—ಕಲ್ಲುಮಣ್ಣುಗಳನ್ನು ತೆಗೆದು ಸ್ವಚ್ಛಗೊಳಿಸುತ್ತಿದ್ದರು. ಬಳಿಕ ಪುಷ್ಯ ನಕ್ಷತ್ರದ ಪ್ರಾರಂಭದಲ್ಲಿ ಬಿಳಿದಾರದಿಂದ (ಬಿಳಿಯ ಬಣ್ಣದ ನೂಲು, ಮುಂಜ, ಹುಲ್ಲಿನಕಡ್ಡಿ ಇತ್ಯಾದಿ) ನಾಟ್ಯಗೃಹದ ಉದ್ದಗಲಗಳನ್ನು ಅಳೆಯುತ್ತಿದ್ದರು. ರೋಹಿಣೀ ನಕ್ಷತ್ರದಲ್ಲಿ ಗೋಡೆಗಳ ನಿರ್ಮಾಣ ಪ್ರಾರಂಭವಾಗುತ್ತಿತ್ತು. ಸಮಪಾತಳಿಯಾದ ಸ್ಥಿರವಾದ ಮತ್ತು ನಿರ್ದಿಷ್ಟ ಅಳತೆಗಳಿಂದ ಕೂಡಿದ ನೆಲದಲ್ಲಿ ನಿರ್ಮಾಣಕ್ಕೆ ಆದ್ಯತೆ ನೀಡುತ್ತಿದ್ದರೆಂದೂ ನಾಟ್ಯಶಾಸ್ತ್ರದಿಂದ ತಿಳಿದುಬರುತ್ತದೆ[3].

ಮಾದರಿ ನಾಟ್ಯಮಂಟಪ

ಮಾದರಿ ನಾಟ್ಯಮಂಡಪವು ಆಯತಾಕಾರವಾಗಿದ್ದು 64 ಹಸ್ತ ಉದ್ದವೂ, 32 ಹಸ್ತ ಅಗಲವೂ ಇರುತ್ತಿತ್ತು. ಅವುಗಳನ್ನು ಮತ್ತೆರಡು ಸಮಭಾಗಗಳನ್ನಾಗಿ ಮಾಡುತ್ತಿದ್ದರು. ಒಂದು ಭಾಗವು ರಂಗಮಂಡಪ ಅಥವಾ ಪ್ರೇಕ್ಷಾಗೃಹವೆಂದೂ, ಮತ್ತೊಂದು ಭಾಗವು ರಂಗಭೂಮಿ (ವೇದಿಕೆ) ಎಂದೂ ಕರೆಯಲ್ಪಡುತ್ತಿತ್ತು. ರಂಗವೇದಿಕೆಯು ಮತ್ತೆರಡು ವಿಭಾಗವಾಗುತ್ತಿತ್ತು. ಮುಂಭಾಗದ್ದು ನರ್ತನ ಪ್ರದೇಶವಾದರೆ ಹಿಂಭಾಗದ್ದು ನೇಪಥ್ಯಗೃಹ. ಮುಂಭಾಗದ ನರ್ತನ ಪ್ರದೇಶವೂ ಪುನಃ ಎರಡು ವಿಭಾಗವಾಗುತ್ತಿತ್ತು. ಇವುಗಳಲ್ಲಿ ಮುಂಭಾಗದಲ್ಲಿ ನರ್ತನವನ್ನು ಮಾಡುತ್ತಿದ್ದರು. ಅದನ್ನು ರಂಗಪೀಠವೆನ್ನುತ್ತಿದ್ದರು. ಹಿಂಭಾಗವು ರಂಗಮಂದಿರದ ಕೇಂದ್ರಬಿಂದು. ಅದುವೇ ರಂಗಶೀರ್ಷ. ರಂಗಪೀಠದ ಎರಡೂ ಕಡೆಗಳಲ್ಲಿಯೂ ಸಮಾನ ಅಳತೆಯ ಒಂದೊಂದು ಮತ್ತವಾರಿಣಿ*ಗಳನ್ನು ನಿರ್ಮಿಸುತ್ತಿದ್ದರು. ಹೀಗೆ ಆಯತಾಕಾರದ ರಂಗಮಂದಿರದಲ್ಲಿ ಸಭಾ ಗೃಹವು 32×32 ಹಸ್ತಗಳುಳ್ಳದ್ದಾಗಿಯೂ, ಮುಂಭಾಗದ ವೇದಿಕೆಯು 8×16 ಹಸ್ತಗಳುಳ್ಳದ್ದೂ ಹಿಂಭಾಗದ ವೇದಿಕೆಯು 8×32 ಹಸ್ತಗಳುಳ್ಳದ್ದಾಗಿಯೂ ಇರುತ್ತಿದ್ದವು. 8×8 ಹಸ್ತಗಳುಳ್ಳ ಮತ್ತವಾರಿಣಿಯು ಎರಡೂ ಕಡೆ ಇರುತ್ತಿತ್ತು. ಹಾಗೆಯೇ ನೇಪಥ್ಯವು 16×32 ಹಸ್ತಗಳುಳ್ಳದ್ದಾಗಿತ್ತೆಂದೂ ತಿಳಿದುಬರುತ್ತದೆ.[4]

---

*ನಾಟ್ಯಶಾಸ್ತ್ರವು ನಿಗದಿಪಡಿಸುವಂತೆ ರಂಗಪೀಠದ ಇಕ್ಕೆಡೆಗಳಲ್ಲಿ 8×8 ಹಸ್ತಗಳುಳ್ಳ ಉದ್ದವುಳ್ಳ ಮತ್ತವಾರಿಣಿಗಳನ್ನು ರಚಿಸಬೇಕು. ಇವುಗಳೆರಡೂ ರಂಗಪೀಠಕ್ಕಿಂತ ಒಂದೂವರೆ ಹಸ್ತಗಳಷ್ಟು ಎತ್ತರವಾಗಿರಬೇಕು. ಮತ್ತವಾರಿಣಿ ಎಂದರೇನು ಎಂಬುದರ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ರಂಗಸ್ಥಳದ ಮುಂಭಾಗವೇ (ಮುಂಭಾಗದ ಮುಂಭಾಗ) ಮತ್ತವಾರಿಣಿ ಎನ್ನಬಹುದು. ಇದು ಸಂದರ್ಭಾನುಸಾರವಾಗಿ ಅಭಿನಯದ ಕಕ್ಷ್ಯವಾಗಿ ಉಪಯೋಗಿಸುತ್ತಿದ್ದರೆಂಬುದು ಹೆಚ್ಚು ಸಮಂಜಸವಾದ ಅಭಿಪ್ರಾಯವಾಗಿದೆ. ಆದ್ಯರಂಗಾಚಾರ್ಯರು ರಂಗಭೂಮಿಯ ಪಕ್ಕದಲ್ಲಿಯ ಜಗಲಿಯೇ ಮತ್ತವಾರಿಣಿ ಎಂದು ಅಭಿಪ್ರಾಯಪಡುತ್ತಾರೆ. (ನಾಟ್ಯಶಾಸ್ತ್ರ, ಆದ್ಯರಂ—[illegible]. 17)

ಇಂತಹ ನಾಟ್ಯಮಂಡಪಗಳನ್ನು ಹೆಚ್ಚಾಗಿ ಮಾನವರು ಬಳಸುತ್ತಿದ್ದರು. ಈ ಮಂಡಪಗಳು ಮೇಲೆ ತಿಳಿಸಿದ ಅಳತೆಗಳಿಂದ ಹೆಚ್ಚು ದೊಡ್ಡದಾಗಕೂಡದು. ಹಾಗಾದಲ್ಲಿ ನಾಟ್ಯದ ದೃಶ್ಯತೆಯು ಅಸ್ಪಷ್ಟವಾಗಬಹುದಾಗಿದೆ. ಮಂಡಪವು ಹೆಚ್ಚು ಉದ್ದವಾದಲ್ಲಿ ಧ್ವನಿಯನ್ನು ಎತ್ತರಿಸಬೇಕಾಗುವುದು. ದೂರದಲ್ಲಿದ್ದವರಿಗೆ ಶಬ್ದಗಳ ಅಸ್ಪಷ್ಟತೆ, ಹತ್ತಿರದಲ್ಲಿದ್ದವರಿಗೆ ಕರ್ಕಶತೆಯು ಅನುಭವ ಬರುವುದು. ಇದಲ್ಲದೆ ಮನಸ್ಸಿನ ಭಾವನೆಯನ್ನು ಮುಖದ ಮೇಲಿನ ಕಳೆಯಿಂದ ತೋರಿಸಬಲ್ಲ ಮಂಡಪ ಹೆಚ್ಚು ಉದ್ದವಾಗಿದ್ದರೆ, ಪ್ರೇಕ್ಷಕರಿಗೆ ಕಾಣುವುದಿಲ್ಲ. ಆದುದರಿಂದ ಎಲ್ಲಾ ಪ್ರೇಕ್ಷಾ ಗೃಹಗಳಲ್ಲಿ ಮಧ್ಯಮ ಅಳತೆಯ (64 ಹಸ್ತಗಳ) ನಾಟ್ಯಮಂಡಪ ಎಲ್ಲರಿಗೂ ಸಮ್ಮತವಾಗಿತ್ತು.

ಚೌಕಾಕಾರದ ನಾಟ್ಯಮಂಡಪವು 32×32 ಹಸ್ತಗಳುಳ್ಳದ್ದಾಗಿತ್ತು. ಇದನ್ನು ಉದ್ದಕ್ಕೂ, ಅಗಲಕ್ಕೂ ಸಮನಾದ ಎಂಟು ವಿಭಾಗಗಳಾಗಿ ವಿಂಗಡಿಸಲಾಗುತ್ತಿತ್ತು. ರಂಗಪೀಠವು ಮಧ್ಯದಲ್ಲಿ ನಾಲ್ಕು ವಿಭಾಗಗಳನ್ನು ಹೊಂದಿತ್ತು. ಇಂತಹ ನಾಟ್ಯಮಂಡಪಗಳಲ್ಲಿ 'ಮತ್ತವಾರಿಣಿ'ಗಳು 8×8 ಹಸ್ತಗಳುಳ್ಳ ಅಳತೆಯನ್ನು ಹೊಂದಿತ್ತು[5].

ತ್ರಸ್ರ್ಯ ರಂಗಮಂದಿರವು ಸಮಭುಜ ತ್ರಿಕೋನಾಕಾರದಲ್ಲಿರುತ್ತಿತ್ತು. ರಂಗಪೀಠವೂ ತ್ರಿಕೋಣ. ಕೋಣದಲ್ಲಿಯೇ ಒಂದು ಬಾಗಿಲು. ಪ್ರತಿಯೊಂದು ಪಾರ್ಶ್ವವನ್ನು 8 ಸಮನಾದ ವಿಭಾಗಗಳಲ್ಲಿ ವಿಭಜಿಸುತ್ತಿದ್ದರು ಪ್ರತಿಯೊಂದು ವಿಭಜನೆ ರೇಖೆಯಿಂದ ರಂಗಮಂದಿರದ ಕೊನೆಯಂಚಿಗೆ ಸರಿಸಮನಾದ ರೇಖೆಗಳನ್ನು ಎಳೆಯುತ್ತಿದ್ದರು. ಹೀಗೆ ಒಟ್ಟು ಅರವತ್ತನಾಲ್ಕು (64) ತ್ರಿಕೋನಗಳು ರಚಿತವಾಗುತ್ತಿದ್ದವು. ಮಧ್ಯಭಾಗದಲ್ಲಿ ನಾಲ್ಕು ತ್ರಿಕೋನಗಳನ್ನು ಹೊಂದಿರುವಂತೆ ರಂಗಪೀಠವನ್ನು ರಚಿಸುತ್ತಿದ್ದರು. ಇದರ ಹಿಂಭಾಗದಲ್ಲಿ 5 ತ್ರಿಕೋನಗಳು ಒಳಗೊಂಡಂತೆ ರಂಗ ಶೀರ್ಷವು ರಚಿತವಾಗುತ್ತಿದ್ದವು. ನೇಪಥ್ಯಗೃಹವು ಅದಕ್ಕೂ ಹಿಂಭಾಗದ 15 ತ್ರಿಕೋನಗಳಲ್ಲಿ ರಚಿತವಾಗುತ್ತಿತ್ತು. 8 ತ್ರಿಕೋನಗಳಲ್ಲಿ ಒಂದೊಂದರಂತೆ ಮತ್ತವಾರಿಣಿಗಳನ್ನು ರಚಿಸುತ್ತಿದ್ದರು. ಉಳಿದ ತ್ರಿಕೋನಗಳು ಪ್ರೇಕ್ಷಾಗೃಹವಾಗಿರುತ್ತಿತ್ತು[6].

ವಿವಿಧ ರಂಗಮಂದಿರಗಳಿಗನುಗುಣವಾಗಿ ಎಷ್ಟೆಷ್ಟು ಮತ್ತು ಯಾವ ಬಗೆಯ ಸ್ತಂಭಗಳನ್ನು ನಿರ್ಮಿಸಬೇಕೆಂಬುದರ ಬಗೆಗೆ ನಾಟ್ಯಶಾಸ್ತ್ರ ವಿಸ್ತಾರವಾಗಿ ತಿಳಿಸುತ್ತದೆ. ಇಂತಹ ಸ್ತಂಭಗಳನ್ನು ನಿರ್ಮಿಸುವಾಗ ನಡೆಸಬೇಕಾದ ಧಾರ್ಮಿಕ ಕ್ರಿಯೆ ಮತ್ತು ಸಮಾರಂಭಗಳ ಬಗ್ಗೆ ವಿಶೇಷ ವಿವರಣೆ ಇದೆ. ವರ್ಣಧರ್ಮಾನುಸಾರವಾಗಿ ಭರತನು ರಂಗಮಂದಿರದ 4 ಮುಖ್ಯಸ್ತಂಭಗಳನ್ನು ಚಾತುರ್ವರ್ಣ್ಯ ಸಮುದಾಯಕ್ಕೇ ಮೀಸಲಿರಿಸಿದ್ದಾನೆ. ರಂಗಮಂದಿರದ ರಕ್ಷಕರಾಗಿರುವ ಬೇರೆ ಬೇರೆಯ ದೇವತೆಗಳಿಗಾಗಿಯೇ (ರಂಗಮಂದಿರದಲ್ಲಿ) ಪ್ರತ್ಯೇಕ ಪ್ರತ್ಯೇಕ ಜಾಗಗಳನ್ನು ಹೇಳಿದ್ದಾನೆ.

ಸಭಾಮಂದಿರವು ಸುಂದರವಾಗಿ ಅಲಂಕರಿಸಲ್ಪಟ್ಟಿರಬೇಕಲ್ಲದೆ ಮರದ ಕೆತ್ತನೆಗಳಿಂದಲೂ, ಹೂಗಳು, ಹಕ್ಕಿಗಳು ಮತ್ತು ಪ್ರಾಣಿಗಳ ಚಿತ್ರಗಳುಳ್ಳ ಕುಸುರಿ ಕೆಲಸಗಳಿಂದಲೂ ಶೋಭಿತವಾಗಿರಬೇಕೆಂದು ಹೇಳುತ್ತಾನೆ. ಗೋಡೆಗಳೆಲ್ಲಾ ಸುಣ್ಣ ಬಣ್ಣ ಬಳಿದು ಸುಂದರವಾಗಿರಬೇಕು.

ರಂಗಮಂದಿರದ ನಿರ್ಮಾಣದ ಬಗೆಗೆ ಸಂಸ್ಕೃತದ ಇನ್ನೂ ಕೆಲವು ಗ್ರಂಥಗಳಲ್ಲಿ ಉಲ್ಲೇಖಗಳಿವೆ. ಶಿಲ್ಪಕಲೆಗೆ ಮೀಸಲಾದ 'ಸಮರಾಂಗಣ ಸೂತ್ರಧಾರ'ವು ಏಳು ಬಗೆಯ ನಾಟ್ಯಮಂಡಪಗಳನ್ನು ಹೆಸರಿಸುತ್ತದೆ[7]. ದೊಡ್ಡ ದೊಡ್ಡ ದೇವಾಲಯಗಳಿಗೆ ಹೊಂದಿಕೊಂಡಂತಹ ಅಲಂಕಾರ ಮಂಡಪಗಳು ಶಾಶ್ವತ ಮಂಡಪಗಳೆನಿಸಿದ್ದವು. ಹಬ್ಬಹರಿದಿನಗಳು, ವಿವಾಹಾದಿ ಧಾರ್ಮಿಕ ಕ್ರಿಯೆಗಳಿಗೆ ಸಂಬಂಧಿಸಿದಂತೆ ನಿರ್ಮಿತವಾಗುವ ಮಂಡಪಗಳು ತಾತ್ಕಾಲಿಕಗಳೆನಿಸುತ್ತವೆ ನಾಟ್ಯಕಲೆ ಅಥವಾ ಅಭಿನಯವು ಧಾರ್ಮಿಕ ಕ್ರಿಯೆಯ ಭಾಗವಾಗಿತ್ತೆಂದೂ ಈ ಗ್ರಂಥದಲ್ಲಿ ಸೂಚಿತವಾಗಿದೆ. ಹೀಗಾಗಿ ಧಾರ್ಮಿಕ ಕ್ರಿಯೆಯ ಆಚರಣೆಯ ಸಂದರ್ಭದಲ್ಲಿ ನಾಟ್ಯಮಂಡಪಗಳನ್ನು ನಿರ್ಮಿಸುತ್ತಿದ್ದಾರೆಂದು ಊಹಿಸಬಹುದಾಗಿದೆ. ಈ ಮಂಡಪಗಳನ್ನು ನಾಟ್ಯಶಾಲೆಗಳೆಂದು ಕರೆಯುತ್ತಿದ್ದರೆಂದೂ ಉಲ್ಲೇಖಗಳಿವೆ.

'ವಿಷ್ಣುಧರ್ಮೋತ್ತರಪುರಾಣ'ವು ಕೇವಲ ಎರಡು ಬಗೆಯ ರಂಗಮಂದಿರಗಳನ್ನು ಹೆಸರಿಸುತ್ತದೆ.[8] ಅದರ ಪ್ರಕಾರ ನಾಟ್ಯವನ್ನು ರಂಗದಲ್ಲಿ ಮಾತ್ರ ಪ್ರದರ್ಶಿಸಬೇಕಲ್ಲದೆ ಅಂತಹ ರಂಗಮಂದಿರವು ಕೇವಲ ಆಯತ ಅಥವಾ ಚೌಕ ಆಕಾರದಲ್ಲಿಯೇ ಇರಬೇಕು. ಚಚ್ಚೌಕ ರಂಗವು 32 × 32 ಹಸ್ತಗಳ ಅಳತೆಯದಾಗಿರಬೇಕು. ಸಭಾಮಂಡಪವು ಬಹಳ ಕಿರಿದು ಅಥವಾ ಹಿರಿದು ಆಗಿರಬಾರದು. ಹಾಗೆ ರಚಿಸಿದಲ್ಲಿ ಅದು ದೃಷ್ಟ ಮತ್ತು ಅದೃಷ್ಟ ದೋಷಗಳಿಗೆ ಎಡೆಯನ್ನುಂಟುಮಾಡುತ್ತದೆ. (ವಿ.ಧ ಪು)

ನಾರದ ರಚಿತ ಸಂಗೀತ ಮಕರಂದವು 96 × 96 ಹಸ್ತಗಳ ಅಳತೆಯುಳ್ಳ ತ್ರಿಕೋನಾಕಾರದ ರಂಗಮಂದಿರವನ್ನು ಮಾತ್ರ ಹೆಸರಿಸುತ್ತದೆ.[9] ನಾಟ್ಯಶಾಲೆಯು 84 ನಾಟ್ಯ ಬಂಧಗಳಿಂದ ಕೂಡಿರುವುದಲ್ಲದೆ ಉತ್ತಮ ಶಿಲೆಗಳಿಂದ ನಿರ್ಮಿತವಾಗಿರಬೇಕು ಮತ್ತು ಕವಡೆಗಳಿಂದಲೂ, ಧ್ವಜಗಳಿಂದಲೂ, ತೋರಣಮಾಲೆಗಳಿಂದಲೂ ಅಲಂಕರಿಸಲ್ಪಟ್ಟಿರಬೇಕೆಂದು ತಿಳಿಸುತ್ತದೆ.

ಶಾರದಾತನಯನು, ತನ್ನ 'ಭಾವಪ್ರಕಾಶ'ದಲ್ಲಿ ರಾಜನ ಅರಮನೆಯಲ್ಲಿ ಚೌಕಾಕಾರದ, ತ್ರಿಕೋನಾಕಾರದ ಮತ್ತು ವೃತ್ತಾಕಾರದ ರಂಗಮಂದಿರಗಳಿರಬೇಕೆನ್ನುತ್ತಾನೆ.[10] ಇಂತಹ ರಂಗಮಂದಿರಗಳು ಬೇರೆ ಬೇರೆ ವಿಶೇಷ ನೃತ್ಯಗಳಿಗಾಗಿ ಮತ್ತು ಪ್ರೇಕ್ಷಕರಿಗಾಗಿ ನಿರ್ಮಿತವಾಗಬೇಕೆಂಬುದು ಅವನ ಅಭಿಮತ. ವೃತ್ತಾಕಾರದ ರಂಗಮಂದಿರದಲ್ಲಿ ಈ 'ಮಾರ್ಗೀ' ಮತ್ತು 'ದೇಶೀಯ' (ಲೌಕಿಕ ಮತ್ತು ಜಾನಪದೀಯ) ಪದ್ಧತಿಯಿಂದ ಕೂಡಿದ ಚಿತ್ರ ಎಂಬ ವಿಶೇಷ ನೃತ್ಯವು ನರ್ತಿಸಲ್ಪಡಬೇಕೆಂದೂ ಹೇಳುತ್ತಾನೆ. ವೃತ್ತರಂಗಮಂದಿರಗಳಲ್ಲಿ ಪ್ರೇಕ್ಷಕರಾಗಲು ಮಹಾರಾಜ, ಇತರ

ರಂಗಮಂದಿರಗಳ ನೋಟಿಕ್ಕಿವಿಚಾರಕರು ದೇಶದ ಪ್ರಮುಖ ವ್ಯಕ್ತಿಗಳು ಮಾತ್ರ ಅರ್ಹರೆಂದು ತಿಳಿಸುತ್ತಾನೆ. ಚೌಕಾಕಾರದ ರಂಗಮಂದಿರಗಳಲ್ಲಿ ರಾಜನ ಪರಿವಾರ, ಮಂತ್ರಿವರ್ಗದವರು, ವ್ಯಾಪಾರಿಗಳು, ಸೇನಾಮುಖ್ಯರು, ವೇಶ್ಯೆಯರು, ಪ್ರೇಕ್ಷಕರಾಗ ಬಹುದೆಂದೂ, ಈ ಮಂಡಪದಲ್ಲಿ ಎಲ್ಲಾ ರೀತಿಯ ಮಿಶ್ರ ಸಂಗೀತ, ನೃತ್ಯಗಳನ್ನು ಪ್ರದರ್ಶಿಸಬೇಕೆಂದೂ ತಿಳಿಸುತ್ತಾನೆ. ತ್ರಿಕೋನಾಕಾರದ ರಂಗಮಂದಿರಗಳಲ್ಲಿ ರಾಜ ವೃಂದ, ಪುರೋಹಿತವರ್ಗ, ಅಧ್ಯಾಪಕ ವೃಂದ, ರಾಣಿಯರು ಪ್ರೇಕ್ಷಕರಾಗ ಬಹುದೆಂದೂ ಮತ್ತು ಕೇವಲ 'ಮಾರ್ಗೀ'ಯ ರೀತಿಯ ನೃತ್ಯವನ್ನು ಪ್ರದರ್ಶಿಸ ಬೇಕೆಂದೂ ಹೇಳುತ್ತಾನೆ

ಆಸನಗಳ ವ್ಯವಸ್ಥೆ

ಪ್ರಾಚೀನ ಭಾರತೀಯ ರಂಗಮಂದಿರಗಳಲ್ಲಿ ಆಸನಗಳ ವ್ಯವಸ್ಥೆ ಬಹಳ ಅಚ್ಚುಕಟ್ಟಾಗಿತ್ತು. ಭರತಮುನಿಯು ಹೇಳುವಂತೆ ಆಸನಗಳು ಸೋಪಾನಾಕೃತಿ ಅಥವಾ ಗ್ಯಾಲರಿಯಂತಿದ್ದು ಸುಂದರವಾಗಿರುತ್ತಿದ್ದವು. ಹೆಚ್ಚಾಗಿ ಮರದಿಂದ ಮಾಡಲ್ಪಟ್ಟ ಅಥವಾ ಇಟ್ಟಿಗೆಗಳಿಂದ ರಚಿತವಾದ ಆಸನಗಳಿದ್ದವು. ಕಾಲಿಡುವ ಜಾಗಕ್ಕೂ ಮತ್ತು ಒಂದು ಆಸನದಿಂದ ಮತ್ತೊಂದು ಆಸನಕ್ಕೆ 1 ಅಥವಾ $1\frac{1}{2}$ ಹಸ್ತ ಅಂತರವಿರುತ್ತಿತ್ತು. ಭರತನು ರಂಗವನ್ನು ದ್ವಿಭೂಮಿ ಎಂದು ಹೆಸರಿಸಿದ್ದು ಬಹುಶಃ ರಂಗಸ್ಥಳವು ಎತ್ತರದಲ್ಲೂ, ಪ್ರೇಕ್ಷಕರ ಆಸನಗಳುಳ್ಳಸ್ಥಳವು ಕೆಳಭಾಗದಲ್ಲಿಯೂ ಇದ್ದಿರಬೇಕೆಂದು ಊಹಿಸಬಹುದಾಗಿದೆ.[11]

ರಂಗವನ್ನು ಕಕ್ಷ್ಯಗಳೆಂಬ ಮೂರು ಮುಖ್ಯ ವಿಭಾಗಗಳನ್ನಾಗಿ ವಿಭಜಿಸುತ್ತಿದ್ದರು (ಒಳಕಕ್ಷ್ಯ, ಮಧ್ಯಕಕ್ಷ್ಯ ಮತ್ತು ಹೊರಕಕ್ಷ್ಯ). ಒಳಕಕ್ಷ್ಯವು ನೇಪಥ್ಯಕ್ಕೆ ಸಮೀಪ ದಲ್ಲಿರುತ್ತಿತ್ತು. ಹೊರಕಕ್ಷ್ಯವೆಂದರೆ ರಂಗಸ್ಥಳದ ಮುಂಭಾಗ ಮತ್ತು ಮಧ್ಯಕಕ್ಷ್ಯ ವೆಂದರೆ ಇವೆರಡರ ನಡುವಿನ ಭಾಗ ದೃಶ್ಯಬದಲಾವಣೆಯನ್ನು ಈ ಕಕ್ಷ್ಯಗಳ ಮೂಲಕ ಮಾಡುತ್ತಿದ್ದರು. ಯಾವುದಾದರೊಂದು ದೃಶ್ಯದಲ್ಲಿ ಸ್ಥಳಬದಲಾವಣೆ ಯನ್ನಾಗಲೀ ಇಲ್ಲವೇ ಘಟನೆಗಳ ಬದಲಾವಣೆಯನ್ನಾಗಲೀ ರಂಗಕ್ಕೆ ಸುತ್ತು ಬರುವುದರ ಮೂಲಕ ಸೂಚಿಸುತ್ತಿದ್ದರು. ಇದರಿಂದಾಗಿ ರಂಗಮಂದಿರದಲ್ಲಿ ಕಕ್ಷ್ಯವೆಂಬ ವಿಭಾಗ ಒಂದು ಊಹನಾತ್ಮಕ ವಿಭಾಗವೆಂದು ತಿಳಿಯಬಹುದಾಗಿದೆ.

ನೇಪಥ್ಯ

ನೇಪಥ್ಯವು ರಂಗದ ಹಿಂಭಾಗದ ರಂಗಶೀರ್ಷಕ್ಕೆ ಹೊಂದಿಕೊಂಡಿರುತ್ತಿತ್ತು. ಪ್ರೇಕ್ಷಕರಿಗೆ ಮುಖಮಾಡಿಕೊಂಡು ರಂಗಶೀರ್ಷದಲ್ಲಿ ಕುಳಿತುಕೊಳ್ಳುತ್ತಿದ್ದರು. ವಿವಿಧ ಪಾತ್ರಧಾರಿಗಳಿಗೆ (ಮೇಕಪ್‌ಗಾಗಿ) ಬಣ್ಣಬಳಿದು ಸಿದ್ಧರಾಗಿರಲು ಅನುಕೂಲ ವಾಗುವಂತೆ ನೇಪಥ್ಯವು ಸಾಕಷ್ಟು ವಿಶಾಲವಾಗಿರುತ್ತಿತ್ತು. ಆರ್ಭಟಧ್ವನಿ, ಗೊಂದಲದ

ವಾತಾವರಣ ಮತ್ತು ಗಲಭೆ ಇತ್ಯಾದಿ ಸನ್ನಿವೇಶಗಳನ್ನು ನೇಪಥ್ಯದಿಂದಲೇ ಹೊರಡಿಸುತ್ತಿದ್ದರು. ರಂಗಸಂಪ್ರದಾಯಾನುಸಾರ ರಂಗದಲ್ಲಿ ಪ್ರದರ್ಶಿಸಲಾರದಂತಹ ದೇವತೆಗಳ ಮತ್ತು ಇತರ ದೇವತಾಗಣಗಳ ಪಾತ್ರಸನ್ನಿವೇಶವನ್ನು ನೇಪಥ್ಯದಿಂದಲೇ ಮೊಳಗಿಸುತ್ತಿದ್ದರು.

ರಂಗದಲ್ಲಿ ಸನ್ನಿವೇಶ, ಘಟನೆ ಮೊದಲಾದವುಗಳನ್ನು ಪ್ರದರ್ಶಿಸುವಾಗ ಪರದೆಯು ಮುಖ್ಯ ಪಾತ್ರ ವಹಿಸುತ್ತದೆ. ನಾಟ್ಯಶಾಸ್ತ್ರದಲ್ಲಿ ಪರದೆಗೆ 'ಯವನಿಕಾ' ಅಥವಾ ಜವನಿಕಾ ಎಂಬ ಪದಗಳನ್ನು ಬಳಸಲಾಗಿದೆ. ಅಭಿನವಗುಪ್ತನು 'ಯವನಿಕಾ'ಶಬ್ದವನ್ನು ವ್ಯಾಖ್ಯಾನಿಸುತ್ತಾ ಯವನಿಕಾವೆಂದರೆ ತೂಗುಹಾಕಲ್ಪಟ್ಟದ್ದು ಅಥವಾ ತೂಗು ಹಾಕಿ ಎಂದು ಅಭಿಪ್ರಾಯಪಡುತ್ತಾನೆ.[12] ಇಂದಿನಂತೆಯೇ ಹಿಂದೆ ನಮ್ಮ ಪ್ರಾಚೀನ ರಂಗಭೂಮಿಗಳಲ್ಲಿ ಇಳಿಸಿಬಿಡುವ (ಉರುಳಿಸುವ) (ಡ್ರಾಪಕರ್ಟನ್) ಪರದೆಗಳಿರಲಿಲ್ಲ. ಈ ವಿಚಾರವನ್ನು ಸಂಸ್ಕೃತ ನಾಟಕಗಳ ಸಮಾಜನಗಳಲ್ಲಿ ನಾವು ಗಮನಿಸಬಹುದು ; ಸಂಸ್ಕೃತ ನಾಟಕಗಳಲ್ಲಿ ಸಾಮಾನ್ಯವಾಗಿ ಅಂಕಗಳು ಯಾವುದಾದರೊಂದು ಕಾಲದ ವಿವರಣೆ, ಇಲ್ಲವೇ ದಿನದ ವರ್ಣನೆಗಳೊಂದಿಗೆ ಮುಕ್ತಾಯವಾಗುತ್ತವೆ; ಇನ್ನು ಕೆಲವು ಅಂಕಗಳ ಕೊನೆಗೆ ನಾಯಕಾದಿ ಪಾತ್ರಧಾರಿಗಳಲ್ಲಿ ನಿರ್ಗಮನಕ್ಕೆ ಸಲಹೆ, ಸೂಚನೆ ಕೊಡುವುದರ ಮೂಲಕ ಸಮಾಪನವಾಗುತ್ತವೆ. ರಂಗ ನಿರ್ದೇಶನದಲ್ಲಿ ಉಪಯೋಗಿಸುವ 'ಪ್ರವಿಶತಿ ಆಸನಸ್ಥ' ಆಸೀನನಾಗಿದ್ದುಕೊಂಡು ಪ್ರವೇಶಿಸುತ್ತಾನೆ ಎಂಬಲ್ಲಿ ನಮಗೆ ತಿಳಿಯುವುದೇನೆಂದರೆ, ಇಬ್ಬರು ವ್ಯಕ್ತಿಗಳು ಪರದೆಯನ್ನು ಎತ್ತಿ ಹಿಡಿಯುತ್ತಿದ್ದರು ಮತ್ತು ಅವರು ಪಕ್ಕಕ್ಕೆ ಪರದೆಯನ್ನು ಸರಿಸಿದಾಗ ಇಲ್ಲವೇ ಎತ್ತಿಕೊಂಡು ಹೋದಾಗ ಪ್ರೇಕ್ಷಕರು ರಂಗಸ್ಥಳದಲ್ಲಿ ಕುಳಿತಿರುವ ನಟನನ್ನು ಕಾಣ ಬಹುದಾಗಿತ್ತು. ಇಷ್ಟು ಮಾತ್ರವಲ್ಲದೇ ನಾಟಕದ ಪೂರ್ವರಂಗ ನಿರ್ದೇಶನಗಳಾದ ಧ್ರುವಗಾನ ಮತ್ತು ಸಂಗೀತಗಳು ಕೂಡಾ ಪರದೆಯ ಹಿಂದಿನಿಂದಲೇ ನಡೆಯು ತ್ತಿದ್ದವು. ಆದ್ದರಿಂದ ಭಾರತೀಯ ರಂಗಭೂಮಿಯಲ್ಲಿ ಪರದೆಗಳನ್ನು ಎಳೆಯುವ ಪದ್ಧತಿ ಅನಂತರದ ಕಾಲದಲ್ಲಿ ಪ್ರಾರಂಭವಾಯಿತೆನ್ನುವುದು ಸಮಂಜಸವಾಗಿದೆ.

ಪ್ರೇಕ್ಷಕರ ಲಕ್ಷಣಗಳು

ಸುಸಂಸ್ಕೃತರಾದ ಪ್ರೇಕ್ಷಕರೇ ಸಂಸ್ಕೃತ ನಾಟಕಗಳ ಜೀವಾಳವಾಗಿದ್ದರು. ಕಾಳಿದಾಸನ ಮಾಲವಿಕಾಗ್ನಿಮಿತ್ರ ನಾಟಕದಲ್ಲಿ ಸೂತ್ರಧಾರನು ಪ್ರವೇಶಿಸಿ (ಅಂಕ–1) 'ನಾನು ಮಾಲವಿಕಾಗ್ನಿಮಿತ್ರವೆಂಬ ನಾಟಕವನ್ನು ಈ ಮದನ ಮಹೋತ್ಸವದಲ್ಲಿ ಅಭಿನಯಿಸಲು ವಿದ್ವಾಂಸರಾದ ಪ್ರೇಕ್ಷಕರ ಅನುಮತಿಯನ್ನು ಪಡೆದಿದ್ದೇನೆ' ಎಂದು ಹೇಳುವುದು ಇದಕ್ಕೆ ಸಾಕ್ಷಿಯಾಗಿದೆ. ಅಲ್ಲೇ ಮುಂದಕ್ಕೆ ಮಾಲವಿಕಾಗ್ನಿಮಿತ್ರ ನಾಟಕವನ್ನೇ ಏಕೆ ಅಭಿನಯಿಸಬೇಕು ಎಂಬ ಪ್ರಶ್ನೆಗೆ ಸೂತ್ರಧಾರನು ಉತ್ತರಿಸುತ್ತಾ 'ವಿದ್ವಾಂಸರು ತಾವೇ ವಿಮರ್ಶಿಸಿ, ಹಳತಿರಲಿ,

ಹೊಸತಿರಲಿ ಒಂದನ್ನು ಮೆಚ್ಚುತ್ತಾರೆ; ಆದರೆ ಮೂಢರು ಮಾತ್ರ ಬೇರೆಯವರ ಅಭಿಪ್ರಾಯಕ್ಕೆ ತಲೆಬಾಗುತ್ತಾರೆ. (ಮೂಢ: ಪರಪ್ರತ್ಯಯನೇಯ ಬುದ್ಧಿ)[13] ಎಂದು ಹೇಳುವುದು ಅಂದಿನ ಪ್ರೇಕ್ಷಕರು ನಾಟಕದ ಬಗ್ಗೆ ಇಟ್ಟುಕೊಂಡಿದ್ದ ಆಸಕ್ತಿಯ ಕುರುಹಾಗಿದೆ.

ಸುಸಂಸ್ಕೃತ ಪ್ರೇಕ್ಷಕನ ಲಕ್ಷಣಗಳೇನೆಂಬುದಕ್ಕೆ ಭರತ ಮತ್ತು ಶಾರದಾತನಯರು ವಿಸ್ತಾರವಾದ ವಿವರಣೆ ಕೊಡುತ್ತಾರೆ. ಅಂತಹ ಪ್ರೇಕ್ಷಕರು ಸ್ಥಿರವಾದ ಇಂದ್ರಿಯಗಳಿಂದ ಶುದ್ಧನಾದವನೂ ಊಹಾಪೋಹಗಳಲ್ಲಿ ವಿಶಾರದನೂ ದ್ವೇಷಗಳನ್ನು ಬಿಟ್ಟವನೂ, ನಾಟಕದ ಬಗ್ಗೆ ಅನುರಾಗವನ್ನೂ ಇಟ್ಟುಕೊಂಡವನೂ ಆಗಿರುತ್ತಾನೆ. ಆತನು ನಟನ ಭಾವನೆಗಳಿಗೆ ಅನುಗುಣವಾಗಿ ಸ್ಪಂದಿಸುತ್ತಾ ಸರಿ, ತಪ್ಪುಗಳ ಬಗ್ಗೆ ನಿರ್ಧರಿಸಬಲ್ಲವನಾಗಿರುತ್ತಾನೆ. ಆತನು ಸಂತೋಷವಿದ್ದಲ್ಲಿ ಸಂತುಷ್ಟನಾಗುವನು, ಶೋಕವಿದ್ದಲ್ಲಿ ಶೋಕವನ್ನು ಅನುಭವಿಸುವನು ಮತ್ತು ದೈನ್ಯತೆಯ ಸಂದರ್ಭದಲ್ಲಿ ದೀನನಾಗುವನು. ಆತನು ನಾಲ್ಕು ಬಗೆಯ ಸಂಗೀತವಾದ್ಯಗಳಲ್ಲಿ ನುರಿತವನೂ, ವೇಷಭೂಷಣಗಳ ಬಗ್ಗೆ ಛಂದಸ್ಸುಗಳ ಬಗ್ಗೆ ಬಲ್ಲವನಾಗಿರುತ್ತಾನೆ. ಬೇರೆ ಬೇರೆ ಶಾಸ್ತ್ರಗಳಲ್ಲಿ ವಿಚಕ್ಷಣನೂ, ಕಲಾಶಿಲ್ಪಗಳಲ್ಲಿ ಕುಶಲನೂ ಆಗಿರುತ್ತಾನೆ.[14]

ಸಭಿಕರಲ್ಲಿ ಎಂತಹವರಿಗೆ ಎಂಥಹಾ ವಿಷಯಗಳುಳ್ಳ (ಥೀಮ–Theme) ನಾಟಕಗಳು ಇಷ್ಟವಾಗುವುವು ಎಂಬುದನ್ನು ವಿವರಿಸುತ್ತಾ ತರುಣರು ಪ್ರೇಮದ ಕಥೆಯನ್ನೂ ಪಂಡಿತರಾದವರು ಲಕ್ಷಣಬದ್ಧವಾದುದನ್ನೂ ; ಧನ್ವೈಷಿಗಳು ಧನಾರ್ಜನೆಯ ಕಥೆಯನ್ನೂ, ವಿರಾಗಿಗಳು ಮೋಕ್ಷದ ಕಥೆಯನ್ನೂ, ಶೂರರು ಹೊಡೆದಾಟ, ಯುದ್ಧಾದಿ, ಬೀಭತ್ಸ ರೌದ್ರಗಳನ್ನೂ, ವೃದ್ಧರು ಧರ್ಮ ಆಶ್ವಸ ಪುರಾಣ ಕಥೆಗಳನ್ನೂ, ಬಾಲಕರು ಮೂರ್ಖರು, ಸ್ತ್ರೀಯರು ಹಾಸ್ಯವನ್ನು, ವೇಷಭೂಷಣಗಳನ್ನು ಮೆಚ್ಚುವರೆಂದೂ ವಿವರಿಸುತ್ತಾರೆ. ಹೀಗೆ ಪ್ರೇಕ್ಷಕರ ವಯೋಧರ್ಮ, ಕಾಲ, ದೇಶ ಪರಿಸರ ಮತ್ತು ಪಾಂಡಿತ್ಯಾನುಸಾರ ರಸಾಸ್ವಾದನೆ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುವುದೆಂಬುದು ಭರತಾದಿಗಳ ಅಭಿಮತವಾಗಿದೆ.[15]

ನಾಟಕ ಸ್ಪರ್ಧೆ :

ನಾಟಕದ ಬಗ್ಗೆ ಸ್ಪರ್ಧೆ ಏರ್ಪಟ್ಟಾಗ ನಿರ್ಣಾಯಕರು (ಪ್ರಾಶ್ನಿಕರು–Judges–ಜಡ್ಜಸ್) ಎಂತಹವರಿರಬೇಕೆಂಬುದನ್ನು ಭರತಾದಿಗಳು, ಸ್ವಾರಸ್ಯವಾಗಿ ವಿವರಿಸಿದ್ದಾರೆ. ಸ್ಪರ್ಧೆಯ ನಿರ್ಣಾಯಕರಾಗಿ ಯಜ್ಞವಿಧಗಳನ್ನು ಬಲ್ಲವ, ನರ್ತಕ, ಛಂದಸ್ಸನ್ನು ಅರಿತವ, ಶಬ್ದಶಾಸ್ತ್ರದಲ್ಲಿ ನುರಿತವ, ರಾಜ, ಬಿಲ್ಲುಗಾರ, ಚಿತ್ರಕಾರ, ವೇಶ್ಯೆ, ಸಂಗೀತಜ್ಞ ಮತ್ತು ರಾಜಸೇವಕರೆಂಬ 10 ಮಂದಿಯನ್ನು ಸೇರಿಸಿಕೊಳ್ಳುತ್ತಿದ್ದರು. ಈ ಹತ್ತು ಮಂದಿ ಪ್ರಾಶ್ನಿಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿರುವುದರಿಂದ ನ್ಯಾಯನಿರ್ಣಯ ಕೊಡಲು ಸಮರ್ಥರಾಗಿದ್ದರು. ನಾಟಕದ ಸ್ಪರ್ಧೆಯು

ಒಡೆಯನು ಆಜ್ಞೆ ಮಾಡಿದಾಗ, ಇಲ್ಲವೇ ನಟರಲ್ಲಿ ಪರಸ್ಪರ ಉಂಟಾದ ಜಗಳದ ತೀರ್ಮಾನಕ್ಕಾಗಿ ಇಲ್ಲವೇ ಹಣ (ಬಹುಮಾನ) ಪಡೆಯುವುದಕ್ಕಾಗಿ ಅಥವಾ ರಾಜರುಗಳ ವಿಜಯ ಪತಾಕೆಗಾಗಿ ನಡೆಯುತ್ತಿದ್ದವು.[16]

ನಿರ್ಣಾಯಕರಾದವರು ಒಳ್ಳೆಯ ಭಾವನೆಯುಳ್ಳವರಾಗಿ, ವಿಶುದ್ಧಮನಸ್ಕರಾಗಿ, ಸುಖಾಸೀನರಾಗಿ, ಲೇಖಕರ ಸಹಾಯವನ್ನು ತೆಗೆದುಕೊಂಡು ಗುಣಗಳನ್ನು ದೋಷಗಳನ್ನು ನಮೂದಿಸಿಕೊಳ್ಳುತ್ತಿದ್ದರು. ಅವರ ಆಸನಗಳು ಬಹಳ ಹತ್ತಿರದಲ್ಲಾಗಲೀ ಬಹಳ ದೂರದಲ್ಲಾಗಲೀ ಇರದೆ ಒಂದು ಮತ್ತೊಂದಕ್ಕೆ ಕೇವಲ 12 ಹಸ್ತಗಳ ಅಂತರದಲ್ಲಿಯೇ ಇರುತ್ತಿದ್ದವು. ದೈವೀಸಿದ್ಧಿಗಳನ್ನು ಮತ್ತು ದೈವೀ ವಿಘಾತಗಳನ್ನು ಲಕ್ಷ್ಯಕ್ಕೆ ತಂದುಕೊಂಡು ನಿಷ್ಪಕ್ಷಪಾತವಾಗಿ ಬಹುಮಾನದ ಬಗ್ಗೆ ನಿರ್ಣಯಿಸಲ್ಪಡುತ್ತಿತ್ತು. ಇಬ್ಬರು ನಟರು ಅಭಿನಯ ಕೌಶಲಕ್ಕೆ ಮತ್ತು ನಟನೆಗಳಲ್ಲಿ ಸಮಾನರಾಗಿದ್ದಾಗ ಸಿದ್ಧಿಗಳು ಯಾರಿಗೆ ಹೆಚ್ಚಾಗಿರುತ್ತವೆಯೋ ಅವರಿಗೆ ಬಹುಮಾನ ಸಿಗುತ್ತಿತ್ತು. ಎಲ್ಲದರಲ್ಲೂ ಸಮಾನರಾಗಿದ್ದಾಗ ಕೊನೆಯ ನಿರ್ಣಯವನ್ನು ರಾಜನಿಗೆ ಬಿಡುತ್ತಿದ್ದರು. ರಾಜನಿಗೂ ಸರಿ ಎನಿಸಿದರೆ ಇಬ್ಬರಿಗೂ ಬಹುಮಾನ ಕೊಡುತ್ತಿದ್ದರು. ಹೀಗೆ ಸ್ಪರ್ಧೆಗಳಲ್ಲಿ ನಿರ್ಣಯಗಳು ನಡೆಯುತ್ತಿದ್ದವು. ಪ್ರೇಕ್ಷಕರೂ ಕೂಡಾ ಸುಖವಾಗಿ, ಸ್ವಸ್ಥಚಿತ್ತರಾಗಿ ಕುಳಿತು ಗುಣದೋಷಾದಿಗಳನ್ನು ವಿಮರ್ಶಿಸಿ ನೋಡುತ್ತಿದ್ದರು.

ರಂಗಪ್ರಯೋಗಗಳ ಸಮಯ :

ನಾಟ್ಯಶಾಸ್ತ್ರದಲ್ಲಿ ತಿಳಿದುಬರುವ ಇನ್ನೊಂದು ವಿಷಯವೆಂದರೆ ನಾಟಕಾಭಿನಯಗಳ ಕಾಲದ ಬಗ್ಗೆ. ಹೆಚ್ಚಾಗಿ ಪೂರ್ವಾಹ್ನ, ಅಪರಾಹ್ನ, ರಾತ್ರಿಯ ಮೊದಲ ಭಾಗ (ಪ್ರದೋಷ) ಮತ್ತು ರಾತ್ರಿಯ ನಾಲ್ಕನೆಯ ಭಾಗ (ಬೆಳಗಿನ)ದಲ್ಲಿ ರಂಗಪ್ರಯೋಗಗಳು ನಡೆಯುತ್ತಿದ್ದವು. ಸಾಂಪ್ರದಾಯಿಕವಾದ ಮತ್ತು ಕಿವಿಗೆ ಇಂಪಾದ ಅಭಿನಯಗಳು ಪೂರ್ವಾಹ್ನ ಪ್ರಯೋಗವಾಗುತ್ತಿದ್ದವು. ಸತ್ವ–ಉತ್ಸಾಹಗಳಿಂದ ಕೂಡಿದ ಹೆಚ್ಚಾಗಿ ವಾದ್ಯಸಂಗೀತಮಯವಾದ ನಟನೆಗಳು ಅಪರಾಹ್ನ ಪ್ರದರ್ಶಿತವಾಗುತ್ತಿದ್ದವು. ಕರುಣರಸಭರಿತವಾದ, ನರ್ಮಹಾಸ್ಯದಿಂದ ಕೂಡಿದ ಪ್ರದರ್ಶನ ಮುಂಜಾನೆಯ ಹೊತ್ತು ಮತ್ತು ಶೃಂಗಾರ ರಸಭರಿತವಾದ ಮತ್ತು ಹೆಚ್ಚಾಗಿ ಗೀತ ವಾದ್ಯಸಂಗೀತಗಳಿಂದ ಕೂಡಿದ ಅಭಿನಯಗಳು ಪ್ರದೋಷಕಾಲದಲ್ಲೂ ಪ್ರಯೋಗಿಸಲ್ಪಡುತ್ತಿದ್ದವು.

ಹೀಗೆ ಪ್ರಾಚೀನ ಭಾರತದಲ್ಲಿ ರಂಗಮಂದಿರದ ನಿರ್ಮಾಣ ಮತ್ತು ಅಭಿನಯಗಳ ಬಗ್ಗೆ ಸಾಕಷ್ಟು ಕೃಷಿ ನಡೆದಿರುವುದನ್ನು ನಾವು ಗಮನಿಸಬೇಕು. ಆಧುನಿಕ ರಂಗಸಜ್ಜಿಕೆ ಮತ್ತು ರಂಗಭೂಮಿಯ ಅವಶ್ಯಕತೆಗಳಿಗೆ ಭದ್ರಬುನಾದಿಯನ್ನಿತ್ತುದು "ನಾಟ್ಯಶಾಸ್ತ್ರ"ವೆಂದರೆ ತಪ್ಪಾಗಲಾರದು. ರಂಗನಿರ್ಮಾಣ ಮತ್ತು ರಂಗಕಲೆಗಳ ಬಗ್ಗೆ ಪ್ರಾಚೀನರಿಗೆ ಇದ್ದ ಶ್ರದ್ಧೆ ಮತ್ತು ಆಸಕ್ತಿಗಳನ್ನು ಗಮನಿಸಿದಾಗ ಅವರ ಅಗಾಧ ಸಾಮರ್ಥ್ಯದ ಬಗ್ಗೆ ನಾವು ಆಶ್ಚರ್ಯಪಡಬೇಕು. ಇಂದಿನ ನಾಟಕಕಾರರಿಗೆ,

ನಾಟಕ ನಿರ್ಮಾತೃಗಳಿಗೆ, ಪಾತ್ರಧಾರಿಗಳಿಗೆ ಮತ್ತು ನಿರ್ದೇಶಕರಿಗೆ ತಮ್ಮನ್ನು ತಿದ್ದಿಕೊಳ್ಳಲು, ಇನ್ನಷ್ಟು ಬೆಳೆಯಲು ಈ ಪ್ರಾಚೀನ ಗ್ರಂಥಗಳು ದಾರಿದೀವಿಗೆಗಳಾಗಿವೆ.

ಅಡಿ ಟಿಪ್ಪಣಿಗಳು

1. ದುಃಖಾರ್ತಾನಾಂ ಶ್ರಮಾರ್ತಾನಾಂ ಶೋಕಾರ್ತಾನಾಂ ತಪಸ್ವಿನಾಂ ।
ವಿಶ್ರಾಂತಿ (ವಿಶ್ರಾಮ) ಜನನಂ ಕಾಲೇ ನಾಟ್ಯಮೇತದ್ಭವಿಷ್ಯತಿ ॥ ನಾ ಶಾ 1–114
ನ ತಜ್ಞಾನಂ ನ ತಚ್ಛಿಲ್ಪಂ ನ ಸಾ ವಿದ್ಯಾ ನ ಸಾ ಕಲಾ ।
ನಾಸೌ ಯೋಗೋ ನ ತತ್ಕರ್ಮ ನಾಟ್ಯೇಸ್ಮಿನ್ ಯನ್ನ ದೃಶ್ಯತೇ । ನಾ ಶಾ 1–116
2. . . . . . .
ತ್ರಿವಿಧಃ ಸನ್ನಿವೇಶಾಶ್ಚ ಶಾಸ್ತ್ರತಃ ಪರಿಕಲ್ಪಿತಃ ।
ವಿಕೃಷ್ಟಶ್ಚತುರಶ್ರಶ್ಚ ತ್ರ್ಯಶ್ರಶ್ಚೈವ ತು ಮಂಟಪಃ ।
ತೇಷಾಂ ತ್ರೀಣ್ ಪ್ರಮಾಣಾನಿ ಜ್ಯೇಷ್ಠಂ ಮಧ್ಯಂ ತಥಾವರಮ್ । ನಾ ಶಾ 2 4–8
3. ಭೂಮೇರ್ವಿಭಾಗಂ ಪೂರ್ವಂ ತು ಪರೀಕ್ಷೇತ ಪ್ರಯೋಜಕಃ ।
ತತೋ ವಾಸ್ತು ಪ್ರಮಾಣೇನ ಪ್ರಾರಭೇತ ಶುಭೇಚ್ಛಯಾ । ನಾ ಶಾ 2.24
ನೋಡಿ ಅದೇ 25–33.
4. ನಾ ಶಾಸ್ತ್ರ ಅಧ್ಯಾಯ 2. 34–42
5. ಅದೇ ,, 86–91
6. ಅದೇ ,, 92–102
7. ಸಮರಾಂಗಣ ಸೂತ್ರಧಾರ
8. ವಿ ಧರ್ಮೋತ್ತರ ಪುರಾಣ, ತೃತೀಯ ಖಂಡ ಅಧ್ಯಾಯ 20, ಶ್ಲೋಕ 4–5
9. ಸಂಗೀತ ಮಕರಂದ
10. ಭಾ ಪ್ರ ಅಧ್ಯಾಯ 10. ಶ್ಲೋಕ 67–87
11. ನಾ ಶಾಸ್ತ್ರ 2. 80–85 (12) (ಅಭಿನವ ಭಾರತೀ)
12. ಮಾಲವಿಕಾಗ್ನಿಮಿತ್ರ. ಅಂಕ 1. ಶ್ಲೋ–2
13. ನಾ ಶಾಸ್ತ್ರ. ಅಧ್ಯಾಯ 27. 50–56 ಮತ್ತು ಭಾ ಪ್ರಕಾಶ ಅಧ್ಯಾಯ 8.40
14. ನಾ ಶಾ ಅಧ್ಯಾಯ 27. 57–62 ಮತ್ತು ಭಾ ಪ್ರ ಅಧ್ಯಾಯ 8. 44
15. ನಾ ಶಾ 27, 63–82 ; ಭಾ ಪ್ರ, ಪು 8. 42–53
16. ನಾ ಶಾ 27. 91–98

ಡಾ. ಸಿ. ಎಸ್. ರಾಮಚಂದ್ರ

ಕನ್ನಡದಲ್ಲಿ ಧ್ವನಿಮಾಗಳ ವಿಕಾಸ

ಕನ್ನಡಿಗರ ದೈನಂದಿನ ವ್ಯವಹಾರದ ಮಾತೇ 'ಕನ್ನಡ'. ಅದು ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಭಾಷೆ. ಅಧ್ಯಯನದ ದೃಷ್ಟಿಯಿಂದ ದ್ರಾವಿಡ ಭಾಷೆಗಳನ್ನು ಮೂರು ಮುಖ್ಯ ವರ್ಗಗಳನ್ನಾಗಿ ವರ್ಗೀಕರಿಸಬಹುದು. ಅವೇ ದಕ್ಷಿಣ ದ್ರಾವಿಡ ಭಾಷೆಗಳು ; ಮಧ್ಯ ದ್ರಾವಿಡ ಭಾಷೆಗಳು ಹಾಗೂ ಉತ್ತರ ದ್ರಾವಿಡ ಭಾಷೆಗಳು. 'ಕನ್ನಡ' ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಒಂದು ಪ್ರಧಾನ ಭಾಷೆ. ನಾಲ್ಕೋಟಿ ಕನ್ನಡಿಗರ ಮಾತೃಭಾಷೆ ಹಾಗೂ ಲಿಖಿತ ಸಾಹಿತ್ಯ ಪರಂಪರೆಯಿರುವ ಭಾಷೆ. ಭಾರತದಲ್ಲಿರುವ ಭಾಷೆಗಳಲ್ಲಿ ಪ್ರಾಚೀನತೆ ಮತ್ತು ವಿಪುಲ ಸಾಹಿತ್ಯವಿರುವ ಸಂಸ್ಕೃತ ಮೊದಲ ಸ್ಥಾನವನ್ನೂ; ಅನಂತರದ ಪ್ರಾಚೀನತೆಯ ಸ್ಥಾನವನ್ನು ತಮಿಳು ಭಾಷೆಯೂ ; ಅದರ ಅನಂತರದ ಸ್ಥಾನವನ್ನು ಅಂದರೆ ಮೂರನೆಯ ಸ್ಥಾನವನ್ನು ಕನ್ನಡವೂ ಗಿಟ್ಟಿಸಿಕೊಂಡಿದೆ. ದ್ರಾವಿಡ ಭಾಷಾವರ್ಗದಲ್ಲಿ ಪ್ರಾಚೀನತೆಯ ದೃಷ್ಟಿಯಿಂದ ಕನ್ನಡ ಎರಡನೆಯ ಸ್ಥಾನವನ್ನು ಪಡೆದುಕೊಂಡಿದೆ.

ಕನ್ನಡ (ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ) ಭಾಷೆಯಲ್ಲಿರುವ ಧ್ವನಿಮಾಗಳ ಐತಿಹಾಸಿಕ ಬೆಳವಣಿಗೆಯನ್ನು ಸ್ಥೂಲವಾಗಿ ವಿವೇಚಿಸುವುದೇ ಪ್ರಸ್ತುತ ಪ್ರಬಂಧದ ಉದ್ದೇಶ. ಅದಕ್ಕೆ ಪೂರಕವಾಗಿ ಕನ್ನಡ ಭಾಷೆಯಲ್ಲಿರುವ ಧ್ವನಿಮಾಗಳನ್ನು ವಿವರಣಾತ್ಮಕವಾಗಿ ಹಾಗೂ ತೌಲನಿಕವಾಗಿ ನಿರೂಪಿಸಲು ಪ್ರಯತ್ನಿಸಿದೆ. ಅಲ್ಲದೆ ಕನ್ನಡ ಭಾಷೆಯ ಇತಿಹಾಸ ; ಕನ್ನಡ ಭಾಷೆಯ ಚಾರಿತ್ರಿಕ ಬೆಳವಣಿಗೆ; ಭಾಷಿಕ ಬದಲಾವಣೆ; ಭಾಷಿಕ ಬದಲಾವಣೆಯ ಕಾರಣ ಹಾಗೂ ಪರಿಸರ; ಭಾಷಿಕ ಬದಲಾವಣೆಯ ವರ್ಗೀಕರಣ ಮತ್ತು ಧ್ವನಿಮಾ ಬದಲಾವಣೆಯ ವೈಶಿಷ್ಟ್ಯವನ್ನು ಸ್ಥೂಲವಾಗಿ ವಿವರಿಸಿದೆ.

ಕನ್ನಡ ಭಾಷೆಯ ಇತಿಹಾಸ

ಕನ್ನಡ ಭಾಷೆಗೆ ಸುಮಾರು ಎರಡೂವರೆ ಸಾವಿರ ವರ್ಷದಷ್ಟು ನಿಚ್ಚಳ ಇತಿಹಾಸವಿದೆ. ದೊರೆತಿರುವ ಹಲವಾರು ನಿಖರ ಪ್ರಮಾಣಗಳಿಂದ ಕನ್ನಡದ ಐತಿಹಾಸಿಕ ಸ್ಥಾನವನ್ನು ನಿರ್ಧರಿಸಿದೆ. ಇದಕ್ಕೆ ಸಾಕ್ಷಿ ಲಿಖಿತ ಸಾಮಗ್ರಿ (ಶಾಸನ

ಹಾಗೂ ಗ್ರಂಥಸಾಹಿತ್ಯ) ಮಾತ್ರ ಆಧಾರವಷ್ಟೇ. ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಹಲ್ಮಿಡಿ ಎಂಬ ಗ್ರಾಮದಲ್ಲಿ ದೊರೆತ ಶಾಸನದಲ್ಲಿ ನಮಗೆ ಕನ್ನಡ ಭಾಷೆ ಮತ್ತು ಬರಹಗಳಿಂದ ಕೂಡಿದ ಲಿಖಿತರೂಪ ಮೊಟ್ಟಮೊದಲಿಗೆ ದೊರಕುವುದು. ಈ ಶಾಸನ ಕ್ರಿ.ಶ ೪೩೦–೪೫೦ರ ಕಾಲಕ್ಕೆ ಸೇರಿದ್ದೆಂಬುದು ವಿದ್ವಾಂಸರ ಅಭಿಪ್ರಾಯ. ಹಾಗೆಂದ ಮಾತ್ರಕ್ಕೆ ಕನ್ನಡ ಐದನೇ ಶತಮಾನದಿಂದಲೇ ಹುಟ್ಟಿತೆಂದು ನಿರ್ಧಾರ ಮಾಡಿ ಹೇಳಿದಂತಾಗಲಿಲ್ಲ ಒಂದು ಭಾಷೆ ಬರಹಕ್ಕಿಳಿದು ಸಾಹಿತ್ಯ ಶಿಷ್ಟತೆಯನ್ನು ಪಡೆದು ಶಾಸನಗಳಲ್ಲಿ ಇಲ್ಲವೇ ಕೃತಿಗಳಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತಿರ ಬೇಕಾದರೆ; ಆ ಭಾಷೆ ಎಷ್ಟೋ ವರ್ಷಗಳ ಕಾಲ ಆ ನಾಡಿನ ಜನಸಮೂಹದ ದೈನಂದಿನ ಬದುಕಿನಲ್ಲಿ ಹಾಸುಹೊಕ್ಕಾಗಿರಬೇಕು. ಭಾಷೆ ಪ್ರಬುದ್ಧಾವಸ್ಥೆಗೆ ತಲುಪದೇ ಬರಹಕ್ಕಿಳಿಯದು ಆದ ಕಾರಣ, ಕನ್ನಡ ಭಾಷೆಗೆ ಐದನೆಯ ಶತಮಾನಕ್ಕಿಂತ ಮೊದಲೇ ಅಸ್ತಿತ್ವ ಇತ್ತು ಎಂಬುದರಲ್ಲಿ ಯಾವ ಆಕ್ಷೇಪಣೆಯೂ ಇಲ್ಲ, ಅನುಮಾನವೂ ಇಲ್ಲ. ಅಷ್ಟೇ ಅಲ್ಲದೆ, ಇತರ ಪ್ರಾಚೀನ ಭಾಷೆಗಳಲ್ಲಿ ದೊರಕುವ ಕನ್ನಡದ ಉಲ್ಲೇಖಗಳನ್ನೂ ಇದಕ್ಕೆ ಪೂರಕವಾಗಿ ಗಮನಿಸಬಹುದು. ಸಂಸ್ಕೃತ ಮತ್ತು ತಮಿಳು ಸಾಹಿತ್ಯದಲ್ಲಿ ಕನ್ನಡದ ಐತಿಹಾಸಿಕತೆಯ ಉಲ್ಲೇಖಾಂಶಗಳು ಹೇರಳ ವಾಗಿವೆ. ಮೊಹೆಂಜೊದಾರೊ, ಹರಪ್ಪ ಸಂಸ್ಕೃತಿಗಳ ಚಿತ್ರಲಿಪಿಯಲ್ಲಿ ಕನ್ನಡಿಗರ ಉಲ್ಲೇಖವಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಕರ್ನಾಟಕದಲ್ಲಿಯ್ರು, ಅದರಲ್ಲಿಯೂ ಕನ್ನಡದಲ್ಲಿ ಬರೆದ ಪ್ರಾಚೀನ ಶಾಸನಗಳು; ಕವಿರಾಜಮಾರ್ಗದಲ್ಲಿ ದೊರೆತ ಆಧಾರಗಳು ಅಲ್ಲದೆ ಇತರೆ ಗ್ರಂಥಗಳಲ್ಲಿ ದೊರೆತ ಮಾಹಿತಿಯೂ ಐತಿಹಾಸಿ ಕತೆಯ ದೃಷ್ಟಿಯಿಂದ ಬಹುಮುಖ್ಯವಾದುದು. ವೇದಪೂರ್ವಕಾಲ ಇಲ್ಲವೇ ವೇದ ಕಾಲದಿಂದಲೂ ಕನ್ನಡ ನಾಡುನುಡಿಗಳು ಅಸ್ತಿತ್ವದಲ್ಲಿದ್ದವೆಂಬ ಊಹೆಯನ್ನು ಹಲವು ವಿದ್ವಾಂಸರು ಮಾಡಿದ್ದಾರೆ. ಈಜಿಪ್ಟ್ ದೇಶದಲ್ಲಿ ಸಿಕ್ಕ ಒಂದು ಗ್ರೀಕ್ ಪ್ರಹಸನದಲ್ಲಿ ಕನ್ನಡ ಮಾತಿನ ತುಣುಕುಗಳಿವೆ ಎಂಬ ಒಂದೇ ಕಾರಣ ಕನ್ನಡ ಭಾಷೆ ಕ್ರಿ.ಶ ೨ನೆಯ ಶತಮಾನಕ್ಕಿಂತ ಮೊದಲೇ ದಕ್ಷಿಣ ಕನ್ನಡ ಸಮುದ್ರ ತೀರದಲ್ಲಿ ಕನ್ನಡಿಗರ ವ್ಯವಹಾರದ ಭಾಷೆಯಾಗಿತ್ತೆಂಬುದನ್ನು ದೃಢಪಡಿಸಿದೆ. ಈ ಎಲ್ಲಾ ದೃಢ ಲಭ್ಯ ಮಾಹಿತಿಗಳಿಂದ ಕನ್ನಡ ಭಾಷೆಗೆ ನಿಚ್ಚಳ ಪ್ರಾಚೀನ ಇತಿಹಾಸವಿದೆ ಎಂದು ಪರಿಗಣಿಸುವುದರಲ್ಲಿ ಯಾವ ಲೋಪವೂ ಇಲ್ಲ. ಕನ್ನಡ ಭಾಷೆಗೆ ಸ್ವಾತ್ರ್ಯಾರ್ಹ ಇತಿಹಾಸವಿದೆ.

ಕನ್ನಡ ಭಾಷೆಯ ಚಾರಿತ್ರಿಕ ಬೆಳವಣಿಗೆ

ಕಾಲಕ್ರಮೇಣ ಮೂಲದ್ರಾವಿಡ ಭಾಷೆ ಕವಲೊಡೆದು ಅನೇಕ ಸ್ವತಂತ್ರ ಭಾಷೆ ಗಳಿಗೆ ನಾಂದಿಯಾಯಿತು. ಅವುಗಳಲ್ಲಿ ಒಂದು ಸ್ವತಂತ್ರ ಕವಲು 'ಕನ್ನಡ ಭಾಷೆ'. ಕನ್ನಡ ಯಾವಾಗ ಸ್ವತಂತ್ರ ಭಾಷೆಯಾಯಿತು; ಆಗ ಅದರ ಸ್ವರೂಪ ಮತ್ತು

ಸ್ಥಾನಮಾನ ಹೇಗಿತ್ತು ಎಂಬ ವಿಚಾರಗಳನ್ನು ಅರಿಯಲು ಯಾವ ನಿಖರ ದಾಖಲೆಗಳೂ ಇಲ್ಲ. ಹಾಗಾಗಿ ಕನ್ನಡ ಭಾಷೆ ವ್ಯಾವಹಾರಿಕ (ಆಡುಮಾತಿನ) ರೂಪದಲ್ಲಿ ಇತ್ತೇ, ಇಲ್ಲ ಸಾಹಿತ್ಯಿಕ (ಗ್ರಾಂಥಿಕ) ರೂಪವನ್ನು ಪಡೆದಿತ್ತೇ ಎಂಬುದನ್ನು ನಿರ್ಧರಿಸುವುದು ಬಹು ಪ್ರಯಾಸದ ಕೆಲಸ. ಸಾಮಾನ್ಯವಾಗಿ ಯಾವುದೇ ಭಾಷೆಯ ಚಾರಿತ್ರಿಕ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಎರಡು ಮುಖ್ಯ ಅಂಶಗಳು ಗಮನಕ್ಕೆ ಬಾರದಿರವು. ಅಂದರೆ ಯಾವುದೇ ಭಾಷೆ ಬರಹ ರೂಪವನ್ನು ಪಡೆಯುವುದಕ್ಕಿಂತ ಮುನ್ನ ಹೊಂದಿರುವ ಭಾಷಾ ಚರಿತ್ರೆಯೇ ಪೂರ್ವ ಬರಹ ಭಾಷಾ ಚರಿತ್ರೆ (Pre-history of writing language); ಹಾಗೂ ಯಾವುದೇ ಭಾಷೆ ಬರಹ ರೂಪವನ್ನು ಪಡೆದ ಅನಂತರದ ಭಾಷಾ ಚರಿತ್ರೆಯೇ 'ಬರಹ ಭಾಷಾ ಚರಿತ್ರೆ' (History of writing language). ಈ ಅಂಶಗಳು ಭಾಷೆಯ ಚಾರಿತ್ರಿಕ ಬೆಳವಣಿಗಾಘಟ್ಟವನ್ನು ನಿಖರಗೊಳಿಸಲು ಸಹಾಯಕವಾಗುವುವು. ಆ ಹಿನ್ನೆಲೆಯಲ್ಲಿ ದೊರೆತಿರುವ ಕನ್ನಡ ಶಾಸನಗಳು ಮತ್ತು ಸಾಹಿತ್ಯ ಕೃತಿಗಳು ಕನ್ನಡ ಭಾಷೆಯ ಚಾರಿತ್ರಿಕ ಬೆಳವಣಿಗೆಯನ್ನು ನಿರ್ಧರಿಸುವ ಪ್ರಧಾನ ಆಧಾರಗಳು. ಶಾಸನ ಮತ್ತು ಸಾಹಿತ್ಯ ಕೃತಿಗಳಲ್ಲಿ ಉಕ್ತವಾಗಿರುವ ಕನ್ನಡ ಭಾಷೆಯ ಐತಿಹಾಸಿಕ ವಿಕಾಸತೆಯನ್ನು 'ಕಾಲ'ದ ಆಧಾರದ ಮೇಲೆ ಮುಖ್ಯವಾಗಿ ನಾಲ್ಕು ಅವಸ್ಥೆ (stage)ಗಳಲ್ಲಿ ಗುರುತಿಸಬಹುದು. ಇಲ್ಲಿ 'ಕಾಲ' (time) ಒಂದೇ ಬಹು ಪ್ರಧಾನ ನಿಖರ ಭಾಷಾ ಬೆಳವಣಿಗೆಯ ಮಾಪನ.

ಗ್ರಾಂಥಿಕ ಭಾಷೆಯಲ್ಲಿ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಎಂಬ ನಾಲ್ಕು ಭಾಷಾರೂಪಗಳು ಪ್ರಚಾರದಲ್ಲಿವೆ ಕ್ರಿ.ಶ. ೭ ನೆಯ ಶತಮಾನದ ಕೊನೆಯ ವರೆಗೆ ದೊರಕುವ ಶಾಸನಗಳ ಕನ್ನಡ ಭಾಷಾರೂಪವೇ ಪೂರ್ವದ ಹಳಗನ್ನಡ (Pre-old Kannada). ಹಳಗನ್ನಡಕ್ಕೆ ಹಳಗನ್ನಡವಾದುದೇ ಈ ಪೂರ್ವದ ಹಳಗನ್ನಡ. ಸಾಹಿತ್ಯ ಕೃತಿಗಳ ಭಾಷಾರೂಪಕ್ಕಿಂತ ಭಿನ್ನವಾದ ಮತ್ತು ವೈಶಿಷ್ಟ್ಯವಾದ ಭಾಷಾರೂಪ ಇದರದು. ಪೂರ್ವದ ಹಳಗನ್ನಡ ಭಾಷಾ ರೂಪವನ್ನು ಶಾಸನಭಾಷೆ ಎಂದು ಕರೆಯುವರು. ಕ್ರಿ.ಶ. ೭ ನೆಯ ಶತಮಾನದಿಂದ ಕ್ರಿ.ಶ. ೧೨೫೦ ರ ವರೆಗಿನ ಕನ್ನಡ ಸಾಹಿತ್ಯ ಕೃತಿಗಳ ಕನ್ನಡ ಭಾಷಾರೂಪವೇ 'ಹಳಗನ್ನಡ' (Old Kannada). ಓದುಗಬ್ಬಗಳ ಭಾಷಾರೂಪವಿದು ಶಾಸನ ಭಾಷೆಗಿಂತ ಭಿನ್ನವಾದ ಶೈಲಿ ಹಳಗನ್ನಡದ್ದು. ಹಳಗನ್ನಡವನ್ನು ಚಂಪೂಭಾಷೆ ಎಂದು ವಿದ್ವಾಂಸರು ಕರೆದಿದ್ದಾರೆ. ಕ್ರಿ.ಶ. ೧೨೫೦ ರಿಂದ ಕ್ರಿ.ಶ. ೧೫೦೦ರ ವರೆಗಿನ ಕನ್ನಡ ಸಾಹಿತ್ಯ ಕೃತಿಗಳ ಕನ್ನಡ ಭಾಷಾರೂಪವೇ 'ನಡುಗನ್ನಡ' (Medieval Kannada). ಹಾಡುಗಬ್ಬಗಳ ಭಾಷಾರೂಪವಿದು. ವಚನ, ಷಟ್ಪದಿ, ತ್ರಿಪದಿ... ಇತ್ಯಾದಿ ಸಾಹಿತ್ಯಿಕ ರಚನಾವಿನ್ಯಾಸಗಳೇ ನಡುಗನ್ನಡ ಭಾಷೆಯ ವೈಶಿಷ್ಟ್ಯ. ಕ್ರಿ.ಶ ೧೫೦೦ ರ ಅನಂತರದ ಕನ್ನಡ ಸಾಹಿತ್ಯ ಕೃತಿಗಳ ಕನ್ನಡ ಭಾಷಾರೂಪವೇ

ಹೊಸಗನ್ನಡ (Modern Kannada). ಗದ್ಯಗ್ರಂಥಗಳ ಭಾಷಾರೂಪವಿದು ಹೊಸಗನ್ನಡ ಗದ್ಯ–ಪದ್ಯ ಭಾಷೆಯಾಗಿದೆ. ಪದ್ಯಭಾಷೆಯಲ್ಲೂ ಗದ್ಯಾತ್ಮಕತೆಯನ್ನು ಇಂದಿನ ಕನ್ನಡ ಭಾಷೆಯಲ್ಲಿ ಕಾಣಬಹುದು.

ಕನ್ನಡ ಭಾಷೆಯು ಪ್ರತಿಯೊಂದು ಅವಸ್ಥೆಯಲ್ಲಿಯೂ ತನ್ನದೇ ಆದ ಸ್ವತಂತ್ರ ಲಕ್ಷಣ ಹಾಗೂ ವಿಶೇಷ ವ್ಯಾಕರಣ ಅಂಶಗಳನ್ನು ಪಡೆದುಕೊಂಡಿದೆ. ಅನೇಕ ಪ್ರಚಲಿತ ಭಾಷಾವೈಲಕ್ಷಣ್ಯಗಳು ಕನ್ನಡಭಾಷೆಯ ಬೆಳವಣಿಗೆಯನ್ನು ಶಾಸ್ತ್ರೀಯವಾಗಿ ವಿವರಿಸಲು ಸಹಾಯಕವಾಗುವವು. ಇದೇ ಕನ್ನಡಭಾಷೆಯ ಚಾರಿತ್ರಿಕ ಬೆಳವಣಿಗೆ. ಇವು ಕನ್ನಡ ಭಾಷೆಯ ರಚನಾ ವ್ಯತ್ಯಾಸವನ್ನೂ ಭಾಷೆಯ ವಿಕಾಸತಾ ಘಟ್ಟವನ್ನು ನಿಖರವಾಗಿ ನಿರ್ದೇಶಿಸಿದೆ

ಭಾಷಿಕ ಬದಲಾವಣೆ

ಜಗತ್ತಿನಲ್ಲಿ ಎಲ್ಲ ಜೀವಂತವಸ್ತುಗಳೂ ಕಾಲಕಾಲಕ್ಕೆ ಬದಲಾವಣೆಯನ್ನು ಹೊಂದುತ್ತಲೇ ಇರುತ್ತವೆ. ಬದಲಾವಣೆಯೇ ವಸ್ತುಗಳ ಜೀವಂತಿಕೆಯ ಕುರುಹು. ಭಾಷಾಕ್ಷೇತ್ರದಲ್ಲೂ ಈ ಪರಿವರ್ತನೆ ಅನಿವಾರ್ಯ, ಅಗತ್ಯ ಹಾಗೂ ಜೀವಂತಿಕೆಯ ಚಿಹ್ನೆ. ಭಾಷೆಯಲ್ಲಾಗುವ ಈ ವ್ಯತ್ಯಾಸವನ್ನು ಹಲವು ಪರಿಸರಗಳಲ್ಲಿ ಬಹು ನಿಖರವಾಗಿ ಗುರುತಿಸಬಹುದು. ಕೆಲವು ಸಂದರ್ಭಗಳಲ್ಲಿ ಈ ತೆರನಾದ ಪರಿವರ್ತನೆಯನ್ನು ನಿರ್ದೇಶಿಸುವುದು ಬಹು ಕಷ್ಟ. ಭಾಷೆ ಆಡುಮಾತಾಗಿ ಜನಸಮೂಹದ ನಡುವೆ ಜೀವಂತವಾಗಿರುವತನಕ ಈ ಬಗೆಯ ವ್ಯತ್ಯಾಸದಿಂದ ದೂರ ಉಳಿಯಲು ಸಾಧ್ಯವಿಲ್ಲ, ಭಾಷೆ ಜಡವಾದುದಲ್ಲ, ನಿತ್ಯಪರಿವರ್ತನಾ ಶೀಲತೆಯೇ ಭಾಷೆಯ ಆರೋಗ್ಯದ ಕುರುಹು. ಆಯಾ ಸಂದರ್ಭಕ್ಕೆ; ಆಯಾ ಕಾಲಕ್ಕೆ; ಆಯಾ ಸಮಾಜಕ್ಕೆ, ಆಯಾ ಪರಿಸರಕ್ಕೆ, ಆಯಾ ವ್ಯಕ್ತಿಯ ಆಲೋಚನೆಗೆ ತಕ್ಕಂತೆ ಹೊಂದಿ ಬದಲಾಗುವುದೇ ಭಾಷೆಯ ಸಹಜತೆ. ಎಲ್ಲ ಕಾಲಕ್ಕೂ, ಎಲ್ಲ ಪರಿಸರಕ್ಕೂ ಎಲ್ಲರಿಗೂ ಒಂದೇಯಾಗಿರುವುದಿಲ್ಲ ಭಾಷೆ ನಿರಂತರವಾಗಿ ರೂಪಾಂತರಗೊಳ್ಳುವುದೇ ಭಾಷೆಯ ಪ್ರಮುಖ ಲಕ್ಷಣ ಈ ಪ್ರಮುಖ ಭಾಷಾಗುಣವನ್ನೇ "ಭಾಷಿಕ ಬದಲಾವಣೆ" ಎಂದು ಕರೆದಿರುವುದು.

ಎಡ್ವರ್ಡ್ ಸಪೀರ್ ಭಾಷಿಕ ಬದಲಾವಣೆಯನ್ನು ಕುರಿತು "language moves down time in a current of its own making. It has a drift... Nothing is perfectly static. Every word, every grammatical element, every location, every sound, and accent is a slowly changing configuration, moulded by the invisible and impersonal...." ಹೀಗೆ ಹೇಳಿದ್ದಾರೆ. ಒಟ್ಟಿನಲ್ಲಿ ಭಾಷಾ ಬದಲಾವಣೆಯನ್ನು ಹೀಗೆ ಸೂತ್ರೀಕರಿಸಬಹುದು "A modification of the sound system or

the grammar of a language". ಈ ಆಂಗ್ಲ ಸೂತ್ರೀಕೃತಮಾತು ಭಾಷಿಕ ಬದಲಾವಣೆ ಎಂದರೇನು ? ಎನ್ನುವುದನ್ನು ಸ್ಪಷ್ಟವಾಗಿ ತಿಳಿಸುವುದು. "Language is an expression of human activity, and as human activity is forever changing, language changes with it" ಎಂಬ ಮೇರಿಯೋ ಎ ಪೈ ಅವರ ಮಾತು ಭಾಷಿಕ ಬದಲಾವಣೆಯ ಅಗತ್ಯವನ್ನು ಒತ್ತಿಹೇಳುತ್ತದೆ. ಭಾಷೆ ಬದಲಾಗುವುದು ಸ್ವಾಭಾವಿಕ ಕ್ರಿಯೆ. ಭಾಷಾಬೆಳವಣಿಗೆಯ ಪ್ರಮುಖಾಂಶ ಭಾಷಾ ಬದಲಾವಣೆ. ಇದರಷ್ಟೇ ಸಹಜವಾದದ್ದು ಭಾಷಾ ಭಿನ್ನತೆ/ಭಾಷಿಕ ಭಿನ್ನತೆ (Linguistic variation). ಭಾಷಾಭಿನ್ನತೆಗೆ ಕಾರಣ ಭಾಷಾ ಬೆಳವಣಿಗೆ. ಕಾಲ ಉರುಳಿದಂತೆ ಭಾಷೆಯಲ್ಲಿ ಭಿನ್ನತೆ ಹೆಚ್ಚುವುದು ಸಹಜ ಅಂತೆಯೇ ಪ್ರದೇಶದಿಂದ ಪ್ರದೇಶಕ್ಕೂ ಭಾಷೆಯಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ಸನ್ನಿವೇಶ, ಪ್ರದೇಶ, ಕಾಲಕ್ಕೆ ಹೊಂದಿಕೆಯಾಗುವಂತೆ ಭಾಷೆ ಪಡೆದುಕೊಳ್ಳುವ ವ್ಯವಸ್ಥಿತ ರೂಪಾಂತರವೇ 'ಭಾಷಿಕ ಬದಲಾವಣೆ'. ಭಾಷಾಬಳಕೆಯ ಭಿನ್ನತೆಯೇ ಭಾಷಿಕ ಬದಲಾವಣೆಗೆ ಸಾಕ್ಷಿ. ಕಾಲದಿಂದಕಾಲಕ್ಕೆ ಭಾಷೆಯಲ್ಲಿ ತೋರುವ ಭಿನ್ನತೆ/ಸಾಮ್ಯತೆಯೇ ಭಾಷಿಕ ಬದಲಾವಣೆ. ಎರಡು ಅಥವಾ ಹೆಚ್ಚಿನ ಸಾಮ್ಯಭಾಷೆಯ ಸ್ವರೂಪವನ್ನು ತುಲನೆ ಮಾಡುವುದರ ಮೂಲಕ, ಆಯಾ ಕಾಲಕ್ಕೆ ಭಾಷೆ ಬದಲಾಗಿರುವುದನ್ನು ಸ್ಪಷ್ಟವಾಗಿ ನಿರೂಪಿಸಬಹುದು.

ಭಾಷಿಕ ಬದಲಾವಣೆಯ ಕಾರಣಗಳು ಹಾಗೂ ಪರಿಸರ

ಸಾಮಾನ್ಯವಾಗಿ ಭಾಷಿಕಬದಲಾವಣೆಗೆ ಅನೇಕ ಕಾರಣಗಳು ಇಲ್ಲದಿಲ್ಲ ಭಾಷಾ ಬೆಳವಣಿಗೆಯೇ ಭಾಷಿಕ ಬದಲಾವಣೆಯ ಪ್ರಧಾನಾಂಶ ಹಾಗೂ ಕಾರಣ. ನೆರೆಹೊರೆ ಭಾಷೆಯ ಸಂಸರ್ಗ, ಪ್ರಭಾವ, ಅಡ್ಡಿ, ಜನಪ್ರಿಯತೆ, ವ್ಯಾಮೋಹ, ತಪ್ಪುಗ್ರಹಿಕೆ ಇತ್ಯಾದಿ ಭಾಷಿಕ ಬದಲಾವಣೆಯ ನಿಮಿತ್ತವೂ ಹೌದು, ಸಹಜ ಪರಿಸರವೂ ಹೌದು. ಮೊದಲೇ ಹೇಳಿದಹಾಗೆ ಭಾಷಾ ಬದಲಾವಣೆಯೇ ಭಾಷಿಕ ಬೆಳವಣಿಗೆಯ ಜೀವಂತ ಕುರುಹು. ನೆರೆಭಾಷೆಯ ಪ್ರಭಾವ, ಸ್ವೀಕೃತ ಭಾಷಿಕ ರೂಪಗಳ ಪ್ರಯೋಗ, ಯುಕ್ತಪದ, ಪ್ರತ್ಯಯಗಳ ಸಹಜ ಆವಿಷ್ಕಾರ, ಭಾಷೆಯ ಆಧುನೀಕರಣ ಹಾಗೂ ಶಿಷ್ಟೀಕರಣ ಇತ್ಯಾದಿ ಭಾಷಾ ಬೆಳವಣಿಗೆಯ ಮುಖ್ಯ ಅಂಶಗಳು. ಈ ಅಂಶಗಳೇ ಭಾಷಿಕ ಬದಲಾವಣೆಯ ಕಾರಣಗಳೂ ಆಗಿವೆ.

ಭಾಷೆಯಲ್ಲಿ ಕಂಡುಬರುವ ಬದಲಾವಣೆಯ ಪರಿಸರವನ್ನು ಮತ್ತು ರೀತಿಯನ್ನು ಆಧರಿಸಿ ಭಾಷಿಕ ಬದಲಾವಣೆಯ ಕಾರಣಗಳನ್ನು ಎರಡು ಪ್ರಮುಖ ಗುಂಪುಗಳಾಗಿ ವಿಂಗಡಿಸಬಹುದು. ೧ ಆಂತರಿಕ ಕಾರಣಗಳು, ಮತ್ತು ೨ ಬಾಹ್ಯ ಕಾರಣಗಳು. ದೇಶಭೇದದಿಂದ, ಕಾಲಭೇದದಿಂದ ಮತ್ತು ಸಮಾಜಭೇದದಿಂದ ಭಾಷೆಯಲ್ಲಿ ರೂಪಾಂತರ ಬಹುಮುಖದಿಂದ ಕಾಣಿಸಿಕೊಳ್ಳುತ್ತದೆ.

೧. ಆಂತರಿಕ ಕಾರಣಗಳು : ಹೆಚ್ಚಾಗಿ ಭಾಷೆಯ ರಚನಾವ್ಯವಸ್ಥೆಯಲ್ಲಿ ಮಾತ್ರ ಕಾಣುವ ಭಾಷಿಕ ಬದಲಾವಣಾ ಅಂಶಗಳಿವು. ಯಾವುದೇ ಭಾಷೆಯ ರಚನಾ ಚೌಕಟ್ಟಿನೊಳಗೆ ಮಾತ್ರ ನಿರ್ಧರಿಸುವ ಭಾಷಾಬದಲಾವಣಾ ನಿಮಿತ್ತಗಳಿವು. ಭಾಷೆಯ ಯಾವುದೇ ರಚನಾ ಹಂತ (Constructional stage/unit) ದಲ್ಲಿ ಬೇಕಾದರೂ ಬದಲಾವಣೆಗೆ ಅವಕಾಶ ಉಂಟು. ಭಾಷಿಕ ಬದಲಾವಣೆ, ಭಾಷೆಯ ರಚನಾಹಂತದಲ್ಲಿ ಜರಗುವ ಕಾರ್ಯಗಳ ಮತ್ತು ಕಾರ್ಯಗುಣಗಳ ಆಧಾರದಿಂದ ಭಾಷಿಕ ಬದಲಾವಣಾ ಆಂತರಿಕ ಕಾರಣಗಳನ್ನು ಸ್ಥೂಲವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು. (i) ಸ್ವಾಭಾವಿಕ ಕಾರಣಗಳು, ಮತ್ತು (ii) ಸ್ವಾಭಾವಿಕವಲ್ಲದ ಕಾರಣಗಳು.

ಸ್ವಾಭಾವಿಕ ಭಾಷಾಬದಲಾವಣೆಯ ಕಾರಣಗಳನ್ನು ಸಹಜತೆ, ಜನಪ್ರಿಯತೆ ಹಾಗೂ ಸಂಕ್ಷಿಪ್ತತೆಯ ಆಧಾರದಿಂದ ಗುರುತಿಸಿದೆ. ಸಾಮಾನ್ಯವಾಗಿ ಭಾಷೆ ಕಾಲಕ್ಕೆ, ಸಮಾಜಕ್ಕೆ ಮತ್ತು ದೇಶಕ್ಕೆ ತಕ್ಕಂತೆ ರೂಪಾಂತರವಾಗುವಾಗ ತನ್ನ ಮೂಲ ಸಹಜತೆಯನ್ನು ಬಿಟ್ಟುಕೊಡುವುದಿಲ್ಲ. ಆ ಕಾರಣದಿಂದಲೇ ಆ ಭಾಷೆ ಜನಪ್ರಿಯ ವಾಗಿ, ಸಂಕ್ಷಿಪ್ತವಾಗಿ ಬೆಳೆಯುವುದು. ಕೆಲವುಸಾರಿ ಭಾಷೆಯಲ್ಲಿದ್ದ ಪದಗಳಲ್ಲಿ ಕೆಲವು ಪದ, ಅಕ್ಷರಗಳು, ಅರ್ಥ, ಬಳಕೆಯಿಂದ ಕಾಣೆಯಾಗುವುದು. (ಉದಾ. ಹಳಗನ್ನಡದಲ್ಲಿದ್ದ ಱ, ೞ ಎಂಬ ಅಕ್ಷರಗಳು : ಬಾಸ್, ಮಿಾನ್ ಇತ್ಯಾದಿ ಆಕೃತಿಮಾ ಗಳು, ಆಳ್, ಕೂಳ್ ಆಕೃತಿಮಾಗಳ ಮೂಲಾರ್ಥ ಮಾಯವಾಗಿ ಇಂದು ಹೊಸ ಅರ್ಥದೊಡನೆ ಪ್ರಯೋಗದಲ್ಲಿವೆ. ಆಳ್–ವೀರ, ಶೂರ ಎಂದೂ ಕೂಳ್–ಆಹಾರ, ಎಂಬರ್ಥವನ್ನು ಪಡೆದಿತ್ತು. ಇಂದು ಸೇವಕ, ಬಡವರ ಆಹಾರ ಎಂಬ ಅರ್ಥಗಳನ್ನು ಪಡೆದಿದೆ). ಭಾಷೆಯಲ್ಲಿಲ್ಲದ ಪದಗಳ ಸ್ಥಾನದಲ್ಲಿ ಹೊಸ ಪದಗಳು ಬಂದು ಸೇರುವುದು. (ಉದಾ: ಇಸ್ತ್ರಿ, ಮೇಜು ಆಕೃತಿಮಾಗಳು ಕನ್ನಡದವುಗಳಲ್ಲ. ಅವು ಬೇರೆ ಭಾಷೆಯಿಂದ ಬಂದು ಇಂದು ಕನ್ನಡದ ಶಬ್ದವೆನಿಸಿಕೊಂಡಿವೆ). ಹಳೆಯ ಆಕೃತಿಮಾ ಗಳನ್ನು ಸೇರಿಸಿ ಹೊಸ ಸಮಾಸ ಪದಗಳ ಸೃಷ್ಟಿ (ಉದಾ: ಗುಂಡುಸೂಜಿ, ಆಕಾಶಬುಟ್ಟಿ, ಸೀಮೆಎಣ್ಣೆ). ಬೇರೆ ಭಾಷೆಯ ಶಬ್ದಗಳನ್ನು ತಮ್ಮ ಭಾಷೆಯ ಚೌಕಟ್ಟಿಗೆ ತಕ್ಕಂತೆ ಹೊಂದಿಸಿಕೊಂಡು ಬಳಸುವುದು (ಉದಾ. ದಿವಾನ, ಲಾಯರು, ಕಾರು, ಮುನಸಿ) ಭಾಷೆಯಲ್ಲಿರುವ ಮೂಲ ಆಕೃತಿಮಾಗಳ ಅಲ್ಪಸ್ವಲ್ಪ ರೂಪಾಂತರ ದೊಡನೆ ಹೊಸ ಆಕೃತಿಮಾಗಳ ಆವಿಷ್ಕಾರ (ಉದಾ. ಹಳಗನ್ನಡದ ಪಾಲ್, ಅಂತಪ್ಪ ಆಕೃತಿಮಾಗಳು ಇಂದು ಹೊಸಗನ್ನಡದಲ್ಲಿ ಹಾಲು, ಎಂಥ ರೂಪಗಳನ್ನು ಪಡೆದಿವೆ).

ಇಷ್ಟೇ ಅಲ್ಲದೆ ಸೌಲಭ್ಯಾಕಾಂಕ್ಷೆ, ಶಾಶ್ವತ ಅನುಕರಣೆ, ಉಚ್ಚಾರಣಾ ಭೇದ, ಸೋಮಾರಿತನ, ಇತ್ಯಾದಿ ಕಾರಣಗಳು ಭಾಷಿಕ ಬದಲಾವಣೆಗೆ ಸ್ವಾಭಾವಿಕವೇ ಹೌದು. ಸಹಜವಾಗಿ ಮಾನವ ತನ್ನ ಬದುಕಿನಲ್ಲಿ ಎಂದಿಗೂ ಯಾವ ಶ್ರಮವನ್ನು

ನಿರೀಕ್ಷಿಸಲಾಗ. ಶ್ರಮ ಪರಿಹಾರದೊಂದಿಗೆ ಸುಲಭತೆಯನ್ನು ಅಪೇಕ್ಷಿಸುತ್ತಾನೆ. ತಾನಾಡುವ ಮಾತಿನಲ್ಲಿ ಸಮಯ ದಣಿವನ್ನು ಕಾಯ್ದುಕೊಳ್ಳಲು ದೀರ್ಘ ಉಚ್ಚಾರವನ್ನು ಮೊಟಕುಗೊಳಿಸುತ್ತಾನೆ. (ಉದಾ : ವೀರರಾಜನ ಪೇಟೆ > ವಿರಾಜ್‌ಪೇಟೆ; ಬೆಂಗಳೂರು > ಬೆಂಗ್ಳೂರು ; ಹೋಗುತ್ತೇನೆ > ಹೋಗ್ತೇನೆ) ಸೌಲಭ್ಯಾಕಾಂಕ್ಷೆಯಿಂದ ದೀರ್ಘ ಉಚ್ಚಾರವನ್ನು ಹ್ರಸ್ವಗೊಳಿಸುವ ರೀತಿ ಎಷ್ಟೋವೇಳೆ ವ್ಯಕ್ತಿಯ ಸೋಮಾರಿತನದಿಂದಲೂ, ಅಲಕ್ಷ್ಯ ಮನೋಭಾವದಿಂದಲೂ ಉಂಟಾಗುತ್ತದೆ. (ಉದಾ. : ಮಾಡುವುದಕ್ಕೆ > ಮಾಡೋಕ್ಕೆ; ಹೋಗುವುದಕ್ಕೆ > ಹೋಗೋಕೆ). ಅನುಕರಣೆಯೇ ಭಾಷಾಕಲಿಕೆಯ ಮುಖ್ಯ ಆಶಯ. ಭಾಷಾಕಲಿಕೆ ನಮ್ಮ ಪರಿಸರವನ್ನು ಮತ್ತು ಭಾಷಾ ಬಳಕೆಯ ರೀತಿಯನ್ನು ಆಧರಿಸಿರುತ್ತದೆ. ಮಕ್ಕಳ ಭಾಷಾ ಉಚ್ಚಾರವು, ತಮ್ಮ ಹಿರಿಯರು ಅಲ್ಲದೆ ಪರಿಸರದವರೊಡನೆ ಕೂಡಿರುತ್ತದೆ. ಅನುಕರಣೆಯಿಲ್ಲದಿದ್ದರೆ ಭಾಷೆ, ಭಾಷಾ ಬಳಕೆ ಇರಲೇ ಇಲ್ಲ, ಆದಕಾರಣ ಹಲವು ಧ್ವನಿ ಉತ್ಪತ್ತಿ ಭಿನ್ನತೆಯನ್ನು ಕಾಣಬಹುದು (ಉದಾ. ಕನ್ನಡದಲ್ಲಿಲ್ಲದ f ಫ, z ಜ಼ ಧ್ವನಿಗಳು ಈಗೀಗ ಕನ್ನಡದ ಧ್ವನಿಗಳೆನಿಸಿಕೊಳ್ಳುತ್ತಿವೆ). ಕ್ಲಿಷ್ಟ ಉಚ್ಚಾರಣೆಗಳು ಸಹಜವಾಗಿ ಭಾಷೆಯಲ್ಲಿ ಮಾಯವಾಗಿ ಸರಳ ಉಚ್ಚಾರಣಾ ರೂಪಗಳು ಹೆಚ್ಚುತ್ತಿವೆ. (ಉದಾ. ಉಚ್ಚಿಕ್ಕಿ > ಉಕ್ಕೆ; ಕರ್ಪು > ಕಪ್ಪು; ಭಕ್ತ > ಭಕುತ; ಹರ್ಷ > ಹರುಷ ; ಬೆಳ್ಪು > ಬಿಳುಪು > ಬಿಳ್ಪು ; ಅಗಟ್ಚಿ > ಅಗತೆ) . ವಿಜಾತೀಯ ಸಂಯುಕ್ತಾಕ್ಷರಗಳು ಹೊಸಗನ್ನಡದಲ್ಲಿ ಸಜಾತೀಯ ಸಂಯುಕ್ತಾಕ್ಷರಗಳಾಗಿಯೂ; ಕೆಲವುಸರ್ತಿ ಲೋಪವಾಗಿಯೂ, ಇನ್ನು ಕೆಲವು ಪರಿಸರದಲ್ಲಿ ವಿರಳವಾಗಿಯೂ ಬಂದಿವೆ.

ಸ್ವಾಭಾವಿಕವಲ್ಲದ ಭಾಷಾ ಬದಲಾವಣೆಯ ಕಾರಣಗಳು ಹಲವಾರು ವಿಭಿನ್ನ ಪರಿಸರ, ಒತ್ತಡದಿಂದ ಗುರುತಿಸಬಹುದು. ಸಹಜವಾಗಿ ನೆರೆ ಭಾಷೆಯ ಪ್ರಭಾವದಿಂದ ಆಡಂಬರದ ಭಾಷಾ ಪ್ರಯೋಗದಿಂದ, ಗೌರವಸ್ಥರಂತೆ ನಡೆದುಕೊಳ್ಳುವುದರ ಮೂಲಕ ಭಾಷಾ ಬದಲಾವಣೆಯನ್ನು ನಿರ್ದೇಶಿಸಬಹುದು. ಭಾಷೆಯ ಚೌಕಟ್ಟಿಗೆ ಹೊಂದುವಂತಿರದಿದ್ದರೂ, ಪ್ರತಿಷ್ಠೆಯದ್ಯೋತಕವಾಗಿ ಅಂತಹ ರೂಪಗಳನ್ನು ಬಿನ್ನಟ್ಟಲಾಗುವುದು. ಸಾಮಾನ್ಯವಾಗಿ ವ್ಯಕ್ತಿ ತಾನು ವಾಸಮಾಡುವ ಪರಿಸರದಲ್ಲಿ ತನ್ನ ಸಂಸ್ಕೃತಿ ಮತ್ತು ವೈಯಕ್ತಿಕತನವನ್ನು ಕಾಪಾಡಿಕೊಳ್ಳುವುದಕ್ಕೆ ತನ್ನದೇ ಆದ ವಿಶಿಷ್ಟ ಭಾಷಿಕ ರೂಪಗಳನ್ನು ಬಳಸಿಕೊಳ್ಳುತ್ತಾನೆ, ಹಾಗೆ ಬಳಸಿಕೊಳ್ಳುವುದು ಆತನ ಗೌರವದ ಪ್ರಶ್ನೆಯಾಗಿರುತ್ತದೆ (ಉದಾ. ಕನ್ನಡ ಪರಿಸರದಲ್ಲಿ ಕಂಡುಬರುವ ವಿದೇಶಿ ಪದಗಳು, School, time, Coffee). ಬಳಸುವವನ ಅಗತ್ಯ ಪೂರೈಕೆಯ ನಿಮಿತ್ತ ಕೆಲವು ಶಬ್ದಗಳು ಭಾಷೆಯಲ್ಲಿ ಹೊಸದಾಗಿ ಸೇರಿಕೊಳ್ಳುತ್ತವೆ (ಉದಾ. ವೈಜ್ಞಾನಿಕ ಸಂಶೋಧನೆಗೆ ಸಂಬಂಧಿತ ಪದಗಳು, ಬಾಂಬ್, ರಾಕೆಟ್, ಆಕ್ಸಿಜನ್, ಫಿಲ್ಮ್ಸ್, ಕ್ರಿಕೆಟ್).

೨. **ಬಾಹ್ಯಕಾರಣಗಳು :** ಒಂದು ಭಾಷೆಯನ್ನು ಆಡುವ ಜನಸಮೂಹ ದೊಂದಿಗೆ ಮತ್ತೊಂದು ಭಾಷೆಯನ್ನು ಆಡುವ ಜನಸಮೂಹದ ಪರಸ್ಪರ ಸಂಪರ್ಕ ವಾದಾಗ; ಆ ಪರಸ್ಪರ ಸಾಹಚರ್ಯ ಗಾಢವಾಗಿ ಅದರ ಪರಿಣಾಮ ಎಷ್ಟೋ ಭಾಷಿಕ ರೂಪಗಳು ಅದಲು ಬದಲಾಗುವ ಸಾಧ್ಯತೆ ಉಂಟು. ಈ ಭಾಷಿಕ ಬದಲಾವಣೆಯು ಕಾರಣವೇ ಬಾಹ್ಯಕಾರಣ. ಇಡೀ ಭಾಷಿಕ ರೂಪದಲ್ಲಿ ವ್ಯತ್ಯಾಸವನ್ನು ಕಾಣು ತ್ತೇವೆಯೇ ಹೊರತು ಆಂಶಿಕ ರಚನಾಘಟ್ಟದಲ್ಲಿ ಕಾಣುವುದಿಲ್ಲ. ಅನ್ಯ ಭಾಷಾ ಸ್ವೀಕರಣವೇ ಈ ಭಾಷಾ ಬದಲಾವಣೆಯು ಬಾಹ್ಯಕಾರಣ, ಭಾಷೆಯು ಶಬ್ದಕೋಶವು ಹೆಚ್ಚುವುದಕ್ಕೆ ಕಾರಣವಾಗುತ್ತದೆ ಅನ್ಯ ಭಾಷೆಯ ಜನರ ಸಂಪರ್ಕ ಪ್ರಬಲವಾದರೆ; ಅವರ ಮಾತಿನಲ್ಲಿ ಅನ್ಯಭಾಷಾ ರೂಪಗಳೇ ಹೆಚ್ಚು, ಭಾಷಿಕ ಬದಲಾವಣೆಯ ಕಾರಣಗಳೇ ಭಾಷಿಕ ಬದಲಾವಣೆಯು ಸಹಜ ಪರಿಸರ, ಮಾನವನ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮಾನಸಿಕ ಪರಿಸರ ಭಾಷಿಕ ಬದಲಾವಣೆಗೆ ಅಗತ್ಯ ಹಾಗೂ ಅನಿವಾರ್ಯ.

ಭಾಷಿಕ ಬದಲಾವಣೆಯ ವರ್ಗೀಕರಣ (ವೈವಿಧ್ಯ)

ಸಾಮಾನ್ಯವಾಗಿ ಬದಲಾವಣೆ ಭಾಷೆಯ ಒಟ್ಟು ರಚನಾಸ್ತರಗಳ ಮೇಲೆ ಆಧಾರಿತವಾಗಿರುತ್ತದೆ ಎಂಬ ವಿಚಾರವನ್ನು ಈಗಾಗಲೇ ನೋಡಿದ್ದೇವೆ. ಭಾಷೆಯ ಒಟ್ಟು ರಚನೆಯಲ್ಲಿ ಕಂಡುಬರುವ ಧ್ವನಿಮಾ, ಆಕೃತಿಮಾ, ಅರ್ಥ, ಧ್ವನಿ ಹಾಗೂ ವ್ಯಾಕರಣಾತ್ಮಕ ಅಂಶಗಳು ಬದಲಾವಣೆಯಲ್ಲಿ ಪಾಲ್ಗೊಂಡಿವೆ. ಈ ಎಲ್ಲಾ ಬದಲಾವಣೆಗಳನ್ನು ವ್ಯವಸ್ಥಿತವಾಗಿ ವಿಂಗಡಿಸಿ ವಿವರಿಸುವುದು ಬಹು ಪ್ರಯಾಸದ ಕೆಲಸ. ಇದಕ್ಕೆ ಕಾರಣ, ಭಾಷೆಯಲ್ಲಿಯ ಬದಲಾವಣೆ ಎಂದರೆ ಭಾಷಾ ರಚನೆಯ ಒಂದೊಂದು ಉಪಸ್ತರದ ಮೇಲೆ ಆಗುವ ಪರಿಣಾಮ. ಭಾಷಾರಚನೆಯ ಯಾವ ಉಪಸ್ತರದ ಮೇಲೆ ಪರಿಣಾಮವಾಗುತ್ತದೋ ಆ ಹೆಸರನ್ನು ಆ ಭಾಷಿಕಾಂಶದ ಬದಲಾವಣೆಗೆ ನೀಡುತ್ತೇವೆ. ಹಾಗಾಗಿ ಅದು ಭಾಷಾ ಬದಲಾವಣೆಯ ಒಂದು ನಿರ್ದಿಷ್ಟ ವಿಧ. ಹೀಗೆ ಭಾಷೆಯ ರಚನಾಸ್ತರದ ಆಧಾರದಿಂದ ಭಾಷಿಕ ಬದಲಾವಣೆಯ ವಿಧಗಳನ್ನು ನೋಡುವುದು ವೈಜ್ಞಾನಿಕ ರೀತಿ.

ಚಾರ್ಲ್ಸ್ ಎಫ್. ಹಾಕೆಟ್ ತನ್ನ "A Course in Modern Linguistics" (1976) ಕೃತಿಯ "The Design of a Language" ಎಂಬ ಅಧ್ಯಾಯದಲ್ಲಿ ಭಾಷೆಯ ಮೂಲಭೂತ ರಚನಾಸ್ತರವನ್ನು ವಿವರಿಸಿದ್ದಾನೆ, ಆತನು ಪ್ರತಿಯೋರ್ವನು ಮಾತನಾಡುವ ನುಡಿಯು ಕೆಲವು ಮೂಲಭೂತ ಅಂಶಗಳನ್ನು ಪಡೆದಿರುತ್ತದೆ ಎಂದು: "A Language is a system of arbitrary vocal symbols by means of which a social group Co-operates" ಎಂಬ ಬ್ಲಾಕ್ ಮತ್ತು ಟ್ರಾಗರ್ ಅವರ ಮಾತೂ; "A Language is a Complex

system of habits" ಎಂಬ ಹಾಕೆಟ್ ಅವರ ಮಾತೂ ಭಾಷೆಯ ಮೂಲ ಸ್ವರವನ್ನು ನಿಖರವಾಗಿ ನಿರ್ದೇಶಿಸುತ್ತದೆ. ಹಾಕೆಟ್ ಭಾಷೆಯ ಒಟ್ಟು ರಚನೆಯನ್ನು ಐದು ಪ್ರಮುಖ ತತ್ತ್ವಗಳ ಮೂಲಕ ನಿರೂಪಿಸುತ್ತಾ, ಅವುಗಳಲ್ಲಿ ಮೂರು ತತ್ತ್ವಗಳ ಕೇಂದ್ರೀಯ ತತ್ತ್ವಗಳೆಂದೂ ಉಳಿದೆರಡು ತತ್ತ್ವಗಳನ್ನು ಬಾಹ್ಯ ತತ್ತ್ವಗಳು ಎಂದು ಹೆಸರಿಸಿದ್ದಾನೆ. ಒಂದೊಂದು ತತ್ತ್ವವೂ ಭಾಷೆಯ ಆಂತರಿಕ ಹಾಗೂ ಬಾಹ್ಯ ರಚನಾ ವಿನ್ಯಾಸವನ್ನು ಸೂಕ್ಷ್ಮವಾಗಿ ವಿವರಿಸುತ್ತವೆ. ಹಾಕೆಟ್ ಅವರ ಭಾಷಾರಚನಾ ತತ್ತ್ವಗಳನ್ನು ಈ ಕೆಳಕಂಡ ವೃಕ್ಷ ನಕ್ಷೆಯ ಮೂಲಕ ಸ್ಪಷ್ಟವಾಗಿ ಸಾದರಪಡಿಸಿದೆ (ವೃಕ್ಷನಕ್ಷೆ 94ನೇ ಪುಟ ನೋಡಿ).

ಹಾಕೆಟ್ ಅವರ ಭಾಷಾರಚನಾ ಸ್ತರ ತತ್ತ್ವವು ಭಾಷೆಯ ವ್ಯವಸ್ಥಿತ ರಚನಾ ಪ್ರವೃತ್ತಿಯನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಯಾವುದೇ ಸ್ತರ ವಿವೇಚನೆ ಸ್ಪಷ್ಟವಾಗಿಲ್ಲದಿದ್ದರೆ ಭಾಷಾವಿಶ್ಲೇಷಣೆ ಸಂಪೂರ್ಣವಲ್ಲ.

ಸಾಮಾನ್ಯವಾಗಿ ಭಾಷಾ ಬದಲಾವಣೆಯ ವಿಧಗಳನ್ನು ಹಲವಾರು ರೀತಿಯಿಂದ ವಿವರಿಸಲು ಸಾಧ್ಯವಿದೆ. ಪ್ರಾಚೀನ ಕಾಲದಿಂದಲೂ ವ್ಯಾಕರಣಕಾರರೂ, ವಿದ್ವಾಂಸರೂ ಭಾಷಾಚರಿತ್ರೆಯನ್ನೂ ಕಾಲದೇಶಾದಿ ಅಂಶಗಳನ್ನು ಪ್ರಮುಖ ಉಲ್ಲೇಖವೆಂದು ನಿರ್ಧರಿಸಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಚಾರಿತ್ರಿಕ ಭಾಷಾ ವಿಜ್ಞಾನಿಗಳು ಭಾಷಿಕ ಬದಲಾವಣೆಯನ್ನು ಭಾಷಾ ಆಂತರಿಕ ಸ್ತರದ ಆಧಾರದ ಮೇಲೆ ವಿವರಿಸಲು ಪ್ರಯತ್ನಿಸಿದ್ದಾರೆ, ಇದಕ್ಕೆ ಮುಖ್ಯ ಕಾರಣ, ಭಾಷಾರಚನಾಸ್ತರ ಸೂಕ್ಷ್ಮವಾಗಿದ್ದು ಭಾಷೆಯ ರಚನಾ ವಿನ್ಯಾಸವನ್ನು ವೈಜ್ಞಾನಿಕವಾಗಿ ವಿವರಿಸ ಬಲ್ಲದು. ಈ ಕಾರಣದಿಂದಲೇ ಇಲ್ಲಿ ಹಾಕೆಟ್ ಅವರ ಭಾಷಾ ಆಂತರಿಕ ಸ್ತರದ ರಚನಾಂಶಗಳನ್ನು ಭಾಷಿಕ ಬದಲಾವಣೆಯ ವರ್ಗೀಕರಣಕ್ಕೆ ಆಧಾರವಾಗಿ ಇಟ್ಟು ಕೊಳ್ಳಲಾಗಿದೆ. ಹಾಗಾಗಿ ಭಾಷಿಕ ಬದಲಾವಣೆಯ ವರ್ಗೀಕರಣವನ್ನು ಈ ಕೆಳ ಕಂಡಂತೆ ಕ್ರೋಢೀಕರಿಸಿದೆ.

1. ಕೇಂದ್ರ ವರ್ಗ/ವಿಭಾಗ/ವ್ಯವಸ್ಥೆ

   (ಅ) ಧ್ವನಿಮಾ ಬದಲಾವಣೆ : ಒಂದು ಭಾಷೆಯ ಧ್ವನಿಮಾ ಸಂಖ್ಯೆಯಲ್ಲಿ ಏರಿಳಿತವಾದರೆ ಇಲ್ಲವೇ ಧ್ವನಿಮಾ ಸಂಯೋಜನೆಯಲ್ಲಿ ವ್ಯತ್ಯಾಸವಾದರೆ ಅದನ್ನು ಧ್ವನಿಮಾ ಬದಲಾವಣೆ ಎನ್ನುವರು.

   (ಆ) ವ್ಯಾಕರಣ ವ್ಯವಸ್ಥೆಯ ಬದಲಾವಣೆ : ಸಾಮಾನ್ಯವಾಗಿ ಈ ವ್ಯವಸ್ಥೆಯ ಬದಲಾವಣೆಯಲ್ಲಿ ಎರಡು ತೆರನಾದ ಬದಲಾವಣೆಗಳನ್ನು ಗುರುತಿಸಬಹುದು ಅದಕ್ಕೆ ಮುಖ್ಯ ಆಧಾರ ವ್ಯಾಕರಣ ವ್ಯವಸ್ಥೆಯ ಪ್ರಧಾನಾಂಶಗಳು.

   (i) ವ್ಯಾಕರಣ ಸಾರದಲ್ಲಾದ ಬದಲಾವಣೆ : (ವ್ಯಾಕರಣ

ವೃಕ್ಷ ನಕ್ಷೆ:

ಭಾಷೆ
(ಭಾಷೆ ಒಂದು ಸಂಕೀರ್ಣ ವ್ಯವಸ್ಥಿತ ಪ್ರವೃತ್ತಿ)

- ಕೇಂದ್ರೀಯ ವರ್ಗ (ತತ್ತ್ವ)
  - ಧ್ವನಿಮಾ ವ್ಯವಸ್ಥೆ
    - ಧ್ವನಿಮಾಗಳ ರಚನೆ ಮತ್ತು ಅದರ ವ್ಯವಸ್ಥಿತ ಸಂಗ್ರಹ, ಧ್ವನಿಮಾಗಳ ಪ್ರಸಾರ.
  - ವ್ಯಾಕರಣ ವ್ಯವಸ್ಥೆ
    - ಆಕೃತಿಮಾಗಳ ಸಂಗ್ರಹ, ಆದರ ವ್ಯವಸ್ಥಿತ ರಚನೆ ಮತ್ತು ಪ್ರಸಾರ.
  - ಆಕೃತಿ–ಧ್ವನಿಮಾ ವ್ಯವಸ್ಥೆ
    - ವ್ಯಾಕರಣ ಮತ್ತು ಧ್ವನಿಮಾ ವ್ಯವಸ್ಥೆಯು ಕ್ರೋಡೀಕೃತ ನಿಯಮಗಳ ನಿರೂಪಣೆ.
- ಬಾಹ್ಯ ವರ್ಗ (ತತ್ತ್ವ)
  - ಅರ್ಥವ್ಯವಸ್ಥೆ
    - ಆಕೃತಿಮಾ ಮತ್ತು ಆಕೃತಿಮಾಗಳ ಅರ್ಥನಿರೂಪಣೆ
  - ಧ್ವನಿ ವ್ಯವಸ್ಥೆ
    - ಉಚ್ಚರಿತ ಧ್ವನಿಗಳ ನಿರೂಪಣೆ.

ಬದಲಾವಣೆ) : ವ್ಯಾಕರಣದ ತಿರುಳಿನಲ್ಲಾದ ಬದಲಾವಣೆಗಳಿವು. ಈ ವ್ಯಾಕರಣ ತಿರುಳನ್ನು ಮುಖ್ಯವಾಗಿ ಮೂರು ರೀತಿಯಲ್ಲಿ ಪಟ್ಟಿಮಾಡಬಹುದು. ಅವು (೧) ವ್ಯಾಕರಣ ವರ್ಗ (೨) ವಾಕ್ಯ ಪದ ಖಂಡ ಮತ್ತು (೩) ಮಾತಿನ ರಚನೆ.

(ii) ವ್ಯಾಕರಣ ಸಾರ/ತಿರುಳಿಗೆ ಹೊರತಾದ ಬದಲಾವಣೆ : (ಶಬ್ದಕೋಶ/ಪದಾವಳಿ ಬದಲಾವಣೆ) : ವ್ಯಾಕರಣ ಸಾರದ ಹೊರಗೆ ಜರಗುವ ಬದಲಾವಣೆಗಳಿವು. ಅಂದರೆ ಭಾಷೆಯ ಸ್ವತಂತ್ರ ಆಕೃತಿಮಾ ಸಂಖ್ಯೆಯಲ್ಲಿ ಕಂಡುಬರುವ ಬದಲಾವಣೆಗಳು. ಇದು ಸಾಮಾನ್ಯವಾಗಿ ಪದ/ಶಬ್ದಕೋಶಗಳ ಮೂಲಕ ವ್ಯಕ್ತವಾಗುತ್ತದೆ

(ಇ) ಆಕೃತಿ–ಧ್ವನಿಮಾ ವ್ಯವಸ್ಥೆಯಲ್ಲಿಯ ಬದಲಾವಣೆ : ಭಾಷೆಯಲ್ಲಿ ನಡೆಯುವ ಆಕೃತಿ–ಧ್ವನಿಮಾ ವ್ಯವಸ್ಥೆಯಲ್ಲಿಯ ಬದಲಾವಣೆಯನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು.

(i) ರೂಪ ಬದಲಾವಣೆ : ಆಕೃತಿ ಮಾದರಿಯಲ್ಲಿ ಧ್ವನಿಮಾಗಳ ಭಿನ್ನ ಅಭಿವ್ಯಕ್ತಿಗೆ 'ರೂಪ ಬದಲಾವಣೆ' ಎಂದು ಹೆಸರು.

(ii) ವಿಕಲ್ಪ ಬದಲಾವಣೆ: ಉಚ್ಚಾರಣೆಯ ಪ್ರವೃತ್ತಿಯಲ್ಲಾಗುವ ಬದಲಾವಣೆಯೇ ವಿಕಲ್ಪ ಬದಲಾವಣೆ.

2. ಬಾಹ್ಯವರ್ಗ/ವಿಭಾಗ/ವ್ಯವಸ್ಥೆ

(ಅ) ಅರ್ಥ ಬದಲಾವಣೆ : ವ್ಯಾಕರಣರೂಪ (ಆಕೃತಿಮಾ)ಗಳಲ್ಲಿಯ ಅರ್ಥದಲ್ಲಿ ಆಗುವ ಬದಲಾವಣೆಯೇ 'ಅರ್ಥ ಬದಲಾವಣೆ'.

(ಅ) ಧ್ವನಿ ಬದಲಾವಣೆ: ಉಚ್ಚಾರ ಹಾಗೂ ಶ್ರವಣ ಪ್ರವೃತ್ತಿಗಳಲ್ಲಿ ಆಗುವ ಬದಲಾವಣೆಯೇ ಧ್ವನಿ ಬದಲಾವಣೆ.

ಭಾಷಿಕ ಬದಲಾವಣೆಯ ವೃಕ್ಷನಕ್ಷೆ ಇಂತಿದೆ :

ಭಾಷಿಕ ಬದಲಾವಣೆ

- 1. ಕೇಂದ್ರ ವರ್ಗದಲ್ಲಾಗುವ ಬದಲಾವಣೆ
  - ಅ. ಧ್ವನಿಮಾ ಬದಲಾವಣೆ
    - ಧ್ವನಿಮಾ ಬದಲಾವಣೆ
      - ಸ್ವರ-ಧ್ವನಿಮಾ
        - ಹ್ರಸ್ವಸ್ವರ
        - ದೀರ್ಘಸ್ವರ
      - ವ್ಯಂಜನ -ಧ್ವನಿಮಾ
      - ಸಂಧ್ಯಾಕ್ಷರ ಧ್ವನಿಮಾ
    - ಉಪಧ್ವನಿಮಾ ಬದಲಾವಣೆ
      - ಸ್ವರ ಉಪ ಧ್ವನಿಮಾ
        - ಹ್ರಸ್ವಸ್ವರ
        - ದೀರ್ಘಸ್ವರ
      - ವ್ಯಂಜನ ಉಪ-ಧ್ವನಿಮಾ
      - ಸಂಧ್ಯಾಕ್ಷರ ಉಪ-ಧ್ವನಿಮಾ
  - ಆ. ವ್ಯಾಕರಣ ವ್ಯವಸ್ಥೆಯ ಬದಲಾವಣೆ
    - (i) ವ್ಯಾಕರಣ ಬದಲಾವಣೆ
      - ವ್ಯಾಕರಣ ವರ್ಗ
      - ವಾಕ್ಯಪದ ಖಂಡ
      - ಮಾತಿನ ರಚನೆ
    - (ii) ಶಬ್ದಕೋಶ ಬದಲಾವಣೆ
      - ದೇಶೀಯ ಶಬ್ದಕೋಶ
      - ಅನ್ಯದೇಶಿಯ ಶಬ್ದಕೋಶ
  - ಇ. ಆಕೃತಿ-ಧ್ವನಿಮಾ ವ್ಯವಸ್ಥೆಯಲ್ಲಿಯ ಬದಲಾವಣೆ
    - (i) ರೂಪ ಬದಲಾವಣೆ
    - (ii) ವಿಕಲ್ಪ ಬದಲಾವಣೆ
- 2. ಬಾಹ್ಯ ವರ್ಗದಲ್ಲಾಗುವ ಬದಲಾವಣೆ
  - ಅ. ಅರ್ಥ ಬದಲಾವಣೆ
  - ಆ. ಧ್ವನಿ ಬದಲಾವಣೆ

ಧ್ವನಿಮಾ ವಿಕಾಸ/ಬದಲಾವಣೆ

ಯಾವುದೇ ಭಾಷೆಯ ಒಟ್ಟು ಧ್ವನಿಮಾ ಸಂಖ್ಯೆಯಲ್ಲಿ ಹೆಚ್ಚು ಅಥವಾ ಕಡಿಮೆಯಾದರೆ, ಇಲ್ಲವೆ ಧ್ವನಿಮಾ ಸಂಯೋಜನೆಯಲ್ಲಿ ವ್ಯತ್ಯಯವಾದರೆ ಅದಕ್ಕೆ ಭಾಷಾ ವಿಜ್ಞಾನಿಗಳು "ಧ್ವನಿಮಾ ವಿಕಾಸ/ಬದಲಾವಣೆ" ಎಂದು ಕರೆದಿದ್ದಾರೆ. ಅಂದರೆ ಧ್ವನಿಮಾ ವ್ಯವಸ್ಥೆಯಲ್ಲಿ ಹೆಚ್ಚಳ ಇಲ್ಲವೆ ಕಡಿತ ಧ್ವನಿಮಾ ಸಂಖ್ಯೆಯಲ್ಲಿ ಕಂಡು ಬರುವುದು ಎಂದರ್ಥ. ಭಾಷೆಯ ಒಟ್ಟು ಧ್ವನಿಮಾ ಸಂಗ್ರಹದಲ್ಲಿ, ಸಾಮಾನ್ಯವಾಗಿ ಪಲ್ಲಟ, ಲೋಪ, ವಿಭಜನೆ, ಸಂಯೋಜನೆ ಇತ್ಯಾದಿ ಕಾರಣಗಳಿಂದ ಧ್ವನಿಮಾಗಳಲ್ಲಿ ಆಗುವ ವ್ಯತ್ಯಯವೇ 'ಧ್ವನಿಮಾ ವಿಕಾಸ/ಬದಲಾವಣೆ.' ಚಾರ್ಲ್ಸ್ ಎಫ್. ಹಾಕೆಟ್ ಧ್ವನಿಮಾ ಬದಲಾವಣೆಯನ್ನು "Any Change in the repertory of Phonemes or in the arrangements in which they can occur" ಎಂದು ಸೂತ್ರೀಕರಿಸಿದ್ದಾನೆ.

ಹಳಗನ್ನಡದಲ್ಲಿ ರ್, ಱ್, ಳ್, ೞ್ ಎಂಬ ನಾಲ್ಕು ಪ್ರತ್ಯೇಕ ಧ್ವನಿಮಾಗಳಿದ್ದುವು. ಅವು ಸ್ವತಂತ್ರ ಪ್ರತ್ಯೇಕ ವಿಶಿಷ್ಟ ಧ್ವನಿಮಾ ಅಸ್ತಿತ್ವವನ್ನು ಹೊಂದಿತ್ತು. (ಉದಾ : ಅರಿ–ಅಱಿ ; ಇರಿ–ಇಱಿ ; ಬಾಳೆ–ಬಾೞೆ ; ಕಳೆ–ಕೞೆ). ಕಾಲಕ್ರಮದಲ್ಲಿ ನಾಲ್ಕು ಸ್ವತಂತ್ರ ಧ್ವನಿಮಾಗಳಲ್ಲಿ ಱ್ ಮತ್ತು ೞ್ ಧ್ವನಿಮಾ ಳ್ ಮತ್ತು ರ್ ಧ್ವನಿಮಾಗಳಲ್ಲಿ ಸಂಯೋಜನೆಗೊಂಡು ರ್ ಮತ್ತು ಳ್ ಧ್ವನಿಮಾಗಳು ಉಳಿದಿವೆ. ಅಂತೆಯೇ ಹಳಗನ್ನಡದಲ್ಲಿ ಪ್ ಒಂದೇ ಧ್ವನಿಮಾ ಇತ್ತು. ಆದರೆ ಇಂದು ಪ್ ಧ್ವನಿಮಾ ಜೊತೆಗೆ ಹ್ ಧ್ವನಿಮಾವೂ ಬೆಳೆದಿದೆ. (ಉದಾ: ಪಾಡು–ಹಾಡು ; ಪುಲಿ–ಹುಲಿ). ಹೀಗೆ ಕನ್ನಡ ಧ್ವನಿಮಾ ವ್ಯವಸ್ಥೆಯಲ್ಲಿ ಧ್ವನಿಮಾಗಳ ಸಂಖ್ಯೆಯಲ್ಲಿ ಕಂಡುಬರುವ ವ್ಯತ್ಯಾಸವನ್ನೇ 'ಧ್ವನಿಮಾ ವಿಕಾಸ' ಎಂದು ಕರೆದಿರುವುದು.

ಧ್ವನಿಮಾ ವಿಕಾಸ ಹಾಗೂ ವರ್ಗೀಕರಣ

ಬಹುಶಃ ಯಾವುದೇ ಭಾಷೆಯ ಧ್ವನಿಮಾ ವ್ಯವಸ್ಥೆ (Phonemic System) ಯಲ್ಲಿ ಧ್ವನಿಮಾಗಳ ಬದಲಾವಣೆಗಳು ಇಲ್ಲದಿಲ್ಲ. ಭಾಷೆ ಬೆಳೆದುಬಂದ ಜಾಯಮಾನ, ಭಾಷೆಯ ಚರಿತ್ರೆ, ರಚನೆ, ಭಾಷೆಯ ಸಾಮಾಜಿಕ ಹಾಗೂ ಸಾಂಸ್ಕೃತಿಕಸ್ತರ ಅಲ್ಲದೆ ಭಾಷಾ ಬಳಕೆಯ ಹಿನ್ನೆಲೆಯಲ್ಲಿ ಆಯಾ ಭಾಷೆಯ ಧ್ವನಿಮಾ ವ್ಯವಸ್ಥೆಯಲ್ಲಿ ಹಲವು ಬಗೆಯಲ್ಲಿ ಧ್ವನಿಮಾ ವಿಕಾಸತೆಯನ್ನು ಕಾಣಬಹುದು. ಧ್ವನಿಮಾ ವಿಕಾಸದ ಅಧ್ಯಯನದ ಅನುಕೂಲಕ್ಕಾಗಿ ಪ್ರಾಚೀನ ಭಾಷಾ ಪಂಡಿತರೂ, ವ್ಯಾಕರಣಕಾರರೂ ತಮ್ಮದೇ ಆದ ದೃಷ್ಟಿಯಲ್ಲಿ ಧ್ವನಿಮಾ ವಿಕಾಸದ ಹಂತಗಳನ್ನು ವಿವರಿಸಿದ್ದಾರೆ. ಆದಕ್ಕೆ ಮುಖ್ಯವಾಗಿ ಧ್ವನಿಮಾಗಳ ಲಕ್ಷಣ, ಸ್ವರೂಪ, ಪ್ರಾಚೀನರ

ತಿಳುವಳಿಕೆಯನ್ನು ಆಧಾರವಾಗಿಟ್ಟುಕೊಂಡು ಧ್ವನಿಮಾಗಳ ವಿಕಾಸವನ್ನು ಪ್ರಧಾನವಾಗಿ ಮೂರು ವರ್ಗಗಳಲ್ಲಿ ವಿಂಗಡಿಸಿದ್ದಾರೆ. ಅವು :

೧. ಸ್ವರ ಧ್ವನಿಮಾಗಳು
೨. ವ್ಯಂಜನ ಧ್ವನಿಮಾಗಳು
೩. ಸಂಧ್ಯಕ್ಷರ ಧ್ವನಿಮಾಗಳು

೧. ಸ್ವರ ಧ್ವನಿಮಾಗಳು

ಧ್ವನಿಮಾ ವ್ಯವಸ್ಥೆಯಲ್ಲಿ ಸ್ವರಗಳನ್ನು ಮಾತ್ರ ಧ್ವನಿಮಾಗಳೆಂದು ಪರಿಗಣಿಸಲ್ಪಟ್ಟರೆ ಅವೇ 'ಸ್ವರ ಧ್ವನಿಮಾಗಳು'. ಧ್ವನಿಮಾ ವಿಕಾಸದಲ್ಲಿ ಸ್ವರ ಧ್ವನಿಮಾಗಳು ಪಾಲ್ಗೊಂಡಲ್ಲಿ ಅದನ್ನು 'ಸ್ವರ ಧ್ವನಿಮಾ ವಿಕಾಸ' ಎಂದು ಕರೆಯಬಹುದು. ಜಗತ್ತಿನ ಎಲ್ಲಾ ಭಾಷೆಗಳಲ್ಲೂ ಸ್ವರಧ್ವನಿಮಾಗಳು ಕಂಡುಬರುವುದು ಸಾಮಾನ್ಯ. ಆದರೆ ಆಯಾ ಭಾಷೆಯ ರಚನೆಗೆ ತಕ್ಕಂತೆ ಸ್ವರ ಧ್ವನಿಮಾಗಳ ಸಂಖ್ಯೆಯಲ್ಲಿ ವ್ಯತ್ಯಾಸವನ್ನು ಕಾಣಬಹುದು. ಕೆಲವು ಪ್ರಮುಖ ಭಾಷಾ ವೈಜ್ಞಾನಿಕ ತತ್ತ್ವಗಳನ್ನು ಆಧರಿಸಿ ಸ್ವರ ಧ್ವನಿಮಾಗಳನ್ನು ವರ್ಗೀಕರಿಸಬಹುದು. ಇಲ್ಲಿ ಮುಖ್ಯವಾಗಿ ನಾಲ್ಕು ವೈಜ್ಞಾನಿಕ ತತ್ತ್ವಗಳನ್ನು ಸ್ವರ ಧ್ವನಿಮಾಗಳ ವರ್ಗೀಕರಣಕ್ಕೆ ಪರಿಗಣಿಸಿದೆ. ಅವು :

(i) ಓಷ್ಠಸ್ಥಿತಿ (Lip position) ತುಟಿಗಳ ಸ್ಥಿತಿ
(ii) ಜಿಹ್ವೋನ್ನತಿ (Height of the tongue) ನಾಲಗೆಯ ಎತ್ತರ
(iii) ಜಿಹ್ವಾಪ್ರಗತಿ (Advancement of the tongue) ನಾಲಗೆಯ ಪ್ರಗತಿ
(iv) ಉಚ್ಚಾರಣಾವಧಿ (Duration) ಕಾಲಾವಧಿ

ಸ್ವರ ಧ್ವನಿಮಾಗಳ ವರ್ಗೀಕರಣಕ್ಕೆ ಅನುವಾಗುವ ಪ್ರಮುಖ ತತ್ತ್ವಗಳಲ್ಲಿ ತುಟಿಗಳ ಸ್ಥಿತಿಯೂ ಒಂದು. ಸ್ವರಗಳ ಉಚ್ಚಾರಣೆಯಲ್ಲಿ ತುಟಿ ಮುಖ್ಯ ಪಾತ್ರವಹಿಸುತ್ತದೆ. ಕೆಲವು ಸ್ವರಗಳ ಉಚ್ಚಾರಣೆಯಲ್ಲಿ ತುಟಿ ಗೋಳಾಕಾರವಾಗಿದ್ದೂ, ಮತ್ತೆ ಕೆಲವು ಸ್ವರಗಳ ಉಚ್ಚಾರಣೆಯಲ್ಲಿ ತುಟಿ ಗೋಳಾಕಾರವಾಗಿರುವುದಿಲ್ಲ. ತುಟಿಯ ಸ್ಥಿತಿಯನ್ನು ಆಧರಿಸಿ ಎರಡು ತೆರನಾದ ಸ್ವರ ಧ್ವನಿಮಾಗಳನ್ನು ಗುರುತಿಸಬಹುದು. ಯಾವ ಸ್ವರ ಧ್ವನಿಮಾಗಳ ಉಚ್ಚಾರದಲ್ಲಿ ತುಟಿಗಳು ಗೋಳಾಕಾರದಲ್ಲಿ ಇರುತ್ತವೆಯೋ ಅಂತಹ ಸ್ವರ ಧ್ವನಿಮಾಗಳನ್ನು "ಗೋಳಸ್ವರ ಧ್ವನಿಮಾ" (Rounded vowel phonemes)ಗಳು ಎಂದು ಕರೆಯಲಾಗುವುದು. ಅಂತೆಯೇ ಯಾವ ಸ್ವರಗಳ ಧ್ವನಿಮಾ ಉಚ್ಚಾರದಲ್ಲಿ ತುಟಿಗಳು ಗೋಳಾಕಾರದಲ್ಲಿ ಇರುವುದಿಲ್ಲವೋ ಅಂತಹ ಸ್ವರ ಧ್ವನಿಮಾಗಳನ್ನು "ಅಗೋಳಸ್ವರ ಧ್ವನಿಮಾ (Un-rounded vowel phonemes)ಗಳು ಎಂದು ಕರೆಯಲಾಗುವುದು. ತುಟಿಗಳ

ಆಕಾರವನ್ನು ಮಾತ್ರ ಆಧರಿಸಿ ಸ್ವರ ಧ್ವನಿಮಾಗಳನ್ನು ವರ್ಗೀಕರಿಸಿದೆ. ಅ. ಇ. ಎ. ಅಗೋಳಸ್ವರ ಧ್ವನಿಮಾಗಳಾದರೆ. ಉ.ಒ. ಗೋಳಸ್ವರ ಧ್ವನಿಮಾಗಳಾಗಿವೆ.

ಸಾಮಾನ್ಯವಾಗಿ ಯಾವುದೇ ಭಾಷೆಯ ಧ್ವನಿಗಳ ಉಚ್ಚಾರಣೆಯಲ್ಲಿ ನಾಲಿಗೆ ಬಹು ಪ್ರಮುಖ ಪಾತ್ರವನ್ನು ಪಡೆದಿವೆ. ಸ್ವರಗಳ ಉಚ್ಚಾರದಲ್ಲಿ ನಾಲಿಗೆಯ ಎತ್ತರ ಪ್ರಧಾನವಾದುದು. ಸ್ವರಗಳ ಉಚ್ಚಾರಣೆಯಲ್ಲಿ ಶ್ವಾಸಕೋಶದಿಂದ ಹೊರ ಬರುವ ಉಸಿರು ಧ್ವನ್ಯಂಗದಲ್ಲಿ ಯಾವ ಅಡ್ಡಿ ಆತಂಕಗಳಿಗೂ ಒಳಗಾಗದು. ಅಲ್ಲದೆ ಹಾಗೆ ಬರುವ ಉಸಿರಿಗೆ ನಾಲಿಗೆ ಯಾವ ತೆರನಾದ ತಡೆಯನ್ನೂ ಉಂಟುಮಾಡುವುದಿಲ್ಲ. ಆದರೆ ನಾಲಿಗೆಗೆ ಸ್ವರದ ಉಚ್ಚಾರಣಾ ಸಮಯದಿ ಆಯಾ ಸ್ವರಗಳಿಗೆ ಹೊಂದಿಕೊಂಡಂತೆ ತನ್ನ ಎತ್ತರವನ್ನು ಬದಲಾಯಿಸಿಕೊಳ್ಳುವ ಸಾಮರ್ಥ್ಯ ಉಂಟು. ಸ್ವರ ಉಚ್ಚಾರಣೆಯಲ್ಲಿ ನಾಲಿಗೆಯ ಎತ್ತರವನ್ನು ಆಧರಿಸಿ ಸ್ವರಗಳನ್ನು ಸಾಮಾನ್ಯವಾಗಿ ನಾಲ್ಕು [ಸಂವೃತ (close) ; ಅರ್ಧ ಸಂವೃತ (half close) ; ವಿವೃತ (open) ; ಅರ್ಧ ವಿವೃತ (half open)] ರೀತಿಯಲ್ಲೂ ಇಲ್ಲವೆ ಏಳು [ಉನ್ನತ (high) ; ನಿಮ್ನೋನ್ನತ (lower high) ; ಉನ್ನತ ಮಧ್ಯ (higher mid) ; ನಡುಮಧ್ಯ (mean mid) ; ನಿಮ್ನತರ ಮಧ್ಯ (lower mid) ; ಉನ್ನತ ನಿಮ್ನ (higher low) : ನಿಮ್ನ (low)] ರೀತಿಯಲ್ಲೂ ವಿಭಾಗಿಸಬಹುದು. ಕನ್ನಡದ ಸ್ವರ ಧ್ವನಿಮಾಗಳನ್ನು ನಾಲಿಗೆಯ ಎತ್ತರದ ದೃಷ್ಟಿಯಲ್ಲಿ ಮೂರು ಮುಖ್ಯ ಗುಂಪುಗಳಾಗಿ ಮಾಡಬಹುದು. ಅವು ಹೀಗಿವೆ ; ಉನ್ನತ ಧ್ವನಿಮಾಗಳು—ಇ ; ಉ ; ಉನ್ನತ ಮಧ್ಯ ಧ್ವನಿಮಾಗಳು—ಎ ; ಒ ಹಾಗೂ ನಿಮ್ನ ಧ್ವನಿಮಾ—ಅ.

ಸ್ವರ ಧ್ವನಿಮಾಗಳನ್ನು ನಾಲಿಗೆಯ ಎತ್ತರವನ್ನು ಆಧರಿಸಿ ಹಲವು ತೆರನಾಗಿ ವರ್ಗೀಕರಿಸುವಂತೆಯೇ ನಾಲಿಗೆಯ ಪ್ರಗತಿಯನ್ನು ಆಧಾರವಾಗಿಟ್ಟುಕೊಂಡು ಸ್ವರ ಧ್ವನಿಮಾಗಳನ್ನು ಮೂರು ಬಗೆಯಲ್ಲಿ ವರ್ಗೀಕರಿಸಬಹುದು. ಸ್ವರಗಳ ಉಚ್ಚಾರಣೆಯಲ್ಲಿ ಜಿಹ್ವಾ ಪ್ರಗತಿ ಬಹುಗಮನಾರ್ಹ ಅಂಶ. ಯಾವ ಸ್ವರಗಳ ಉಚ್ಚಾರಣೆಯಲ್ಲಿ ನಾಲಿಗೆಯ ಅಗ್ರಭಾಗವು ಬಹು ಪ್ರಧಾನಪಾತ್ರವಹಿಸುತ್ತದೊ ಅಂತಹ ಸ್ವರಗಳೇ 'ಅಗ್ರಸ್ವರ' (Front vowels)ಗಳು. ಯಾವ ಸ್ವರಗಳ ಉಚ್ಚಾರಣೆಯಲ್ಲಿ ನಾಲಿಗೆಯ ಪಶ್ಚಭಾಗ ಮುಖ್ಯ ಪಾತ್ರವಹಿಸುತ್ತದೊ ಅಂತಹ ಸ್ವರಗಳೇ 'ಪಶ್ಚಸ್ವರ' (Back vowels)ಗಳು. ಅಂತೆಯೇ ಸ್ವರಗಳ ಉಚ್ಚಾರಣೆಯಲ್ಲಿ ನಾಲಿಗೆಯ ಮಧ್ಯಭಾಗ ಮಧ್ಯ ತಾಲುವಿನ ಕಡೆಗೆ ಸಾಗಿ ಮಧ್ಯಬಿಂದುವಿನಲ್ಲಿಯೇ ಸ್ವರಗಳನ್ನು ಉಚ್ಚರಿಸಲು ಸಾಧ್ಯ. ಇಂತಹ ಮಧ್ಯಸ್ಥಿತಿಯ ಉಚ್ಚರಿತ ಸ್ವರಗಳೇ 'ಮಧ್ಯ ಸ್ವರ' (Central vowels)ಗಳು. ಕನ್ನಡದಲ್ಲಿ ಇ ; ಎ ಅಗ್ರಸ್ವರ ಧ್ವನಿಮಾ ; ಉ ; ಒ ಪಶ್ಚಸ್ವರ ಧ್ವನಿಮಾ ಹಾಗೂ ಅ ಮಧ್ಯಸ್ವರ ಧ್ವನಿಮಾಗಳಾಗಿವೆ.

ಸ್ವರಧ್ವನಿಮಾಗಳ ಉಚ್ಚಾರಣೆಗೆ ತೆಗೆದುಕೊಳ್ಳುವ ಕಾಲಾವಧಿಯ ಆಧಾರದ ಮೇಲೆ ಸ್ವರಧ್ವನಿಮಾಗಳನ್ನು ಎರಡು ಪ್ರಧಾನ ಗುಂಪುಗಳಾಗಿ ಗುರುತಿಸಬಹುದು.

ಸ್ವರಧ್ವನಿಮಾಗಳ ಉಚ್ಚಾರಣೆಯಲ್ಲಿ ಕಡಿಮೆ ಕಾಲಾವಧಿಯನ್ನು ತೆಗೆದುಕೊಳ್ಳುವ ಸ್ವರಧ್ವನಿಮಾಗಳೇ 'ಹ್ರಸ್ವಸ್ವರ ಧ್ವನಿಮಾ' (Short Vowel phonemes)ಗಳು. ಅಂತೆಯೇ ಉಚ್ಚಾರಣೆಗೆ ಹೆಚ್ಚು ಸಮಯವನ್ನು ತೆಗೆದುಕೊಳ್ಳುವ ಸ್ವರಧ್ವನಿಮಾಗಳೇ 'ದೀರ್ಘಸ್ವರಧ್ವನಿಮಾ' (Long Vowel phonemes)ಗಳು. ಅ; ಇ; ಉ; ಎ; ಒ–ಇವು ಐದು ಹ್ರಸ್ವಸ್ವರ ಧ್ವನಿಮಾಗಳಾದರೆ; ಆ; ಈ; ಊ; ಏ; ಓ–ಇವು ಐದು ಕನ್ನಡದ ದೀರ್ಘಸ್ವರ ಧ್ವನಿಮಾಗಳು.

೨. ವ್ಯಂಜನ ಧ್ವನಿಮಾಗಳು :

ಯಾವುದೇ ಭಾಷೆಯ ಧ್ವನಿಮಾ ವ್ಯವಸ್ಥೆಯಲ್ಲಿ ವ್ಯಂಜನಗಳನ್ನು ಮಾತ್ರ ಧ್ವನಿಮಾಗಳೆಂದು ಪರಿಗಣಿಸಲ್ಪಟ್ಟರೆ ಅವೇ 'ವ್ಯಂಜನ ಧ್ವನಿಮಾ'ಗಳು. ಧ್ವನಿಮಾ ವಿಕಾಸದಲ್ಲಿ ವ್ಯಂಜನ ಧ್ವನಿಮಾಗಳು ಕಂಡುಬಂದಲ್ಲಿ ಅವನ್ನು 'ವ್ಯಂಜನ ಧ್ವನಿಮಾ ವಿಕಾಸ' ಎಂದು ಕರೆಯಬಹುದು. ಸಾಮಾನ್ಯವಾಗಿ ಜಗತ್ತಿನ ಎಲ್ಲಾ ಭಾಷೆಗಳಲ್ಲೂ ವ್ಯಂಜನ ಧ್ವನಿಮಾಗಳನ್ನು ಕಾಣಬಹುದು. ಆಯಾ ಭಾಷೆಯ ರಚನೆ ಹಾಗೂ ಜಾಯಮಾನಕ್ಕೆ ತಕ್ಕಂತೆ ವ್ಯಂಜನ ಧ್ವನಿಮಾಗಳ ಸಂಖ್ಯೆಯಲ್ಲಿ ವ್ಯತ್ಯಾಸ ಉಂಟು. ಪ್ರಮುಖ ಭಾಷಾವೈಜ್ಞಾನಿಕ ತತ್ವಗಳನ್ನು ಆಧರಿಸಿ ವ್ಯಂಜನ ಧ್ವನಿಮಾಗಳನ್ನು ಮುಖ್ಯವಾಗಿ ನಾಲ್ಕು ವೈಜ್ಞಾನಿಕ ತತ್ವಗಳ ಅಡಿಯಲ್ಲಿ ಪಟ್ಟಿಮಾಡಿದೆ. ಅವು :

(i) ಉಚ್ಚಾರಣಾ ರೀತಿ ತತ್ತ್ವ (Principle of manner of articulation)

(ii) ಉಚ್ಚಾರಣಾ ಸ್ಥಾನ ತತ್ತ್ವ (Principle of point/place of articulation)

(iii) ಸ್ವರತಂತು ತತ್ವ (Principle of Vocal Chords)

(iv) ಶ್ವಾಸಬಲ/ಮಹಾಪ್ರಾಣತ್ವ ತತ್ತ್ವ (Principle of airstream/aspiration)

ವ್ಯಂಜನ ಧ್ವನಿಮಾಗಳ ಉಚ್ಚಾರಣಾ ವಿಧಾನದ ರೀತಿನೀತಿಗಳನ್ನೂ; ಅವುಗಳ ಉಚ್ಚಾರಣಾ ಸ್ಥಾನ, ಕರಣ ಹಾಗೂ ಪ್ರಯತ್ನಗಳನ್ನೂ ಆಧರಿಸಿ ವ್ಯಂಜನ ಧ್ವನಿಮಾಗಳನ್ನು ವರ್ಗೀಕರಿಸಿದೆ. ಸಾಮಾನ್ಯವಾಗಿ ಜಗತ್ತಿನ ಯಾವ ಭಾಷೆಯಲ್ಲೇ ಆಗಲಿ ಸ್ವರಧ್ವನಿಮಾಗಳಿಗಿಂತ ವ್ಯಂಜನ ಧ್ವನಿಮಾಗಳು ಹೆಚ್ಚಾಗಿದೆ. ಉಚ್ಚಾರಣೆಯ ದೃಷ್ಟಿಯಿಂದ ಸ್ವರಧ್ವನಿಮಾಗಳನ್ನು ವ್ಯಂಜನ ಧ್ವನಿಮಾಗಳೊಡನೆ ಹೋಲಿಸಿದರೆ ವ್ಯಂಜನ ಧ್ವನಿಮಾಗಳ ಉಚ್ಚಾರಣಾ ರೀತಿ ಸ್ವರ ಧ್ವನಿಮಾಗಳ ಉಚ್ಚಾರಣೆಗಿಂತ ಬಹು ಸುಲಭವಾಗಿರುವುದು. ಇದು ವ್ಯಂಜನ ಧ್ವನಿಮಾಗಳ ಸುಲಭವಾದ ಉಚ್ಚಾರಣಾ ಪ್ರಭುತ್ವಕ್ಕೆ ಕಾರಣವಾಗಿದೆ. ಅಲ್ಲದೆ ಭಾಷೆಗಳಲ್ಲಿ ಕಂಡುಬರುವ ಧ್ವನಿಮಾಗಳಲ್ಲಿನ ಸ್ವರ ಸಾಮ್ಯತೆಗಿಂತ ಅಧಿಕವಾಗಿ ವ್ಯಂಜನ ಸಾಮ್ಯತೆಯೇ ಅಧಿಕ

ವಾಗಿರುವುದೂ ಒಂದು ಕಾರಣವಾಗಿದೆ. ಧ್ವನ್ಯಂಗಗಳ ಪಾತ್ರ ವ್ಯಂಜನ ಧ್ವನಿಮಾಗಳ ಶಾಸ್ತ್ರೀಯ ವರ್ಗೀಕರಣಕ್ಕೆ ಅಗತ್ಯ. ಧ್ವನ್ಯಂಗಗಳ ವಿವಿಧ ಕಾರ್ಯವನ್ನು ಅವಲಂಭಿಸಿಯೇ ಹಾಗೂ ಉತ್ಪಾದನಾಂಗಗಳ ಸ್ಥಿತಿಯನ್ನು ಆಧರಿಸಿಯೇ ವ್ಯಂಜನ ಧ್ವನಿಮಾಗಳನ್ನು ವಿಂಗಡಿಸಿಕೊಂಡಿರುವುದು.

ವ್ಯಂಜನ ಧ್ವನಿಮಾಗಳು ಗಾಳಿಯ ಸಹಾಯದಿಂದ ಭಿನ್ನರೀತಿಯಲ್ಲಿ ಉತ್ಪಾದನೆಯಾಗುವುದನ್ನು ಉಚ್ಚಾರಣಾರೀತಿತತ್ತ್ವ ಸ್ಪಷ್ಟವಾಗಿ ವ್ಯಕ್ತಪಡಿಸುವುದು. ವ್ಯಂಜನ ಉಚ್ಚಾರಣೆಯಲ್ಲಿ ಶ್ವಾಸಕೋಶದಿ ಬರುವ ಉಸಿರು ಯಾವ ತೆರನಾಗಿ ಯಾವ ಸ್ಥಳಗಳಲ್ಲಿ ಹೇಗೆ ಅಡ್ಡಿಗೆ ಒಳಗಾಗಿ ಧ್ವನಿಗಳನ್ನು ಉತ್ಪಾದಿಸುತ್ತದೆ ಎನ್ನುವುದೇ ಉಚ್ಚಾರಣಾರೀತಿತತ್ತ್ವದ ವಸ್ತು ಹಾಗೂ ಮುಖ್ಯ ಗುರಿ. ಪ್ರತಿಯೊಂದು ವ್ಯಂಜನ ಧ್ವನಿಮಾಗಳ ಉಚ್ಚಾರಣಾ ಕ್ರಮ ಬೇರೆ, ಬೇರೆಯೇ. ಅಂದರೆ ವ್ಯಂಜನಗಳ ಉಚ್ಚಾರಣಾ ಪ್ರಯತ್ನ ಭಿನ್ನವೇ. ಎಲ್ಲಾ ವ್ಯಂಜನಗಳ ಉಚ್ಚಾರಣೆ ಭಾಷೆಯಲ್ಲಿ ಒಂದೇ ತೆರನಾಗಿರುವುದಿಲ್ಲ. ಉಚ್ಚಾರಣಾ ರೀತಿ ತತ್ತ್ವದ ಪ್ರಕಾರ ಕನ್ನಡದ ವ್ಯಂಜನ ಧ್ವನಿಮಾಗಳನ್ನು ಆರು ಮುಖ್ಯ ವರ್ಗಗಳಲ್ಲಿ ಪಟ್ಟಿ ಮಾಡಿದೆ ಅವು ಇಂತಿವೆ:

೧. ಸ್ಪರ್ಶ ಧ್ವನಿಮಾಗಳು (Stop or plosive phonemes)

ಪ್ ಬ್ ತ್ ದ್ ಟ್ ಡ್ ಚ್ ಜ್ ಕ್ ಗ್

ಫ್ ಭ್ ಥ್ ಧ್ ಠ್ ಢ್ ಛ್ ಝ್ ಖ್ ಘ್

೨. ಅನುನಾಸಿಕ ಧ್ವನಿಮಾಗಳು (Nasal phonemes)

ಮ್ ನ್ ಣ್

೩. ಸಂಘರ್ಷ ಧ್ವನಿಮಾಗಳು (Fricative phonemes)

ಸ್ ಶ್ ಷ್ ಹ್

೪. ಪಾರ್ಶ್ವಿಕ ಧ್ವನಿಮಾಗಳು (Lateral phonemes)

ಲ್ ಳ್

೫. ಕಂಪಿತ ಧ್ವನಿಮಾಗಳು (Rolled or trill phonemes)

ರ್

೬. ಅರ್ಧ ಸ್ವರಧ್ವನಿಮಾಗಳು (Semi vowel or Friction less continuant phonemes)

ವ್ ಯ್

ಉಚ್ಚಾರಣಾ ಸ್ಥಾನತತ್ತ್ವ ವ್ಯಂಜನ ಧ್ವನಿಮಾಗಳ ನಿರ್ದೇಶನಕ್ಕೆ ಬಹು ಮುಖ್ಯವಾದುದು. ಉಚ್ಚಾರಣಾ ಸ್ಥಾನತತ್ತ್ವ ಕೂಡಾ ಉಚ್ಚಾರಣಾ ರೀತಿ ತತ್ತ್ವದಂತೆಯೇ ಕೆಲವು ಪ್ರಮುಖ ನಿಗದಿತ ಕ್ರಮಗಳಿಂದ ಕೂಡಿದೆ. ಶ್ವಾಸಕೋಶದಿಂದ ಹೊರಬರುವ ಉಸಿರು ಪ್ರಯತ್ನಪೂರ್ವಕವಾಗಿ ಯಾವ ಯಾವ ಜಾಗಗಳಲ್ಲಿ

ತಡೆಯುತ್ತಾ ವ್ಯಂಜನ ಧ್ವನಿಗಳನ್ನು ಉತ್ಪಾದಿಸುತ್ತದೆ ಎಂಬುದೇ ಈ ತತ್ತ್ವದ ಮುಖ್ಯ ವಸ್ತು ಹಾಗೂ ಉದ್ದೇಶ. ಧ್ವನಿಗಳ ವರ್ಗೀಕರಣದಲ್ಲಿ, ಉಚ್ಚಾರಣಾ ಕರಣಗಳು ಹಾಗೂ ಧ್ವನ್ಯಂಗಗಳ ಧ್ವನಿ ಉಚ್ಚಾರಣಾ ಸ್ಥಾನಗಳೂ ಬಹುಮುಖ್ಯ ವಾದುವು. ಎಲ್ಲ ಧ್ವನಿಗಳ ಉಚ್ಚಾರಣಾಸ್ಥಾನಗಳೂ ಒಂದೇ ಆಗಿರುವುದಿಲ್ಲ. ಪ್ರತಿಯೊಂದು ಧ್ವನಿ/ಧ್ವನಿಮಾಗಳ ಉಚ್ಚಾರಣಾಸ್ಥಾನ ಬೇರೆ ಬೇರೆಯೇ. ಕನ್ನಡದ ವ್ಯಂಜನ ಧ್ವನಿಮಾಗಳನ್ನು ಉಚ್ಚಾರಣಾಸ್ಥಾನ ತತ್ತ್ವದನ್ವಯ ಆರು ಪ್ರಮುಖ ವರ್ಗಗಳಲ್ಲಿ ವಿಂಗಡಿಸಬಹುದು. ಅವು ಇಂತಿವೆ:

೧. ಓಷ್ಠ್ಯ/ದ್ವಯೋಷ್ಠ್ಯ ಧ್ವನಿಮಾಗಳು (Labial/Bilabial Phonemes)

ಪ್ ಬ್ ಮ್ ವ್

ಫ್ ಭ್

೨. ದಂತ್ಯ ಧ್ವನಿಮಾಗಳು (Dental phonemes)

ತ್ ದ್ ನ್ ಸ್ ಲ್ ರ್

ಥ್ ಧ್

೩. ಮೂರ್ಧನ್ಯ ಧ್ವನಿಮಾಗಳು (Retroflex phonemes)

ಟ್ ಡ್ ಣ್ ಷ್ ಳ್

ಠ್ ಢ್

೪. ತಾಲವ್ಯ ಧ್ವನಿಮಾಗಳು (Palatal phonemes)

ಚ್ ಜ್ ಶ್ ಯ್

ಛ್ ಝ್

೫. ಕಂಠ್ಯ ಧ್ವನಿಮಾಗಳು (Velar phonemes)

ಕ್ ಗ್

ಖ್ ಘ್

೬. ಕಾಕಲ್ಯ ಧ್ವನಿಮಾ (Glottal phoneme)

ಹ್

ಸ್ವರಯಂತ್ರದ ಸ್ವರತಂತುಗಳ ಕಾರ್ಯವನ್ನು, ತತ್ತ್ವವನ್ನು ಆಧರಿಸಿ ವ್ಯಂಜನ ಧ್ವನಿಗಳನ್ನು ಸಾಮಾನ್ಯವಾಗಿ ಅಘೋಷ ಮತ್ತು ಘೋಷ ವ್ಯಂಜನ ಧ್ವನಿಗಳೆಂದು ಎರಡು ಪ್ರಮುಖ ವರ್ಗಗಳಾಗಿ ವಿಂಗಡಿಸಬಹುದು ಯಾವ ವ್ಯಂಜನಗಳ ಉಚ್ಚಾರಣೆಯಲ್ಲಿ, ಗಾಳಿಯು ರಭಸಕ್ಕೆ ಸ್ವರತಂತುಗಳಲ್ಲಿ ಕಂಪನ ವಿರುವುದಿಲ್ಲವೊ ಅವು ಅಘೋಷ (Voiceless Sounds) ಧ್ವನಿಗಳು. ಸ್ವರತಂತುಗಳಲ್ಲಿ ಕಂಪನವಿಲ್ಲದ ಧ್ವನಿಗಳಿವು. ಕನ್ನಡದ ಅಘೋಷಧ್ವನಿಮಾಗಳು ಹೀಗಿವೆ: ಪ್ ಫ್ ತ್ ಥ್ ಟ್ ಠ್ ಚ್ ಛ್ ಕ್ ಖ್ ಸ್ ಷ್ ಶ್ ಹ್ ಯಾವ

ವ್ಯಂಜನಗಳ ಉಚ್ಚಾರಣೆಯಲ್ಲಿ ಗಾಳಿಯು ರಭಸಕ್ಕೆ ಸ್ವರತಂತುಗಳಲ್ಲಿ ಕಂಪನ. ವಿರುತ್ತದೋ ಅವೇ ಘೋಷ (Voiced sounds) ಧ್ವನಿಗಳು. ಅಂದರೆ ಗಾಳಿಯು ರಭಸಕ್ಕೆ ಕಂಪಿಸುವ ಸ್ಥಿತಿಯಿಂದ ಸ್ವರತಂತುಗಳಲ್ಲಿ ಉತ್ಪನ್ನವಾಗುವ ಧ್ವನಿಗಳಿವು. ಬ್ ಭ್ ದ್ ಧ್ ಡ್ ಢ್ ಜ್ ಝ್ ಗ್ ಘ್ ವ್ ನ್ ಣ್ ಲ್ ಳ್ ರ್ ವ್ ಮತ್ತು ಯ್ ಕನ್ನಡದ ಘೋಷಧ್ವನಿಮಾಗಳು.

ವ್ಯಂಜನಗಳ ಉಚ್ಚಾರಣೆಯಲ್ಲಿನ ಶ್ವಾಸಬಲವನ್ನು ಅಥವಾ ಮಹಾ ಪ್ರಾಣತ್ವವನ್ನು ಆಧರಿಸಿ ವ್ಯಂಜನಧ್ವನಿಗಳನ್ನು ಅಲ್ಪ ಪ್ರಾಣ ಮಹಾಪ್ರಾಣ ಧ್ವನಿಗಳು ಎಂದು ಎರಡು ವಿಭಾಗ ಮಾಡಬಹುದು ವ್ಯಂಜನ ಉಚ್ಚಾರಣೆಯಲ್ಲಿ ಉಸಿರು ಹೆಚ್ಚು ಶಕ್ತಿಯುತವಾಗಿ ಇಲ್ಲವೇ ಹೆಚ್ಚು ಶ್ವಾಸಬಲದಿ ಉಚ್ಚರಿತವಾಗುವ ವ್ಯಂಜನಗಳೇ ಮಹಾಪ್ರಾಣ ಧ್ವನಿಗಳು (Aspirated Sounds) ಸಾಮಾನ್ಯವಾಗಿ ಧ್ವನಿಗಳ ಉಚ್ಚಾರಣೆಯಲ್ಲಿ ಹೆಚ್ಚು ಉಸಿರನ್ನು ಒತ್ತಡದಿ ಹೊರಕ್ಕೆ ಕಳುಹಿಸಿದಾಗ ಉಚ್ಚರಿತವಾಗುವ ಧ್ವನಿಗಳಿವು. ಕನ್ನಡದಲ್ಲಿ ಫ್ ಭ್ ಥ್ ಧ್ ಠ್ ಢ್ ಛ್ ಝ್ ಖ್ ಘ್—ಮಹಾಪ್ರಾಣ ಧ್ವನಿಮಾಗಳು. ಯಾವ ವ್ಯಂಜನಗಳ ಉಚ್ಚಾರಣೆಯಲ್ಲಿ ಉಸಿರು ಹೆಚ್ಚು ಶಕ್ತಿಯುತವಾಗಿ ಇಲ್ಲವೇ ಹೆಚ್ಚು ಶ್ವಾಸಬಲದಿ ಉಚ್ಚರಿತವಾಗದ ವ್ಯಂಜನಗಳೇ ಅಲ್ಪಪ್ರಾಣ (Non-aspirated/Unaspirated Sounds) ಧ್ವನಿಗಳು. ವ್ಯಂಜನ ಉಚ್ಚಾರದಲ್ಲಿ ಗಾಳಿಯು ಒತ್ತಡ ಹೆಚ್ಚಾಗಿ ಇಲ್ಲದ ಧ್ವನಿಗಳಿವು ಸಾಮಾನ್ಯವಾಗಿ ಇವುಗಳ ಉಚ್ಚಾರದಲ್ಲಿ ಶ್ವಾಸಬಲ ಕಡಿಮೆ ಇರುತ್ತದೆ. ಪ್ ಬ್ ತ್ ದ್ ಟ್ ಡ್ ಚ್ ಜ್ ಕ್ ಗ್—ಕನ್ನಡದ ಅಲ್ಪಪ್ರಾಣ ಧ್ವನಿಮಾಗಳು.

3. ಸಂಧ್ಯಕ್ಷರ ಧ್ವನಿಮಾಗಳು :

ನಾಲಗೆಯು ಸ್ಥಾನದಲ್ಲಿ ಉಂಟಾಗುವ ಬದಲಾವಣಾ ಸ್ಥಿತಿಯಿಂದ ಉಚ್ಚರಿತ ವಾಗುವ ಸ್ವರವೇ "ಸಂಧ್ಯಕ್ಷರ" (Diphthong) ಒಂದು ಸ್ವರ ಉಚ್ಚಾರಣಾ ಸ್ಥಿತಿಯಿಂದ ಮತ್ತೊಂದು ಸ್ವರದ ಉಚ್ಚಾರಣಾ ಸ್ಥಿತಿಗೆ ಸಾಗಿ ಉಚ್ಚರಿತವಾಗುವ ಸ್ವರಗಳಿವು. ಇಂತಹ ಸ್ವರಗಳ (ಸಂಧ್ಯಕ್ಷರಗಳ) ಉಚ್ಚಾರಣೆಯಲ್ಲಿ ಜಿಹ್ವೆಯು ಸ್ಥಿತಿ ಬಹುಗಮನಾರ್ಹವಾದುದು. ಒಂದು ಸ್ವರದ ಸ್ಥಿತಿಯಿಂದ ಇನ್ನೊಂದು ಸ್ವರದ ಸ್ಥಿತಿಗೆ ಬದಲಾಗುವುದು. ಮೇರಿಯೋ ಎ. ಪೈ ಮತ್ತು ಫ್ರಾಂಕ್ ಗೈನರ್ ಅವರ "A union of two vowels pronounced in one syllable"—ವ್ಯಾಖ್ಯೆ ಸಂಧ್ಯಕ್ಷರದ ಸ್ವರೂಪ ಹಾಗೂ ಪರಿಸರ ಭಾವವನ್ನು ನಿಖರವಾಗಿ ತಿಳಿಸುತ್ತದೆ. "Simple vowels are called monophthongs as opposed to diphthongs which include both a vowel and a glide" ಎಂಬ ವಿಕ್ಟೋರಿಯಾ ಫ್ರಾಂಕಿನ್ ಮತ್ತು ರಾಬರ್ಟ್ ರಾಡಮನ್ ಅವರ ವ್ಯಾಖ್ಯೆ ಸಮಂಜಸ ವಾಗಿದೆ. ಸಾಮಾನ್ಯವಾಗಿ ಸಂಧ್ಯಕ್ಷರಗಳ ಅಸ್ತಿತ್ವದಲ್ಲಿ ಎರಡು ಭಿನ್ನಸ್ವರಗಳು

ಕೂಡಿರುತ್ತವೆ ಸಂಧ್ಯಕ್ಷರಗಳ ಉಚ್ಚಾರಣಾ ಕ್ರಮದಲ್ಲಿ ಜಿಹ್ವಾಸ್ಥಿತಿ ಆಯಾ ಸ್ವರಗಳ ಉಚ್ಚಾರಣಾ ಸ್ಥಿತಿಗೆ ತಕ್ಕಂತೆ ಬದಲಾಗುತ್ತದೆ. ಆ ಎರಡು ಸ್ವರಗಳ ಮಧ್ಯೆ ಯಾವುದೇ ತೆರನಾದ ವಿರಾಮವೂ ಏರ್ಪಡದು. ಆ ಭಿನ್ನಸ್ವರಗಳ ಉಚ್ಚಾರಣೆ ಏಕಸ್ವರದ ಉಚ್ಚಾರಣೆ ಎಂದೇ ಭಾಸವಾಗುವುದು. ಇಂತಹ ಜೋಡು ಸ್ವರಗಳೇ ಸಂಧ್ಯಕ್ಷರಗಳು. 'ಐ' ಮತ್ತು 'ಔ' ಕನ್ನಡದ ಸಂಧ್ಯಕ್ಷರ ಧ್ವನಿಮಾಗಳು.

ಉಚ್ಚಾರಣಾ ರೀತಿಯನ್ನೂ ನಾಲಿಗೆಯ ಸ್ಥಿತಿಯನ್ನೂ ಸಂಧ್ಯಕ್ಷರದ ಲಕ್ಷಣವನ್ನು ಗಮನಿಸಿ ಕನ್ನಡದ ಸಂಧ್ಯಕ್ಷರ ಧ್ವನಿಮಾಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. (೧) ಆರೋಹಿ ಸಂಧ್ಯಕ್ಷರ ಧ್ವನಿಮಾ ಮತ್ತು (೨) ಅವರೋಹಿ ಸಂಧ್ಯಕ್ಷರ ಧ್ವನಿಮಾ. ಸಂಧ್ಯಕ್ಷರದ ಉಚ್ಚಾರಣೆಯಲ್ಲಿ ದನಿ ಏರುಮುಖವಾಗಿದ್ದರೆ ಅಂತಹ ಸಂಧ್ಯಕ್ಷರ ಧ್ವನಿಮಾವನ್ನು 'ಆರೋಹಿ ಸಂಧ್ಯಕ್ಷರ ಧ್ವನಿಮಾ (Rising diphthong phonemes)ಗಳೆಂದೂ, ಸಂಧ್ಯಕ್ಷರದ ಉಚ್ಚಾರಣೆಯಲ್ಲಿ ದನಿ ಇಳಿಮುಖವಾಗಿದ್ದರೆ ಅಂತಹ ಸಂಧ್ಯಕ್ಷರ ಧ್ವನಿಮಾವನ್ನು 'ಅವರೋಹಿ ಸಂಧ್ಯಕ್ಷರ ಧ್ವನಿಮಾ (Falling diphthong phonemes)ಗಳೆಂದೂ ಭಾಷಾವಿಜ್ಞಾನಿಗಳು ಕರೆದಿದ್ದಾರೆ. ಕನ್ನಡದಲ್ಲಿ 'ಐ' ಮತ್ತು 'ಔ' ಅನುಕ್ರಮವಾಗಿ ಆರೋಹಿ, ಅವರೋಹಿ ಸಂಧ್ಯಕ್ಷರ ಧ್ವನಿಮಾಗಳು.

ಧ್ವನಿಮಾ ವಿಕಾಸದ ಹಂತಗಳು ಹಾಗೂ ವೈಶಿಷ್ಟ್ಯ :

ಒಂದು ಭಾಷೆಯ ಚಾರಿತ್ರಿಕ ಅಧ್ಯಯನ (ಭಾಷಾ ಬೆಳವಣಿಗೆ/ಬದಲಾವಣೆ/ವಿಕಾಸ)ದಲ್ಲಿ, ಸಾಮಾನ್ಯವಾಗಿ ಆ ಭಾಷೆಯ ಧ್ವನಿಮಾಗಳ ವ್ಯವಸ್ಥೆಯಲ್ಲಿ ಕಂಡು ಬರುವ ಧ್ವನಿಮಾಗಳ ವಿಕಾಸ ಬಹುಗಮನಾರ್ಹವಾದುದು. ಸಹಜವಾಗಿ ಧ್ವನಿಮಾಗಳ ವಿಕಾಸ ಆಯಾ ಭಾಷೆಯ ಚರಿತ್ರೆ, ಸ್ವರೂಪ, ಜಾಯಮಾನ ಹಾಗೂ ರಚನಾ ವ್ಯವಸ್ಥೆಗೆ ಹೊಂದಿಕೊಂಡಿರುತ್ತದೆ. ಭಾಷಾ ವಿಜ್ಞಾನಿಗಳು ಧ್ವನಿಮಾಗಳ ಬೆಳವಣಿಗೆಯನ್ನೂ, ಭಾಷೆಯ ಧ್ವನಿಮಾ ವ್ಯವಸ್ಥೆಯನ್ನೂ, ಭಾಷಿಕ ರಚನೆಯನ್ನೂ ಧ್ವನಿಮಾಗಳ ಕಾರ್ಯ ರೀತಿಯನ್ನೂ, ಭಾಷೆಯಲ್ಲಿ ಧ್ವನಿಮಾಗಳ ಬಳಕೆಯನ್ನೂ, ಇದರ ಜೊತೆಗೆ ಆ ಭಾಷೆ ಬೆಳೆದು ಬಂದ ಕಾಲ ಹಾಗೂ ಆ ಭಾಷೆಯ ಸಾಹಿತ್ಯ ಕೃತಿಗಳನ್ನು ಸೂಕ್ಷ್ಮವಾಗಿ ಗಮನಿಸಿ ಭಾಷೆಯಲ್ಲಿ ಧ್ವನಿಮಾ ವಿಕಾಸದ ಹಲವು ಮುಖ್ಯ ಹಂತಗಳನ್ನು ನಿರ್ಣಯಿಸಿದ್ದಾರೆ. ಕಾಲದ ಪರಿಗಣನೆಯಿಲ್ಲದೆ ಭಾಷಾ ಬದಲಾವಣೆಯನ್ನು ನಿಖರವಾಗಿ ನಿರ್ದೇಶಿಸುವುದು ಬಹು ಪ್ರಯಾಸದ ಕೆಲಸ. ಹಾಗೇನಾದರೂ ಭಾಷಾ ಬದಲಾವಣೆ/ಬೆಳವಣಿಗೆಯನ್ನು ನಿರ್ದೇಶಿಸಿದರೆ ಅದು ಶಾಸ್ತ್ರೀಯವೂ ಅಲ್ಲ; ಸಮಂಜಸವೂ ಅಲ್ಲ. ಭಾಷೆಯ ಪ್ರಾಚೀನತೆಯನ್ನು ನಿರ್ಣಯಿಸಲು ಇರುವ ಒಂದೇ ಒಂದು ಪ್ರಮುಖ ಮಾರ್ಗ ಆ ಭಾಷೆಯಲ್ಲಿ ಲಭ್ಯವಿರುವ ಸಾಹಿತ್ಯ ಕೃತಿಗಳು. ಆದ್ದರಿಂದ ಭಾಷೆಯ ಬೆಳವಣಿಗೆಯಲ್ಲಿ ಧ್ವನಿಮಾ

ವಿಕಾಸತೆಯನ್ನು ಕಾಲ ಹಾಗೂ ಆ ಭಾಷೆಯ ಸಾಹಿತ್ಯ ಕೃತಿಗಳ ಹಿನ್ನಲೆಯಲ್ಲಿ ವಿವೇಚಿಸಿರುವುದು (ವಿವೇಚಿಸುವುದು) ಯುಕ್ತ. ಮೊದಮೊದಲು ಧ್ವನಿಮಾ ವ್ಯವಸ್ಥೆಯಲ್ಲಿ ಕಂಡುಬರುವ ಧ್ವನಿಮಾ ಸಂಖ್ಯೆಯನ್ನು ಮಾತ್ರ ಗಮನಿಸಿ ಧ್ವನಿಮಾ ಬದಲಾವಣೆಯನ್ನು ವಿವರಿಸಲಾಗುತ್ತಿತ್ತು. ಆದರೆ ಇತ್ತೀಚಿಗೆ ಆಧುನಿಕ ಭಾಷಾ ವಿಜ್ಞಾನಿಗಳು, ಧ್ವನಿಮಾಗಳ ಸಂಖ್ಯೆ, ಧ್ವನಿಮಾಗಳ ವಿತರಣೆಯಲ್ಲಿ ಕಂಡುಬರುವ ವಿಶಿಷ್ಟತೆ ಹಾಗೂ ಧ್ವನಿಮಾಗಳ ಕಾರ್ಯವನ್ನು ಆಧರಿಸಿ ಧ್ವನಿಮಾ ವಿಕಾಸವನ್ನು ವೈಜ್ಞಾನಿಕವಾಗಿ ವಿವರಿಸಿದ್ದಾರೆ.

ಆಧುನಿಕ ಭಾಷಾವಿಜ್ಞಾನಿಗಳ ನಿರ್ಣಾಯಕದ ರೀತ್ಯ, ಕನ್ನಡ ಭಾಷೆಯ ಧ್ವನಿಮಾ ವಿಕಾಸವನ್ನು ಮುಖ್ಯವಾಗಿ ಎರಡು ರೀತಿಯಲ್ಲಿ ನಿರ್ಣಯಿಸಬಹುದು.

೧. ಕನ್ನಡ ಧ್ವನಿಮಾ ವ್ಯವಸ್ಥೆಯಲ್ಲಿ ಧ್ವನಿಮಾಗಳ ಸಂಖ್ಯೆಯಲ್ಲಿ ಆದ ಬದಲಾವಣೆ/ವ್ಯತ್ಯಾಸ.

೨. ಕನ್ನಡ ಭಾಷೆಯಲ್ಲಿ ಕಂಡುಬರುವ ಧ್ವನಿಮಾಗಳ ವಿತರಣೆಯಲ್ಲಿ ಆದ ಬದಲಾವಣೆ/ವ್ಯತ್ಯಾಸ.

ಈ ಎರಡು ಮುಖ್ಯ ನಿರ್ಣಾಯಕ ಅಂಶಗಳನ್ನು ಕನ್ನಡ ಭಾಷೆಯ ಚಾರಿತ್ರಿಕ ಬೆಳವಣಿಗೆಯ ನಾಲ್ಕು ಮುಖ್ಯ ಘಟ್ಟ (ಪೂರ್ವದ ಹಳಗನ್ನಡ; ಹಳಗನ್ನಡ; ನಡುಗನ್ನಡ ಮತ್ತು ಹೊಸ/ಆಧುನಿಕ ಕನ್ನಡ)ಗಳಲ್ಲಿ ವಿವೇಚಿಸಿದೆ. ಅಂದರೆ ಕನ್ನಡ ಧ್ವನಿಮಾ ವಿಕಾಸದ ಪ್ರಮುಖ ಹಂತಗಳನ್ನು ಕನ್ನಡ ಸಾಹಿತ್ಯಕ ಭಾಷೆ ಹಾಗೂ ಕನ್ನಡ ಭಾಷೆ ಬೆಳೆದುಬಂದ ಕಾಲವನ್ನು ಆಧರಿಸಿದೆ. ಜೊತೆಗೆ ಆಧುನಿಕ ಕನ್ನಡಕ್ಕೆ ಕನ್ನಡ ಆಡುಮಾತಿನ ರೂಪವನ್ನೂ ಗಮನಿಸಲಾಗಿದೆ.

೧. ಕನ್ನಡ ಧ್ವನಿಮಾ ವ್ಯವಸ್ಥೆಯಲ್ಲಿ ಧ್ವನಿಮಾಗಳ ಸಂಖ್ಯೆಯಲ್ಲಿ ಆದ ಬದಲಾವಣೆ (ವ್ಯತ್ಯಾಸ) :

ಕನ್ನಡ ಧ್ವನಿಮಾ ವ್ಯವಸ್ಥೆಯಲ್ಲಿ ಕಂಡುಬರುವ ಧ್ವನಿಮಾಗಳ ಸಂಖ್ಯೆಯನ್ನು ಗಮನಿಸಿ ಕನ್ನಡ ಧ್ವನಿಮಾ ವಿಕಾಸವನ್ನು ಇಲ್ಲಿ ನಿರ್ಣಯಿಸಲು ಪ್ರಯತ್ನಿಸಿದೆ. ಕನ್ನಡ ಧ್ವನಿಮಾಗಳ ಲಕ್ಷಣವನ್ನೂ, ಉಚ್ಚಾರಣಾ ರೀತಿಯನ್ನು ಗಮನಿಸಿ ಧ್ವನಿಮಾ ವ್ಯವಸ್ಥೆಯಲ್ಲಿನ ಧ್ವನಿಮಾಗಳ ಸಂಖ್ಯೆಯಲ್ಲಿ ಆದ ಬದಲಾವಣೆಯನ್ನು ಮೂರು ಪ್ರಮುಖ ಉಪವರ್ಗಗಳಲ್ಲಿ ನಿರೂಪಿಸಿದೆ.

(i) ಸ್ವರ ಧ್ವನಿಮಾಗಳ ಸಂಖ್ಯೆಯಲ್ಲಿ ಆದ ಬದಲಾವಣೆ.

(ii) ವ್ಯಂಜನ ಧ್ವನಿಮಾಗಳ ಸಂಖ್ಯೆಯಲ್ಲಿ ಆದ ಬದಲಾವಣೆ.

(iii) ಸಂಧ್ಯಕ್ಷರ ಧ್ವನಿಮಾಗಳ ಸಂಖ್ಯೆಯಲ್ಲಿ ಆದ ಬದಲಾವಣೆ.

ಮೇಲಿನ ಪ್ರಮುಖ ಮೂರು ಉಪವರ್ಗಗಳಲ್ಲಿ ಕಂಡುಬರುವ ಧ್ವನಿಮಾಗಳ ಬದಲಾವಣೆಯನ್ನು ಈ ಕೆಳಕಂಡಂತೆ ಪಟ್ಟಿ ಮಾಡಿದೆ.

ಪಟ್ಟಿ ೧: ಸ್ವರ ಧ್ವನಿಮಾಗಳ ಸಂಖ್ಯೆಯಲ್ಲಿ ಆದ ಬದಲಾವಣೆ

ಪೂರ್ವದ ಹಳಗನ್ನಡ 1	ಹಳಗನ್ನಡ 2	ನಡುಗನ್ನಡ 3	ಆಧುನಿಕ ಕನ್ನಡ 4
ಇಈ ಉಊ ಎಏ ಒಓ ಅಆ	ಇಈ ಉಊ ಎಏ ಒಓ ಅಆ	ಇಈ ಉಊ ಎಏ ಒಓ ಅಆ	ಇಈ ಉಊ ಎಏ ಒಓ ಅಆ

ಪಟ್ಟಿ ೨: ವ್ಯಂಜನ ಧ್ವನಿಮಾಗಳ ಸಂಖ್ಯೆಯಲ್ಲಿ (ಕಂಡುಬರುವ) ಆದ ಬದಲಾವಣೆ

ಪೂರ್ವದ ಹಳಗನ್ನಡ 1	ಹಳಗನ್ನಡ 2	ನಡುಗನ್ನಡ 3	ಆಧುನಿಕ ಕನ್ನಡ 4
ಪ್ಬ್ ತ್ದ್ ಟ್ಡ್ ಚ್ಜ್ ಕ್ಗ್ ಮ್ ನ್ ಣ್ ಞ್ ಙ್ ಸ್ ಹ್ ಲ್ ೞ್ ಳ್ ರ್ ಱ್ ವ್ ಯ್	ಪ್ಬ್ ತ್ದ್ ಟ್ಡ್ ಚ್ಜ್ ಕ್ಗ್ ಫ್ಭ್ ಥ್ಧ್ ಠ್ಢ್ ಛ್ಝ್ ಖ್ಘ್ ಮ್ ನ್ ಣ್ ಸ್ ಷ್ ಶ್ ಲ್ ಳ್ ೞ್ ರ್ ಱ್ ವ್ ಯ್	ಪಬ ತದ ಟಡ ಚಜ ಕಗ ಫಭ ಥಧ ಠಢ ಛಝ ಖಘ ಮ ನ ಣ ಸ ಷ ಶ ಹ ಲ ಳ ರ ವ ಯ	ಪಬ ತದ ಟಡ ಚಜ ಕಗ ಫಭ ಥಧ ಠಢ ಛಝ ಖಘ ಮ ನ ಣ ಫ಼ ಸ ಷ ಶ ಜ಼ ಹ ಲ ಳ ರ ವ ಯ

ಪಟ್ಟಿ ೩: ಸಂಧ್ಯಕ್ಷರ ಧ್ವನಿಮಾಗಳ ಸಂಖ್ಯೆಯಲ್ಲಿ (ಕಂಡುಬರುವ) ಆದ ಬದಲಾವಣೆ

ಪೂರ್ವದ ಹಳಗನ್ನಡ 1	ಹಳಗನ್ನಡ 2	ನಡುಗನ್ನಡ 3	ಆಧುನಿಕ ಕನ್ನಡ 4
ಐ ಔ	ಐ ಔ	ಐ ಔ	ಐ ಔ

೨. ಕನ್ನಡ ಭಾಷೆಯಲ್ಲಿ ಕಂಡುಬರುವ ಧ್ವನಿಮಾ ವಿತರಣೆ (ಪ್ರಸಾರ)ಯಲ್ಲಿ ಆದ ಬದಲಾವಣೆ/ವ್ಯತ್ಯಾಸ :

ಸಾಮಾನ್ಯವಾಗಿ ಜಗತ್ತಿನ ಯಾವುದೇ ಭಾಷೆಯಲ್ಲಾಗಲೀ ಧ್ವನಿಮಾಗಳ ವಿತರಣೆ ಆಯಾ ಭಾಷೆಯ ಆಕೃತಿಮಾ ಹಾಗೂ ಭಾಷಾ ಸ್ವರೂಪಕ್ಕೆ ಅನ್ವಯಿಸಿರುತ್ತದೆ. ಧ್ವನಿಮಾ ವಿತರಣೆಯೇ ಭಾಷೆಯ ಆಕೃತಿ ಮತ್ತು ಅದರ ಬಳಕೆಗೆ ಕುರುಹು. ಧ್ವನಿಮಾಗಳ ವ್ಯವಸ್ಥಿತ ವಿತರಣೆಗೆ ಹೊಂದಿಕೊಂಡಂತೆ ಭಿನ್ನ ಹಾಗೂ ವಿಶಿಷ್ಟ ಆಕೃತಿಮಾಗಳನ್ನು ಭಾಷೆಯಲ್ಲಿ ನಿರ್ಣಯಿಸುವುದು ವಾಡಿಕೆ, ಧ್ವನಿಮಾ ವಿತರಣೆಯ ತತ್ತ್ವ ಹಾಗೂ ವಿಧಾನ ಆಯಾ ಭಾಷೆಯ ಜಾಯಮಾನಕ್ಕೆ ತಕ್ಕಂತಿರುತ್ತದೆ. ಭಾಷಾವಿಜ್ಞಾನಿಗಳ ಪ್ರಕಾರ ಪ್ರಸಾರ/ವಿತರಣೆ ಎಂದರೆ, the occurrence of phonemes in a linear sequence of phonemes. ಈ ಮಾತು ಧ್ವನಿಮಾ ಪರಿಸರ (ಪ್ರಸಾರ)ದ ಅಗತ್ಯವನ್ನು ತಿಳಿಸುತ್ತದೆ.

ಕನ್ನಡ ಭಾಷೆಯ ಧ್ವನಿಮಾಗಳ ವಿತರಣೆಯನ್ನು, ಧ್ವನಿಮಾಗಳ ಲಕ್ಷಣ, ಕಾರ್ಯ ಹಾಗೂ ಉಚ್ಚಾರಣಾ ವಿನ್ಯಾಸವನ್ನು ಆಧರಿಸಿ ಮೂರು ಮುಖ್ಯ ಗುಂಪುಗಳಾಗಿ ವಿಂಗಡಿಸಬಹುದು. ಅವು ಹೀಗಿವೆ.

1. ಸ್ವರ ಧ್ವನಿಮಾಗಳ ಪ್ರಸಾರ
   (Dtstribution of vowel phonemes)
2. ವ್ಯಂಜನ ಧ್ವನಿಮಾಗಳ ಪ್ರಸಾರ
   (Distribution of consonant phonemes)
3. ಸಂಧ್ಯಕ್ಷರ ಧ್ವನಿಮಾಗಳ ಪ್ರಸಾರ
   (Distribution of Dipthong phonemes)

ಧ್ವನಿಮಾ ಪ್ರಸಾರದ ಅನುಕೂಲತೆಯ ದೃಷ್ಟಿಯಿಂದ, ಕನ್ನಡ ಭಾಷೆಯಲ್ಲಿರುವ ಭಿನ್ನ ಧ್ವನಿಮಾಗಳ ವಿತರಣೆಯನ್ನು ಕನ್ನಡ ಭಾಷೆಯ ಆಕೃತಿಮಾದಲ್ಲಿ ಬರುವ ಧ್ವನಿಮಾದ ಸ್ಥಾನದ ಆಧಾರದಿಂದ ಮೂರು ಮುಖ್ಯ ಧ್ವನಿಮಾ ಸ್ಥಾನಗಳನ್ನು ನಿರ್ಣಯಿಸಬಹುದು. ಅವು—

(ಅ) ಆದಿ ಧ್ವನಿಮಾ ಸ್ಥಾನ
(ಆ) ಮಧ್ಯ ಧ್ವನಿಮಾ ಸ್ಥಾನ
(ಇ) ಅಂತ್ಯ ಧ್ವನಿಮಾ ಸ್ಥಾನ

ಇಲ್ಲಿ ಧ್ವನಿಮಾ ಸ್ಥಾನ ನಿರ್ಣಯ, ಕನ್ನಡ ಭಾಷೆಯಲ್ಲಿರುವ ಆಕೃತಿಮಾಗಳಲ್ಲಿ ಬರುವ ಧ್ವನಿಮಾಗಳ ಸ್ಥಾನ ಹಾಗೂ ಧ್ವನಿಮಾಗಳಲ್ಲಿನ ಪರಿಸರಕ್ಕೆ ಹೆಚ್ಚು ಆದ್ಯತೆ ನೀಡಿದೆ ಅಂದರೆ ಆಕೃತಿಮಾಗಳಲ್ಲಿನ ಧ್ವನಿಮಾದ ಮುಂದಿನ ಅಥವಾ ಹಿಂದಿನ ಧ್ವನಿಮಾವನ್ನು ಪರಿಗಣಿಸಲಾಗಿದೆ. ಧ್ವನಿಮಾ ವಿತರಣೆ ಆಕೃತಿಮಾದ ವಿಶಿಷ್ಟತೆಯನ್ನೂ, ಭಾಷೆಯ ವಮೌಲ್ಯತೆಯನ್ನೂ ಸ್ಪಷ್ಟಪಡಿಸುತ್ತವೆ. ಕನ್ನಡದ ಧ್ವನಿಮಾ

ಪ್ರಸಾರ ಆಯಾ ಕಾಲದ (ಪೂರ್ವದ ಹಳಗನ್ನಡ; ಹಳಗನ್ನಡ ನಡುಗನ್ನಡ ಮತ್ತು ಆಧುನಿಕ ಕನ್ನಡ) ಕನ್ನಡ ಭಾಷಾರಚನೆಗೆ ತಕ್ಕಂತಿದೆ. ಧ್ವನಿಮಾಗಳ ಸ್ಥಾನ ವಿನ್ಯಾಸ ಆಯಾ ಕಾಲದ ಭಾಷೆಯ ವಿಶಿಷ್ಟತೆಗೆ ನಿದರ್ಶನ ಅಲ್ಲದೆ ಭಾಷಾರಚನೆಯ ವಿನ್ಯಾಸ ಇದರ (ಧ್ವನಿಮಾ ಪ್ರಸಾರ) ಮೂಲಕ ಪೂರ್ಣಾರ್ಥವನ್ನು ಪಡೆದುಕೊಂಡಿದೆ. ಧ್ವನಿಮಾ ಪ್ರಸಾರವೇ ಭಾಷೆಯಲ್ಲಿ ಆಕೃತಿಮಾ ರಚನೆಯ ಮೂಲಭೂತ ಜೀವಾಳ ಭಿನ್ನ ಆಕೃತಿಮಾಗಳ ಪ್ರಸಾರವೇ ಒಂದು ಭಾಷೆಯ ರಚನಾ ವೈಶಿಷ್ಟ್ಯಕ್ಕೆ ಕಾರಣ. ಭಾಷೆಯ ಮೌಲ್ಯ ಹಾಗೂ ಸ್ವರೂಪ ಆ ಭಾಷೆಯ ಧ್ವನಿಮಾ ಮತ್ತು ಆಕೃತಿಮಾ ಪ್ರಸಾರದ ಮೇಲೆ ಅವಲಂಬಿತವಾಗಿದೆ.

ಕನ್ನಡ ಭಾಷೆಯ ಧ್ವನಿಮಾ ಪ್ರಸಾರ ವಿನ್ಯಾಸವನ್ನು ಮುಂದಿನ ಪುಟದಲ್ಲಿರುವಂತೆ ಪಟ್ಟಿಮಾಡಿದೆ. ಪ್ರತಿಯೊಂದು ಪಟ್ಟಿ[1] ಕನ್ನಡ ಧ್ವನಿಮಾ ಪ್ರಸಾರವನ್ನು ನಾಲ್ಕು ಭಿನ್ನ ಘಟ್ಟಗಳಲ್ಲಿ ನಿದರ್ಶನ ಮೂಲಕ ವಿವರಿಸುವಂತಿದೆ.

---

1 ಪಟ್ಟಿಗಳು (ಪಟ್ಟಿ ೧ ಸ್ವರ ಧ್ವನಿಮಾಗಳ ಪ್ರಸಾರ; ಪಟ್ಟಿ ೨ ವ್ಯಂಜನ ಧ್ವನಿಮಾಗಳ ಪ್ರಸಾರ ಮತ್ತು ಪಟ್ಟಿ ೩ ಸಂಧ್ಯಕ್ಷರ ಧ್ವನಿಮಾಗಳ ಪ್ರಸಾರ) ಕನ್ನಡದ ಧ್ವನಿಮಾ ಪರಿಸರವನ್ನು ಸ್ಪಷ್ಟವಾಗಿ ನಿರ್ದೇಶಿಸುತ್ತಿವೆ. ನಿದರ್ಶನ ಪಟ್ಟಿಗಳಲ್ಲಿ ಒಂದೆರಡು ಉದಾಹರಣೆಗಳನ್ನು ಮಾತ್ರ ಕೊಟ್ಟಿದೆ. ಧ್ವನಿಮಾ ಸ್ಥಾನ ನಿರ್ದೇಶನವೇ ಇಲ್ಲಿಯ ಮುಖ್ಯ ಗುರಿ. ಆದರೆ ವಿವರಣಾತ್ಮಕ ಧ್ವನಿಮಾ ಪರಿಸರ ವಿಶ್ಲೇಷಣೆಗೆ ಇಲ್ಲಿ ತೊಡಗಿಲ್ಲ, ಹಾಗಾಗಿ ಸೂಕ್ಷ್ಮವಾಗಿ ಪರಿಸರವನ್ನು ಗಮನಿಸಿ ಧ್ವನಿಮಾ ನಿರ್ದೇಶನದ ಉದಾಹರಣೆಗಳನ್ನು ಪಟ್ಟಿಸಿಲ್ಲ.

ಪಟ್ಟಿ ೧: ಸ್ವರ ಧ್ವನಿಮಾಗಳ ಪ್ರಸಾರ/ವಿತರಣೆ

ಸ್ವರ ಧ್ವನಿಮಾಗಳು	ಪೂರ್ವದ ಹಳಗನ್ನಡ			ಹಳಗನ್ನಡ			ನಡುಗನ್ನಡ			ಆಧುನಿಕ ಕನ್ನಡ		
	ಆದಿ	ಮಧ್ಯ	ಅಂತ್ಯ	ಆದಿ	ಮಧ್ಯ	ಅಂತ್ಯ	ಆದಿ	ಮಧ್ಯ	ಅಂತ್ಯ	ಆದಿ	ಮಧ್ಯ	ಅಂತ್ಯ
ಇ	×	×	×	×	×	×	×	×	×	×	×	×
ಈ	×	×	×	×	×	×	×	×	×	×	×	×
ಎ	×	×	×	×	×	×	×	×	×	×	×	×
ಏ	×	×	×	×	×	×	×	×	×	×	×	×
ಅ	×	×	×	×	×	×	×	×	×	×	×	×
ಆ	×	×	×	×	×	×	×	×	×	×	×	×
ಉ	×	×	×	×	×	×	×	×	×	×	×	×
ಊ	×	×	×	×	×	×	×	×	—	×	×	×
ಒ	×	×	—	×	×	—	×	×	—	×	×	—
ಓ	×	×	—	×	×	×	×	×	×	×	×	×

"×" ಚಿಹ್ನೆ ಧ್ವನಿಮಾ (ಸ್ವರ)ಗಳ ಪ್ರಕಾರ ಸ್ಥಾನವನ್ನು ಸೂಚಿಸುತ್ತದೆ

ಪಟ್ಟಿ ೨: ವ್ಯಂಜನ ಧ್ವನಿಮಾಗಳ ಪ್ರಸಾರ/ವಿತರಣೆ

ಧ್ವನಿಮಾಗಳು	ಪೂರ್ವದ ಹಳಗನ್ನಡ			ಹಳಗನ್ನಡ			ನಡುಗನ್ನಡ			ಆಧುನಿಕ ಕನ್ನಡ		
	ಆದಿ	ಮಧ್ಯ	ಅಂತ್ಯ	ಆದಿ	ಮಧ್ಯ	ಅಂತ್ಯ	ಆದಿ	ಮಧ್ಯ	ಅಂತ್ಯ	ಆದಿ	ಮಧ್ಯ	ಅಂತ್ಯ
ಪ್	×	×	—	×	×	—	×	×	—	×	×	—
ಫ್	—	—	—	×	—	—	×	—	—	×	×	—
ಬ್	×	×	—	×	×	—	×	×	—	×	×	—
ಭ್	—	—	—	×	×	—	×	×	—	×	×	—
ತ್	×	×	—	×	×	—	×	×	—	×	×	×
ಥ್	—	—	—	—	×	—	×	×	—	×	×	—
ದ್	×	×	—	×	×	—	×	×	—	×	×	—
ಧ್	—	—	—	×	×	—	×	×	—	×	×	—
ಟ್	×	×	—	×	×	—	×	×	—	×	×	—
ಠ್	—	—	—	—	×	—	×	×	—	×	×	—
ಡ್	×	×	—	×	×	—	×	×	—	×	×	—
ಢ್	—	—	—	×	×	—	×	×	—	×	×	—
ಚ್	×	×	—	×	×	—	×	×	—	×	×	—
ಛ್	—	—	—	×	—	—	×	×	—	×	×	—
ಜ್	×	×	—	×	×	—	×	×	—	×	×	—
ಝ್	—	—	—	×	—	—	×	—	—	×	—	—
ಕ್	×	×	—	×	×	—	×	×	—	×	×	×
ಖ್	—	—	—	×	×	—	×	×	—	×	×	—
ಗ್	×	×	—	×	×	—	×	×	—	×	×	—

ಧ್ವನಿಮಗಳು	ಪೂರ್ವದ ಹಳಗನ್ನಡ			ಹಳಗನ್ನಡ			ನಡುಗನ್ನಡ			ಆಧುನಿಕ ಕನ್ನಡ		
	ಆದಿ	ಮಧ್ಯ	ಅಂತ್ಯ	ಆದಿ	ಮಧ್ಯ	ಅಂತ	ಆದಿ	ಮಧ್ಯ	ಅಂತ್ಯ	ಆದಿ	ಮಧ್ಯ	ಅಂತ
ಫ್	—	—	—	×	—	—	×	×	—	×	×	—
ಮ್	×	×	×	×	×	×	×	×	—	×	×	×
ನ್	×	×	×	×	×	×	×	×	—	×	×	×
ಣ್	—	×	×	—	×	×	—	×	—	—	×	×
ಞ/[ಞ]	—	×	—	—	×	—	—	×	—	—	×	—
ಙ/[ಙ]	—	×	—	—	×	—	—	×	—	—	×	—
ಫ಼್/(f)	—	—	—	—	—	—	—	—	—	×	×	—
ಸ್	×	×	—	×	×	—	×	×	—	×	×	—
ಷ್	—	—	—	—	×	—	×	×	—	×	×	—
ಶ್	—	—	—	×	—	—	×	×	—	×	×	—
ಜ಼್/(z)	—	—	—	—	—	—	—	—	—	×	×	—
ಹ್	×	×	—	—	—	—	×	×	—	×	×	—
ಲ್	×	×	×	×	×	×	×	×	—	×	×	—
ಳ್	—	×	×	×	×	×	—	×	—	—	×	×
ೞ್	—	×	×	—	×	×	—	—	—	—	—	—
ರ್	×	×	×	×	×	×	×	×	—	×	×	×
ಱ್	×	×	×	×	×	×	—	—	—	—	—	—
ವ್	×	×	—	×	×	×	×	×	—	×	×	—
ಯ್	×	×	×	×	×	×	×	×	—	×	×	×

ಸ್ವರ ಧ್ವನಿಮಾಗಳ ಪ್ರಸಾರ ನಿದರ್ಶನಗಳು

ಸ್ವರ ಧ್ವನಿಮಾಗಳು	ಪೂರ್ವದ ಹಳಗನ್ನಡ			ಹಳಗನ್ನಡ			ನಡುಗನ್ನಡ			ಆಧುನಿಕ ಕನ್ನಡ		
	ಆದಿ ಸ್ಥಾನ	ಮಧ್ಯ ಸ್ಥಾನ	ಅಂತ್ಯ ಸ್ಥಾನ	ಆದಿ ಸ್ಥಾನ	ಮಧ್ಯ ಸ್ಥಾನ	ಅಂತ್ಯ ಸ್ಥಾನ	ಆದಿ ಸ್ಥಾನ	ಮಧ್ಯ ಸ್ಥಾನ	ಅಂತ್ಯ ಸ್ಥಾನ	ಆದಿ ಸ್ಥಾನ	ಮಧ್ಯ ಸ್ಥಾನ	ಅಂತ್ಯ ಸ್ಥಾನ
ಇ	ಇದಿರ್	ಮಿನಿ	ಮುನಿ	ಇದಿರ್	ಕಿಡಿ	ಅಕ್ಕಿ	ಇದಿರು	ನಿಜ	ಮುದದಿ	ಇರುಳು	ಕಿಡಿ	ಅಕ್ಕಿ
	ಇರ್ಪ	ಗಿಳಿ	ರೋಹಿಣಿ	ಇಕ್ಕು	ಬಿಲ್	ಪುಲಿ	ಇದು	ದಿನ	ಕೋಟಿ	ಇದು	ಬಿಲ್	ಉರಿ
ಈ	ಈಯೋ	ಕೀರ್ತಿ	ಬೃಹಸ್ಪತೀ	ಈಗಳ್	ಪೀರ್	ಈ'ಕೊಡು'	ಈತ	ಬೀದಿ	ಈ'ಇದು'	ಈತ	ಗೀತ	ಹುಡುಗೀ
	ಈಶ	ಬೀಟಂ	ಕೋಟೀ	ಈಸು	ಮೀನ್	ಯೀ'ಇದು'	ಈಸು	ದೀಸ	ಸ್ತ್ರೀ	ಈಂಟು	ನೀರು	ಸ್ತ್ರೀ
ಎ	ಎನ್ನ	ಕಾಳೆಗ	ಮನೆ	ಎಡೆಬ್	ಚೆಲ್ವು	ಅಡಕೆ	ಎದೆ	ಚಿತ್ರ	ಜಡೆ	ಎದರು	ಕೆರೆ	ಮನೆ
	ಎಱಡು	ಪ್ರಸಾದ	ಕುದುರೆ	ಎರಲೆ	ನೆಲ	ನಡೆ	ಎದುರು	ಬೆದರು	ಜೆಲೆ	ಎಲೆ	ಚೆಲುವು	ತೆರೆ
ಏ	ಏಕ	ಕೇರಿ	ತೊರೇ	ಏವ	ಕೇಳ್	ಏ'ಏನು'	ಏನು	ಬೇಟೆ	ನಾನೇ	ಏಳು	ಜೇನು	ಮೇ
	ಏಟು	ಕೇಳ್	ಪುಣುಸೇ	ಏಸು	ತೇರ್	ವೇ	ಏಳು	ಬೇಗ	ಹೇ	ಏತ	ಬೇಡ	ಬಾರೇ
ಅ	ಅರಸ	ಸಸಿರ	ಕುಲ	ಅಡಿ	ಮನೆ	ಅಕ್ಕ	ಅಪ್ಪ	ಜಪ	ವೇಗ	ಅದು	ಕಡಲು	ಅಕ್ಕ
	ಅಗ್ನಿ	ಕರ್ತಿಕ	ಗಂಗ	ಅರಲ್	ನಡು	ಅಯ್ಯ	ಅಡವಿ	ರಥ	ದಡ	ಅರಸ	ಕತೆ	ಬೇಗ
ಆ	ಆತ	ಆಹಾರ	ಆವರಾ	ಆಗು	ಕಾಲ್	ಆ'ಅದು'	ಆತ	ತಾಪ	ಆ'ಅದು'	ಆತ	ಕಾಲು	ಆ'ಅದು'
	ಆಱು	ಆಯಾತ	ಊರಾ	ಆಲಿಕಲ್	ಪಾಲ್	ಕಾ	ಆಟ	ಮಾತು	ತಾ:ಬಾ	ಆಣೆ	ಹಾಲು	ಬಾ ; ತಾ
ಉ	ಉಪ್ಪು	ಸುರ್ಯ	ಎಟ್ಟು	ಉಣಸು	ಕುಡಿ	ನಗು	ಉಪ್ಪು	ಉಡುಪು	ಇದು	ಉಸಿರು	ಕುಡಿ	ಕೂಸು
	ಉಣ್	ಮುಂದಣ	ಎಂತು	ಉಳಿ	ನುಡಿ	ಎಟ್ಟು	ಉರಿ	ಮುಕುಟ	ನಗು	ಉಡುಪು	ನುಡಿ	ಹುಳು
ಊ	ಊರ್	ಕೂಂತಳ	ನಾಲ್ಕೂ	ಊಡು	ಕೂಡು	ಪೂ	ಊರು	ಲೂಟಿ	—	ಊಟ	ಗೂಡು	ಪೂ
	ಊದು	ಕೂಬ್	ನೆಲ್ಲೂ	ಊರ್	ಪೂಸು		ಊಟ	ಪೂಜೆ		ಊರು	ಮೂರು	
ಒ	ಒಡೆಯು	ಕೊಲೆ	—	ಒಕ್ಕಲ್	ಪೊಸ		ಒಡೆಯ	ಟೊಪ್ಪಿ	—	ಒಡವೆ	ತೊರೆ	—
	ಒಸಗೆ	ಪೊನ್ನು		ಒಂದು	ನೊಸಲ್	—	ಒನಕೆ	ಪೊನ್ನು		ಒಡಯ	ನೊರೆ	
ಓ	ಓಜೆ	ಕೋಟೆ	—	ಓಕುಳಿ	ಕೋಡು	ಓ'ಪ್ರೀತಿಸು'	ಓಕುಳಿ	ಜೋಡಿ	ಬಾರೋ	ಓಕ್ಕಿ	ನೋವು	ಗೋ
	ಓಡು	ಕೋಣಮು		ಓಲೆ	ಸೋಗೆ	ಪೋ	ಓಗರ	ಗೋಣು	ನೀನೋ	ಓಲೆ	ರೋಗ	ಪೋ

ವ್ಯಂಜನ ಧ್ವನಿಮಾಗಳ ಪ್ರಸಾರ ನಿದರ್ಶನಗಳು

ವ್ಯಂಜನ ಧ್ವನಿಮಾಗಳು	ಪೂರ್ವದ ಹಳಗನ್ನಡ			ಹಳಗನ್ನಡ			ನಡುಗನ್ನಡ			ಆಧುನಿಕ ಕನ್ನಡ		
	ಆದಿಸ್ಥಾನ	ಮಧ್ಯಸ್ಥಾನ	ಅಂತ್ಯಸ್ಥಾನ	ಆದಿಸ್ಥಾನ	ಮಧ್ಯಸ್ಥಾನ	ಅಂತ್ಯಸ್ಥಾನ	ಆದಿಸ್ಥಾನ	ಮಧ್ಯಸ್ಥಾನ	ಅಂತ್ಯಸ್ಥಾನ	ಆದಿಸ್ಥಾನ	ಮಧ್ಯಸ್ಥಾನ	ಅಂತ್ಯಸ್ಥಾನ
1	2	3	4	5	6	7	8	9	10	11	12	13
ಪ್	ಪಣ	ಕಾಪು		ಪಗೆ	ಕಾಪು		ಪಿತ	ಜಿಪುಣ		ಪಕ್ಕಿ	ಕಾಪು	
	ಪಾರ್ವ	ಪಾಪವುಮ್	—	ಪಲ್		—	ಪೆಸರು	ದೀಪ	—	ಪಗಡೆ	ಅಪ್ಪ	—
	ಪುಲ್ಲು	ಬೆಳ್ಪು		ಪಾವು	ಮೋಪು		ಪದವಿ	ತಪ		ಪೂ		
ಫ್	—	—	—	ಫಳಂ	—	—	ಫಲ	—	—	ಫಣಿ	ಸಫಲ	—
							ಫಣಿ			ಫಾಲ	ಕಫ	
ಬ್	ಬಡಗ	ಅಬ್ಬೆ		ಬಡ	ಅನಿಬರ್		ಬಿಂದಿಗೆ	ಕೊಂಬೆ		ಬಕ	ಕಬ್ಬು	
	ಬೆಳೆ		—	ಬಾಯ್	ಅರೆಬರ್	—	ಬೆರಳು	ಹಬ್ಬ	—	ಬಿಲ್ಲು	ಕಬಡಿ	—
					ಅಬ್ಬೆ			ಸೊಬಗು		ಬೇಗ		
	ಬೆಳ್ಳಿ	ಪರಬಲ										
ಭ್	—	—	—	ಭೋರ್	ಅಭಿವಂದಿಸಿ	—	ಭೀತಿ	ನಾಭಿ	—	ಭಕ್ತ	ಅಭಯ	—
				ಭಟರ್	ಸಂಭವ		ಭವನ	ಶುಭ		ಭೇದ	ಸಭೆ	
ತ್	ತಡಿ	ದತ್ತಿ		ತಲೆ	ನಾತ		ತೇರು	ಸತಿ		ತನು	ಇತ್ತ	ಚಿತ್
	ತಗಪು	ಪತ್ತಿ	—	ತಾಯ್	ಮಾತು	—	ತುಪ್ಪ	ಮಾತು	—	ತಾಣ	ಜಾತಿ	ಸತ್
	ತಲೆ	ಬತ್ತ		ತೇರ್	ಓತು		ತೋಳು	ಹಿತ		ತೂಗು		ಜಗತ್
ಥ್	—	—	—	—	ತಿಂಥಿಣಿ	—	ಥೋರ	ಸಾರಥಿ	—	ಥಂಡಿ	ಅರ್ಥ	—
					ಕಥೆ		ಥಟ್ಟನೆ	ಕಥೆ		ಥಟ್ಟು	ಪಥ	

1	2	3	4	5	6	7	8	9	10	11	12	13
ದ್	ದೋಃಷಿಗನ್	ಕಾದು		ದಂಟು	ಇದಿರ್	—	ದಿಟ	ನದಿ		ದನ	ಉವರ	
	ದೆವಸ	ಕುದುರೆ	—	ದಾಂಟು	ಮೋದು		ದುಃಡ್ಡು	ಗದೆ	—	ದಾಟು	ಉದ್ದ	—
	ದಿಸೆ	ಅದು					ದವಸ	ಕದ		ದೋಷ		
ಧ್	—	—	—	ಧಗ–ಧಗ	ಸಿಂಧುರ	—	ಧಿಟ	ಅಧೀನ	—	ಧನ	ಅವಧಿ	—
				ಧರಿಸು			ಧನಿಕ	ವಿಧಿ		ಧಾನ್ಯ	ಮಧು	
ಟ್	ಟವಿಳಿ	ಕೋಟೆ	—	ಟೊಣೆ	ಕೋಟಲೆ	—	ಟೂಕಿ	ಕಟಿ	—	ಟಂಕ	ಬೇಟೆ	—
	ಟೀಕು	ತೋಂಟಮ್		ಟೀಕು	ಬೇಟ		ಟೊಪ್ಪಿ	ಲೂಟಿ		ಟೋಪಿ	ಕೋಟೆ	
ಠ್	—	—	—	—	ಟಾಠಡಾ	—	ಠಕ್ಕು	ವಿಠಲ	—	ಠಕ್ಕು	ಕಠಿಣ	—
					ಢಣಂ		ಠಾವು	ಕುಠಾರ		ಠೀವಿ	ಪೀಠ	
ಡ್	ಡಾವಣ	ಒಡೆ	—	ಡವಕೆ	ಅಡು	—	ಡೊಂಕು	ಗರಡಿ	—	ಡಮರುಗ	ಕಡಿ	—
		ಕುಡುವ		ಡೊಂಬ	ನಾಡು		ಡಮರುಗ	ಕಡಲು		ಡುಬ್ಬ	ಕಡ್ಡಿ	
ಢ್	—	—	—	ಢಕ್ಕೆ	ಟಾಠಡಾ	—	ಢಣ	ರೂಢಿ	—	ಢಕ್ಕೆ	ಗಾಢ	—
					ಢಣಂ		ಢಾಲು	ಆಢ್ಯ		ಢಿಕ್ಕಿ	ಮೂಢ	
ಚ್	ಚನ್ನು	ಆಚಾರ	—	ಚಲ್ಲಣ	ಚೊಚ್ಚಲ	—	ಚಿಲ್ಲರೆ	ಕಲ್ಲಿಚೀಲ	—	ಚರಣ	ಆಚೆ	—
	ಚಾಪ	ಕಚ್ಚಿ		ಚಿನ್ನ	ಉರ್ಚು		ಚೆಂಡು	ಆಚಾರ		ಚೋರ	ಕುಚ	
ಛ್	—	—	—	ಛಾಸಿರ	—	—	ಛೀ	ಸ್ವಚ್ಛ	—	ಛತ್ರ	ಲಾಂಛನ	—
				ಛಟೀಲ್			ಛಾಯೆ	ವಾಂಛಿತ		ಛತ್ರಿ	ವಾಂಛಿತ	
ಜ್	ಜವ	ನಿಜ	—	ಜಗಲಿ	ಗಜೆ		ಜಿಹ್ವೆ	ಪೂಜೆ		ಜಗತ್ತು	ಗಾಜು	—
	ಜೋಳ	ಪೂಜೆ		ಜೋಲ್	ಗಜಬು	—	ಜೀತ	ನಿಜ	—	ಜಿಪುಣ	ಅಜ್ಜಿ	
							ಜಗಲಿ	ಮನುಜ				
ಝ್	—	—	—	ಝಲ್ಲರಿ	—	—	ಝಾಮ	—	—	ಝುರಿ	—	—
				ಝೋಂಕಾರ			ಝಳಪಿಸು			ಝುಳ		

ಕ್	ಕಲ	ಕರ್ತಿಕ	—	ಕಣ್	ಒಕುಳಿ	—	ಕೀರ್ತನೆ	ನಾಸಿಕ		ಕಣ್ಣು	ಆಕಾಶ	ವಾಕ್
	ಕಾಳಿಗ	ಅಕಿಲ		ಕೂಡು	ಈಕೆ		ಕೆಲಸ	ಮುಂಕುಟ	—	ಕೆರೆ	ಏಕೆ	ದಿಕ್
							ಕಬ್ಬು	ಈಕೆ		ಕರೆ		
ಖ್	—	—	—	ಖಳ	ಅಖಂಡ		ಖೇಚರ	ನಿಖಿಳ		ಖಗ	ನಖ	
				ಖಟಗ	ಸುಖಂ	—	ಖಾತಿ	ಮುಖ	—	ಖೇದ	ಮುಖ	—
							ಖೂನ	ಸಖಿ			ಅಖಿಲ	
ಗ್	ಗುಡಿ	ದೇಗುಲ		ಗಂಡು	ಆಗಳ್		ಗಿಡ	ಬಾಗಿಲು	—	ಗಜ	ಕಾಗದ	
	ಗಂಡ	ನಾಗರ	—	ಗುಡಿ	ಪೊಗೆ	—	ಗೆಜ್ಜೆ	ನಗರ		ಗಣಪ	ನಗರ	—
		ನಾಲಗೆ										
ಘ್	—	—	—	ಘಳಿಲ್	—	—	ಘಳಿಗೆ	ಜಂಘೆ	—	ಘೋರ	ಮಾಘ	—
				ಘುಂ			ಘಾತ	ವಿಘ್ನ		ಘಟಿ	ಮೇಘ	
ಮ್	ಮಗ	ನಮುಗೆ	ಏಮ್	ಮಸುಳ್	ನಿಮಿರ್	ನಾಮ್	ಮೀನು	ಭೂಮಿ		ಮಗ	ಅಮರ	ಹಾರಮ್
	ಮುದಲ್	ನಮ್ಮ	ತೋಂಟಮ್	ಮಾತು	ಬೆಮರ್	ಗೆಲ್ಲಮ್	ಮೊಸರು	ಚಾಮರ	—	ಮುಗಿಲು	ಸಮ	ಮರಮ್
	ಮಿಗು											
ನ್	ನಡೆ	ನಾನಾ	ತನ್	ನಗು	ಆನೆ	ಬೆನ್	ನೆಂಟು	ವನಿತೆ		ನೊರೆ	ಆನೆ	ಜೇನ್
	ನಾಡು	ಪೊನ್ನು	ದೇವನ್	ನಿಲ್	ನೆನೆ	ಮೀನ್	ನರಕ	ಮನೆ	—	ನೇಮ	ಹಸಿ	ತಿನ್
	ನಾಲ್ಕು	ಮನೆ	ನಲ್ಲನ್				ನುಡಿ	ದಿನ				
ಣ್		ಕೋಣ	ಕಣ್		ತಾಣಂ	ಪಣ್		ಕರುಣೆ			ಅಣೆ	ಮೇಣ್
	—	ತಣೆ	ಮಣ್	—	ಪೆಣ	ಪೂಣ್	—	ಗೇಣು	—	—	ಕುಣಿಕೆ	ಕಾಣ್
		ಪುಣ್ಣಮೆ			ಕುಣಿ	ಕಣ್		ಬಾಣ				

1	2	3	4	5	6	7	8	9	10	11	12	13
ಞ/[ಞ]	—	ಪಚ್ಞವಿ ಅಜ್ಞ	—	—	ಮಿಚ್ಞ (ಮಿಂಚು) ಅಜ್ಞ (ಅಂಜು)	—	—	ಕಚ್ಞ ಸಜ್ಞ	—	—	ಜ್ಞಾನ ಮಿಚ್ಞ	
ಜ಼್/[ಜ಼]	—	ಅಕ್ಜ಼ಣ ಗಗ್ಜ಼	—	—	ಸೋಕುಜ಼ (ಸೋಂಕು) ಪೊಗುಜ಼ (ಪೊಂಗು)	—	—	ಬಿಕಜ಼ ಮಗಜ಼	—	—	ವಜ್ಞ ಸಜ್ಞ	—
ಫ಼್/[f]	—	—	—	—	—	—	—	—	—	ಫ಼ೀಜು ಫ಼ಿರ್ಯಾದಿ	ಕಾಫ಼ಿ ಮಾಫ಼ಿ	—
ಸ್	ಸಾಯಿರ ಸಾವು ಸಾಲವ್	ಬೆಸವ್ ಸೊಸೆ ಪುಣುಸೆ	—	ಸಲವು ಸಿಡಿಲ್ ಸೂಟ್	ಅಸಗ ಪಸಿವು ಕೂಸು	—	ಸಿಡಿಲು ಸುಣ್ಣ ಸಂಬಳ	ಹಸಿವು ಕುಸುಮ ತುಳಸಿ	—	ಸೆಕೆ ಸಾಕು ಸಕ್ಕರೆ	ಆಸೆ ಎಸಿ ದಾಸ	—
ಷ್	—	—	—	—	ದೋಷಿಗನ್	—	ಷೋಡಶ ಷಂಡ	ವೇಷ ವಿಷ ಭಾಷೆ	—	ಷಂಡ ಷರತ್ತು	ಔಷಧ ಉಷ್ಣ	—
ಶ್	—	—	—	ಶಿಲೆ ಶ್ರೀ	—	—	ಶಿರ ಶೂರ ಶಪತ	ದೇಶ ಆಕಾಶ	—	ಶತ ಶಾಪ ಶಿಲೆ	ಕಲಶ ಕೋಶ	—
ಜ಼್/[z]	—	—	—	—	—	—	—	—	—	ಜ಼ೂ ಜ಼ಿಗ್‌ಜ಼ಾಗ್	ಬಜ಼ಾರು ಡಜ಼ನ್ನು	—

ಹ್	ಹಾಡು	ಬಹುಳ		—	—	—	ಹಿಟ್ಟು	ಮಹಮೆ		ಹಕ್ಕಿ	ಲೋಹ	
	ಹಲೆಯಬೆ	ನಹುಸ(ಷ)	—				ಹೊನ್ನು	ನಹುಷ	—	ಹಾಲು	ಬಾಹು	—
							ಹಸುಲೆ	ಗುಹೆ		ಹೂ		
ಲ್	ಲೋಕ	ತಲೆ	ಕಾಲ್	ಲಲ್ಲೆ	ಅಲೆ	ನಿಲ್	ಲೆತ್ತ	ನಾಲಿಗೆ		ಲಜ್ಜೆ	ಎಲೆ	
	ಲಿಕಿತ	ತೊಲೆ	ಕಲ್	ಲೇಸು	ಪುಲಿ	ಕಾಲ್	ಲಾಭ	ಬೆಲೆ	—	ಲೋಹ	ಓಲೆ	—
		ಪಲವ್						ನೆಲ				
ಳ್	—	ಗಿಳಿ	ಒಳ್	ಳಾತ	ಅಳವು	ಕಳ್		ಮೊಸಳೆ		—	ಎಳೆ	ಬಾಳ್
		ಜೋಳ	ಆಳ್		ಪುಳಿ	ತೋಳ್	—	ಬಹಳ	—		ಬಾಳೆ	ಕಳ್
								ಬಳೆ				
ೞ್	—	ಏೞು	ಕೊೞ್	—	ಪಾೞಿ	ಬಾೞ್	—	—	—	—	—	—
		ಕೞನಿ	ಕೇೞ್		ಕುೞಿ	ಪೇೞ್						
ರ್	ರಸ	ಎರಡು	ಊರ್	ರಥ	ಮರ	ನೀರ್	ರಿಪು	ಗುರಿ		ರಕ್ತ	ಬಿರುಕು	ಊರ್
	ರೂಡಿ	ಗೊರವ	ವೆಂಡಿರ್	ರಣ	ಎರಲ್	ನಾರ್	ರೊಕ್ಕ	ಕುವರ	—	ರಾಜ	ಕರು	ನೇಸರ್
		ಪೆರಿಯ	ನೀರ್	ರಮಿಸು	ಅರಿ	ಬೇರ್	ರಣ	ಗುರು		ರೂಪ		
ಱ್	ಱ³ೋಣ	ಕೆಱ³	ಏಱ³	ಱೂಡಾಡು	ಕಱು	ಬಸಿಱ್						
	ಱಟ್ಟ	ತೊಱ³	ತೋಱ³		ಪಾಱು	ನೇಸಱ್	—	—	—	—	—	—
		ನೂಱು		ಏಂಡು								
ವ್	ವರಿಸ	ಇವನ್		ವಾಯಲ್	ಕವಿ	ನಾವ್	ವೆಚ್ಚ	ನವಿಲು		ವಾತ	ಅವ್ವ	
	ವಟಿಕ್ಕೆ	ಕವಿಲೆ	—	ವಿದಿರ್	ತೊವಲ್	ನೀವ್	ವಸ್ತು	ಬಾವುಲಿ	—	ವೇಳೆ	ಕವಿ	—
	ವೊಲ್	ತವು					ವಾಯು	ಬೆವರು		ವೇಗ	ಹಾವು	
ಯ್	ಯದು	ವಯಸಿ	ಮೆಯ್	ಯೋಚಿಸಿ	ಬಯಕೆ	ವೋಯ್	ಯಾತ್ರೆ	ತಾಯಿ		ಯತಿ	ಕಾಯಿ	ಬಾಯ್
	ಯಾ	ಸಾಯಿರ	ತಾಯ್	ಯೀ'ಇದು'	ಕಾಯಲ್	ಬಾಯ್	ಯುವತಿ	ಸಮಯ	—	ಯೋಗ	ಪಯಣ	ಮೇಯ್
	ಯುವ	ಸೇಣಿಯನ್	ನೆಯ್			ನೆಯ್		ಬಯಲು		ಯಾಗ		

ಪಟ್ಟಿ : ೩ ಸಂಧ್ಯಕ್ಷರ ಧ್ವನಿಮಾಗಳ ಪ್ರಸಾರ/ವಿತರಣೆ :

ಸಂಧ್ಯಕ್ಷರ ಧ್ವನಿಮಾಗಳು	ಪೂರ್ವದ ಹಳಗನ್ನಡ			ಹಳಗನ್ನಡ			ನಡುಗನ್ನಡ			ಆಧುನಿಕ ಕನ್ನಡ		
	ಆದಿ	ಮಧ್ಯ	ಅಂತ್ಯ	ಆದಿ	ಮಧ್ಯ	ಅಂತ್ಯ	ಆದಿ	ಮಧ್ಯ	ಅಂತ್ಯ	ಆದಿ	ಮಧ್ಯ	ಅಂತ್ಯ
ಐ	×	—	×	×	×	×	×	×	×	×	×	×
ಔ	×	—	—	×	×	—	×	×	—	×	×	—

ಸಂಧ್ಯಕ್ಷರ ಧ್ವನಿಮಾಗಳ ಪ್ರಸಾರ ನಿದರ್ಶನಗಳು :

ಸಂಧ್ಯಕ್ಷರ ಧ್ವನಿಮಾಗಳು	ಪೂರ್ವದ ಹಳಗನ್ನಡ			ಹಳಗನ್ನಡ			ನಡುಗನ್ನಡ			ಆಧುನಿಕ ಕನ್ನಡ		
	ಆದಿ ಸ್ಥಾನ	ಮಧ್ಯ ಸ್ಥಾನ	ಅಂತ್ಯ ಸ್ಥಾನ	ಆದಿ ಸ್ಥಾನ	ಮಧ್ಯ ಸ್ಥಾನ	ಅಂತ್ಯ ಸ್ಥಾನ	ಆದಿ ಸ್ಥಾನ	ಮಧ್ಯ ಸ್ಥಾನ	ಅಂತ್ಯ ಸ್ಥಾನ	ಆದಿ ಸ್ಥಾನ	ಮಧ್ಯ ಸ್ಥಾನ	ಅಂತ್ಯ ಸ್ಥಾನ
ಐ	ಐನೂರ್		ಕೈ	ಐದು	ಈರ್ಸೈಸಿ	ಕೈ	ಐದು	ವೈಭವ	ಕೈ	ಐದು	ತೈಲ	ಮೈ
	ಐಕ್ಯ	—		ಐಗಾವುದ	ಕೈದು		ಐಶ್ವರ್ಯ	ಮೈದಾನ	ಮೈ	ಐರಾವತ	ದೈತ್ಯ	ಕೈ
				ಐವರ್	ಬೈದು			ವೈಣ		ಐವತ್ತು	ಪೈರು	
								ಬೈಗು		ಐಸಿರಿ		
ಔ	ಔದಾರ್ಯ	—	—		ಕೌಮಿಗ್ನ		ಔತಣ	ಸೌಟು		ಔಷಧ	ಗೌರಿ	
				ಔಂಕಿ	ಚೌಕ	—	ಔಷಧ	ಗೌತಮ	—	ಔಡು	ಪೌರ	—
					ಪೌವನೆ			ಹೌದು	—	ಔತಣ	ಮೌನ	

ಪೂರ್ವದ ಹಳಗನ್ನಡದಲ್ಲಿ ೩೬ ಧ್ವನಿಮಾಗಳು; ಹಳಗನ್ನಡದಲ್ಲಿ ೪೫ ಧ್ವನಿಮಾಗಳು; ನಡುಗನ್ನಡದಲ್ಲಿ ೪೪ ಧ್ವನಿಮಾಗಳು ಹಾಗೂ ಆಧುನಿಕ ಕನ್ನಡದಲ್ಲಿ ೪೬ ಧ್ವನಿಮಾಗಳು ಕಂಡುಬರುವುದೇ ಧ್ವನಿಮಾ ವಿಕಾಸಕ್ಕೆ ಖಚಿತ ಸಾಕ್ಷಿ. ಪೂರ್ವದ ಹಳಗನ್ನಡವನ್ನು ಬಿಟ್ಟಂತೆ ಉಳಿದ ಕಾಲದ ಕನ್ನಡದಲ್ಲಿ 'ಙ' ಮತ್ತು 'ಞ' ಧ್ವನಿಗಳು 'ಮ್' ಇಲ್ಲವೇ 'ನ್' ಧ್ವನಿಮಾದ ಉಪಧ್ವನಿ (Allophone) ಯಾಗಿ ಪರಿಗಣಿಸಿದೆ. 'ಙ್' ಮತ್ತು 'ಞ' ಧ್ವನಿಗಳ ಪ್ರಸಾರ ಖಚಿತತೆ ಹಾಗೂ ಅವುಗಳ ಜೊತೆಯಲ್ಲಿ ಬರುವ ಕ್ ಗ್ ಚ್ ಜ್ ಪ್ರಧಾನ ಪಾತ್ರವಹಿಸುತ್ತವೆ. 'ಙ್' ಸ್ಪರ್ಶಕಂಠ್ಯ (ಕ್, ಗ್) ಧ್ವನಿಮಾಗಳನ್ನು, 'ಞ್' ಸ್ಪರ್ಶತಾಲವ್ಯ (ಚ್ ಜ್) ಧ್ವನಿಮಾಗಳನ್ನು ಸದಾ ಅನುಸರಿಸಿಕೊಂಡೇ ಬರುವುದು. ಆದ್ದರಿಂದ 'ಙ್ ಞ್' ಉಪಧ್ವನಿಯಾಗಿವೆ. ಪೂರ್ವದ ಹಳಗನ್ನಡದಲ್ಲಿ ಮಹಾಪ್ರಾಣಾಕ್ಷರ (ಘ್, ಭ್, ಥ್, ಧ್, ಠ್, ಢ್, ಛ್, ಝ್, ಖ್, ಫ್) ಹಾಗೂ ಷ್, ಶ್ ಗಳು ಧ್ವನಿಮಾಗಳಲ್ಲ. ಆದರೆ ಹಳಗನ್ನಡದಲ್ಲಿ ಮಹಾಪ್ರಾಣಾಕ್ಷರ ಹಾಗೂ ಷ್, ಶ್ ಗಳು ಪಾರ್ಶ್ವಿಕ (Marginal phonemes) ಧ್ವನಿಮಾಗಳು. ನಡುಗನ್ನಡ ಮತ್ತು ಹೊಸಗನ್ನಡದಲ್ಲಿ ಮಹಾಪ್ರಾಣಾಕ್ಷರ ಮತ್ತು ಷ್ ಶ್ ಗಳು ಸ್ವತಂತ್ರ ಧ್ವನಿಮಾಗಳಾಗಿವೆ. ಫ಼್ ಮತ್ತು ಜ಼್ ಆಧುನಿಕ ಕನ್ನಡದಲ್ಲಿ ಹೊಸ ಧ್ವನಿಮಾಗಳಾಗಿವೆ. ಆಂಗ್ಲ ಭಾಷೆಯ ಪ್ರಭಾವದಿಂದಾಗಿ ಫ಼್ ಮತ್ತು ಜ಼್ ಧ್ವನಿಮಾ ಅಸ್ತಿತ್ವವನ್ನು ಪಡೆದಿದೆ.

ಪೂರ್ವದ ಹಳಗನ್ನಡದಲ್ಲಿ 'ಐ' ಮತ್ತು 'ಔ' ಮಧ್ಯಸ್ಥಾನದಲ್ಲೂ 'ಔ' ಅಂತ್ಯ ಸ್ಥಾನದಲ್ಲೂ ಬರದು. ಐ ಔ ಮಧ್ಯಸ್ಥಾನದಲ್ಲಿ ಕ್ರಮವಾಗಿ ಏ, ಓ ಆಗಿದೆ. (ತೈಲವ್>ತೇಲವ್; ಮೌನವ್>ಮೋನವ್). 'ಹ್' ಪೂರ್ವದ ಹಳಗನ್ನಡದಲ್ಲಿ ಧ್ವನಿಮಾ, ಹಳಗನ್ನಡದಲ್ಲಿ ಧ್ವನಿಮಾ ಅಲ್ಲ. ಕೆಲವು ಸಂಸ್ಕೃತ ಶಬ್ದಗಳು (ಆಕೃತಿಮಾ) ಕನ್ನಡೀಕರಣಗೊಂಡಿರುವುದರಲ್ಲಿ ಹ್‌ವನ್ನು ಕಾಣಬಹುದು. ಅಂಕಿತನಾಮಗಳಲ್ಲಿ, ಸ್ಥಳನಾಮಗಳಲ್ಲಿ 'ಹ್' ಪ್ರಯೋಗ ಸಮ್ಮತವಷ್ಟೆ.

ಧ್ವನಿಮಾ ವಿಕಾಸ ಕನ್ನಡ ಭಾಷಾರಚನೆಯ ವೈಶಿಷ್ಟ್ಯತೆಯನ್ನು, ಭಾಷಾ ಬಳಕೆಯ ಸಹಜತೆಯನ್ನೂ ಸ್ಪಷ್ಟಪಡಿಸುತ್ತದೆ. ಒಟ್ಟಿನಲ್ಲಿ ಧ್ವನಿಮಾ ವಿಕಾಸ ಆಯಾ ಕಾಲದ ಭಾಷಾರಚನೆ ಹಾಗೂ ಭಾಷಾಪ್ರಯೋಗವನ್ನು ಖಚಿತವಾಗಿ ಅವಲಂಬಿಸಿದೆ.

ಪರಾಮರ್ಶನ ಗ್ರಂಥಗಳು

ಕುಳ್ಳಿ, ಜೆ. ಎಸ್.	1973	ಐತಿಹಾಸಿಕ ಭಾಷಾವಿಜ್ಞಾನ ಸಿರಿಗನ್ನಡ ಪ್ರಕಾಶನ, ಧಾರವಾಡ
ಕೆಂಪೇಗೌಡ, ಕೆ. ಮತ್ತು ಆರ್ಕ್ಹಿಯಸ್ ಸುಂದರಂ	1979	ಧ್ವನಿ ವಿಜ್ಞಾನ ಭಾಷಾ ವಿಜ್ಞಾನ ಭಾರತಿ, ಮೈಸೂರು
ಪುಟ್ಟಪ್ಪ, ಕೆ. ವಿ.	1971	ಕನ್ನಡ ಕೈಪಿಡಿ (ಸಂಪುಟ–೧) ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
ಮುಗಳಿ, ರಂ.ಶ್ರೀ.	1984	ಕನ್ನಡ ಸಾಹಿತ್ಯ ಚರಿತ್ರೆ (7ನೆಯ ಮುದ್ರಣ) ಉಷಾ ಸಾಹಿತ್ಯ ಮಾಲೆ, ಮೈಸೂರು
ವಿಲ್ಯಂ ಮಾಡ್ತ	1975	ಕನ್ನಡ ಭಾಷೆಯ ರೂಪರೇಷೆಗಳು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Govinda Swamirao Gai	1946	Historical Grammar of old Kannada, Deccan College, Poona
Hockett, C. F.	1973	A Course in Modern Linguistics Oxford & IBH Publishing Co. New Delhi (2nd Indian Print)
Kittel, F.	1903	A Grammar of the Kannada Language, Basel Mission Book & Tract Depository, Mangalore
Kulli, J. S.	1976	Kēśirāja's Śabdamaṇi Darpaṇa Karnataka University, Dharwar
Kushalappa Gowda, K.	1972	A Grammar of Kannada Annamalai University Tamilnadu
Mario A. Pei & Frank Gaynor	1970	A Dictionary of Linguistics, Peter Owen Ltd., London (5th Print)
Narasimhia, A N.	1941	A Grammar of the Oldest Kanarese Inscriptions University of Mysore, Mysore

Rajapurohit, B. B.	1964	A Grammar of vacana literature (Unpublished Ph.D. Thesis) Karnataka University, Dharwar
Rama Chandra, C. S.	1984	A Linguistic Analysis of the Ki:rtanas of Haridāsas in Kannada (Unpublished doctoral Thesis), University of Mysore, Mysore
Rama Chandra Rao, B.	1972	A Descriptive Grammar of Pampa Bha;rata, Prasaranga University of Mysore, Mysore
Rama Krishna, R.	1986	Sri:ra:ma:yaṇa Darśanam—A Linguistic study (Unpublished doctoral Thesis), University of Mysore, Mysore
Wardhaugh, Ronald	1972	Introduction to Linguistics Mcgraw Hill Book Company New York

ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ ವ್ಯಕ್ತಿಯು ತನಗೆ ಸರಿಕಂಡ ರೀತಿಯಲ್ಲಿ ದೇವರನ್ನು ಪೂಜಿಸುವ ಸ್ವಾತಂತ್ರ್ಯ, ಆಸೆಗಳಿಂದ ಮುಕ್ತಿ ಪಡೆದ ಸ್ವಾತಂತ್ರ್ಯಭಯದಿಂದ ಮುಕ್ತಿ ಪಡೆದ ಸ್ವಾತಂತ್ರ್ಯ—ಈ ನಾಲ್ಕು ಪ್ರಮುಖ ಸ್ವಾತಂತ್ರ್ಯಗಳು ಪ್ರತಿಯೊಬ್ಬರಿಗೂ ದೊರೆಯಬೇಕು. ಇಂತಹ ಸ್ವಾತಂತ್ರ್ಯಗಳ ತಳಹದಿಯ ಮೇಲೆ ಸ್ಥಾಪಿತವಾಗಿರುವ ಜಗತ್ತನ್ನು ನಾನು ನಿರೀಕ್ಷಿಸುತ್ತೇನೆ.

ಫೆ. ಡಿ. ರೂಸ್‌ವೆಲ್ಟ್

ಇಲ್ಲಿಯವರೆಗೂ ಸ್ವಾತಂತ್ರ್ಯ! ಇಲ್ಲಿಯವರೆಗೂ ಬಂಧನ!
ಮುಂದ ಹಾಗೂ ಜಿಗಿವ!
ಅಲಿಕಲ್ಲ ಧಾರೆಯಂತೆ ಗಾಳಿಯ ವಿರುದ್ಧ ಹರಿವ ಪ್ರವಾಹದಂತೆ!

ಬೈರನ್

ಡಾ. ಎಸ್. ಸರಸ್ವತಿ

ಕರ್ನಾಟಕದ ಸ್ವಾತಂತ್ರ್ಯ ಚಳವಳಿಯಲ್ಲಿ ಮಹಿಳೆಯರ ಪಾತ್ರ

ವೀರಮಹಿಳೆಯರು ಭಾರತದ ಸ್ವಾತಂತ್ರ್ಯದ ಹೆಗ್ಗುರಿಗಾಗಿ ಹೋರಾಡಿದುದರ ಬಗ್ಗೆ ಈ ದೇಶದ ಚರಿತ್ರೆಯಲ್ಲಿ ಸುದೀರ್ಘ ವಿವರಗಳನ್ನು ನಾವು ಕಾಣಬಹುದಾಗಿದೆ. ರಾಷ್ಟ್ರದ ಚರಿತ್ರೆಯಲ್ಲಿ ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕನ್ನಡ ಚರಿತ್ರೆಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಇಂತಹ ಅಗ್ರಮಾನ್ಯ ವೀರಮಹಿಳೆಯರ ವೀರಾವೇಶದ ಹೋರಾಟದ ಸತ್ಫಲವೇ ಇಂದಿನ ಸ್ವತಂತ್ರ ಭಾರತದ ಅಡಿಪಾಯವಾಗಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಕನ್ನಡದ ವೀರಮಹಿಳೆಯರು ವಹಿಸಿದ ಪಾತ್ರ ಅಮೋಘವಾದುದು.

ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಮೊದಲು ಗೋಚರಿಸುವವರು ಶ್ರೀಮತಿ ಯಶೋದರಮ್ಮ ದಾಸಪ್ಪ. ಇವರು ಪರಮ ದೇಶ ಭಕ್ತರು, ಅಪ್ಪಟ ಗಾಂಧೀವಾದಿಗಳು, ಕಟ್ಟಾ ಕಾಂಗ್ರೆಸ್ಸಿಗರಾಗಿದ್ದು, ಮಾನವೀಯ ಅನುಕಂಪದ ಗಣಿಯಾಗಿದ್ದು ಸ್ತ್ರೀಕುಲದ ಅಮೂಲ್ಯ ರತ್ನವಾಗಿದ್ದರು. ಹಿರಿಯ ಸಮಾಜಸುಧಾರಕ ಕೆ. ಎಸ್. ರಾಮಯ್ಯನವರ ಪುತ್ರಿಯಾಗಿದ್ದು, ಗಣ್ಯವಕೀಲ ಎಚ್. ಸಿ. ದಾಸಪ್ಪನವರನ್ನು ಮದುವೆಯಾದರು. 1927ರಲ್ಲಿ ಗಾಂಧೀಜಿಯವರು ಮೈಸೂರು ಸಂಸ್ಥಾನಕ್ಕೆ ಭೇಟಿ ಕೊಟ್ಟಾಗ ಅವರ ಅನುಯಾಯಿಯಾಗಿ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತರಾದರು. ಇವರ ಕಾಂಗ್ರೆಸ್ ನಿಷ್ಠೆ ಎಷ್ಟಿತ್ತೆಂದರೆ ಪ್ರಜಾಪ್ರತಿನಿಧಿ ಸಭೆಗೆ ನಡೆದ ಚುನಾವಣೆಯಲ್ಲಿ ತಮ್ಮ ಪತಿಯ ವಿರುದ್ಧ, ಕಾಂಗ್ರೆಸ್ ಪರವಾಗಿ ಮತ ನೀಡಿದರು. ಅಲ್ಲದೆ ಇವರು "ನ್ಯಾಯ ವಿಧಾಯಕ" ಸಭೆಗೆ ಸ್ಪರ್ಧಿಸಿ ದಿವಾನ್ ಮಿರ್ಜಾ ಇಸ್ಮಾಯಿಲ್ ಬೆಂಬಲದ ಅಭ್ಯರ್ಥಿಯನ್ನು ಸೋಲಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ.

ಶಿವಪುರದಲ್ಲಿ 1938ರಲ್ಲಿ ಮೈಸೂರು ಕಾಂಗ್ರೆಸ್ ಅಧಿವೇಶನ ನಡೆದಾಗ ಅದನ್ನು ತಡೆಗಟ್ಟಲು ಅಂದಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲರು ಮತ್ತು ಅವರ ಅಧಿಕಾರವರ್ಗ ಪ್ರಯತ್ನಪಟ್ಟು, ಪ್ರತಿಬಂಧಕಾಜ್ಞೆಗಳನ್ನು ಹೊರಡಿಸಿತು. ಪ್ರತಿಬಂಧಕಾಜ್ಞೆಗಳನ್ನು ಹೊರಡಿಸಿದುದರಿಂದ ಕೆಲವು ಸತ್ಯಾಗ್ರಹಿಗಳು ಹೆದರಿ ಈ

ಅಧಿವೇಶನ ಬೇಡ ಎಂಬ ಮಾತು ಕೇಳಿಬಂದವು. ಆದರೆ ಈ ಮಾತನ್ನು ಕೇಳಿದ ಮಹಿಳಾಮಣಿಗಳು ಸಿಡಿದೆದ್ದರು. "ಏನೆ ಆಗಲಿ, ಈ ಧ್ವಜ ಸತ್ಯಾಗ್ರಹ ನಡೆಯಲೇಬೇಕು" ಎಂದು ಪಟ್ಟುಹಿಡಿದರು. "ಗುಂಡಿನ ಮಳೆ ನಮ್ಮ ಮೇಲೆ ಆಗಲಿ, ನಾವು ಮಹಿಳೆಯರೇ ಈ ಕಾರ್ಯವನ್ನು ಮಾಡಿ ಮುಗಿಸುತ್ತೇವೆ". ಗಂಡಸರಾದ ನೀವು ಸ್ಥೈರ್ಯ ನೀಡಿ ಅಷ್ಟೆ ಸಾಕು ಎಂದು ಸಿಡಿಲಿನಂತೆ ಶ್ರೀಮತಿ ಯಶೋದರಮ್ಮ ದಾಸಪ್ಪ ನುಡಿದರು. ಇದರಲ್ಲಿ ಟಿ. ಸುನಂದಮ್ಮ ಮತ್ತು ಅನೇಕ ಮಹಿಳೆಯರು ಭಾಗವಹಿಸಿದ್ದರು, ಈ ಶಿವಪುರ ಅಧಿವೇಶನದಲ್ಲಿ ಮಹಿಳಾ ಘಟಕ ಕೂಡ ಇತ್ತು. ಈ ಅಧಿವೇಶನದಲ್ಲಿ ಕರ್ನಾಟಕದ ಮೂಲೆ ಮೂಲೆಗಳಿಂದ ರೈತಮಹಿಳೆಯರು, ವಿದ್ಯಾರ್ಥಿನಿಯರೂ ಭಾಗವಹಿಸಿದ್ದರು. ಇವರಂತೆಯೇ ಸ್ವಾತಂತ್ರ್ಯಕ್ಕೆ ಹೋರಾಡಿದ ಮಹಿಳೆ ಟಿ. ಕಾಮಾಕ್ಷಮ್ಮ. 13ನೆಯ ವಯಸ್ಸಿನಲ್ಲೇ ವಿಧವೆಯಾದ ಕಾಮಾಕ್ಷಮ್ಮನವರು 1933ರಿಂದ ಗಾಂಧೀಜಿಯವರ ತತ್ವಗಳಿಗೆ ಮಾರುಹೋಗಿ ಸ್ವಾತಂತ್ರ್ಯದ ಚಳುವಳಿಗೆ ದುಮುಕಿದರು' ಚಲೇಜಾವ್ ಮತ್ತು ಕಾನೂನು ಭಂಗ ಚಳುವಳಿಯಲ್ಲಿ ಭಾಗವಹಿಸಿದ್ದರು ಇವರು ಕಸ್ತೂರಿಬಾ ಶಿಕ್ಷಣ ಶಿಬಿರದಲ್ಲಿ ಭಾಗವಹಿಸಿ ಸುಮಾರು 10–12 ದಿವಸಗಳು ಗಾಂಧೀಜಿಯವರ ಸನ್ನಿಧಾನದಲ್ಲಿದ್ದು ಮತ್ತೇ ಮೈಸೂರಿಗೆ ಮರಳಿ ಹಳ್ಳಿಗಳಲ್ಲಿ ಖಾದಿ ಪ್ರಚಾರ ಮಾಡಿದರು.

ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಮತ್ತೊಬ್ಬ ಮಹಿಳೆ ತಾಯಮ್ಮನವರು. ಚಿಕ್ಕಂದಿನಿಂದಲೇ ವಿಧವೆಯಾದ ತಾಯಮ್ಮನವರನ್ನು ಕಾಂಗ್ರೆಸ್ ಮುಖಂಡರಾದ ಎಚ್. ಕೆ. ವೀರಣ್ಣಗೌಡರು ಮದುವೆಯಾದರು. ತಾಯಮ್ಮನವರು ವೀರಣ್ಣಗೌಡರ ಹೋರಾಟಕ್ಕೆ ಚಾಲನೆಯ ಸ್ಫೂರ್ತಿಯಾಗಿದ್ದರು. ಕಾಂಗ್ರೆಸ್ ಪ್ರಚಾರಕ್ಕೋಸ್ಕರ ವೀರಣ್ಣಗೌಡರ ಜೊತೆಯಲ್ಲಿ ತಾಯಮ್ಮನವರು ಇಡೀ ಮೈಸೂರು ಪ್ರಾಂತ್ಯ ಸಂಸ್ಥಾನವನ್ನೇ ಸುತ್ತಿದರು. ಸ್ವಾತಂತ್ರ್ಯ ಬರುವವರೆಗೂ ತಮ್ಮ ಪತಿಯ ಜೊತೆಯಲ್ಲಿ ಹೋರಾಟವನ್ನು ಮಾಡಿದರು.

ಇಂತಹ ವೀರಮಹಿಳೆಯರ ಜೊತೆಯಲ್ಲಿ ತಮ್ಮ ಹೋರಾಟವನ್ನು ಪ್ರಾರಂಭಿಸಿದ ಸುಬ್ಬಮ್ಮ ಜೋಯಿಸ್‌ರವರು, ಮೈಸೂರು ಸಂಸ್ಥಾನವಲ್ಲದೆ ಇಡೀ ಕರ್ನಾಟಕದ ಚಳವಳಿಯಲ್ಲಿ ಭಾಗವಹಿಸಿದ್ದರು. ಇವರು ಭಾಗವಹಿಸಿದ ಪ್ರಮುಖ ಸತ್ಯಾಗ್ರಹಗಳೆಂದರೆ ಅಕ್ಕುಂಜಿ ಸತ್ಯಾಗ್ರಹ, ಮಾವಿನಹುಂಡಿ ಸತ್ಯಾಗ್ರಹ ಇತ್ಯಾದಿ. ಇದರ ಪರಿಣಾಮವಾಗಿ ಈಕೆ ಜೈಲುಶಿಕ್ಷೆಯನ್ನು ಅನುಭವಿಸಬೇಕಾಯಿತು. 1947ರ "ಮೈಸೂರು ಚಲೋ–ಚಳುವಳಿಯಲ್ಲಿ ಭಾಗವಹಿಸಿ ಬಂಧನಕ್ಕೊಳಗಾಗಿ ಪೋಲೀಸರು ಕೊಟ್ಟ ಚಿತ್ರಹಿಂಸೆಯನ್ನು ಅನುಭವಿಸಿ ದೇಶಕ್ಕಾಗಿ ದುಡಿದುದು ಒಂದು ಚಿರಸ್ಮರಣೀಯ ಅಧ್ಯಾಯ.

ಮೈಸೂರು ಸಂಸ್ಥಾನದ ಹೋರಾಟದಲ್ಲಿ ವಿದ್ಯಾರ್ಥಿನಿಯರ ಪಾತ್ರ ಬಹು

ಮುಖ್ಯವಾದುದು. ಮೀನಾಕ್ಷಿ ಗೋವಿಂದಭಟ್ ಕೊಡಗಿನ ಪೊನ್ನಮ್ಮ, ಬೆಂಗಳೂರಿನ ಕುಂತಳ ವಿಮಲ—ಇವರು ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ವಿದ್ಯಾರ್ಥಿನಿಯರಾಗಿದ್ದು, ಕಾಂಗ್ರೆಸ್ ಮೆರವಣಿಗೆಯಲ್ಲಿ ಪಾಲ್ಗೊಂಡು ಜೈಲುವಾಸ ಅನುಭವಿಸಿದರು.

ಕರ್ನಾಟಕದ ವಿವಿಧ ಭಾಗಗಳಲ್ಲಿ ಹೋರಾಡಿದ ಮಹಿಳೆಯರ ಪೈಕಿ ಪ್ರಮುಖರೆಂದರೆ ಗಂಗಾಬಾಯಿ ಮಿರ್ಜಾಕರ. ಇವರ ಪತಿ ಬ್ರಿಟಿಷರಿಂದ "ರಾವ್ ಸಾಹೇಬ್" ಎಂಬ ಬಿರುದು ಪಡೆದಿದ್ದರೂ ಸಹ, ರಾಷ್ಟ್ರೀಯ ಚಟುವಟಿಕೆಯಲ್ಲಿ ಗಂಗಾಬಾಯಿ ಭಾಗವಹಿಸಲು ಆರಂಭಿಸಿದಾಗ ವಿರೋಧ ಮಾಡಲಿಲ್ಲ. 1921ರಲ್ಲಿ ನಡೆದ ಅಹಮದಾಬಾದ್ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದರು. 1931ರಲ್ಲಿ ಹೊನ್ನಾವರದಲ್ಲಿ ಸತ್ಯಾಗ್ರಹಿಗಳ ಮೇಲೆ ನಡೆದ ಲಾಠಿ ಪ್ರಯೋಗವನ್ನು ವಿರೋಧಿಸಿ, ಅನೇಕ ಸ್ತ್ರೀಯರೊಂದಿಗೆ 144ನೇ ಸೆಕ್ಷನ್ ಕಾನೂನನ್ನು ಉಲ್ಲಂಘಿಸಿ ಜೈಲುವಾಸ ಅನುಭವಿಸಿದರು. 1931ರಲ್ಲಿ 'ಮಹಿಳಾ ಮಂಡಲ' ಸ್ಥಾಪಿಸಿ ಆ ಮಂಡಲದಿಂದ ಸ್ವದೇಶಿ ಸೀರೆ, ಖಾದಿಯ ಮಹತ್ವವನ್ನು ಜನರಿಗೆ ಮನಮುಟ್ಟುವಂತೆ ತಿಳಿಸುತ್ತಿದ್ದರು. ಇವರಂತೆ ಹೋರಾಡಿದ ಮತ್ತೊಬ್ಬ ವೀರಮಹಿಳೆಯೆಂದರೆ ಭವಾನಿಬಾಯಿ ಕಾನಗೋಡ. ದಿ. ಕವಿತಿಪ್ಪಯ್ಯ ಮಾಸ್ತರರ ರಾಷ್ಟ್ರೀಯ ಪದ್ಯಗಳಿಂದ ಪ್ರತಿಯೊಬ್ಬ ಸ್ವದೇಶಾಭಿಮಾನಿಯಲ್ಲಿ ಬಿಸಿರಕ್ತ ಹರಿಯುತ್ತಿತ್ತು. ಈ ಸ್ಫೂರ್ತಿಯ ನೆಲೆಯು ಅವರ ಪುತ್ರಿಯಾದ ಭವಾನಿಬಾಯಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕುವ ಪ್ರೇರಣೆ ಹುಟ್ಟಿಸಿತು. 1920–21ರಲ್ಲಿ ಸಿದ್ಧಾಪುರದಲ್ಲಿ ಮನೆಮನೆಗಳಿಗೆ ಹೋಗಿ ಸ್ವದೇಶಿ ಬಟ್ಟೆಗಳ ಪ್ರಚಾರ ಮಾಡುತ್ತಾ ಕಾಂಗ್ರೆಸ್ ಸದಸ್ಯತ್ವವನ್ನು ನೊಂದಾಯಿಸಿಕೊಳ್ಳುತ್ತಾ, ಪರದೇಶಿ ವಸ್ತುಗಳ ಬಹಿಷ್ಕಾರ ಮಾಡುವಂತೆ ಜನರಿಗೆ ತಿಳಿಸಿ ಹೇಳುತ್ತಿದ್ದರು. ಇವರ ಮಾತಿನಲ್ಲೇ ಹೇಳುವುದಾದರೆ "ಈ ಸ್ವಾತಂತ್ರ್ಯ ಹೋರಾಟದ ಮನೋಭಾವ ನನ್ನ ಪತಿಯ ಮನೆಯನ್ನು ತೊರೆದು, ಏಕಮಾತ್ರ ಪುತ್ರನನ್ನು ಕಟ್ಟಿಕೊಂಡು ನಾನು ಸಂಗ್ರಾಮದಲ್ಲಿ ಧುಮುಕುವಂತೆ ಮಾಡಿತು." ಇವರ ಜೊತೆಯಲ್ಲಿಯೇ ಹೋರಾಟ ನಡೆಸಿದ ಇನ್ನೊಬ್ಬ ಮಹಿಳೆಯೆಂದರೆ ಸೀತಾಬಾಯಿ ರಾಮಚಂದ್ರ ಇವರು ಹುಟ್ಟಿದ್ದು ಖ್ಯಾತ ದೇಶಭಕ್ತರ ಮನೆಯಲ್ಲಿ. ಅಕ್ಕುಂಜಿ ಸತ್ಯಾಗ್ರಹದಲ್ಲಿ ಭಾಗವಹಿಸಿದಾಗ ಇವರು 3 ತಿಂಗಳ ಬಾಣಂತಿಯಾಗಿದ್ದರು. ಪರಿಣಾಮವಾಗಿ ಕಾರವಾರದ ಜೈಲಿನಲ್ಲಿ ಸೆರೆಯಾಗಿ ನಂತರ ಯರವಾಡ ಜೈಲು ಸೇರಿದರು. ಈ ಜೈಲಿನಲ್ಲಿದ್ದಾಗ ಸರೋಜಿನಿ ನಾಯಿಡು ಅವರ ಸ್ನೇಹವಾಯಿತು. ಹೀಗೆ ಸೀತಾಬಾಯಿಯವರು ತಮ್ಮ ರಾಷ್ಟ್ರೀಯ ಹೋರಾಟದ ಮನೋಭಾವದಿಂದ ತನ್ನ ಬಾಣಂತಿತನವೆಲ್ಲವನ್ನು ಜೈಲುವಾಸದಲ್ಲೇ ಕಳೆಯಬೇಕಾಯಿತು.

ತಂದೆಯ ಸ್ವಾತಂತ್ರ್ಯ ಹೋರಾಟದ ಮನೋಭಾವವನ್ನು ಮೈಗೂಡಿಸಿಕೊಂಡ ವ್ಯಕ್ತಿ. ಡಾ. ರಾಧಾಕಾರ್ನಾಡ್ ರಾಧಾರವರ ಮನೆಯು ಕಾಂಗ್ರೆಸ್ ಕಛೇರಿಯಾಗಿತ್ತು. ರಾಧಾಕಾರ್ನಾಡ್‌ರವರು ತಮ್ಮ ತಂದೆಯವರ ನೇತೃತ್ವದಲ್ಲಿ ನಡೆಯು

ತ್ತಿದ್ದ ಮೆರವಣಿಗೆ, ಪಿಕೆಟಿಂಗ್‌ಗಳಲ್ಲಿ ಭಾಗವಹಿಸುತ್ತಿದ್ದರು. ಇವರ ಜೊತೆಗೆ ಸಹೋದರಿಯಾದ ಸುಗುಣರವರು ಸಹ ಸತ್ಯಾಗ್ರಹದಲ್ಲಿ ಭಾಗವಹಿಸುವುದಕ್ಕಾಗಿ ಸರ್ಕಾರಿ ಶಾಲೆಯನ್ನು ತ್ಯಜಿಸಿದರು.

ಉತ್ತರ ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ಪ್ರಬಲವಾಗಿ ಹೋರಾಡಿದ ಮಹಿಳೆಯರ ಸಾಲಿಗೆ ಉಮಾಬಾಯಿ ಕುಂದಾಪುರ ಸೇರುತ್ತಾರೆ ಇವರು 1924ರ ಬೆಳಗಾವಿಯ ಅಧಿವೇಶನದ ಕಾಲಕ್ಕೆ ಸೇವಾದಳದ ಸ್ತ್ರೀ ವಿಭಾಗದ ದಳಪತಿಯಾಗಿ, ಗ್ರಾಮೀಣ ಮಹಿಳೆಯನ್ನು ಸಂದರ್ಶಿಸಿ, ಸ್ತ್ರೀ ಸ್ವಯಂಸೇವಕಿಯರನ್ನು ನೋಂದಾಯಿಸುವ ಕಾರ್ಯ ಮಾಡಿದುದರಿಂದ, ಕರ್ನಾಟಕದ ಅನೇಕ ಸ್ತ್ರೀಯರಿಗೆ ಸಾರ್ವಜನಿಕ ರಂಗವನ್ನು ಪ್ರವೇಶಿಸಲು ಅವಕಾಶವಾಯಿತು. ಈ ಕಾಲದಲ್ಲಿ ಸುಮಾರು 150 ಮಂದಿ ಸ್ವಯಂಸೇವಕಿಯರು ಮುಂದೆ ಬಂದು 10 ದಿನಗಳು ಶಿಬಿರದಲ್ಲಿ ತರಬೇತಿ ಪಡೆದು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು.

1932 ಉತ್ತರ ಕರ್ನಾಟಕದ ಕರನಿರಾಕರಣೆ ಚಳವಳಿಯ ಅಟ್ಟಹಾಸದ ದಿನಗಳ ಕಾಲ. ಬ್ರಿಟಿಷರ ಪ್ರಜಾಪೀಡಕವಾದ ಶಾಸನಗಳನ್ನು ಮುರಿಯುವುದು, ಅಮಾನುಷ ದಬ್ಬಾಳಿಕೆಯ ವಿರುದ್ಧ ಸಿಡಿದೆದ್ದು, ಆತ್ಮಾರ್ಪಣೆ ಮಾಡಿದ ವೀರ ಹರಿಜನ ಹೆಣ್ಣು ದೇವಿ. ಉತ್ತರ ಕರ್ನಾಟಕದ ಕೆಳಮನೆ ಹೆಗ್ಗಡೆಯವರ ಮನೆತನ ಸ್ವಾತಂತ್ರ್ಯ ಹೋರಾಟದ ಮನೆತನ. ಇವರ ಮನೆಯನ್ನು ಜಪ್ತಿಮಾಡಲು ಬಂದಾಗ ನಾಗೇರ್ ಹೆಗ್ಗಡೆಯವರು ಬೆಲೆಬಾಳುವ ಆಭರಣಗಳನ್ನು ಹೂತಿಟ್ಟರು. ಈ ಆಭರಣ ದೇವಿಗೆ ಸಿಕ್ಕಿತು. ಈ ವಿಷಯ ಪೋಲಿಸ್‌ನವರಿಗೆ ತಿಳಿದು ದೇವಿಯನ್ನು ಬಂಧಿಸಿ ಆಭರಣವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ದೇವಿ ಕೊಡಲಿಲ್ಲ. ಅನಂತರ ಜೈಲಿನಿಂದ ಬಿಡುಗಡೆಯಾದಾಗ ಆಭರಣಗಳನ್ನು ಜೋಪಾನವಾಗಿ ಹೆಗ್ಗಡೆ ಮನೆತನಕ್ಕೆ ತಲುಪಿಸಿದಳು. ಬಳಿಕ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದಳು. ದೇವಿಯ ಮಗನನ್ನು ಜೀತಮುಕ್ತನನ್ನಾಗಿ ಮಾಡಬೇಕೆಂದು, ಇದು ಮಹಾತ್ಮ ಗಾಂಧಿಯವರ ಸ್ವಾತಂತ್ರ್ಯ ಚಳವಳಿಯ ಒಂದು ಕಾರ್ಯಕ್ರಮವೆಂದು ಅವಳಿಗೆ ಹೇಳಿದಾಗ ದೇವಿ ತಕ್ಷಣ ಉತ್ತರ ಕೊಟ್ಟಳು. ''ಹಾಗಾದರೆ ಬಿಡುಗಡೆ ಪಡೆಯಲು ನನ್ನ ಮಗ ಕಡೆಯವನಾಗಲಿ, ಮೊದಲಿಗನಾಗುವುದು ಬೇಡ." ಈ ಸರಳ ನಿಷ್ಕಪಟಿಯಾದ ಮಣ್ಣಿನ ಮಗಳು ದೇವಿ ಭಾರತೀಯ ಸಂಸ್ಕೃತಿಯ ಪೂರ್ವಾರ್ಜಿತವೇ ಮೂರ್ತಿವೆತ್ತವಳಾಗಿ ಆದರ್ಶಪ್ರಾಯಳಾಗಿದ್ದಾಳೆ.

ಈಗ ವಿವರಿಸಿದ ಎಲ್ಲ ಮಹಿಳೆಯರಂತೆ ಸ್ವಾತಂತ್ರ್ಯ ಚಳವಳಿಗೆ ನಿಸ್ವಾರ್ಥತೆಯಿಂದ ಹೋರಾಡಿದ ಕರ್ನಾಟಕದ ಅನೇಕ ಮಹಿಳಾಮಣಿಗಳನ್ನು ಹೆಸರಿಸಬಹುದು. ಅವರ ಪೈಕಿ ದೊಡ್ಡಮನೆ ಮಹಾದೇವಿ, ಗುಂಜಗೋಡದ ಮಹಾದೇವಮ್ಮ, ಕಲ್ಲಾಳ ಕಾವೇರಮ್ಮ, ಗೌರಮ್ಮ, ಲಕ್ಷ್ಮಿಬಾಯಿ ಹರಿ ಪೈ, ರಮಾಬಾಯಿ, ಬಲ್ಯಾಂಟಡ ಮುದ್ದಮ್ಮ, ಕೆ. ಅಕ್ಕಮ್ಮ (ಅಕ್ಕವ್ವ) ಪ್ರಮುಖರು. ಚಿತ್ರದುರ್ಗ ಜಿಲ್ಲೆಯ

ತುರುವನೂರು ಬಳಿ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆಗೆ ಹೋದ ಸತ್ಯಾಗ್ರಹಿ ಸಿರಿಯಮ್ಮನ ಪಾತ್ರವೂ ಚಿರಸ್ಮರಣೀಯವಾದುದು. ಅಂತೆಯೇ ಹುದಿಕೇರಿಯ ಸತ್ಯಾಗ್ರಹದಲ್ಲಿ ಭಾಗವಹಿಸಲು ತಂದೆತಾಯಿ ಅನುಮತಿ ನೀಡ ದಿದ್ದಾಗ ಆತ್ಮಹತ್ಯೆ ಮಾಡಿಕೊಂಡ ಹದಿನೆಂಟರ ಪ್ರಾಯದ ಕಾವೇರಿಯ ಕತೆಯೂ ಹೃದಯವಿದ್ರಾವಕವಾದುದು.

ಕೆ.ಸಂ. ೬೯೮—ಎಂಯುಪಿಎಂ—೪೦೦ + ೨೫ ಪ್ರತಿಗಳು—೨೯–೩–೯೩

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ನಿರ್ದೇಶಕರು
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬